ಮಂಗಳವಾರ, ಏಪ್ರಿಲ್ 25, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 114 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಮಕ್ಕಳನ್ನು ಮೊಬೈಲ್ ಫೋನ್ ಚಟದಿಂದ ರಕ್ಷಿಸಿ

ಆಳ-ಅಗಲ: ಲೈಂಗಿಕ ಕಿರುಕುಳ ಆರೋಪ: ನ್ಯಾಯಕ್ಕಾಗಿ ಕುಸ್ತಿಪಟುಗಳ ಪಟ್ಟು

ಬನ್ನೇರುಘಟ್ಟ ಉದ್ಯಾನಕ್ಕೆ ಬಿಳಿ ಹುಲಿ 5

ಸರ್ಕಾರಕ್ಕೆ ಕೆಪಿಎಸ್‌ಸಿ ಸಡ್ಡು! 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,056	17,743	₹62,020 (ಬೆಂಗಳೂರು)	₹76,400 (ಬೆಂಗಳೂರು)	81.92

ಕಣ ಸ್ಪಷ್ಟ: ಇನ್ನು ಹಣಾಹಣಿ ಆಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ನಾಮಪತ್ರ ವಾಪಸ್ ಪಡೆಯುವ ಪ್ರಕ್ರಿಯೆ ಕೊನೆಗೊಂಡಿದ್ದು, ಯಾರು ಯಾರ ಎದುರು ಸೆಣಸಲಿದ್ದಾರೆ ಎಂಬ ಸ್ಪಷ್ಟ ಚಿತ್ರಣ ಸೋಮವಾರ ಹೊರಹೊಮ್ಮಿದೆ.

ಕಣ ಪೈಪೋಟಿ ಅಖೈರಾಗುತ್ತಿದ್ದಂತೆ ಪ್ರಚಾರದ ಕಣಕ್ಕೆ ಧುಮುಕಿರುವ ವಿವಿಧ ಪಕ್ಷಗಳ ಅತಿರಥ ಮಹಾರಥರು, ನೆತ್ತಿ ಸುಡುವ ಬಿಸಿಲ ಝಳದ ಮಧ್ಯೆಯೇ ತಮ್ಮ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವ ತಾಲೀಮಿಗೆ ಹೊಸ ಹುರುಪು ಕೊಟ್ಟಿದ್ದಾರೆ. ಬಿಜೆಪಿ, ಕಾಂಗ್ರೆಸ್ ನಾಯಕರು ಪ್ರಚಾರದ ಮುಂಚೂಣಿಯಲ್ಲಿದ್ದರೆ, ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರು ಕೊರಟಗೆರೆಯಲ್ಲಿ ಪ್ರಚಾರ ನಡೆಸಿದ್ದಾರೆ. ಜೆಡಿಎಸ್ ನಾಯಕ ಎಚ್‌.ಡಿ. ಕುಮಾರಸ್ವಾಮಿ, ಆಸ್ಪತ್ರೆಯಿಂದ ಮನೆಗೆ ಮರಳಿದ್ದು ವಿಶ್ರಾಂತಿಯಲ್ಲಿದ್ದಾರೆ.

ಏ.13ರಿಂದ ಆರಂಭವಾಗಿದ್ದ ನಾಮಪತ್ರ ಸಲ್ಲಿಕೆ ಅವಧಿ ಏ. 20ಕ್ಕೆ ಮುಕ್ತಾಯವಾಗಿತ್ತು. ಸ್ಪರ್ಧೆ ಬಯಸಿ 3,632 ಅಭ್ಯರ್ಥಿಗಳು 5,102 ನಾಮಪತ್ರ ಸಲ್ಲಿಸಿದ್ದರು. ನಾಮಪತ್ರ ಪರಿಶೀಲನೆ ಬಳಿಕ, 517 ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದು, ಅಂತಿಮವಾಗಿ ಕಣದಲ್ಲಿ 2,613 ಅಭ್ಯರ್ಥಿಗಳು ಉಳಿದಿದ್ದಾರೆ.

6ನೇ ಪುಟ ನೋಡಿ

ಯಾವ ಪಕ್ಷ, ಎಷ್ಟು ಅಭ್ಯರ್ಥಿಗಳು?

ಕ್ಷೇತ್ರ 224 ಕಣದಲ್ಲಿ ಉಳಿದವರು 2,613

ಬಿಜೆಪಿ	ಕಾಂಗ್ರೆಸ್	ಜೆಡಿಎಸ್
224	223	207

ಎಎಪಿ	209
ಬಿಎಸ್‌ಪಿ	133
ಜೆಡಿಯು	8
ಸಿಪಿಐಎಂ	4
ಎನ್‌ಪಿಪಿ	2
ನೋಂದಾಯಿತ ಪಕ್ಷಗಳು	685
ಪಕ್ಷೇತರರು	918

ಪುರುಷರು 2,427

ಮಹಿಳೆಯರು 184

ಇತರೆ 2

ಬಂಡಾಯ ಅಭ್ಯರ್ಥಿಗಳು	ಕಾಂಗ್ರೆಸ್	ಬಿಜೆಪಿ	ಜೆಡಿಎಸ್
	18	14	02

ಗಣ್ಯರು	ಪ್ರಚಾರ ನಡೆದ ಸ್ಥಳ
ಅಮಿತ್ ಶಾ	ಆಲೂರು (ಹಾಸನ), ಗುಂಡ್ಲುಪೇಟೆ (ಚಾಮರಾಜನಗರ)
ರಾಹುಲ್ ಗಾಂಧಿ	ರಾಮದುರ್ಗ (ಬೆಳಗಾವಿ ಜಿಲ್ಲೆ), ಹಾನಗಲ್ (ಹಾವೇರಿ)
ಜೆ.ಪಿ.ನಡ್ಡಾ	ಶಿಡ್ಲಘಟ್ಟ (ಚಿಕ್ಕಬಳ್ಳಾಪುರ ಜಿಲ್ಲೆ), ಹೊಸಕೋಟೆ (ಬೆಂ ಗ್ರಾ)
ಮಲ್ಲಿಕಾರ್ಜುನ ಖರ್ಗೆ	ಚಿಕ್ಕಮಗಳೂರು
ಎಚ್‌.ಡಿ.ದೇವೇಗೌಡ	ಕೊರಟಗೆರೆ (ತುಮಕೂರು)
ಸಿದ್ದರಾಮಯ್ಯ	ಅಥಣಿ (ಬೆಳಗಾವಿ)
ಬಿ.ಎಸ್‌.ಯಡಿಯೂರಪ್ಪ	ಶಿವಮೊಗ್ಗ
ಬಸವರಾಜ ಬೊಮ್ಮಾಯಿ	ಬಂಕಾಪುರ (ಹಾವೇರಿ)

ಬಂಡಾಯವೆದ್ದು ಅನ್ಯ ಪಕ್ಷದಿಂದ ಸ್ಪರ್ಧೆ

ಜಗದೀಶ ಶೆಟ್ಟರ್

- ಬಿಜೆಪಿ ಟಿಕೆಟ್ ನಿರಾಕರಿಸಿದ್ದರಿಂದಾಗಿ ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಜಗದೀಶ ಶೆಟ್ಟರ್

ಶ್ರೀನಿವಾಸಮೂರ್ತಿ

- ಪುಲಕೇಶಿನಗರ ಕ್ಷೇತ್ರದ ಶಾಸಕ ಅಖಂಡ ಶ್ರೀನಿವಾಸಮೂರ್ತಿಗೆ ಕಾಂಗ್ರೆಸ್ ಟಿಕೆಟ್ ನೀಡದೇ ಇದ್ದುದರಿಂದ ಅವರು ಬಿಎಸ್‌ಪಿ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ

ಲಕ್ಷ್ಮಣ ಸವದಿ

- ಬಿಜೆಪಿ ಟಿಕೆಟ್ ಕೊಡದೇ ಇದ್ದುದರಿಂದ ಹಾಗೂ ರಮೇಶ ಜಾರಕಿಹೊಳಿ ಜತೆಗಿನ ಸಂಘರ್ಷದಿಂದ ಪಕ್ಷ ತೊರೆದು ಕಾಂಗ್ರೆಸ್ ಸೇರಿದ ಲಕ್ಷ್ಮಣ ಸವದಿ ಅಥಣಿಯಿಂದ ಸ್ಪರ್ಧೆ

ಬಿ.ವಿ.ನಾಯಕ

- ಕೊನೇ ಕ್ಷಣದಲ್ಲಿ ಮಾನ್ವಿ ಕ್ಷೇತ್ರದ ರಾಜಕೀಯ ತಂತ್ರಗಾರಿಕೆ ಬದಲಿಸಿದ ಬಿಜೆಪಿ ನಾಯಕರು ರಾಯಚೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ, ಮಾಜಿ ಸಂಸದ ಬಿ.ವಿ. ನಾಯಕ ಅವರನ್ನು ಪಕ್ಷಕ್ಕೆ ಕರೆತಂದು ಟಿಕೆಟ್ ನೀಡಿದ್ದಾರೆ



ಆಯನೂರು

- ಬಿಜೆಪಿ ಟಿಕೆಟ್ ನೀಡದೇ ಇರುವುದರಿಂದ ವಿಧಾನಪರಿಷತ್ತಿನ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಆಯನೂರು ಮಂಜುನಾಥ್ ಶಿವಮೊಗ್ಗ ನಗರದಲ್ಲಿ ಜೆಡಿಎಸ್‌ನಿಂದ ಕಣಕ್ಕೆ

ಎನ್‌.ಆರ್‌.ಸಂತೋಷ್

- ಅರಸೀಕೆರೆ ಕ್ಷೇತ್ರದಲ್ಲಿ ಯಡಿಯೂರಪ್ಪ ಹತ್ತಿರದ ಸಂಬಂಧಿ ಎನ್‌.ಆರ್‌. ಸಂತೋಷ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ಕೈತಪ್ಪಿದ್ದರಿಂದ ಜೆಡಿಎಸ್‌ನಿಂದ ಸ್ಪರ್ಧೆ

ಎಂಟು ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ನಿವೃತ್ತ ಡಿಸಿಎಫ್ ಸೇರಿದಂತೆ ಎಂಟು ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಲೋಕಾಯುಕ್ತ ಪೊಲೀಸರು, ರಾಜ್ಯದ ವಿವಿಧ ಜಿಲ್ಲೆಗಳ 34 ಸ್ಥಳಗಳ ಮೇಲೆ ಸೋಮವಾರ ಏಕಕಾಲಕ್ಕೆ ದಾಳಿ ಮಾಡಿ, ಶೋಧ ನಡೆಸಿದ್ದಾರೆ.

ಶಿವಮೊಗ್ಗ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಹುದ್ದೆಯಿಂದ ಮೂರು ತಿಂಗಳ ಹಿಂದೆ ನಿವೃತ್ತರಾಗಿರುವ ಐ.ಎಂ. ನಾಗರಾಜ್, ಹೊಳಲ್ಕೆರೆ ತಹಶೀಲ್ದಾರ್ ಎನ್‌.ಜೆ. ನಾಗರಾಜ್, ಬಿಬಿಎಂಪಿ ಯಲಹಂಕ ವಲಯದ ನಗರ ಯೋಜನಾ ವಿಭಾಗದ ಉಪ ನಿರ್ದೇಶಕ ಕೆ.ಎಲ್‌. ಗಂಗಾಧರಯ್ಯ, ಬೊಮ್ಮನಹಳ್ಳಿ ವಲಯದ ಮಳೆನೀರು ಕಾಲುವೆ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಟಿ. ಹನುಮಂತರಾಯ, ಬಾಗೇಪಲ್ಲಿಯ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾ ಅಧಿಕಾರಿ ವೆಂಕಟೇಶಪ್ಪ, ಬಳ್ಳಾರಿಯ ಜೆಸ್ಕಾಂ ಕಾರ್ಯನಿರ್ವಾಹಕ ಎಂಜಿನಿಯರ್ ಹುಸೇನ್ ಸಾಬ್, ಬೀದರ್‌ನ ಸಣ್ಣ ನೀರಾವರಿ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ಸುರೇಶ್ ಮೇದ ಮತ್ತು ಬಸವಕಲ್ಯಾಣ ತಾಲ್ಲೂಕಿನ ಮುಡಬಿ ನಾಡ ಕಚೇರಿಯ ಉಪ ತಹಶೀಲ್ದಾರ್ ವಿಜಯಕುಮಾರ ಸ್ವಾಮಿ ವಿರುದ್ಧ ಲೋಕಾಯುಕ್ತ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಬಿದ್ದು ಹೊರಳಾಡಿದ ಅಧಿಕಾರಿ: ಬಂಗಾರಪೇಟೆಯಿಂದ ಇತ್ತೀಚೆಗಷ್ಟೇ ಬಾಗೇಪಲ್ಲಿಗೆ ವರ್ಗಾವಣೆಯಾಗಿದ್ದ ವೆಂಕಟೇಶಪ್ಪ ಲೋಕಾಯುಕ್ತ ದಾಳಿಯ ವಿಷಯ ತಿಳಿದು ಮನೆಗೆ ದೌಡಾಯಿಸಿ ಬಂದರು. ಮನೆ ಮುಂಭಾಗದಲ್ಲಿ ಬಿದ್ದು ಹೊರಳಾಡಿದರು. ಲೋಕಾಯುಕ್ತ ಪೊಲೀಸರೇ ಅವರನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಿದರು.

ಹುಸೇನ್ ಸಾಬ್ ಅವರಿಗೆ ಸಂಬಂಧಿಸಿದಂತೆ ಬಳ್ಳಾರಿಯ ಐದು ಹಾಗೂ ವಿಜಯನಗರ ಜಿಲ್ಲೆಯ ಒಂದು ಕಡೆ ಶೋಧ ನಡೆಸಲಾಗಿದೆ. ಗುತ್ತಿಗೆದಾರರೊಬ್ಬರ ಮನೆಯಲ್ಲೂ ಶೋಧ ನಡೆದಿದೆ.

ಬಿಬಿಎಂಪಿ ಯಲಹಂಕ ವಲಯದ ನಗರ ಯೋಜನಾ ವಿಭಾಗದ ಸಹಾಯಕ ನಿರ್ದೇಶಕ ಕೆ.ಎಲ್‌. ಗಂಗಾಧರಯ್ಯ ಅವರ ಮನೆಯಲ್ಲಿ ಲೋಕಾಯುಕ್ತ ಪೊಲೀಸರು ಸೋಮವಾರ ವಶಪಡಿಸಿಕೊಂಡಿರುವ ನಗದು ಮತ್ತು ಚಿನ್ನಾಭರಣ

5ನೇ ಪುಟ ನೋಡಿ

ಸಿ.ಎಂ ಹುದ್ದೆಗಾಗಿ ಡಿಕೆಶಿ ಹೋಮ

ಕುಂದಾಪುರ (ಉಡುಪಿ ಜಿಲ್ಲೆ): ಕೊಲ್ಲೂರಿನ ಮೂಕಾಂಬಿಕಾ ದೇವಸ್ಥಾನದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಸೋಮವಾರ ನವ ಚಂಡಿಕಾ ಯಾಗ ನೆರವೇರಿಸಿದ ವೇಳೆ ಅರ್ಚಕರು, ‘ಮುಖ್ಯಮಂತ್ರಿ ಸ್ಥಾನ ಪ್ರಾಪ್ತಿಯಾಗಲಿ; ವಿವಾದಗಳೆಲ್ಲ ಪರಿಹಾರವಾಗಿ ಜಯ ದೊರೆಯಲಿ’ ಎಂದು ಪ್ರಾರ್ಥಿಸಿದರು ಎನ್ನಲಾದ ವಿಡಿಯೊ ಎಲ್ಲೆಡೆ ಹರಿದಾಡುತ್ತಿದೆ.

ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದಲ್ಲಿ ಸೋಮವಾರ ನಡೆದ ನವ ಚಂಡಿಕಾ ಯಾಗದ ಪೂರ್ಣಾಹುತಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ ಭಾಗವಹಿಸಿದರು

6ನೇ ಪುಟ ನೋಡಿ

‘ಚೀತಾ ಬೇರೆಡೆ ಸ್ಥಳಾಂತರಿಸಿ’

ಭೋಪಾಲ್ (ಪಿಟಿಐ): ಮಧ್ಯ ಪ್ರದೇಶದ ಕುನೊ ಉದ್ಯಾನದಲ್ಲಿರುವ ಚೀತಾಗಳನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಕೋರಿ ಮಧ್ಯ ಪ್ರದೇಶದ ಅರಣ್ಯ ಇಲಾಖೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದೆ.

ಕುನೊ ಉದ್ಯಾನದಲ್ಲಿ ಕಳೆದ ಒಂದು ತಿಂಗಳ ಅಂತರದಲ್ಲೇ ಎರಡು ಚೀತಾ ಮೃತಪಟ್ಟಿವೆ. ಹೀಗಾಗಿ ಚೀತಾಗಳನ್ನು ಬೇರೆಡೆಗೆ ಸ್ಥಳಾಂತರಿಸುವಂತೆ ಇಲಾಖೆ ಕೇಳಿಕೊಂಡಿದೆ. ಕಳೆದ ವರ್ಷ ನಮೀಬಿಯಾ, ದಕ್ಷಿಣ ಆಫ್ರಿಕಾದಿಂದ ‘ಪ್ರಾಜೆಕ್ಟ್ ಚೀತಾ’ ಅಡಿಯಲ್ಲಿ ಒಟ್ಟು 20 ಚೀತಾಗಳನ್ನು ಕುನೊ ಉದ್ಯಾನಕ್ಕೆ ಕರೆತರಲಾಗಿತ್ತು. ಎರಡು ತಂಡಗಳಲ್ಲಿ ನಮೀಬಿಯಾ (8) ಹಾಗೂ ದಕ್ಷಿಣ ಆಫ್ರಿಕಾದಿಂದ (12) ಚೀತಾಗಳನ್ನು ಕರೆತರಲಾಗಿತ್ತು. ಪ್ರಧಾನಿ ಮೋದಿ ಅವರ ಹುಟ್ಟುಹಬ್ಬದ (ಸೆ.17) ದಿನದಂದು ಮೊದಲ ತಂಡದಲ್ಲಿ ಚೀತಾಗಳು ಭಾರತಕ್ಕೆ ಬಂದಿದ್ದವು.

‘ಕುನೊ ಉದ್ಯಾನದಲ್ಲಿ ಚೀತಾಗಳಿಗೆ ಅಗತ್ಯವಾಗಿರುವ ಸೌಲಭ್ಯಗಳು ಇಲ್ಲ. ಚೀತಾಗಳ ಮೇಲೆ ನಿಗಾ ವಹಿಸಲು ಇಲ್ಲಿ ಸಿಬ್ಬಂದಿ ಕೊರತೆ ಇದೆ. ಚೀತಾಗಳಿಗೆ ಓಡಾಡಲು ಬೇಕಾದಷ್ಟು ಜಾಗವೂ ಇಲ್ಲ’ ಎಂದು ಹಿರಿಯ ಅರಣ್ಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ರಾಷ್ಟ್ರೀಯ ಹುಲಿ ಸಂರಕ್ಷಣೆ ಪ್ರಾಧಿಕಾರಕ್ಕೆ ಚೀತಾಗಳನ್ನು ಸ್ಥಳಾಂತರಿಸುವ ಬಗ್ಗೆ ಪತ್ರ ಬರೆಯಲಾಗಿದೆ ಎಂದು ಮಧ್ಯ ಪ್ರದೇಶದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾ ಅಧಿಕಾರಿ ಜೆ.ಎಸ್‌. ಚೌಹಾಣ್ ತಿಳಿಸಿದರು.

‘ಕುನೊ ಉದ್ಯಾನವನಕ್ಕೆ ಚೀತಾಗಳು ಹೊಂದಿಕೊಳ್ಳದಿದ್ದರೆ ಅವುಗಳನ್ನು ರಾಜಸ್ಥಾನದ ಮುಕುಂದರಾ ಹಿಲ್ಸ್ ಹುಲಿ ಸಂರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸುವ ಯೋಜನೆಯನ್ನು ಮಾಡಲಾಗಿತ್ತು’ ಎಂದು ಪತ್ರದಲ್ಲಿ ಹೇಳಲಾಗಿದೆ.

11ನೇ ಪುಟ ನೋಡಿ

ಸುಡಾನ್‌ನಲ್ಲಿ ಸಿಲುಕಿರುವ 3 ಸಾವಿರ ಭಾರತೀಯರು

‘ಆಪರೇಷನ್ ಕಾವೇರಿ’ ಶುರು

ನವದೆಹಲಿ(ಪಿಟಿಐ): ಸುಡಾನ್‌ನಲ್ಲಿ ಸೇನೆ ಮತ್ತು ಅರೆಸೇನಾ ಪಡೆಯ ಸಂಘರ್ಷದಿಂದ ಸಂಕಷ್ಟಕ್ಕೆ ಸಿಲುಕಿರುವ ಮೂರು ಸಾವಿರಕ್ಕೂ ಹೆಚ್ಚು ಭಾರತೀಯರ ಸುರಕ್ಷಿತ ಸ್ಥಳಾಂತರಕ್ಕೆ ಕೇಂದ್ರ ಸರ್ಕಾರ ಸೋಮವಾರದಿಂದ ಕಾರ್ಯಾಚರಣೆ ಆರಂಭಿಸಿದ್ದು, ಇದಕ್ಕೆ ‘ಆಪರೇಷನ್ ಕಾವೇರಿ’ ಎಂದು ಹೆಸರಿಟ್ಟಿದೆ.

ಭಾರತೀಯರನ್ನು ತಾಯ್ನಾಡಿಗೆ ಕರೆತರಲು ಎರಡು ವಿಮಾನಗಳು ಮತ್ತು ಒಂದು ಹಡಗು ಸಿದ್ಧಗೊಂಡಿದೆ.

ಈಗಾಗಲೇ, 500 ಭಾರತೀಯರು ಸುಡಾನ್ ಬಂದರು ತಲುಪಿದ್ದಾರೆ. ಮತ್ತಷ್ಟು ಜನರು ಇದೇ ಹಾದಿಯಲ್ಲಿದ್ದಾರೆ. ಸಂಘರ್ಷ ಪೀಡಿತ ಪ್ರದೇಶದಲ್ಲಿ ಸಿಲುಕಿರುವ ಎಲ್ಲಾ ನಮ್ಮ ಸಹೋದರರನ್ನು ಭಾರತಕ್ಕೆ ಸುರಕ್ಷಿತವಾಗಿ ಕರೆತರಲಾಗುವುದು ಎಂದು ವಿದೇಶಾಂಗ ಸಚಿವ ಜೈಶಂಕರ್ ಟ್ವೀಟ್ ಮಾಡಿದ್ದಾರೆ.

ಈಗಾಗಲೇ, ಸೌದಿ ಅರೇಬಿಯಾದ ಜಿದ್ದಾ ನಗರದಲ್ಲಿ ಭಾರತೀಯ ವಾಯುಪಡೆಗೆ ಸೇರಿದ ಎರಡು ವಿಮಾನಗಳು ಸಜ್ಜಾಗಿವೆ. ಭಾರತೀಯ ನೌಕಾ ಪಡೆಗೆ ಸೇರಿದ ಐಎನ್‌ಎಸ್ ಸುಮೇಧ ಹಡಗು ಸುಡಾನ್ ಬಂದರು ತಲುಪಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಅಧಿಕಾರಕ್ಕಾಗಿ ಸೇನಾ ಮುಖ್ಯಸ್ಥ ಜನರಲ್ ಅಬ್ದುಲ್ ಫತ್ತಾಹ್ ಅಲ್ ಬುಹ್ರಾನ್ ಹಾಗೂ ಅರೆಸೇನಾ ಪಡೆ ಮುಖ್ಯಸ್ಥ ಮೊಹಮ್ಮದ್ ಹಮದಾನ್ ದಾಗಲೊ ನಡುವೆ ನಡೆಯುತ್ತಿರುವ ಸಂಘರ್ಷ 11ನೇ ದಿನಕ್ಕೆ ಕಾಲಿಟ್ಟಿದ್ದು, 400ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ. ಸಂಘರ್ಷದಲ್ಲಿ ಒಂಬತ್ತು ಮಕ್ಕಳು ಮೃತಪಟ್ಟಿದ್ದು, 50 ಮಕ್ಕಳು ಗಾಯಗೊಂಡಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಕ್ಕಳ ಘಟಕ ತಿಳಿಸಿದೆ.

ಇನ್ನೊಂದು ಸುದ್ದಿ 11

ನ್ಯಾಯಾಧೀಶರು ಸಂದರ್ಶನ ನೀಡುವುದು ಸಲ್ಲ: ಸುಪ್ರೀಂ ಕೋರ್ಟ್ 11

ನನ್ನ ಬೀಳ್ಕೊಡಲು ಬಂದಿರಬೇಕು: ಧೋನಿ 12

ಪ್ರಜಾ ಮತ
ಜನತಂತ್ರದ ಹಬ್ಬ

ರೈತರ ಆದಾಯ ದ್ವಿಗುಣ: ರಾಹುಲ್ ಭರವಸೆ 6

‘ಜೆಡಿಎಸ್‌ಗೆ ಮತ ಹಾಕಿದರೆ ಕಾಂಗ್ರೆಸ್‌ಗೇ ಹಾಕಿದಂತೆ’ 6

‘ಸಮೀಕ್ಷೆ’ಗಳ ಬೆನ್ನೇರಿ ಗದ್ದುಗೆಯ ಕನಸು 7

ಹೆಲಿಕಾಪ್ಟರ್‌ಗಳಿಗೆ ಭಾರೀ ಬೇಡಿಕೆ 7

ನೌಕಾನೆಲೆ ಜಾಗದಲ್ಲಿ ಬಿಜೆಪಿ ಸಮಾವೇಶ? 7

‘ಲಿಂಗಾಯತ ಸಮುದಾಯವನ್ನು ಅವಮಾನಿಸಿಲ್ಲ’ 6

18 ಮಂದಿ ವಿರುದ್ಧ ಆರೋಪಪಟ್ಟಿ

ಬೆಂಗಳೂರು: ರಾಜ್ಯ ಕೃಷಿ ಮಾರಾಟ ಮಂಡಳಿಯ ₹100 ಕೋಟಿ ನಿಶ್ಚಿತ ಠೇವಣಿಯನ್ನು ಖಾಸಗಿ ವ್ಯಕ್ತಿಗಳ ಖಾತೆಗೆ ವರ್ಗಾಯಿಸಿದ ಪ್ರಕರಣ ಸಂಬಂಧ 18 ಮಂದಿ ವಿರುದ್ಧ ಇ.ಡಿ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ. 2

ಚಿನಕುರಳಿ

ಪ್ರಕಾಶ್ ಶೆಟ್ಟಿ



ಕೃಷಿ ಮಾರಾಟ ಮಂಡಳಿಗೆ ವಂಚನೆ ಪ್ರಕರಣ: 18 ಮಂದಿ ವಿರುದ್ಧ ಇ.ಡಿ ಆರೋಪಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕೃಷಿ ಮಾರಾಟ ಮಂಡಳಿ (ಕೆಎಸ್‌ಎಎಂಬಿ)ಯ ₹100 ಕೋಟಿ ನಿಶ್ಚಿತ ಠೇವಣಿಯನ್ನು (ಎಫ್‌ಡಿ) ಅಕ್ರಮವಾಗಿ ಖಾಸಗಿ ವ್ಯಕ್ತಿಗಳ ಖಾತೆಗೆ ವರ್ಗಾಯಿಸಿ ವಂಚಿಸಿದ್ದ ಪ್ರಕರಣದಲ್ಲಿ ವಿಜಯ್ ಆಕಾಶ್ ಸೇರಿದಂತೆ 18 ಮಂದಿ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

ಆಂಧ್ರ ಬ್ಯಾಂಕ್‌ನ ರಾಜಾಜಿನಗರ ಶಾಖೆಯಲ್ಲಿ ಮಂಡಳಿಯು ₹ 100 ಕೋಟಿ ಮೊತ್ತವನ್ನು ಇರಿಸಿತ್ತು. ನಕಲಿ ದಾಖಲೆಗಳನ್ನು ಬಳಸಿ ಆ ಮೊತ್ತವನ್ನು ಸಿಂಡಿಕೇಟ್ ಬ್ಯಾಂಕ್‌ನ ಉತ್ತರಹಳ್ಳಿ ಶಾಖೆಗೆ ವರ್ಗಾಯಿಸಲಾಗಿತ್ತು. ಅಲ್ಲಿ ತಲಾ ₹ 50 ಕೋಟಿಯ ಎರಡು ಎಫ್‌ಡಿ ಇರಿಸಿದಂತೆ ದಾಖಲೆ ಸೃಷ್ಟಿಸಲಾಗಿತ್ತು. ಒಂದು ಎಫ್‌ಡಿಯಲ್ಲಿದ್ದ ಮೊತ್ತವನ್ನು ಹಿಂಪಡೆದು ಚೆನ್ನೈನ ವಿವಿಧ ಬ್ಯಾಂಕ್‌ಗಳ 106 ಖಾತೆಗಳಿಗೆ ವರ್ಗಾವಣೆ ಮಾಡಲಾಗಿತ್ತು.

ಪ್ರಮುಖ ಸೂತ್ರಧಾರ ವಿಜಯ್ ಆಕಾಶ್, ಸಿಂಡಿಕೇಟ್ ಬ್ಯಾಂಕ್‌ನ ಉತ್ತರಹಳ್ಳಿ ಶಾಖೆಯ ಸಹಾಯಕ ವ್ಯವಸ್ಥಾಪಕರಾಗಿದ್ದ ಎಂ.ಡಿ.ಜಯರಾಂ, ಕೃಷಿ ಮಾರಾಟ ಮಂಡಳಿಯ ಉಪ ಪ್ರಧಾನ ವ್ಯವಸ್ಥಾಪಕರಾಗಿದ್ದ ಸಿದ್ದಗಂಗಯ್ಯ, ನಾಗರಾಜು, ರೇವಣ್ಣ, ಮೊಹಮ್ಮದ್ ಮುಸ್ತಾಫ ಸೇರಿದಂತೆ 18 ಮಂದಿ ವಿರುದ್ಧ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಪೊಲೀಸರು ಸಲ್ಲಿಸಿದ್ದ ಆರೋಪಪಟ್ಟಿ ಆಧಾರದಲ್ಲಿ ಇ.ಡಿ ಅಧಿಕಾರಿಗಳು ಹಣದ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿತ್ತು.

ಮೊಹಮ್ಮದ್ ಮುಸ್ತಾಫ ಮತ್ತು ವಿಜಯ್ ಆಕಾಶ್ ಸೇರಿಕೊಂಡು ಅಕ್ರಮ ಎಸಗಿದ್ದರು. ಕೃಷಿ ಮಾರಾಟ ಮಂಡಳಿ ಲೆಕ್ಕಾಧಿಕಾರಿ ಎಂಬುದಾಗಿ ಪರಿಚಯಿಸಿಕೊಂಡು ಸಿಂಡಿಕೇಟ್ ಬ್ಯಾಂಕ್ ಶಾಖೆಯಲ್ಲಿ ಖಾತೆ ತೆರೆದು ಮಂಡಳಿಯ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿಸಿದ್ದರು ಎಂದು ಇ.ಡಿ ತಿಳಿಸಿದೆ.

ದತ್ತಾಂಶ ರಕ್ಷಿಸುವ ಮಹತ್ವದ ತಂತ್ರಜ್ಞಾನಕ್ಕೆ ₹6,003 ಕೋಟಿ ಅನುದಾನ

‘8 ವರ್ಷಗಳಲ್ಲಿ ಕ್ವಾಂಟಮ್ ಮಿಷನ್ ಜಾರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಭದ್ರತೆ, ಬ್ಯಾಂಕಿಂಗ್ ವಲಯ ಸೇರಿ ವಿವಿಧ ವಲಯಗಳಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ಮತ್ತು ಸುರಕ್ಷತೆ ಒದಗಿಸುವ ಕ್ವಾಂಟಮ್ ತಂತ್ರಜ್ಞಾನವನ್ನು ಮುಂದಿನ ಎಂಟು ವರ್ಷಗಳಲ್ಲಿ ಹಂತ ಹಂತವಾಗಿ ಅಭಿವೃದ್ಧಿಪಡಿಸಿ, ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.

ರಾಷ್ಟ್ರೀಯ ಕ್ವಾಂಟಮ್ ಮಿಷನ್‌ಗೆ (ಎನ್‌ಕ್ಯೂಎಂ) ಕೇಂದ್ರ ಸರ್ಕಾರ ಕಳೆದ ವಾರ ಅನುಮೋದನೆ ನೀಡಿ ₹6,003.65 ಕೋಟಿ ಅನುದಾನ ಒದಗಿಸಿದೆ. ರಾಮನ್ ಸಂಶೋಧನಾ ಸಂಸ್ಥೆ (ಆರ್‌ಆರ್‌ಐ), ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಸೇರಿದಂತೆ ಮಹತ್ವದ ವೈಜ್ಞಾನಿಕ ಸಂಸ್ಥೆಗಳು ಕ್ವಾಂಟಮ್ ವಿಷಯಕ್ಕೆ ಸಂಬಂಧಿಸಿದ ಸಂಶೋಧನೆಯಲ್ಲಿ ಪಾಲ್ಗೊಳ್ಳಲಿವೆ.

ಕ್ವಾಂಟಮ್ ತಂತ್ರಜ್ಞಾನದ ವಿಶೇಷತೆ

- ದತ್ತಾಂಶ ರಕ್ಷಣೆ, ಜಿಪಿಎಸ್‌ನಲ್ಲಿ ಮತ್ತಷ್ಟು ನಿಖರತೆ
- ರೋಗಿಗಳ ವಿವರಗಳನ್ನು ಸುರಕ್ಷಿತವಾಗಿ ಕಾಪಾಡಬಹುದು.
- ಹಣಕಾಸು, ಇಂಧನ, ಬಾಹ್ಯಾಕಾಶ ವಲಯಕ್ಕೆ ಅನುಕೂಲ
- 2023–2031 ಅವಧಿಯಲ್ಲಿ ಈ ತಂತ್ರಜ್ಞಾನ ಅಭಿವೃದ್ಧಿ ಗುರಿ ಹೊಂದಲಾಗಿದೆ.
- ಕ್ವಾಂಟಮ್ ಮಿಷನ್ ಹೊಂದುತ್ತಿರುವ ವಿಶ್ವದ 7 ನೇ ದೇಶ ಭಾರತವಾಗಿದ್ದು, ಅಮೆರಿಕ, ಆಸ್ಟ್ರಿಯಾ, ಫಿನ್‌ಲ್ಯಾಂಡ್, ಫ್ರಾನ್ಸ್, ಕೆನಡಾ ಮತ್ತು ಚೀನಾ ಈ ತಂತ್ರಜ್ಞಾನವನ್ನು ಹೊಂದಿವೆ.

‘ಕ್ವಾಂಟಮ್ ತಂತ್ರಜ್ಞಾನ ಅಳವಡಿಕೆಯಿಂದ ದೇಶದಲ್ಲಿ ಮಹತ್ವದ ಪರಿವರ್ತನೆಯಾಗಲಿದೆ’ ಎಂದು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹಿರಿಯ ಸಲಹೆಗಾರ ಅಖಿಲೇಶ್ ಗುಪ್ತಾ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

‘ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಎನ್‌ಕ್ಯೂಎಂ ಅನ್ನು 2023–24 ರಿಂದ 2030–31ರ ಅವಧಿಯಲ್ಲಿ ಅನುಷ್ಠಾನಗೊಳಿಸಲಿದೆ. ಮೊದಲ ಮೂರು ವರ್ಷಗಳಲ್ಲಿ ಕ್ವಾಂಟಮ್ ತಂತ್ರಜ್ಞಾನ ಅಭಿವೃದ್ಧಿಪಡಿಸುವ ಹಂತವಾಗಿದೆ. ಮೂರನೇ ಮತ್ತು ಐದನೇ ವರ್ಷಗಳ ನಡುವೆ ತಂತ್ರಜ್ಞಾನದ ಪ್ರದರ್ಶನ ಮತ್ತು ವಿವಿಧ ರೀತಿಯ ಪ್ರಯೋಗಗಳು ನಡೆಯಲಿವೆ. ನಂತರ, ಅನುಷ್ಠಾನದ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದು’ ಎಂದು ತಿಳಿಸಿದರು.

‘ಈ ತಂತ್ರಜ್ಞಾನದ ಅಭಿವೃದ್ಧಿಗೆ ವಿವಿಧ ದೇಶಗಳ ಸಹಕಾರ ಪಡೆಯಲಾಗುವುದು. ಆದರೆ, ದೇಶಿಯವಾಗಿಯೇ ಅಭಿವೃದ್ಧಿಪಡಿಸಲಾಗುವುದು’ ಎಂದರು.

ಆರ್‌ಆರ್‌ಐ ಪ್ರೊ. ಉರ್ಬಾಸಿ ಸಿನ್ಹಾ ಮಾತನಾಡಿ, ‘ಕ್ವಾಂಟಮ್ ತಂತ್ರಜ್ಞಾನವು ಆರೋಗ್ಯ ರಕ್ಷಣೆ, ಬ್ಯಾಂಕಿಂಗ್, ಕೃಷಿ ಸೇರಿದಂತೆ ವಿವಿಧ ವಲಯಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಲಿದೆ’ ಎಂದರು.

‘ಕ್ವಾಂಟಮ್ ಕಂಪ್ಯೂಟರ್‌ಗಳನ್ನು ಅಭಿವೃದ್ಧಿಪಡಿಸುವುದು ರಾಷ್ಟ್ರೀಯ ಕ್ವಾಂಟಮ್ ಮಿಷನ್‌ನ ಪ್ರಮುಖ ಉದ್ದೇಶವಾಗಿದೆ. ಈ ಕಂಪ್ಯೂಟರ್‌ಗಳು ಹೆಚ್ಚಿನ ಸಾಮರ್ಥ್ಯ ಹೊಂದಲಿವೆ ಮತ್ತು ಸಂಕೀರ್ಣ ಸಮಸ್ಯೆಗಳನ್ನು ಬಗೆಹರಿಸಲಿವೆ. ಈ ಮಹತ್ವದ ಕಾರ್ಯದ ಹೊಣೆಯನ್ನು ಟಾಟಾ ಮೂಲಭೂತ ಸಂಶೋಧನಾ ಸಂಸ್ಥೆ (ಟಿಐಎಫ್‌ಆರ್) ವಹಿಸಿಕೊಂಡಿದೆ’ ಎಂದು ತಿಳಿಸಿದರು. ಐಐಎಸ್‌ಸಿಯ ಪ್ರೊ. ಅಪೂರ್ವ ಪಟೇಲ್, ಆರ್‌ಆರ್‌ಐ ಪ್ರೊ. ಸಾಧಿಕ್ ರಂಗವಾಲಾ ಮತ್ತು ಪ್ರೊ. ಸುಬ್ರೊ ಭಟ್ಟಾಚಾರ್ಯ ಇದ್ದರು.

ಇತ್ತೀಚೆಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆ ರಾಷ್ಟ್ರೀಯ ಕ್ವಾಂಟಮ್ ಮಿಷನ್ ಯೋಜನೆಗೆ ₹6,003.65 ಕೋಟಿ ಅನುದಾನ ಒದಗಿಸಲು ಅನುಮತಿ ನೀಡಿತ್ತು.

ಯಲಹಂಕ: ಡಾ.ರಾಜ್ ಜನ್ಮದಿನದ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ನಗರ್ತಪೇಟೆ ರಸ್ತೆಯಲ್ಲಿರುವ ರಣಧೀರ ಕಂಠೀರವ ಡಾ.ರಾಜ್ ಅಭಿಮಾನಿಗಳ ಸಂಘದ ಆಶ್ರಯದಲ್ಲಿ ರಾಜ್‌ಕುಮಾರ್ ಅವರ 94ನೇ ಜನ್ಮದಿನವನ್ನು ಆಚರಿಸಲಾಯಿತು.

ರಾಜ್ ಅವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿದ ಅಭಿಮಾನಿಗಳು, ಬೃಹತ್ ಕೇಕ್ ಕತ್ತರಿಸಿ, ಸಿಹಿಹಂಚಿ, ಪಟಾಕಿ ಸಿಡಿಸುವ ಮೂಲಕ ಸಂಭ್ರಮಿಸಿದರು. ಅನ್ನದಾನ ಏರ್ಪಡಿಸಲಾಗಿತ್ತು.

ನಗರಸಭೆ ಮಾಜಿ ಅಧ್ಯಕ್ಷ ಮು.ಕೃಷ್ಣಮೂರ್ತಿ, ಸಂಘದ ಅಧ್ಯಕ್ಷ ನಾರಾಯಣ, ಪದಾಧಿಕಾರಿಗಳಾದ ನಾಗರಾಜ್, ಭಾಸ್ಕರ್, ಶೇಖರ್, ಮುನಿರಾಜು, ರಾಮಕೃಷ್ಣ, ಮಂಜುನಾಥ್, ನಾಗಾರ್ಜುನ, ದಶರಥ, ವೈ.ಸಿ.ವೀರಭದ್ರ ಹಾಗೂ ಕುಮಾರ್ ಉಪಸ್ಥಿತರಿದ್ದರು.



ರಣಧೀರ ಕಂಠೀರವ ಡಾ.ರಾಜ್ ಅಭಿಮಾನಿಗಳ ಸಂಘದ ಆಶ್ರಯದಲ್ಲಿ ಡಾ.ರಾಜಕುಮಾರ್ ಅವರ 94ನೇ ವರ್ಷದ ಜನ್ಮದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು

ನಗರದಲ್ಲಿ ಇಂದು

ಶಂಕರ ಜಯಂತಿ ಮಹೋತ್ಸವ: ಬೆಳಿಗ್ಗೆ 8ಕ್ಕೆ ಶತರುದ್ರಾಭಿಷೇಕ, ಬೆಳಿಗ್ಗೆ 9ಕ್ಕೆ ರಾಜಬೀದಿ ಉತ್ಸವಕ್ಕೆ ಚಾಲನೆ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಆಯೋಜನೆ: ಶಂಕರ ಜಯಂತಿ ಸೇವಾ ಸಮಿತಿ, ಸ್ಥಳ: ಶ್ರೀಶೃಂಗೇರಿ ಶಂಕರಮಠ, ಶಂಕರಪುರ, ಚಾಮರಾಜಪೇಟೆ

ಗೌರವಾಭಿನಂದನೆ ಕಾರ್ಯಕ್ರಮ: ಗೌರವಾಭಿನಂದನೆ: ಅ.ರಾ. ಮಿತ್ರಾ, ಹಂ.ಪ. ನಾಗರಾಜಯ್ಯ, ಅತಿಥಿ: ಮಹೇಶ ಜೋಶಿ, ಉಪನ್ಯಾಸ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 11



ಹಂ.ಪ. ನಾಗರಾಜಯ್ಯ

‘ಬಸವ’ ಜಯಂತಿ ಹಾಗೂ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ, ಬಸವಶ್ರೀ ಪ್ರಶಸ್ತಿ ಪ್ರದಾನ: ಬಿ.ಎಸ್. ಪಾಟೀಲ್, ‘ಬಸವಜ್ಯೋತಿ’ ಸಂಚಿಕೆ ಬಿಡುಗಡೆ, ‘ವಚನ ಸಾಹಿತ್ಯಶ್ರೀ’ ಪ್ರದಾನ: ಸುಭಾಷ್ ಬಿ. ಅಡಿ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ‘ಬಸವಶ್ರೀ’ ಪ್ರಶಸ್ತಿ ಪುರಸ್ಕತರು: ಜಿ.ಎಸ್. ಜಯದೇವ, ‘ವಚನ ಸಾಹಿತ್ಯಶ್ರೀ’ ಪ್ರಶಸ್ತಿ ಪುರಸ್ಕೃತರು: ಪ್ರದೀಪಕುಮಾರ್ ಹೆಬ್ರಿ, ಜಿ.ವಿ. ರೇಣುಕಾ ರಾಜಶೇಖರ್, ಉಪಸ್ಥಿತಿ: ಸಿ. ಸೋಮಶೇಖರ್, ಆಯೋಜನೆ: ಬಸವ ವೇದಿಕೆ, ಸ್ಥಳ: ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 5

ಬಿ.ಎಸ್. ಪಾಟೀಲ್

ಪ್ರವಚನ ವಾಹಿನಿ: ‘ಸಮಾಜಕ್ಕೆ ರಾಮಾನುಜರ ಕೊಡುಗೆ’, ಉಪನ್ಯಾಸ: ಗೋಪಾಲ ಅಯ್ಯಂಗಾರ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ರಾಮೋತ್ಸವ ವಿಶೇಷ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ದ್ಯುತಿ ಮತ್ತು ಸ್ನಿಗ್ಧಾ, ಸಂಗೀತ ಕಛೇರಿ: ರಮಣ ಬಾಲಚಂದ್ರನ್, ಅರವಿಂದ್ ರಂಗನಾಥನ್, ಸುನಾದ್ ಆನೂರು, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅಶ್ವಿನ್ ಭೋಗೇಂದ್ರ, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ತ್ರಿವಂದ್ರಮ್ ಬಾಲಾಜಿ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಭರತನಾಟ್ಯ ಪ್ರದರ್ಶನ: ಗೌರಿ ಭಾರದ್ವಾಜ್, ಗಾಯನ: ಐಶ್ವರ್ಯ ಶಂಕರ್, ಪಿಟೀಲು: ಸಂದೀಪ್ ರಾಮಚಂದ್ರನ್, ಮೃದಂಗ: ಬಿ.ಎಸ್. ಪ್ರಶಾಂತ್, ಖಂಜೀರಾ: ಸುನಾದ ಆನೂರು, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 6.30

ಬಿಎಸ್‌ಸಿ ನರ್ಸಿಂಗ್‌ಗೆ ಸಿಇಟಿ: 16 ಸಾವಿರ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಸ್‌ಸಿ ನರ್ಸಿಂಗ್ ಪ್ರವೇಶಕ್ಕೆ ಇದೇ ಮೊದಲ ಬಾರಿ ನಡೆಸುತ್ತಿರುವ ಸಿಇಟಿಗೆ 16 ಸಾವಿರ ಅರ್ಜಿಗಳು ಸಲ್ಲಿಕೆಯಾಗಿವೆ.

ಖಾಸಗಿ ಶಿಕ್ಷಣ ಸಂಸ್ಥೆಗಳ ವಿರೋಧದ ನಡುವೆಯೂ ಸರ್ಕಾರ 2023–24ನೇ ಸಾಲಿಗೆ ಬಿಎಸ್‌ಸಿ ನರ್ಸಿಂಗ್ ಶಿಕ್ಷಣಕ್ಕೆ ಪ್ರವೇಶ ನೀಡಲು ಪ್ರತ್ಯೇಕ ಸಿಇಟಿ ನಡೆಸಲು ನಿರ್ಧರಿಸಿತ್ತು.

ಇದೇ 24ಕ್ಕೆ ಅರ್ಜಿ ಸಲ್ಲಿಕೆಯ ಅವಧಿ ಮುಕ್ತಾಯವಾಗಿದೆ.

‘ಈ ವರ್ಷವೂ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದವರಿಗೆ ಸಿಇಟಿ ಅರ್ಹತಾಪಟ್ಟಿಯ ಆಧಾರದಲ್ಲಿ ಪರಿಗಣಿಸಲಾಗುತ್ತದೆ. ಶೇ 80ರಷ್ಟು ಸೀಟುಗಳು ಅಲ್ಲಿಂದಲೇ ಭರ್ತಿಯಾಗುತ್ತವೆ. ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಏಕ ರೂಪದ ಪ್ರವೇಶ ಕಲ್ಪಿಸಲು ಪ್ರತ್ಯೇಕ ಸಿಇಟಿ ನಡೆಸಲಾಗುತ್ತಿದೆ. ಇದಕ್ಕೆ ಉತ್ತಮ ಸ್ಪಂದನೆ ದೊರೆತಿದ್ದು, ನಿರೀಕ್ಷೆಗಿಂತ ಅಧಿಕ ಅರ್ಜಿಗಳು ಸಲ್ಲಿಕೆಯಾಗಿವೆ’ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಹೇಳಿದರು.

ನಿಧನ ವಾರ್ತೆ

ಜಿ.ವಿ. ಹುಚ್ಚಪ್ಪ



ಬೆಂಗಳೂರು: ಶ್ರೀರಾಮಪುರ ಭಾಗದ ಪತ್ರಿಕಾ ವಿತರಕರಾಗಿ ಹಲವು ವರ್ಷ ಕೆಲಸ ಮಾಡಿದ್ದ ಜಿ.ವಿ. ಹುಚ್ಚಪ್ಪ (75) ಅವರು ಭಾನುವಾರ ನಿಧನರಾದರು. ಅವರಿಗೆ ಪತ್ನಿ ಹಾಗೂ ನಾಲ್ವರು ಪುತ್ರಿಯರು ಇದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

CONNECT ಕ್ಲಾಸಿಫೈಡ್ಸ್

PUBLIC NOTICE

NOTICE
Notice is here by given that the certificate (s) for 280 Equity shares of Certificate No. 114172, 261036, 376324 of Larsen & Toubro Ltd Standing in the names(s) of JOSEPH ITTOOP CHUNGATH, has / have been lost or mislaid and the undersigned has / have applied to the Company to issue duplicate Certificate (s) for the said shares. Any person who has any claim in respect of the said shares should write to our Registrar, Kfin Technologies limited. Selenium Tower B, Plot 31-32, Gachibowli, Financial District, Hyderabad-500032 Within One Month From this date else the company will proceed to issue duplicate certificate (s).
JOSEPH ITTOOP CHUNGATH
Date: 24.04.2023 - Place Bangalore
Folio No - 70605465

PERSONAL

Change of Name

CHANGE OF NAME
I, **SHILPA K PRASAD,** W/o wgcdr M Keshava Prasad (26536-L,) R/@ No A-1702, Mnatri Serenity, Doddakallasandra, Kanakapura Road, Bengaluru-560062, have changed my name **Shilpa K Prasad** to **SHILPA RAMALINGAM** vide affidavit dated 24.04.2023 before Notary N. Kanchivaradaraju, Bangalore.

CHANGE OF NAME
I, RAVI DASARI LAKSHMINARASIMHAIAH, Father of CHINMAYI RAVI DASARI residing at No.102, Srujana Orchids, 4th Main, Hanumahills Layout, Arehalli, Bangalore-560061, I have changed my daughter name from **CHINMAYI RAVI DASARI** to **CHINMAYI RAVI** (DOB: 12.10.2007) Vide affidavit before Notary Public D.K. Rameshappa, Bangalore on 24/04/2023.

Lost

I, **MISHA** N Devegowda have lost my 10th ICSE Marks Card Reg. No. 7407173, year 2020- 2021, Baldwin's Girls High School. While in transit. Finders please contact: 9663578499.

ಕಳೆದಿದೆ
ನಾನು, ವಿಜಯಕುಮಾರ್. ವಿ, ವಿಳಾಸ: ನಂ. 20, 14ನೇ "ಎ" ಅಡ್ಡರಸ್ತೆ, ನಾಗಪುರ, ಮಹಾಲಕ್ಷ್ಮೀಪುರ, ಬೆಂಗಳೂರು ನಿವಾಸಿಯಾಗಿದ್ದು, ಶ್ರೀಮತಿ ವಿ. ಪದ್ಮಾವತಿ ಎಂಬುವರ ಹೆಸರಿನಲ್ಲಿ 12.04.2006 ರಂದು ನೋಂದಾಯಿತ ಸೇಲ್ ಡೀಡ್ ನಂ. 02559 ಹೊಂದಿರುವ ಅಸಲು ದಾಖಲಾತಿ ಕಳೆದುಕೊಂಡಿದ್ದೇನೆ. ಯಾರಿಗಾದರೂ ಸಿಕ್ಕಿದ್ದಲ್ಲಿ ದಯವಿಟ್ಟು ಸಂಪರ್ಕಿಸಿ: 99723 70703 ಅಥವಾ ಸಮೀಪದ ಪೊಲೀಸ್ ಠಾಣೆಗೆ ಮಾಹಿತಿ ನೀಡಿರಿ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD | ಪ್ರಜಾವಾಣಿ
JOB CORNER
BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
*conditions apply
For More Details Contact:
9731810277 | 9901641752
9845114560 | 9886213331
080- 45557163 | 45557164

SILICON CITY COLLEGE
(A Unit of MJ Education Trust)
Re-Accredited by NAAC with 'A' Grade
Contact No. 8147093466 8147093467
#26/2 Ravindra Layout, Near Police Quarters, KR Puram, Bengaluru 560036
Congratulations To our proud Toppers of II PUC Examination, April 2023
RE-ACCREDITED BY NAAC WITH 'A' GRADE
MEHEK A REG.NO-857687 CEBA- 96%, 576/600 ACCOUNTANCY - 99 COMP. SCIENCE - 99
VARUN RAMESH REG.NO-858157 PCMC- 94.3%, 566/600 MATHS-97 COMP.SCIENCE -99
SHRISHA S REG.NO-858008 CEBA- 94%, 564/600 ACCOUNTANCY - 96 ECONOMICS-95
SRI GANESH REG.NO-858032 CEBA-92%, 552/600 ECONOMICS-98 BUSINESS STUDIES-97
RAHUL G S REG.NO-857858 PCMC-91.7%, 550/600 PHYSICS-99 COMP.SCIENCE-98
K TRISHNAVI REG.NO-857549 CEBA – 90.3%, 542/600 ACCOUNTANCY -96 BUSINESS STUDIES - 92
VENU MADHAV G REG.NO-858168 PCMC-89.2%, 535/600 MATHS-94 COMP.SCIENCE-91
NOORAIN ARSHIYA REG.NO- 857782 CEBA-89%, 534/600 ACCOUNTANCY-94 COMP.SCIENCE-94
DARSHAN P REG.NO-857393 CEBA-87.7%, 526/600 ACCOUNTANCY-95 ECONOMICS-90

A JAIN INSTITUTION
ADARSH GROUP OF INSTITUTIONS
5th Main, Chamarajpet, Bengaluru - 18 | www.agieducation.org
ADMISSIONS OPEN 2023
PUC COMMERCE: MSBA SEBA CsSBA HEBA CsEBA
PUC SCIENCE: PCMB PCMCs PCME
+91 74067 40022
DEGREE COURSES: BBA BCOM BCA BA BSC
PG COURSES: MBA DUAL Specialization MCOM
EVENING COLLEGE: PUC BCOM
+91 74067 40011
Apply online @ www.agieducation.org
Facilities: Experienced Faculty Team | Well Stocked Library | Language Lab | Research Cell | Wi-Fi Campus | State of Art Computer Lab | Seminar Halls | Auditoriums | Gymnasium | Indoor and Outdoor Games | Cafeteria | Surveillance Camera
Scholarship for meritorious students
Phone : +91 80 26984976 / +91 80 26677100 | Email : admission@agieducation.org

2nd PU Failed?
Don't be left behind!
A golden opportunity to study degree under any University this academic year and save one precious year of your life.
BE, MBBS, BSc, BBA, BCA and other degrees
Limited seats. For admissions call:
2ನೇ ಪಿಯುಸಿ ಅನುತ್ತೀರ್ಣವಾದ ವಿದ್ಯಾರ್ಥಿಗಳಿಗೆ ಒಂದು ಸುವರ್ಣ ಅವಕಾಶ. ಸಂಪರ್ಕಿಸಿ:
8800883871

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ಸೇವೆಸಲ್ಲಿಸುತ್ತಿದ್ದಾರೆ. ಇದರಲ್ಲಿ ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ, ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮೀಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನದ ಉತ್ತಮವಾಗಿ ಮಾಡಿಬಲ್ಲರು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೋ, ಗುರೂಜಿ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸಂದರ್ಶನ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
Ph: 080 25420833, 98441 65272 / 99727 41083

ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು–56. ದೂರವಾಣಿ: 080–22961039
ಸಂಖ್ಯೆ:ಎಸಿಎ–3:ಸಂ.ನ:2023–24 ದಿನಾಂಕ:24–04–2023

ಜಾಹೀರಾತು

ಬೆಂಗಳೂರು ವಿಶ್ವವಿದ್ಯಾಲಯವು, 2023–24ನೇ ಸಾಲಿಗೆ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ, ಅಂದರೆ, ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ (ತಿದ್ದುಪಡಿ) 2015ರಲ್ಲಿ ನಿಗಧಿಪಡಿಸಿರುವಂತೆ ಬೆಂಗಳೂರು ನಗರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರಗಳಾದ, ವಿಜಯನಗರ, ಪದ್ಮನಾಭನಗರ, ಬೊಮ್ಮನಹಳ್ಳಿ, ಆನೇಕಲ್, ಬೆಂಗಳೂರು ದಕ್ಷಿಣ, ಯಶವಂತಪುರ, ರಾಜರಾಜೇಶ್ವರಿನಗರ, ದಾಸರಹಳ್ಳಿ, ಮಹಾಲಕ್ಷ್ಮೀ ಬಡಾವಣೆ, ಗೋವಿಂದರಾಜನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಧಾನ ಸಭಾ ಕ್ಷೇತ್ರ ನೆಲಮಂಗಲ, ರಾಮನಗರ ಜಿಲ್ಲೆಯ ಮಾಗಡಿ, ರಾಮನಗರ, ಕನಕಪುರ ಮತ್ತು ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿರುವ ಕಾಲೇಜುಗಳಿಂದ ಮತ್ತು ಶಿಕ್ಷಣ ಸಂಸ್ಥೆಗಳಿಂದ ವಿವಿಧ ರೀತಿಯ ಸಂಯೋಜನೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ದ ಪ್ರಕರಣ 59 ಮತ್ತು 62ರ ಅಡಿಯಲ್ಲಿ, ಅರ್ಜಿಗಳನ್ನು ಅಧಿಸೂಚನೆ ಸಂಖ್ಯೆ: ಸಂಖ್ಯೆ:ಎಸಿಎ–3:ಸಂನ:2023–24 ದಿನಾಂಕ: 24–04–2023ರ ಮೂಲಕ ಆಹ್ವಾನಿಸಿದೆ. ಈ ಅಧಿಸೂಚನೆಯು ವಿಶ್ವವಿದ್ಯಾಲಯದ ವೆಬ್‌ಸೈಟ್, www.bangaloreuniversity.ac.in.ನಲ್ಲಿ ಲಭ್ಯವಿರುತ್ತದೆ.
ಈ ಅಧಿಸೂಚನೆಯನ್ನು ಪರಾಮರ್ಶಿಸಿದ ನಂತರವೇ ಕಾಲೇಜುಗಳು/ಸಂಸ್ಥೆಗಳು ಸಂಯೋಜನಾ ಅರ್ಜಿಗಳನ್ನು ಸರ್ಕಾರದ ಆನ್–ಲೈನ್ ವೆಬ್ ಸೈಟ್ 'https://uucms.karnataka.gov.in/' ಮಾತ್ರವೇ ಅರ್ಜಿಯನ್ನು ಸಲ್ಲಿಸತಕ್ಕದ್ದು.
ಅರ್ಜಿಗಳನ್ನು ದಂಡ ಶುಲ್ಕ ರಹಿತವಾಗಿ ದಿನಾಂಕ: 30–04–2024ರ ಒಳಗಾಗಿ ಸಲ್ಲಿಸಬಹುದಾಗಿದೆ.
ಹೆಚ್ಚಿನ ಮಾಹಿತಿಯನ್ನು ವಿದ್ಯಾಕಾರ್ಯಶಾಖೆ–3, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಂಗಳೂರು–56 (ದೂರವಾಣಿ: 080–22961039) ಇಲ್ಲಿ ಪಡೆಯಬಹುದಾಗಿದೆ.
ಸಹಿ/– ಕುಲಸಚಿವರು

ಸಾರ್ವಜನಿಕ ಸೂಚನೆ

ನಮ್ಮ ಗ್ರಾಹಕರು ತಿಂಡ್ಲು ಗ್ರಾಮ, ಕುಂದಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ 2 ಎಕರೆ 20 ಗುಂಟಗಳ ಸರ್ವೆ ಸಂಖ್ಯೆ 197/1 ರ ಕೃಷಿ ಭೂಮಿಯನ್ನು ಖರೀದಿಸಲು ಮಾತುಕತೆ ನಡೆಸುತ್ತಿದ್ದಾರೆ, ಇಲ್ಲಿ ಕೆಳಗಿನ ಶೆಡ್ಯೂಲ್ ನಲ್ಲಿ (ಶೆಡ್ಯೂಲ್ ಪ್ರಾಪರ್ಟಿ) ಸಂಪೂರ್ಣವಾಗಿ ವಿವರಿಸಲಾಗಿದೆ. ದಿವಂಗತ ಬಿ. ನಂಜಪ್ಪನವರ ಪುತ್ರ, ಓಬಳೇಶ್.ಬಿ.ಎನ್. ತಾನು ಅನುಸೂಚಿತ ಸ್ವತ್ತಿನ ಏಕೈಕ ಮತ್ತು ಸಂಪೂರ್ಣ ಮಾಲೀಕನೆಂದು ಪ್ರತಿನಿಧಿಸುವ ಅವರು 13.1.2023ರ ಮಾರಾಟದ ಪತ್ರದ ಅಡಿಯಲ್ಲಿ ಈ ಆಸ್ತಿಯನ್ನು ಮೇಲೆ ತಿಳಿಸಿದ ಮಾರಾಟ ಪತ್ರದಲ್ಲಿ ವಿವರಿಸಿದಂತೆ ಮೃತ ಸೀಕಲಪ್ಪ ಅವರ ಉಳಿದಿರುವ ಕುಟುಂಬದ ಸದಸ್ಯರು ಮತ್ತು ವಾರಸುದಾರರಿಂದ ಖರೀದಿಸಿದ್ದಾರೆ ಎಂದು ತಿಳಿಸಿದ್ದಾರೆ.
ದಿನಾಂಕ 13.1.2023 ರ ಮಾರಾಟ ಪತ್ರದಲ್ಲಿ ಶ್ರೀಯುತ ಓಬಳೇಶ್ ಬಿ.ಎನ್. ಅವರ ಪರವಾಗಿ ಕಾರ್ಯಗತಗೊಳಿಸಿದ ಮಾರಾಟಗಾರರು ಮಾತ್ರವೇ ದಿವಂಗತ ಸೀಕಲಪ್ಪ ಅವರ ಕುಟುಂಬದ ಉಳಿದಿರುವ ಸದಸ್ಯರು/ ವಾರಸುದಾರರು ಮತ್ತು ಅನುಸೂಚಿತ ಸ್ವತ್ತಿನ ಮೂಲ ಕಾನೂನು ಪ್ರತಿನಿಧಿಗಳು ಮತ್ತು ಆ ಕಾರಣದಿಂದ ಅವರಷ್ಟೆ ಅನುಸೂಚಿತ ಸ್ವತ್ತಿನ ಸಂಪೂರ್ಣ ಮಾಲೀಕರು ಎಂದು ಪ್ರಸ್ತುತ ಮಾಲೀಕ ಶ್ರೀಯುತ ಓಬಳೇಶ್ ಬಿ.ಎನ್. ವಿವರಿಸಿದ್ದಾರೆ. ಅನುಸೂಚಿತ ಸ್ವತ್ತಿನ ಯಾವುದೇ ರೀತಿಯ ಋಣಾಭಾರಗಳಿಂದ ಮುಕ್ತವಾಗಿದೆ ಮತ್ತು ಶ್ರೀ. ಓಬಳೇಶ್.ಬಿ.ಎನ್. ನಮ್ಮ ಗ್ರಾಹಕರಿಗೆ ಅನುಸೂಚಿತ ಸ್ವತ್ತನ್ನು ಮಾರಾಟ ಮಾಡಲು ಅರ್ಹರಾಗಿದ್ದಾರೆ ಎಂದು ಪ್ರತಿನಿಧಿಸುತ್ತಾರೆ. ಈ ಮೂಲಕ ಸಾರ್ವಜನಿಕರಿಗೆ ಸೂಚನೆ ನೀಡುವುದೇನೆಂದರೆ, ಅನುಸೂಚಿತ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಶೀರ್ಷಿಕೆ ಅಥವಾ ಯಾವುದೇ ಸ್ವಭಾವದ ಆಸಕ್ತಿಯನ್ನು ಅಥವಾ ಯಾವುದೇ ಹಕ್ಕು, ಶುಲ್ಕ ಅಥವಾ ಜಾರಿಗೊಳಿಸಬಹುದಾದ ಹಕ್ಕನ್ನು ಹೊಂದಿರುವ ಯಾವುದೇ ವ್ಯಕ್ತಿ ಮತ್ತು/ಅಥವಾ ಯಾವುದೇ ಸ್ವರೂಪದ ಯಾವುದೇ ಹಕ್ಕು ಮತ್ತು/ಅಥವಾ ಉದ್ದೇಶಿತ ವಹಿವಾಟಿಗೆ ಯಾವುದೇ ಸ್ವರೂಪದ ಯಾವುದೇ ಆಕ್ಷೇಪಣೆಗಳನ್ನು ಹೊಂದಿದ್ದರೆ, ಪ್ರಸ್ತಾವಿತ ವಹಿವಾಟಿಗೆ ಯಾವುದೇ ಸ್ವರೂಪದ ಯಾವುದೇ ಆಕ್ಷೇಪಣೆಗಳು ಅಂತಹ ಹಕ್ಕು ಮತ್ತು/ಅಥವಾ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ, ಈ ದಿನಾಂಕದಿಂದ ಏಳು ದಿನಗಳೊಳಗೆ ಪೂರಕ ದಾಖಲೆಗಳ ಸಹಿತವಾಗಿ ಕೆಳಗೆ ಸಹಿ ಮಾಡಿರುವವರಿಗೆ ಸಲ್ಲಿಸುವುದು, ವಿಫಲವಾದಲ್ಲಿ ಯಾವುದೇ ಮಾನ್ಯವಾದ ಹಕ್ಕುಗಳು ಅಥವಾ ಆಕ್ಷೇಪಣೆಗಳು ಅಸ್ತಿತ್ವದಲ್ಲಿಲ್ಲ ಎಂದು ಭಾವಿಸಲಾಗುತ್ತದೆ ಮತ್ತು ಸ್ಪಷ್ಟ ಶೀರ್ಷಿಕೆ ಮತ್ತು ಇತರ ಶಾಸನಬದ್ಧ ಔಪಚಾರಿಕತೆಗಳ ಅನುಸಾರ ನಮ್ಮ ಗ್ರಾಹಕರು ವ್ಯವಹಾರವನ್ನು ಪೂರ್ಣಗೊಳಿಸಲು ಮುಂದುವರಿಯುತ್ತಾರೆ.

ಅನುಸೂಚಿತ ಸ್ವತ್ತು
ತಿಂಡ್ಲು ಗ್ರಾಮ, ಕುಂದಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರದ 2 ಎಕರೆ ಮತ್ತು 20 ಗುಂಟೆ ಅಳತೆಯ ಸರ್ವೆ ನಂ.197/1 ಕೃಷಿ ಭೂಮಿಯು ಸ್ಥಿರಾಸ್ತಿಯು ಇವುಗಳಿಂದ ಸುತ್ತುವರಿದಿದೆ:
ಪೂರ್ವಕ್ಕೆ : ಶ್ರೀಮತಿ ಅಕ್ತರ್ ಬಾನು ಮಾಲೀಕತ್ವದ 197/2 ಸರ್ವೆ ಸಂಖ್ಯೆಯ ಜಮೀನು
ಪಶ್ಚಿಮಕ್ಕೆ : ಸೈಟ್ ಸಂಖ್ಯೆ 8 ರ ಭೂಭಾಗ.
ಉತ್ತರಕ್ಕೆ : IVC ರಸ್ತೆ
ದಕ್ಷಿಣಕ್ಕೆ : ಸೈಟ್ ಸಂಖ್ಯೆ 218 ರ ಜಮೀನು ಮತ್ತು ಚಿಕ್ಕಮುನಿವೆಂಕಟಪ್ಪ ಮತ್ತು ಕೃಷ್ಣಪ್ಪ ಅವರಿಗೆ ಸೇರಿದ ಸೈಟ್ ನಂ.8 ರ ಜಮೀನಿನ ಭಾಗ
ಸಹಿ/–, ಮೂರ್ತಿ ಆಂಡ್ ಕುಮಾರ್, ನ್ಯಾಯವಾದಿಗಳು
ದಿನಾಂಕ: 25-04-2023 1/ಎ, 2ನೇ ಮುಖ್ಯರಸ್ತೆ, 36ನೇ ಅಡ್ಡ ರಸ್ತೆ, 8ನೇ ಬ್ಲಾಕ್, ಜಯನಗರ,
ಸ್ಥಳ: ಬೆಂಗಳೂರು ಬೆಂಗಳೂರು-560082. Email: shiv@mklaw.in

ನೈಋತ್ಯ ರೈಲ್ವೆ G20
ಅರ್ಜಿ ಅಧಿಸೂಚನೆ ಸಂಖ್ಯೆ: 565/STBA/04/2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಮೂರು (03) ವರ್ಷಗಳ ಅವಧಿಗೆ ಕಮಿಷನ್ ಆಧಾರದ ಮೇಲೆ ಕಾಯ್ದಿರಿಸದ ಟಿಕೆಟ್ ವ್ಯವಸ್ಥೆಯ ಮೂಲಕ ಕಾಯ್ದಿರಿಸದ / ಸಾಮಾನ್ಯ ಟಿಕೆಟ್‌ಗಳನ್ನು ನೀಡಲು ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದ ಕೆಳಗಿನ ರೈಲು ನಿಲ್ದಾಣದಲ್ಲಿ ಸ್ಟೇಷನ್ ಟಿಕೆಟ್ ಬುಕಿಂಗ್ ಏಜೆಂಟ್‌ಗಳ ನೇಮಕಕ್ಕಾಗಿ ಮೊಹರು ಮಾಡಿದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕ್ರ	ನಿಲ್ದಾಣದ ಹೆಸರು	ನಿಲ್ದಾಣದ ಕೋಡ್	ನಿಲ್ದಾಣದ ವರ್ಗ
1	ಬಿಸಾನತ್ತಂ	ಬಿಎಸ್‌ಎಂ	ಎನ್‌ಎಸ್‌ಜಿ–6
2	ಹಿರೇಹಳ್ಳಿ	ಎಚ್‌ಎಚ್‌ಎಲ್	
3	ಕೋಲಾರ್	ಕೆಕ್ಯೂಝಡ್	
4	ಮುಲನೂರು	ಎಂಎಆರ್	
5	ಮರಂಡಹಳ್ಳಿ	ಎಂಝೆಡ್‌ಯು	
6	ಪತ್ತೂರು	ಪಿಯು	
7	ರಾಯಕೊಟ್ಟೈ	ಆರ್‌ವೈಸಿ	
8	ಸೋಮನಾಯಕಪಟ್ಟಿ	ಎಸ್‌ಕೆಪಿಟಿ	

ಅರ್ಜಿಯನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ: 25–05–2023, 10.00 ಗಂಟೆಯಿಂದ. 15:00 ಗಂಟೆಗಳವರೆಗೆ
ಮಾಹಿತಿಗಾಗಿ ಲಾಗಾನ್ ಆಗಿ: www.swr.indianrailways.gov.in
ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು
PUB/35/AAV/PRB/SWR/2023-24
S.W.Railways SWRRLY SWRRLY

PUBLIC NOTICE
My **Client CORENCO ENTERPRISES PRIVATE LIMITED**, have entered into Agreements to transact with the Schedule Property with **Sri.B.M.Umesh** And **Sri.K.Ambarish**, who are agreement holders and duly constituted power of attorney holders in respect of the Schedule Property, they having acquired the rights over the Schedule Property by entering into a registered Agreement to Sell dated: 02/03/2023 with the **Smt.Gowramma, Sri.N.M. Chidananda and Mis.Shreeya**, the present owners of the Schedule Property. Sri.B.M.Umesh And Sri.K.Ambarish represent that the present owners have a clear and marketable title to the same. Any person/s, financial institutions and statutory authorities who claims any right, title or interest of any nature in or any lien, charge or enforceable right in relation to the Schedule Property and/or has any objections of any nature to the aforesaid transaction should lodge such claim and/or objections in writing to the undersigned together with supporting documents within fifteen (15) days hereof, failing which it will be presumed that no valid claims or objections subsist and my clients would proceed to complete the transaction with the present owners and Sri.B.M.Umesh And Sri.K.Ambarish thereof subject to compliance with other statutory and legal formalities.
SCHEDULE PROPERTY
All that piece and parcel of the immovable property being vacant agricultural dry land measuring an extent of 2 Acres comprised in Sy.No.259/*/*, Earlier Sy.No.259/*/p10 (Old Sy.No.259/17) of Bettahalasuru Village, Jala Hobli, Yelahanka Taluk (Earlier Bangalore North Additional Taluk and formerly Devanahalli Taluk) and bounded on the:East by:Portion of Sy.No.259/*/* of Bettahalasuru Village, West by : Portion of Sy.No.259/*/* of Bettahalasuru Village. North by: Portion of Sy.No.259/*/* of Bettahalasuru Village. South by:Rajanukunte Road.
Sd/- Arvind Raghavan
For Arvind Raghavan & Associates
Advocates And Solicitors
#48,"ishita" 2nd Floor, 2nd Main Road, Vyalikaval, Bangalore – 03. Mob : 98450-04419, E-mail – arvind_ncsr@yahoo.com
Bangalore
Date :25/04/2023

ನೀರಿಗಾಗಿ ಜಗಳ: ಮಹಿಳೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಗಿಲು ಮುಖ್ಯರಸ್ತೆಯ ಶ್ರೀನಿವಾಸಪುರದಲ್ಲಿ ಕೆ. ಸರಸ್ವತಿ (40) ಎಂಬುವವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಸಂಬಂಧ ಯಲಹಂಕ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ಅಪಾರ್ಟ್‌ಮೆಂಟ್ ಫ್ಲ್ಯಾಟ್‌ನಲ್ಲಿ ಪತಿ ನಾಗರಾಜ್ ಜೊತೆ ಸರಸ್ವತಿ ವಾಸವಿದ್ದರು. ಏಪ್ರಿಲ್ 21ರಂದು ಫ್ಲಾಟ್‌ನ ಕೊಠಡಿಯಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ನೀರಿಗಾಗಿ ಜಗಳ ನಡೆದು ಅವಮಾನವಾಗಿದ್ದರಿಂದ ನೊಂದು ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಪತಿ ದೂರು ನೀಡಿದ್ದಾರೆ' ಎಂದು ಯಲಹಂಕ ಪೊಲೀಸರು ಹೇಳಿದರು.

ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ನೆರೆಮನೆಯ ಮಹಿಳೆ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಎಂದು ಪೊಲೀಸರು ವಿವರಿಸಿದರು.

ದುಬೈ ವಿಮಾನದ ಎಂಜಿನ್‌ನಲ್ಲಿ ಬೆಂಕಿ

ಕಠ್ಮಂಡು (ಪಿಟಿಐ): ಇಲ್ಲಿನ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದುಬೈಗೆ ಹೊರಟಿದ್ದ ವಿಮಾನದ ಎಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಕೆಲಕಾಲ ಆತಂಕದ ಸ್ಥಿತಿ ನಿರ್ಮಾಣವಾಗಿತ್ತು.

ಈ ವಿಮಾನದಲ್ಲಿ 150 ಜನರು ಪ್ರಯಾಣಿಸುತ್ತಿದ್ದರು. ಬಳಿಕ ಪೈಲಟ್‌ಗಳು ವಿಮಾನದ ಎಂಜಿನ್ ಅನ್ನು ಸ್ಥಗಿತಗೊಳಿಸಿದರು. ತಾಂತ್ರಿಕ ಸಮಸ್ಯೆ ಬಗೆಹರಿದ ಬಳಿಕ ವಿಮಾನ ದುಬೈಗೆ ತೆರಳಿತು. ಈ ಬಗ್ಗೆ ಪೈಲಟ್‌ಗಳು ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೆರೆಗಳು ಕಲುಷಿತ • ಎಚ್‌ಐವಿ ಸೋಂಕಿತರಿಗೆ ಕುಡಿಯಲು ಶುದ್ಧ ನೀರಿಲ್ಲ

ಕ್ವಾರಿಗೆ ಸೇರಿದ ತ್ಯಾಜ್ಯ ಅಂತರ್ಜಲ ವಿಷ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಲ್ಲು ಕ್ವಾರಿಗೆ ಸೇರಿದ ವೈದ್ಯಕೀಯ ತ್ಯಾಜ್ಯ ಮತ್ತು ಕಸ. ಕಲುಷಿತಗೊಂಡ ಸುತ್ತಮುತ್ತಲ ಕೆರೆಗಳು, ವಿಷವಾದ ಕೊಳವೆಬಾವಿ ನೀರು. ಆರೈಕೆ ಕೇಂದ್ರದಲ್ಲಿನ ನೂರಾರು ಎಚ್‌ಐವಿ ಸೋಂಕಿತರಿಗೆ ಕುಡಿಯಲು ನೀರಿಲ್ಲ...

ನಗರದ ಹೊರ ವಲಯದಲ್ಲಿನ ಬೈರತಿ ಬಂಡೆ ಸುತ್ತಮುತ್ತಲ ಪ್ರದೇಶದ ಸ್ಥಿತಿ ಇದು. ಬೈರತಿ ಬಂಡೆಯಲ್ಲಿ ನಡೆಯುತ್ತಿದ್ದ ಕಲ್ಲು ಗಣಿಗಾರಿಕೆ ನಿಂತು ಹಲವು ವರ್ಷಗಳೇ ಕಳೆದಿವೆ. ನೂರಾರು ಅಡಿ ಆಳದಿಂದ ಕಲ್ಲುಗಳನ್ನು ಒಡೆದು ಮೇಲೆತ್ತಿದ ಬಳಿಕ ಕ್ವಾರಿಯಲ್ಲಿ ಮಳೆ ನೀರಿನ ಜತೆಗೆ ಜಲದ ಕಣ್ಣು ಕೂಡ ತೆರೆದುಕೊಂಡು ಕ್ವಾರಿ ಕೆರೆಯ ಸ್ವರೂಪ ಪಡೆದುಕೊಂಡಿತ್ತು.

ಈ ಕ್ವಾರಿಯನ್ನು ಮುಚ್ಚಲು ಮುಂದಾದ ಕೆಲವರು ವೈಜ್ಞಾನಿಕ ಮಾರ್ಗಗಳನ್ನು ಅನುಸರಿಸಿಲ್ಲ. ವೈದ್ಯಕೀಯ ತ್ಯಾಜ್ಯ, ಕೋಳಿ ಅಂಗಡಿ ತ್ಯಾಜ್ಯ, ಕಸ ಸೇರಿ ಎಲ್ಲಾ ರೀತಿಯ ಬೇಡದ ವಸ್ತುಗಳನ್ನು ಟಿಪ್ಪರ್ ಮತ್ತು ಟ್ರ್ಯಾಕ್ಟರ್‌ಗಳಲ್ಲಿ ತಂದು ಸುರಿದಿದ್ದಾರೆ. ಆರು ತಿಂಗಳಿಂದ ಕ್ವಾರಿ ತ್ಯಾಜ್ಯದಿಂದ ತುಂಬಿದ್ದು, ಅಡಿಯಲ್ಲಿದ್ದ ನೀರು ಕೊಳೆತು ಪಕ್ಕದಲ್ಲೇ ಇರುವ ಕೆರೆಗೆ ಹರಿದಿದೆ. ಕೆರೆ ಮತ್ತು ಸುತ್ತಮುತ್ತಲ ಬಡಾವಣೆಯ ಇಡೀ ವಾತಾವರಣ ಗಬ್ಬು ನಾರುತ್ತಿದ್ದು, ಕಿಲೋ ಮೀಟರ್ ದೂರಕ್ಕೂ ದುರ್ವಾಸನೆ ಬೀರುತ್ತಿದೆ.

ಸುತ್ತಮುತ್ತಲ ಅಂತರ್ಜಲಕ್ಕೂ ತ್ಯಾಜ್ಯ ನೀರು ಸೇರಿದ್ದು, ಕೊಳವೆ ಬಾವಿಗಳಲ್ಲೂ ಕಲುಷಿತ ನೀರು ಬರುತ್ತಿದೆ. ಕುಡಿಯಲು ಮಾತ್ರವಲ್ಲ ಶೌಚಾಲಯಕ್ಕೂ ಬಳಸಲು ಸಾಧ್ಯವಾಗದಷ್ಟು ನೀರು ಹಾಳಾಗಿದೆ.

ಇಡೀ ಕ್ವಾರಿ ಈಗ ಅಕ್ಷರಶಃ ತ್ಯಾಜ್ಯ ಗುಂಡಿಯಾಗಿದ್ದು, ಇದರ ಪಕ್ಕದಲ್ಲೇ 'ಅಕ್ಸಪ್ಟ್ ಸೊಸೈಟಿ' ನಡೆಸುತ್ತಿರುವ ಆರೈಕೆ ಕೇಂದ್ರದಲ್ಲಿನ ಎಚ್‌ಐವಿ ಸೋಂಕಿತರು ಈಗ ತೊಂದರೆಗೆ ಸಿಲುಕಿದ್ದಾರೆ. ಮೊದಲೇ ಕಾಯಿಲೆಯಿಂದ ಬಳಲುತ್ತಿರುವ ಜನ ದುರ್ವಾಸನೆಯಿಂದ ಮತ್ತಷ್ಟು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಕುಡಿಯಲು ಮಾತ್ರವಲ್ಲ ಬಳಕೆಗೂ ನೀರಿಲ್ಲದೆ ಇಡೀ ಕೇಂದ್ರ ಕಷ್ಟಕ್ಕೆ ಸಿಲುಕಿದೆ. ಸೋಂಕಿತರಿಗೆ ಕುಡಿಯಲು ಮತ್ತು ನಿತ್ಯ ಬಳಕೆಗೆ ನೀರು ಪೂರೈಸಲು ಅಕ್ಸಪ್ಟ್ ಸೊಸೈಟಿಯ ಆಡಳಿತ ಮಂಡಳಿ ಪರದಾಡುತ್ತಿದೆ.

ಸೋಂಕಿತರ ಆರೋಗ್ಯಕ್ಕೂ ಮಾರಕ

ಕಲ್ಲು ಕ್ವಾರಿಯಲ್ಲಿದ್ದ ನೀರಿನಲ್ಲಿ ಜನ ಈಜುತ್ತಿದ್ದರು. ಕ್ವಾರಿ ಈಗ ತ್ಯಾಜ್ಯದಿಂದ ಮುಚ್ಚಿಕೊಂಡಿದೆ. ಅಲ್ಲಿದ್ದ ನೀರು ಕಲುಷಿತಗೊಂಡು ಪಕ್ಕದ ಕೆರೆಗೆ ಹರಿದಿದೆ. ಇದು ಅಂತರ್ಜಲ ಸೇರಿ ಕೊಳವೆ ಬಾವಿಗಳ ನೀರು ಸಂಪೂರ್ಣವಾಗಿ ಕಲುಷಿತಗೊಂಡಿದೆ. ನಮ್ಮ ಆರೈಕೆ ಕೇಂದ್ರದಲ್ಲಿ ಮೂರು ಕೊಳವೆಬಾವಿಗಳಿದ್ದು, ಎಲ್ಲಾ ಕಡೆಯೂ ಕಲುಷಿತ ನೀರು ಬರುತ್ತಿದೆ. ಟ್ಯಾಂಕರ್‌ನಲ್ಲಿ ನೀರು ತರಿಸುತ್ತಿದ್ದು, ನೀರಿಗಾಗಿಯೇ ತಿಂಗಳಿಗೆ ₹1 ಲಕ್ಷಕ್ಕೂ ಹೆಚ್ಚು ಖರ್ಚು ಮಾಡಬೇಕಾಗಿದೆ. ಅಲ್ಲದೇ ಇಡೀ ಆರೈಕೆ ಕೇಂದ್ರದ ಆವರಣದಲ್ಲಿ ದುರ್ವಾಸನೆ ಬೀರುತ್ತಿದೆ. ಸೋಂಕಿತರ ಆರೋಗ್ಯದ ಮೇಲೂ ಪರಿಣಾಮ ಬೀರುತ್ತಿದೆ. ದಾನಿಗಳ ನೆರವಿನಿಂದ 23 ವರ್ಷಗಳಿಂದ ಈ ಆರೈಕೆ ಕೇಂದ್ರ ನಡೆಸುತ್ತಿದ್ದು, ದನಕರುಗಳನ್ನೂ ಸಾಕುತ್ತಿದ್ದೇವೆ. ಅವುಗಳಿಗೂ ಕುಡಿಯಲು ನೀರಿಲ್ಲ. ಈ ಸಂಬಂಧ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ(ಕೆಎಸ್‌ಪಿಸಿಬಿ) ದೂರು ನೀಡಲಾಗಿದೆ. ಆದರೆ, ಯಾವುದೇ ಕ್ರಮ ಕೈಗೊಂಡಿಲ್ಲ. ಮಳೆ ಸುರಿದರೆ ಇನ್ನಷ್ಟು ತೊಂದರೆ ಎದುರಾಗುವ ಆತಂಕವಿದೆ.

ರಾಜು ಮ್ಯಾಥ್ಯು, ಅಕ್ಸಪ್ಟ್ ಸೊಸೈಟಿಯ ಸಂಸ್ಥಾಪಕ ಅಧ್ಯಕ್ಷ



ಕ್ವಾರಿಯಿಂದ ಹರಿದು ಬರುತ್ತಿರುವ ಕಲುಷಿತ ನೀರು
—ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಬೈರತಿ ಬಂಡೆ ಕ್ವಾರಿಗೆ ಬಳಿಯ ಕೆರೆ ಕಲುಷಿತಗೊಂಡಿದ್ದು, ಆ ನೀರನ್ನು ದೊಡ್ಡಗುಬ್ಬಿ ಕೆರೆಗೆ ಹರಿಸುತ್ತಿರುವುದು

ದೊಡ್ಡಗುಬ್ಬಿ ಕೆರೆ ಸೇರುತ್ತಿರುವ ವಿಷಕಾರಿ ನೀರು

ಕ್ವಾರಿ ಮತ್ತು ಅದರ ಪಕ್ಕದ ಚಿಕ್ಕ ಕೆರೆಯಿಂದ ಹರಿಯುತ್ತಿರುವ ದುರ್ವಾಸನೆಭರಿತ ನೀರನ್ನು ಈಗ ದೊಡ್ಡಗುಬ್ಬಿ ಕೆರೆಗೆ ಹರಿಸಲಾಗುತ್ತಿದೆ. ಕೆಲವೇ ದಿನಗಳಲ್ಲಿ ದೊಡ್ಡಗುಬ್ಬಿ ಕೆರೆ ಈ ವಿಷಕಾರಿ ನೀರಿನಿಂದ ತುಂಬಿಕೊಳ್ಳಲಿದೆ ಎಂದು ಸ್ಥಳೀಯರು ಹೇಳುತ್ತಾರೆ.

'ರಾಜಕಾಲುವೆ ಮೂಲಕವೇ ಈ ನೀರು ಹರಿಸಲಾಗುತ್ತಿದ್ದು, ಯಾರೊಬ್ಬರೂ ತಲೆ ಕೆಡಿಸಿಕೊಂಡಿಲ್ಲ. ಸುತ್ತಮುತ್ತ ಖಾಸಗಿ ಬಡಾವಣೆಗಳೂ ತಲೆ ಎತ್ತುತ್ತಿದ್ದು, ಅಲ್ಲಿನ ಕೊಳವೆ ಬಾವಿಗಳಲ್ಲೂ ಕಲುಷಿತ ನೀರು ಬರುತ್ತಿದೆ. ಇಲ್ಲಿ ಮನೆಗಳನ್ನು ನಿರ್ಮಿಸುತ್ತಿರುವ ಜನ ಮುಂದಿನ ದಿನಗಳಲ್ಲಿ ಕಷ್ಟಕ್ಕೆ ಸಿಲುಕುವ ಸಾಧ್ಯತೆ ಇದೆ. ಕೂಡಲೇ ಸಮಸ್ಯೆ ಪರಿಹರಿಸಬೇಕು' ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.

'ಕೊಳವೆಬಾವಿ ನೀರು ಬಳಕೆಗೂ ಯೋಗ್ಯವಿಲ್ಲ'

ಕೊಳವೆಬಾವಿಗಳಲ್ಲಿ ಬರುತ್ತಿರುವ ನೀರನ್ನು 'ಅಕ್ಸಪ್ಟ್ ಸೊಸೈಟಿ' ಆಡಳಿತ ಮಂಡಳಿ ಪ್ರಯೋಗಾಲಯಕ್ಕೆ ಕಳುಹಿಸಿ ಪರೀಕ್ಷೆ ಮಾಡಿಸಿದೆ.

ವರದಿ ಪ್ರಕಾರ ನೀರಿನಲ್ಲಿರುವ ಗಡುಸು ಪ್ರಮಾಣ 515.0 ರಷ್ಟಿದೆ. ಆದರೆ, ಸಾಮಾನ್ಯವಾಗಿ ನೀರಿನ ಗಡಸು ಪ್ರಮಾಣ ಹೆಚ್ಚೆಂದರೆ 200ರಷ್ಟಿರಬೇಕು. ಎಚ್‌ಪಿ ವ್ಯಾಲ್ಯು 6.91, ಕ್ಯಾಲ್ಸಿಯಮ್ ಪ್ರಮಾಣ 141.6ರಷ್ಟಿದೆ.

ಕಲ್ಮಶದ ಪ್ರಮಾಣ 6.7, ಸಿಒಡಿ(ಕೆಮಿಕಲ್ ಆ್ಯಕ್ಸಿಜನ್ ಡಿಮ್ಯಾಂಡ್) ಪ್ರಮಾಣ 8.0, ಮಾಲಿನ್ಯ ಪ್ರಮಾಣ 7ರಷ್ಟಿದೆ. ಕುಡಿಯುವ ಅಥವಾ ಇತರ ಬಳಕೆಯ ನೀರಿನಲ್ಲಿ ಈ ಅಂಶಗಳು ಇರಲೇಬಾರದು.

'ಆದ್ದರಿಂದ ಈ ನೀರು ಕುಡಿಯಲು ಮಾತ್ರವಲ್ಲ, ಬಟ್ಟೆ ತೊಳೆಯಲು ಅಥವಾ ಇನ್ನಾವುದಕ್ಕೂ ಬಳಸಲು ಯೋಗ್ಯವಾಗಿಲ್ಲ ಎಂದು ಪ್ರಯೋಗಾಲಯ ತಿಳಿಸಿದೆ' ಎಂದು ಅಕ್ಸಪ್ಟ್ ಸೊಸೈಟಿ ಅಧ್ಯಕ್ಷ ರಾಜು ಮ್ಯಾಥ್ಯು ಹೇಳಿದರು.

ಬೈರತಿ ಬಂಡೆ ಕ್ವಾರಿಗೆ ವೈದ್ಯಕೀಯ ತ್ಯಾಜ್ಯ ಮತ್ತು ಕಸ ಸುರಿದಿರುವುದು

'ಕಸಾಪ ಯಾರೊಬ್ಬರ ಪಿತ್ರಾರ್ಜಿತ ಆಸ್ತಿಯಲ್ಲ' 'ಸಾಹಿತ್ಯ, ಸಾಹಿತಿಗಳಿಗೆ ಅಂಕುಶ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತು ಯಾರೊಬ್ಬರ ಪಿತ್ರಾರ್ಜಿತ ಆಸ್ತಿ ಅಲ್ಲ. ಸಮಸ್ತ ಕನ್ನಡಿಗರ ಆಸ್ತಿ. ಇಲ್ಲಿ ಯಾರೂ ಪ್ರಶ್ನಾತೀತರಲ್ಲ. ಪರಿಷತ್ತಿನಂತಹ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುವವರು ದಾರಿ ತಪ್ಪಿದಾಗ ಎಚ್ಚರಿಸುವ ಹಕ್ಕು ಸಮಸ್ತ ಕನ್ನಡಿಗರಿಗಿದೆ' ಎಂದು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ಹೇಳಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ಕಾರ್ಯವೈಖರಿ ಕುರಿತು ಪ್ರಕಾಶಮೂರ್ತಿ ಬಹಿರಂಗ ಪತ್ರ ಬರೆದಿದ್ದು, 'ಸಾಹಿತ್ಯ ಮತ್ತು ಸಾಹಿತಿಗಳಿಗೆ ಅಂಕುಶ ಹಾಕುವುದು ತಪ್ಪು ನಡೆಯಾಗಲಿದೆ. ಕಾರ್ಯಕ್ರಮಕ್ಕೆ ಬರುವ ಅತಿಥಿ ಅಭ್ಯಾಗತರ ಮೇಲೆ ನಿಬಂಧನೆ ಒಳಗೊಂಡ ಕಟ್ಟುಪಾಡು ತೆಗೆದು ಹಾಕಬೇಕು' ಎಂದೂ ಆಗ್ರಹಿಸಿದ್ದಾರೆ.

'ಸಭೆಗೆ ಬಂದವರಿಗೆ ಹೀಗೆಯೇ ಮಾತನಾಡಬೇಕು ಎಂದು ಹೇಳುವುದು ಸರಿಯಾದ ಕ್ರಮ ಅಲ್ಲ. ಸಾಹಿತಿಗಳಿಗೆ ನಿರ್ಬಂಧ ವಿಧಿಸಿ ವೇದಿಕೆಗೆ ಕರೆಯಲಾಗುತ್ತದೆಯೇ? ನಿಮ್ಮ ನಡೆಯನ್ನೂ ನಾನೂ ಸೇರಿದಂತೆ ಹಲವು ಜಿಲ್ಲಾಧ್ಯಕ್ಷರು ಈಗಾಗಲೇ ಕಾರ್ಯಕಾರಿ ಸಮಿತಿ ಸಭೆಯಲ್ಲಿ ವಿರೋಧಿಸಿದ್ದೇವೆ. ಆದರೂ, ನೀವು ಪತ್ರದಲ್ಲಿ 'ಸಭೆಯಲ್ಲಿ ನಿರ್ಣಯಿಸಿದಂತೆ' ಎಂದು ಹೇಳಿ ನಿರ್ಬಂಧ ವಿಧಿಸಿರುತ್ತೀರಿ. ಕಾರ್ಯಕಾರಿ ಸಮಿತಿಯ ನಡಾವಳಿಗಳು ಸಭೆಯ ನಿರ್ಣಯಗಳಂತೆ ರೂಪುಗೊಳ್ಳದೇ ತಮಗೆ ಅನುಕೂಲವಾಗುವಂತೆ ಬರೆಸುತ್ತಿದ್ದೀರಿ' ಎಂದು ಖಂಡಿಸಿದ್ದಾರೆ.

'ಕಾರ್ಯಕ್ರಮಕ್ಕೆ ಆಹ್ವಾನಿಸುವ ಸಾಹಿತಿಗಳಿಗೂ ಕಟ್ಟುಪಾಡು ವಿಧಿಸುತ್ತಿರುವುದು ಸಂವೇದನಾ ರಹಿತ ಹಾಗೂ ಪ್ರಜಾಪ್ರಭುತ್ವ ವಿರೋಧಿ ನಡೆ' ಎಂದು ಆಕ್ರೋಶ ಹೊರಹಾಕಿದ್ದಾರೆ.

ಪಿಯು ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಯಶವಂತಪುರದ ಬಾಪು ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಅರ್ಜುನ್ ಬಿ. ಬಿಸ್ಟ್ ಅವರು ವಾಣಿಜ್ಯ ವಿಭಾಗದಲ್ಲಿ 592 (ಶೇ 98.7) ಅಂಕಗಳನ್ನು ಪಡೆದು ರಾಜ್ಯಕ್ಕೆ 6ನೇ ಸ್ಥಾನ ಪಡೆದಿದ್ದಾರೆ.

ಖುಷಿ ಕುಮಾರಿ ಎಂ ಅವರು ವಿಜ್ಞಾನ ವಿಭಾಗದಲ್ಲಿ 590 (ಶೇ 98.33) ಅಂಕ ಪಡೆದು ರಾಜ್ಯಕ್ಕೆ 7 ನೇ ಸ್ಥಾನ, ಅಂಜಲಿ ವಾಣಿಜ್ಯ ವಿಭಾಗದಲ್ಲಿ 587 (ಶೇ 97.8) ಅಂಕ ಪಡೆದು 11ನೇ ಸ್ಥಾನ ಹಾಗೂ ಪರಿಣಿತ ವಿ. ಅವರು ವಿಜ್ಞಾನ ವಿಭಾಗದಲ್ಲಿ 585 (ಶೇ 97.5) ಅಂಕಗಳನ್ನು ಗಳಿಸುವ ಮೂಲಕ 12 ನೇ ಸ್ಥಾನ ಪಡೆದಿದ್ದಾರೆ

ಅಂಜಲಿ

ಖುಷಿ ಕುಮಾರಿ

ಅರ್ಜುನ್ ಬಿ.

ಪರಿಣಿತ ವಿ.

ಎನ್.ಕೇಶವ, (ಅಂಕ 562, ವಾಣಿಜ್ಯ ವಿಭಾಗ), ಕ್ರೈಸ್ಟ್ ಕಾಲೇಜು

ಸುಭಾಷ್ (ಕಲಾ ವಿಭಾಗ, 585 ಅಂಕ), ಸರ್ಕಾರಿ ಪದವಿ ಪೂರ್ವ ಕಾಲೇಜು, ಮಲ್ಲೇಶ್ವರ

ಒಟ್ಟು 110 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ ಎಂದು ಬಾಪು ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು ತಿಳಿಸಿದರು.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಪಾಕ್‌ನಲ್ಲಿ ಆತ್ಮಾಹುತಿ ದಾಳಿ: 10 ಸಾವು

ಪೇಶಾವರ (ಪಿಟಿಐ): ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ಕಾಬಲ್ ಪೊಲೀಸ್ ಠಾಣೆಯಲ್ಲಿ ಸೋಮವಾರ ನಡೆದ ಆತ್ಮಾಹುತಿ ದಾಳಿಯಲ್ಲಿ 10 ಮಂದಿ ಸತ್ತಿದ್ದು, ಮೃತರಲ್ಲಿ ಎಂಟು ಮಂದಿ ಪೊಲೀಸರು ಸೇರಿದ್ದಾರೆ. ಯಾವುದೇ ಸಂಘಟನೆ ಕೃತ್ಯದ ಹೊಣೆಯನ್ನು ಹೊತ್ತುಕೊಂಡಿಲ್ಲ.

ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಕಲಾವತಿ ಅವಧೂತ್ ಮತ್ತು ತಂಡದವರು ಸೋಮವಾರ ಸಂಗೀತ ಕಛೇರಿ ಪ್ರಸ್ತುತ ಪಡಿಸಿದರು
—ಪ್ರಜಾವಾಣಿ ಚಿತ್ರ

ಫೇಸ್‌ಬುಕ್ ಸ್ನೇಹ: ಫೋಟೊ- ವಿಡಿಯೊ ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೇಸ್‌ಬುಕ್‌ನಲ್ಲಿ ಪರಿಚಯವಾದ ವ್ಯಕ್ತಿಯೊಬ್ಬ ಮಹಿಳೆಯೊಬ್ಬರ ಫೋಟೊ ಹಾಗೂ ವಿಡಿಯೊ ಮುಂದಿಟ್ಟುಕೊಂಡು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದು, ಈ ಸಂಬಂಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ 45 ವರ್ಷದ ಮಹಿಳೆ ದೂರು ನೀಡಿದ್ದಾರೆ. ಲೈಂಗಿಕ ಕಿರುಕುಳ ಹಾಗೂ ಜೀವ ಬೆದರಿಕೆ ಆರೋಪದಡಿ ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಆರೋಪಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಮಹಿಳೆ, ಹಲವು ವರ್ಷಗಳಿಂದ ಫೇಸ್‌ಬುಕ್‌ನಲ್ಲಿ ಖಾತೆ ಹೊಂದಿದ್ದಾರೆ. ಮೂರು ವರ್ಷಗಳ ಹಿಂದೆ ಫೇಸ್‌ಬುಕ್‌ನಲ್ಲಿ ಆರೋಪಿ ಪರಿಚಯವಾಗಿತ್ತು. ನಂತರ, ಇಬ್ಬರೂ ಚಾಟಿಂಗ್ ಮಾಡುತ್ತಿದ್ದರು. ಮೊಬೈಲ್ ನಂಬರ್ ಸಹ ಬದಲಾಯಿಸಿಕೊಂಡಿದ್ದರು. ಇಬ್ಬರ ನಡುವೆ ಸಲುಗೆ ಸಹ ಬೆಳೆದಿತ್ತು ಎನ್ನಲಾಗಿದೆ.'

'ಮಹಿಳೆ ಹಾಗೂ ಆರೋಪಿ, ಹಲವು ಬಾರಿ ಭೇಟಿಯಾಗಿದ್ದರು. ಇದರ ಫೋಟೊ ಹಾಗೂ ವಿಡಿಯೊವನ್ನು ಆರೋಪಿ ತೆಗೆದಿಟ್ಟುಕೊಂಡಿದ್ದ. ಇತ್ತೀಚೆಗೆ ಮಹಿಳೆ, ಆರೋಪಿಯಿಂದ ಅಂತರ ಕಾಯ್ದುಕೊಳ್ಳಲಾರಂಭಿಸಿದ್ದರು. ಸಿಟ್ಟಾಗಿದ್ದ ಆರೋಪಿ, 'ನನ್ನ ಜೊತೆ ಲೈಂಗಿಕವಾಗಿ ಸಹಕರಿಸಬೇಕು. ಇಲ್ಲದಿದ್ದರೆ, ಫೋಟೊ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ. ನಿನ್ನ ಪತಿ ಹಾಗೂ ಮಗುವನ್ನು ಸಾಯಿಸುತ್ತೇನೆ' ಎಂದು ಬೆದರಿಸಿದ್ದ. ಆರೋಪಿ ಕಿರುಕುಳದಿಂದ ಬೇಸತ್ತು ಮಹಿಳೆ ಠಾಣೆಗೆ ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಬೆಟ್ಟಿಂಗ್: ವ್ಯಾಪಾರಿ ಬಂಧನ

ಬೆಂಗಳೂರು: ಐಪಿಎಲ್ ಟಿ– 20 ಕ್ರಿಕೆಟ್ ಪಂದ್ಯಗಳ ಮೇಲೆ ಬೆಟ್ಟಿಂಗ್ ನಡೆಸುತ್ತಿದ್ದ ಆರೋಪಿ ಕೆ. ಮಂಜುನಾಥ್ (32) ಎಂಬುವವರನ್ನು ಅನ್ನಪೂರ್ಣೇಶ್ವರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತುಮಕೂರು ಜಿಲ್ಲೆಯ ತಿಪಟೂರಿನ ವ್ಯಾಪಾರಿ ಮಂಜುನಾಥ್, ಐಪಿಎಲ್ ಆರಂಭವಾದಾಗಿನಿಂದ ಬೆಟ್ಟಿಂಗ್ ನಡೆಸುತ್ತಿದ್ದ. ಈತನನ್ನು ಬಂಧಿಸಿ ₹ 28,500 ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಏಪ್ರಿಲ್ 24ರಂದು ಗುಜರಾತ್ ಟೈಟಾನ್ಸ್ ಹಾಗೂ ಲಖನೌ ಸೂಪರ್ ಜೆಂಟ್ಸ್ ತಂಡಗಳ ನಡುವೆ ಪಂದ್ಯ ನಡೆದಿತ್ತು. ನಾಗರಬಾವಿ 2ನೇ ಹಂತದ ಬಿಡಿಎ ಕಾಂಪ್ಲೆಕ್ಸ್ ಬಳಿ ನಿಂತಿದ್ದ ಮಂಜುನಾಥ್, ತಂಡಗಳ ಸೋಲು–ಗೆಲುವು ಲೆಕ್ಕಾಚಾರದಲ್ಲಿ ಜನರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಲಾಗಿತ್ತು' ಎಂದರು.

'ಸೋತವರಿಂದ ಹಣ ಸಂಗ್ರಹಿಸಿ ಇಟ್ಟುಕೊಳ್ಳುತ್ತಿದ್ದ ಮಂಜುನಾಥ್, ಗೆದ್ದವರಿಗೆ ಹಣ ಕೊಡುತ್ತಿದ್ದ. ಸೋತವರ ಸಂಖ್ಯೆ ಹೆಚ್ಚಿದ್ದ ಸಂದರ್ಭದಲ್ಲಿ ಆರೋಪಿಗೆ ಹೆಚ್ಚು ಹಣ ಉಳಿಯುತ್ತಿತ್ತು. ಈತನ ಜೊತೆ ಮತ್ತಷ್ಟು ಮಂದಿ ಬೆಟ್ಟಿಂಗ್‌ನಲ್ಲಿ ತೊಡಗಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದ ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಮಹಿಳೆಗೆ ಕಿರುಕುಳ: ಮಂಡಿ ಕೆಲಸಗಾರ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಎಂ.ಸಿ ಯಾರ್ಡ್‌ನಲ್ಲಿರುವ ಈರುಳ್ಳಿ ಮಂಡಿಯೊಂದರ ಕೆಲಸಗಾರ ಉಮಾಪತಿ (47) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಉಮಾಪತಿ, ನಂದಿನಿ ಲೇಔಟ್‌ನಲ್ಲಿ ವಾಸವಿದ್ದರು. ಸ್ಥಳೀಯ ಮಹಿಳೆಯೊಬ್ಬರಿಗೆ ಕಿರುಕುಳ ನೀಡುತ್ತಿದ್ದರೆಂಬ ಕಾರಣಕ್ಕೆ ಅವರನ್ನು ಕೊಲೆ ಮಾಡಲಾಗಿದೆ. ಕೃತ್ಯ ಎಸಗಿರುವ ಆರೋಪದಡಿ ಮಹಿಳೆಯ ಅಕ್ಕ ಹಾಗೂ ಅಣ್ಣನ ಮಗನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಉಮಾಪತಿ ಅವರ ಪತ್ನಿ ಹಾಗೂ ಮಕ್ಕಳು ತಮಿಳುನಾಡಿನಲ್ಲಿ ನೆಲೆಸಿದ್ದಾರೆ. ಕೆಲಸಕ್ಕಾಗಿ ಬಂದಿದ್ದ ಉಮಾಪತಿ ನಗರದಲ್ಲಿ ಒಂಟಿಯಾಗಿ ವಾಸವಿದ್ದರು. ಕೆಲ ವರ್ಷಗಳ ಹಿಂದೆಯಷ್ಟೇ ಸ್ಥಳೀಯ ಮಹಿಳೆಯೊಬ್ಬರನ್ನು ಪರಿಚಯ ಮಾಡಿಕೊಂಡು ಸಲುಗೆ ಬೆಳೆಸಿಕೊಂಡಿದ್ದರು. ಮಹಿಳೆ ಜೊತೆ ಹಲವೆಡೆ ಸುತ್ತಾಡುತ್ತಿದ್ದರು.'

'ಉಮಾಪತಿ ಹಾಗೂ ಮಹಿಳೆ ನಡುವೆ ಅಕ್ರಮ ಸಂಬಂಧವಿತ್ತು ಎಂಬ ಮಾಹಿತಿ ಲಭ್ಯವಾಗಿದೆ. ಅಕ್ರಮ ಸಂಬಂಧ ಮುಂದುವರಿಸುವುದು ಬೇಡವೆಂದಿದ್ದ ಮಹಿಳೆ, ವರ್ಷದ ಹಿಂದೆಯಷ್ಟೇ ಉಮಾಪತಿ ಅವರಿಂದ ದೂರವಾಗಿದ್ದರು. ಸಿಟ್ಟಾಗಿದ್ದ ಆರೋಪಿ, ನಿತ್ಯವೂ ಕರೆ ಮಾಡಿ ಕಿರುಕುಳ ನೀಡುತ್ತಿದ್ದ. ಆಗಾಗ ಮನೆ ಬಳಿ ಹೋಗಿ ಗಲಾಟೆ ಸಹ ಮಾಡುತ್ತಿದ್ದ' ಎಂದು ಪೊಲೀಸರು ತಿಳಿಸಿದರು.

ಬ್ಲ್ಯಾಕ್‌ಮೇಲ್ ಮಾಡಿದ್ದಕ್ಕೆ ಕೊಲೆ: 'ಭಾನುವಾರ ಬೆಳಿಗ್ಗೆ ಮಹಿಳೆಗೆ ಕರೆ ಮಾಡಿದ್ದ ಉಮಾಪತಿ, 'ನಾನು ಕರೆದ ಕಡೆ ಬರಬೇಕು. ಇಲ್ಲದಿದ್ದರೆ, ನನ್ನ ಬಳಿ ಇರುವ ನಿನ್ನ ಖಾಸಗಿ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುತ್ತೇನೆ' ಎಂಬುದಾಗಿ ಬೆದರಿಸಿದ್ದ' ಎಂದು ಪೊಲೀಸರು ಹೇಳಿದರು.

'ಬೆದರಿಕೆ ವಿಷಯವನ್ನು ಮಹಿಳೆ ತಮ್ಮ ಮನೆಯವರಿಗೆ ತಿಳಿಸಿದ್ದರು. ಮನೆಯವರು ಕರೆ ಮಾಡಿದಾಗಲೂ ಉಮಾಪತಿ, ಕೊಲೆ ಬೆದರಿಕೆಯೊಡ್ಡಿದ್ದರು. ಸಿಟ್ಟಾದ ಮನೆಯವರು, ಆರ್‌ಎಂಸಿ ಯಾರ್ಡ್ 2ನೇ ಮುಖ್ಯರಸ್ತೆಯಲ್ಲಿರುವ ಈರುಳ್ಳಿ ಮಂಡಿಗೆ ಹೋಗಿ ಉಮಾಪತಿ ಜೊತೆ ಜಗಳ ತೆಗೆದಿದ್ದರು.'

'ಉಮಾಪತಿ ಮೇಲೆ ಹಲ್ಲೆ ಮಾಡಿ, ಎದೆ ಹಾಗೂ ಹೊಟ್ಟೆಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದರು. ತೀವ್ರ ಗಾಯಗೊಂಡಿದ್ದ ಉಮಾಪತಿ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಅಲ್ಲಿಯೇ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

ಬಡಗನಾಡು ಬ್ರಾಹ್ಮಣ ಮಹಾಸಭಾ: ವಿಪ್ರ ಸ್ನೇಹ ಕೂಟ

'ಎಲ್ಲ ಸಮುದಾಯಗಳ ಅಭಿವೃದ್ಧಿಗೆ ಬದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡಗನಾಡು ಬ್ರಾಹ್ಮಣ ಮಹಾಸಭಾ ನೇತೃತ್ವದಲ್ಲಿ ಸೋಮವಾರ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಎಲ್ಲ ಬ್ರಾಹ್ಮಣ ಸಂಘಟನೆಗಳ 'ವಿಪ್ರ ಸ್ನೇಹ ಕೂಟ' ನಡೆಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಮಲ್ಲೇಶ್ವರ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಸಿ. ಎನ್. ಅಶ್ವತ್ಥನಾರಾಯಣ ಮಾತನಾಡಿ, 'ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಕಾಂಗ್ರೆಸ್ ನಡೆಸಿಕೊಂಡು ಬಂದ ಸ್ಪಷ್ಟತೆ ಇಲ್ಲದ ಮತ್ತು ತುಷ್ಟೀಕರಣದ ರಾಜಕೀಯದಿಂದ ಆದ ಅನಾಹುತಗಳು ಅಂದಾಜಿಗೂ ಸಿಗುವುದಿಲ್ಲ. ಈ ತಪ್ಪುಗಳನ್ನು ಸರಿಪಡಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ' ಎಂದು ಅವರು ಹೇಳಿದರು.

'ಜಾತ್ಯತೀತತೆಯನ್ನು ಒಂದು ಮಿತಿಯಲ್ಲಿ ಒಪ್ಪಿಕೊಳ್ಳಬಹುದು. ಆದರೆ, ಅದರ ಅತಿರೇಕದಿಂದ ನಮ್ಮತನವೇ ಹಾಳಾಗಲು ಬಿಡಬಾರದು. ಇದಕ್ಕೆ ತಕ್ಕಂತೆ ಬಿಜೆಪಿ ದೇಶದ ಎಲ್ಲ ಸಮುದಾಯಗಳ ಸಮಾನ ಅಭಿವೃದ್ಧಿಗೆ ಒತ್ತು ನೀಡಿದೆ' ಎಂದು ಹೇಳಿದರು.

'ಬಿಜೆಪಿಯು ಕಾಶ್ಮೀರ ಸಮಸ್ಯೆ, ಅಯೋಧ್ಯೆ ವಿವಾದಗಳನ್ನು ಬಗೆಹರಿಸಿದ್ದು, ಕಾಶಿ ಸೇರಿದಂತೆ ಹಲವು ಪುಣ್ಯಕ್ಷೇತ್ರಗಳ ಪುನರುತ್ಥಾನ ಸಾಧ್ಯವಾಗಿದೆ. ಬಿಜೆಪಿ ಕಳೆದ ನಾಲ್ಕು ದಶಕಗಳ ಅಪಾರ ಬದ್ಧತೆಯೊಂದಿಗೆ ಬೆಳೆದು ಬಂದಿದೆ' ಎಂದು ಅವರು ಹೇಳಿದರು

ಬಡಗನಾಡು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಚಿದಾನಂದ, ಬ್ರಾಹ್ಮಣ ಅಭಿವೃದ್ಧಿ ನಿಗಮದ ಅಧ್ಯಕ್ಷ ಸಚ್ಚಿದಾನಂದ, ಮಲ್ಲೇಶ್ವರ ಬ್ರಾಹ್ಮಣ ಸಂಘಗಳ ಒಕ್ಕೂಟದ ರಘುನಂದನ್ ಇದ್ದರು.

ಬಡಗನಾಡು ಬ್ರಾಹ್ಮಣ ಮಹಾಸಭಾವು ಸೋಮವಾರ ಆಯೋಜಿಸಿದ್ದ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಎಲ್ಲಾ ಬ್ರಾಹ್ಮಣ ಸಂಘಟನೆಗಳ ವಿಪ್ರ ಸ್ನೇಹ ಕೂಟದಲ್ಲಿ ಶಾಸಕ ಮತ್ತು ಸಚಿವ ಡಾ.ಸಿ. ಎನ್ ಅಶ್ವತ್ಥನಾರಾಯಣ ಮಾತನಾಡಿದರು.

ರೌಡಿ ಮನೆಯಲ್ಲಿ ಗಾಂಜಾ ವಶ

ಬೆಂಗಳೂರು: ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಅಪರಾಧ ಕೃತ್ಯಗಳ ಮೇಲೆ ನಿಗಾ ವಹಿಸಿರುವ ಪೂರ್ವ ವಿಭಾಗದ ಪೊಲೀಸರು, ರೌಡಿಗಳ ಮನೆಗಳ ಮೇಲೆ ದಾಳಿ ಮುಂದುವರಿಸಿದ್ದಾರೆ.

ಡಿ.ಜೆ.ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ರೌಡಿಗಳಾದ ಜೊಲ್ಲು ಇಮ್ರಾನ್, ಅನೀಸ್, ಜಾಹೀರ್ ಅಬ್ಬಾಸ್, ಹುಸೇನ್ ಶರೀಫ್, ಗ್ರಾನೈಟ್ ಸಾದಿಕ್, ಶಾಕೀರ್, ಬಿಂದಿ ಇರ್ಫಾನ್, ಯೂಸುಫ್, ತೌಫಿಕ್, ನೆಲ್ಸನ್. ಆಸಿಫ್ ಮನೆಗಳ ಮೇಲೆ ದಾಳಿ ನಡೆದಿದೆ.

'ರೌಡಿ ಆಸಿಫ್ ಮನೆಯಲ್ಲಿ 105 ಕೆ.ಜಿ ಗಾಂಜಾ ಹಾಗೂ 8 ಗ್ರಾಂ ಎಂಡಿಎಂಎ ಪತ್ತೆಯಾಗಿದೆ. ಜೊತೆಗೆ, ಚಾಕು ಹಾಗೂ ತೂಕದ ಯಂತ್ರವೂ ಸಿಕ್ಕಿದೆ' ಎಂದು ಹೇಳಿದರು.

Supported by
MINISTRY OF JAL SHAKTI
DEPARTMENT OF WATER RESOURCES, RIVER DEVELOPMENT & GANGA REJUVENATION
30 Redefining Plumbing Standards
Indian Plumbing Association
30 Years in Service to the Nation
Supported by
Ministry of Housing and Urban Affairs
Government of India
Largest ever Plumbing Show
PLUMBEX® India 2023
Bringing Industry Together
Thursday, Friday & Saturday
27TH, 28 TH, & 29TH APRIL 2023
Time: 11:00am to 06:30pm
Bengaluru International Exhibition Centre (BIEC)
1 LAC SQ. FEET | 100+ EXHIBITORS | 40+ START-UPS
3 Sessions with Domain Experts & Policy Makers
Net Zero Water | Water Use Efficiency | Modern Day Plumbing
Meet & Greet leading professionals & industrialists
Visitor ENTRY FREE
*To and Fro Free Shuttle service will be available between Nagasandra Metro Station and BIEC from 10:00am to 6:30pm
www.indianplumbing.org

Dayananda Sagar Institutions
Bengaluru
India's pride - Bengaluru, and Dayananda Sagar Institutions(DSI), the city's top education campus beckons you to start your academic journey.
DSI Colleges enjoy:
• Top NAAC Ratings and NIRF Rankings
• Strong placement records
• Majority of the UG programs are NBA accredited
• Ranked as best Industry Connected Institutions in the CII-AICTE survey with Platinum Grading
• Highest Four Star Rating in IIRF Grading for Innovations
• Industry-supported labs for hands-on training
Need more reasons to pick your academic journey? Admissions now open for 2023-24
Visit: www.dayanandasagar.edu
Programs :
Engineering : Diploma/BE/MTech/ PhD
Architecture : BArch/ MArch – Interior Design
Science / Commerce / Management : BBA/MBA, BCom/MCom, BCA/MCA, BSc-PCM
Management : PGDM-AICTE
Dentistry : BDS/MDS (NEET scores & KEA Registration essential)
PUC : Commerce/Science
Diploma : Para Medical Sciences
Dayananda Sagar Institutions
Shavige Malleshwara Hills, Kumara Swamy Layout, Bengaluru – 560111
www.dayanandasagar.edu
Ph: 080 - 48811000, 080-42161750
Mobile: 9916075170
Email: admissions@dayanandasagar.edu
Kanakapura Main Road, Opp. Sri Sri Ravishankar Ashram / Art of Living, Bangalore - 560 082 - India
Ph: +91 80 48642261/80 48642262
Fax: +91 80 2843 2909
admission@dsatm.edu.in | www.dsatm.edu.in | www.dsba.edu.in



ಕ್ಷೇಮ ಕುಶಲ

ಮಕ್ಕಳಿಂದ ಮೊಬೈಲ್‌ಗೂ ರಜೆ ಸಿಗಲಿ

ಡಾ. ಕಿರಣ್ ವಿ. ಎಸ್.

ಆರು ವರ್ಷದ ಮಗು. ಇನ್ನೂ ಪದಗಳನ್ನು ಗುರುತಿಸಲೂ ಸರಿಯಾಗಿ ಬಾರದು. 'ಮೊಬೈಲ್ ಕೈಲಿಟ್ಟರೆ ಮಗು ದಿನವೆಲ್ಲಾ ಗಪ್-ಚುಪ್ ಆಗಿರುತ್ತದೆ. ತನಗೆ ಬೇಕಾದ್ದನ್ನು ತಾನೇ ಡೌನ್‌ಲೋಡ್ ಮಾಡಿಕೊಂಡು ಆಡುತ್ತದೆ. ಫೋನಿನಲ್ಲಿ ನಮಗೆ ಕೂಡ ಸರಿಯಾಗಿ ಮಾಡಲಾಗದ ಕೆಲಸಗಳನ್ನು ಸರಾಗವಾಗಿ ಮಾಡುತ್ತದೆ. ನಮಗಂತೂ ದಿನನಿತ್ಯದ ಕೆಲಸಗಳನ್ನು ಆರಾಮವಾಗಿ ಮಾಡಿಕೊಳ್ಳಲು ಅನುಕೂಲ. ತುಂಬಾ ಒಳ್ಳೆಯ ಮಗು' ಎನ್ನುವವರನ್ನು ನೋಡಿರುತ್ತೇವೆ. ಇದು ನಿಜಕ್ಕೂ ಆತಂಕದ ವಿಷಯ.

ಬೇಸಿಗೆ ರಜೆಯ ವೇಳೆ ಮಕ್ಕಳು ದಿನವೊಂದಕ್ಕೆ ಸುಮಾರು ಒಂಬತ್ತು ಗಂಟೆಗಳಷ್ಟು ಕಾಲ ಸ್ಮಾರ್ಟ್ ಫೋನ್ ಬಳಕೆಯಲ್ಲಿ ಕಳೆಯುತ್ತಾರೆ ಎನ್ನುವ ಆಘಾತಕಾರಿ ಸುದ್ದಿಯೊಂದು ಬಂದಿದೆ. ಪೋಷಕರಿಗೆ ಇದರ ದೂರಗಾಮಿ ಪರಿಣಾಮಗಳ ಅರಿವು ಮೂಡುತ್ತಿಲ್ಲ. ಇಂತಹ ಮಕ್ಕಳು ಹಲವಾರು ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಮಕ್ಕಳ ಸಾಮಾಜಿಕ ವರ್ತನೆ ಗಾಸಿಗೊಳ್ಳುತ್ತದೆ. ಮೊಬೈಲ್ ವ್ಯಸನ ಮನೆಮಾಡುತ್ತದೆ. ಮೊಬೈಲ್ ಕೈಲಿ ಇಲ್ಲದಿದ್ದರೆ ಅಥವಾ ಅಂತರ್ಜಾಲ ಸಂಪರ್ಕ ತಪ್ಪಿಹೋದರೆ ಮಕ್ಕಳು ಖಿನ್ನತೆಗೆ ಒಳಗಾಗುತ್ತಾರೆ. ಅವರ ನಿದ್ರೆಯ ಮೇಲೆ ಪ್ರತಿಕೂಲ ಪರಿಣಾಮವಾಗುತ್ತದೆ. ದೈಹಿಕ ಚಟುವಟಿಕೆಯಿಲ್ಲದ ಇಂತಹ ಮಕ್ಕಳಲ್ಲಿ ಬೊಜ್ಜು ಕಾಣುತ್ತದೆ. ಸಾಂಘಿಕ ಆಟಪಾಠಗಳ ಕ್ರಮ ತಪ್ಪಿ ಅವರ ಸಾಮಾಜಿಕ ವರ್ತನೆ ಹದಗೆಡುತ್ತದೆ. ಇತರ ವಿಷಯಗಳ ಬಗ್ಗೆ ಆಸಕ್ತಿ, ಅವಧಾನ ಕಡಿಮೆಯಾಗುತ್ತದೆ. ಕೆಲವು ಮಕ್ಕಳಲ್ಲಿ ನರವ್ಯೂಹ ಮತ್ತು ಬೆನ್ನುಮೂಳೆಯ ಸಮಸ್ಯೆಗಳೂ ಕಂಡಿವೆ.

ಒಮ್ಮೆ ಚಟದ ಮಟ್ಟಕ್ಕೆ ಇಳಿದರೆ, ಮೊಬೈಲ್ ಪಾಶವನ್ನು ಮಕ್ಕಳಿಂದ ಬಗೆಹರಿಸುವುದು ಸುಲಭವಲ್ಲ. ಆದರೂ, ಕೆಲವು ಸರಳ ಪದ್ಧತಿಗಳನ್ನು ಪಾಲಿಸುವುದರಿಂದ ಪರಿಹಾರ ಕಂಡುಕೊಳ್ಳಬಹುದು. ಇದನ್ನು ಶಿಸ್ತಾಗಿ ಪಾಲಿಸುವುದು ಪೋಷಕರ ದೃಷ್ಟಿಯಿಂದ ಬಹಳ ಮುಖ್ಯ. ಮೊಬೈಲ್ ಫೋನಿನಿಂದ ದೂರಾಗುವುದನ್ನು ಯಾವ ಮಗುವೂ ಸುಲಭವಾಗಿ ಸಹಿಸುವುದಿಲ್ಲ. ಇಂತಹ ಹಲವಾರು ಪ್ರಯತ್ನಗಳು ಮಗುವಿನ ಹಠದ ಕಾರಣದಿಂದ ಅಸಫಲವಾಗುತ್ತವೆ. ಕೆಲವೊಮ್ಮೆ ಮಕ್ಕಳು ರಚ್ಚೆ ಹಿಡಿದು ಊಟ ಬಿಡುವಂತಹ ಅಸಹಕಾರ ಕ್ರಿಯೆಗಳಿಗೆ ಇಳಿಯುತ್ತಾರೆ. ಯಾವುದೇ ಶಿಸ್ತಿನ ಅನುಷ್ಠಾನವೂ ಹಲವಾರು ಹಂತಗಳ ಪ್ರಯತ್ನವನ್ನು ಬಯಸುತ್ತದೆ. ಪೋಷಕರಿಗೆ ತಾಳ್ಮೆ ಬಹಳ ಮುಖ್ಯ.

> ಬೇಸಿಗೆ ರಜೆಯ ವೇಳೆ ಮಕ್ಕಳು ದಿನವೊಂದಕ್ಕೆ ಸುಮಾರು ಒಂಬತ್ತು ಗಂಟೆಗಳಷ್ಟು ಕಾಲ ಸ್ಮಾರ್ಟ್ ಫೋನ್ ಬಳಕೆಯಲ್ಲಿ ಕಳೆಯುತ್ತಾರೆ ಎನ್ನುವ ಆಘಾತಕಾರಿ ಸುದ್ದಿಯೊಂದು ಬಂದಿದೆ.

1. ಮಕ್ಕಳು ಸಹಜ ಚೈತನ್ಯದ ಚಿಲುಮೆಗಳು. ಅವರು ಒಂದೆಡೆ ಚಲನೆಯಿಲ್ಲದೆ ಕುಳಿತಿದ್ದಾರೆ ಎಂದರೆ, ಯಾವುದಕ್ಕೋ ಕಟ್ಟುಬಿದ್ದಿದ್ದಾರೆ ಎಂದೇ ಅರ್ಥ. ಈ ಬಂಧವನ್ನು ಮುರಿಯಬೇಕು. ಕನಿಷ್ಠ ಅರ್ಧಗಂಟೆಗೊಮ್ಮೆ ಎದ್ದು ಒಂದಷ್ಟು ದೂರ ಓಡಾಡುವುದು, ಮೈಮುರಿಯುವುದು ಮೊದಲಾದುವು ಅವರ ದೇಹಕ್ಕೆ ಒಳ್ಳೆಯದು. ಇದರಿಂದ ಅವರು ಫೋನ್ ಪರದೆಯಿಂದ ತಾತ್ಕಾಲಿಕವಾಗಿ ದೂರಾಗುವಂತಾಗುತ್ತದೆ. ಮೊದಲನೆಯ ಹಂತದಲ್ಲಿ ಪೋಷಕರು ಆಗಾಗ ಮಕ್ಕಳನ್ನು ಯಾವುದೋ ಒಂದು ನೆಪದಲ್ಲಿ ಅರ್ಧ ಗಂಟೆಗೊಮ್ಮೆಯಾದರೂ ಇಂತಹ ಚರ್ಯೆಗಳಿಗೆ ತೊಡಗಿಸಬೇಕು.
2. ಮಕ್ಕಳಿಗೆ ನಿತ್ಯವೂ ಕೆಲಸದ ಪಟ್ಟಿ ಒದಗಿಸಬೇಕು. ರಜೆಯ ವೇಳೆ ಒಂತಿಷ್ಟು ಓದು, ಸ್ವಲ್ಪ ವ್ಯಾಯಾಮ, ಕೊಂಚ ಮನೆಗೆಲಸ, ಗಿಡಗಳ/ಮನೆತೋಟದ ಆರೈಕೆ ಮೊದಲಾದ ಸಣ್ಣಪುಟ್ಟ ಕೆಲಸಗಳನ್ನು ನೀಡಬೇಕು. ಇದನೆಲ್ಲ ಮಾಡಿದರೆ ನಂತರ ನಿರಾತಂಕವಾಗಿ ಫೋನ್ ನೋಡಬಹುದು ಎನ್ನುವ ಭಾವನೆ ಮಕ್ಕಳಲ್ಲಿ ಮೂಡುವಂತಾಗಬೇಕು. ಆದರೆ, ಪ್ರತಿಯೊಂದು ಕೆಲಸದ ನಡುವೆ ಮಕ್ಕಳು ಫೋನಿನಿಂದ ದೂರಾಗುತ್ತಾರೆ ಎನ್ನುವುದು ಪೋಷಕರಿಗೆ ಮುಖ್ಯವಾಗುತ್ತದೆ.
3. ಮಕ್ಕಳಿಗೆ ತಮ್ಮ ಪಾಲಿಗೆ ಅನಿಯಮಿತ ಫೋನ್ ಲಭ್ಯತೆಯಿದೆ ಎನ್ನುವ ಭಾವನೆ ಬರಬಾರದು. ಫೋನ್ ಬಳಸುವ ಮುನ್ನ ಆಯಾ ದಿನದ ಕೆಲಸಗಳನ್ನು ಮೊದಲು ಮಾಡಬೇಕು ಎನ್ನುವ ನಿಯಮ ಮೂಡುವುದು ಮುಖ್ಯ. ಇಂತಹ ಆದ್ಯತೆಯ ಭಾವವನ್ನು ಸಾಧ್ಯವಾದಷ್ಟೂ ಬೇಗ ಜಾರಿಗೊಳಿಸಬೇಕು. ನಮ್ಮ ಫೋನ್ ಸೌಲಭ್ಯವನ್ನು ನಾವು ಸಂಪಾದಿಸುತ್ತಿದ್ದೇವೆ ಎನ್ನುವ ಭಾವನೆ ಬಂದಾಗ ಮಕ್ಕಳು ಹೆಚ್ಚು ಜಾಗರೂಕರಾಗಿ ಅದನ್ನು ಬಳಸುತ್ತಾರೆ. ಆ ಸೌಲಭ್ಯ ಪುಗಸಟ್ಟೆಯಾಗಿ ದೊರೆಯುತ್ತಿದೆ ಎನ್ನುವ ಮನಃಸ್ಥಿತಿ ಇದ್ದರೆ, ಅದು ತಮ್ಮ ಅಲಿಖಿತ ಹಕ್ಕು ಎಂದೇ ಅವರು ಭಾವಿಸಬಹುದು.
4. ಅಂತರ್ಜಾಲ ಮತ್ತು ಮೊಬೈಲ್ ಫೋನುಗಳು ಎರಡಲುಗಿನ ಕತ್ತಿ. ಅವನ್ನು ಮಕ್ಕಳ ಜ್ಞಾನ ಮತ್ತು ತಾರ್ಕಿಕ ಶಕ್ತಿಯನ್ನು ಉದ್ದೀಪಿಸುವುದಕ್ಕೆ ಬಳಸಬಹುದು. ಕೆಲವು ವಿಡಿಯೋ ಆಟಗಳು ಮಕ್ಕಳ ಬುದ್ಧಿಶಕ್ತಿಗೆ ಸವಾಲು ನೀಡುತ್ತವೆ. ಇಂತಹ ಆಟಗಳು ಮಕ್ಕಳ ಮತ್ತು ಪೋಷಕರ ಅಗತ್ಯಗಳನ್ನು ಪೂರೈಸಬಲ್ಲವು. ತಮ್ಮ ಮಕ್ಕಳ ಮನಃಸ್ಥಿತಿಗೆ ಸೂಕ್ತವಾಗಬಲ್ಲ ಇಂತಹ ಆಟಗಳನ್ನು ಪತ್ತೆ ಮಾಡುವುದು ಪೋಷಕರ ಜವಾಬ್ದಾರಿ.
5. ಫೋನ್ ಬಳಕೆಯಲ್ಲಿ ಸಮಯದ ಶಿಸ್ತನ್ನು ಕಟ್ಟುನಿಟ್ಟಾಗಿ ಜಾರಿ ಮಾಡಬೇಕು. ಮನೆಯ ಹಿರಿಯರ ಜೊತೆ ಮಕ್ಕಳು ನಿಯಮಿತ ಸಮಯವನ್ನು ಕಳೆಯುವುದು, ಊಟದ ವೇಳೆ ಫೋನ್ ಬಳಕೆಯನ್ನು ನಿಷಿದ್ಧಗೊಳಿಸುವುದು, ನಿದ್ರೆಗೆ ಎರಡು ಗಂಟೆಗಳ ಮುನ್ನ ಫೋನ್ ಬಳಸದಿರುವುದು, ಇಂತಹ ವಿಷಯದಲ್ಲಿ ಮಕ್ಕಳ ಹಠಕ್ಕೆ ಮಣಿಯದಿರುವುದು, ಮೊದಲಾದ ನಿಯಮಗಳ ಪಾಲನೆದಲ್ಲಿ ಪೋಷಕರ ಮುತ್ಸದ್ದಿತನ ನೆರವಾಗುತ್ತದೆ.
6. ಪೋಷಕರು ಎಷ್ಟೇ ಸಮಯದ ಒತ್ತಡದಲ್ಲಿದ್ದರೂ ಮಕ್ಕಳಿಗಾಗಿ ತಮ್ಮ ಬಿಡುವನ್ನು ಹೊಂದಾಣಿಸಿಕೊಳ್ಳುವುದು ಮುಖ್ಯ. ಮಕ್ಕಳ ಜೊತೆಗೆ ನಿತ್ಯ ಮಾತುಕತೆ, ಅವರ ಭಾವನೆಗಳಿಗೆ ಕಿವಿಯಾಗುವುದು, ಅವರೊಡನೆ ಕೇರಂ, ಚೆಸ್, ಸ್ಕ್ರಾಬಲ್ ಮೊದಲಾದ ಆಟಗಳನ್ನು ಆಡುವುದು, ಮಕ್ಕಳ ಆಸಕ್ತಿಗಳ ಕುರಿತಾದ ಚರ್ಚೆ ಮಾಡುವುದು, ಮೊದಲಾದುವು ಮಕ್ಕಳ ಫೋನ್ ಅವಲಂಬನೆಯನ್ನು ದೂರ ಮಾಡುತ್ತವೆ.

ರಜೆಯ ವೇಳೆಯಲ್ಲಷ್ಟೆ ಅಲ್ಲದೆ, ಮಕ್ಕಳನ್ನು ಫೋನ್ ಚಟದಿಂದ ದೂರಾಗಿಸುವಲ್ಲಿ ಪೋಷಕರ ಪಾತ್ರ ಮಹತ್ವದ್ದು. ಇದನ್ನು ಮಾಡದೇ ಕೇವಲ ಮಕ್ಕಳನ್ನು ದೂಷಿಸುವುದರಿಂದ ಸಮಸ್ಯೆ ಪರಿಹರಿಯುವುದಿಲ್ಲ ಎಂಬ ಮಹತ್ವದ ಒಳನೋಟ ಪೋಷಕರಿಗೆ ಬಹಳ ಮುಖ್ಯ. ❖

ಅಜೀರ್ಣವಾಗದಿರಲಿ ಆಹಾರ

ಡಾ. ವಿಜಯಲಕ್ಷ್ಮಿ ಪಿ.

'ಮಗೂ ಯಾಕೋ ಊಟಾನೇ ಮಾಡ್ತಾ ಇಲ್ಲ'; 'ನನಗ್ಯಾಕೋ ಊಟಾನೇ ಸೇರ್ತಾ ಇಲ್ಲ'; 'ಹೊಟ್ಟೆ ತೊಳೆಸುತ್ತಾ ಇದೆ' – ಹೀಗೆಲ್ಲ ಯಾರಾದರೂ ಹೇಳಿದರೆ, ಅದಕ್ಕೆ ತಕ್ಷಣ ಬರುವ ಉತ್ತರ 'ತಿಂದದ್ದು ಹೆಚ್ಚು ಕಡಿಮೆ ಆಗಿ ಅಜೀರ್ಣ ಅಗಿರಬೇಕು' ಅಂತ. ಹಾಗಾದರೆ ಅಜೀರ್ಣ ಎಂದರೇನು – ಎಂಬ ಪ್ರಶ್ನೆ ಕಾಡುತ್ತದೆ. 'ಬೇಸಿಗೆ, ಬಿಸಿಲು, ಸೆಖೆ, ತಡೆಯಕ್ಕೆ ಆಗದೆ ನೀರು ಕುಡಿದರೆ ಅಜೀರ್ಣ ಆಗತ್ತೆ, ಹಾಗಂತ ನೀರು ಕುಡಿಯದೇ ಇದ್ರೆ ಮೈ ಒಣಗುತ್ತೆ' ಎನ್ನುವ ಭೀತಿ ಇನ್ನು ಕೆಲವರದ್ದು. ನೀರಿನಿಂದ ಆಜೀರ್ಣ ಆದೀತೆ – ಎಂಬ ಸಂಶಯ ಹಲವರದ್ದು.

ಸರಳವಾಗಿ ಹೇಳುವುದಾದರೆ ಸೇವಿಸಿದ ಪದಾರ್ಥವು ದೇಹದ ಭಾಗವಾಗಿ ಪರಿಣಾಮ ಆಗದೆ ಇರುವುದೇ ಆಜೀರ್ಣ. ಪರಿಣಮನ ಪ್ರಕ್ರಿಯೆ ವಿವಿಧ ಹಂತದಲ್ಲಿ ನಡೆಯುತ್ತದೆ. ಸೇವಿಸಿದ ಪದಾರ್ಥ ಹೊಟ್ಟೆಯಲ್ಲಿ ಜೀರ್ಣ ಆಗದೆ ಇದ್ದರೆ ವಾಂತಿ, ಹೊಟ್ಟೆಭಾರ, ಹೊಟ್ಟೆನೋವು, ಊಟ ರುಚಿಸದಿರುವುದು – ಹೀಗೆ ಕೆಲವು ಲಕ್ಷಣಗಳು ಬರುತ್ತವೆ; ಕರುಳಿನಲ್ಲಿ ಪಚನಕ್ರಿಯೆ ಸರಿಯಾಗಿ ನಡೆಯದೇ ಹೋದರೆ, ಅತಿಸಾರ, ಹೊಟ್ಟೆನೋವು, ಹೊಟ್ಟೆಯುಬ್ಬರ, ಅತಿಯಾಗಿ ದುರ್ಗಂಧಯುಕ್ತ ಅಪಾನ ಪ್ರವೃತ್ತಿ ಆಗುವುದು – ಹೀಗೆ ಹಲವು ಲಕ್ಷಣಗಳು ಕಂಡುಬರುತ್ತವೆ. ಇನ್ನು ಯಕೃತ್ತಿನಲ್ಲಿ ಆಗುವ ಪರಿಣಮನ ವ್ಯತ್ಯಾಸದಿಂದ ಕಾಮಾಲೆ, ಕರುಳಿನ ಉರಿಯೂತ, ಯಕೃತ್ತು ಮತ್ತು ಪಿತ್ತಕೋಶದಲ್ಲಿ ಕಲ್ಲು, ಮೂತ್ರಕೋಶದಲ್ಲಿ ಕಲ್ಲು, ಮೂತ್ರಕೋಶ ಸಂಬಂಧಿ ರೋಗಗಳು, ದಮ್ಮು ಕಟ್ಟುವುದು, ಕೆಲವೊಮ್ಮೆ ಹೃದಯಸಂಬಂಧಿ ರೋಗಗಳಿಗೂ ಕಾರಣವಾಗಬಹುದು; ರಕ್ತಾದಿ ಧಾತುಗಳ ಉತ್ಪತ್ತಿಗೂ ತೊಡಕಾಗುತ್ತದೆ.

ನಾವು ಸೇವಿಸುವ ಆಹಾರದಲ್ಲಿರುವ ಪೋಷಕಾಂಶಗಳ ವ್ಯತ್ಯಾಸದಿಂದ, ಅವುಗಳನ್ನು ಪರಿಣಮಿಸುವ ಅಂಶಗಳ ಏರುಪೇರಿನಿಂದ, ಶಿಸ್ತಿಲ್ಲದ ಆಹಾರಸೇವನಾ ಕ್ರಮಗಳಿಂದ, ಪರಿಣಮನಕ್ರಿಯೆಯಲ್ಲಿ ವ್ಯತ್ಯಾಸವಾಗಿ ಅಜೀರ್ಣವಾಗುತ್ತದೆ. ಪರಿಣಮನ ಕ್ರಿಯೆಯ ವ್ಯತ್ಯಾಸಗಳು ನಾಲ್ಕು ಕಾರಣದಿಂದ ಆಗಬಹುದು:

1. ಹಿಂದೆ ಸೇವಿಸಿದ ಆಹಾರ ಜೀರ್ಣವಾಗುವ ಮೊದಲೇ ಮತ್ತೆ ಮತ್ತೆ ಆಹಾರ ಸೇವಿಸುವುದು. ಉದಾಹರಣೆಗೆ, ಮಗುವಿಗೆ ಎರಡು ಗಂಟೆಗೊಮ್ಮೆ ಆಹಾರ ಕೊಡಿ ಎಂದು ವೈದ್ಯರು ಹೇಳಿದ್ದಾರೆ. ಆದ್ದರಿಂದ ಮಗುವಿಗೆ ಹಸಿವಿರಲಿ ಇಲ್ಲದಿರಲಿ ಎರಡು ಗಂಟೆಗೊಮ್ಮೆ ಹಣ್ಣು, ಬಿಸ್ಕತ್ತು – ಹೀಗೆ ಏನಾದರೊಂದನ್ನು ಕೊಡುತ್ತಲೇ ಇದ್ದು, 'ಇದೆಲ್ಲಾ ಆರೋಗ್ಯಕರ ಆಹಾರವೇ ಅಲ್ಲವೇ? ಆದರೂ ನನ್ನ ಮಗುವಿಗೆ ಹೀಗೇಕಾಯಿತು' ಎಂದು ಚಿಂತಿಸುವುದು. ಬೆಳೆದವರಿಗಾದರೂ ಈ ರೀತಿ ಪದೇ ಪದೇ ಆಹಾರವನ್ನು ಸೇವಿಸುವುದು ಅನಾರೋಗ್ಯಕರವೇ.
2. ಒಂದೊಂದು ದಿನ ಒಂದೊಂದು ರೀತಿಯ ದಿನಚರಿ ಅನುಸರಿಸುತ್ತಾ ಬೆಳಗ್ಗೆ ಏಳುವುದರಿಂದ ರಾತ್ರಿ ಮಲಗುವವರೆಗೂ ನಿತ್ಯವೂ ವ್ಯತ್ಯಾಸವಾದ ದಿನಚರಿ, ವ್ಯತ್ಯಾಸವಾದ ಆಹಾರ ಕಾಲ, ವ್ಯತ್ಯಾಸವಾದ ಆಹಾರಪದಾರ್ಥ (ಬೇರೆ ಬೇರೆ ಬೇಕರಿ ಅಥವಾ ಹೋಟೆಲಿನಲ್ಲಿ ಸೇವಿಸುವುದು) ಕರುಳು ಅಥವಾ ಯಕೃತ್ತಿನಲ್ಲಿ ಆಹಾರಪರಿಣಮನವನ್ನು ವ್ಯತ್ಯಾಸಗೊಳಿಸುತ್ತದೆ.
3. ವಿರುದ್ಧವಾದ ಆಹಾರಪದಾರ್ಥಗಳ ಸೇವನೆ. ಉದಾಹರಣೆಗೆ: ಬೇಸಿಗೆಗೆ ಹಿತಕರವೆಂದು ಹಣ್ಣು-ಹಾಲನ್ನು ಬೆರೆಸಿ ಮಿಲ್ಕ್ ಶೇಕ್ ಮಾಡಿ ಸೇವಿಸುವುದು, ಹಾಲಿನ ಐಸ್ ಕ್ರೀಂ ಒಟ್ಟಿಗೆ ವಿಧವಿಧವಾದ ಹಣ್ಣು ಮತ್ತು ಉಪ್ಪು ಬೆರೆಸಿರುವ ಅನೇಕ ಖಾದ್ಯಗಳನ್ನು ಬೆರೆಸಿ ಸೇವಿಸುವುದು, ತಂಪಾಗಲೆಂದು ಹಾಲು ಮತ್ತು ಮೊಸರು ಅಥವಾ ಮಜ್ಜಿಗೆ ಬೆರೆಸಿ ಸೇವಿಸುವುದು, ಬಿಸಿಲಿನಿಂದ ದಣಿದು ಬಂದು ಅತಿ ತಂಪಾದ ನೀರು ಅಥವಾ ಇತರೆ ಪಾನೀಯಗಳನ್ನು ಸೇವಿಸುವುದು, ಅಥವಾ ಅತಿ ತಂಪಾದ ನೀರಿನಿಂದ ಸ್ನಾನ ಮಾಡುವುದು, ಆಹಾರದೊಡನೆ ತಂಪುಪಾನೀಯಗಳ ಸೇವನೆ, ಅತಿಯಾದ ಮದ್ಯ, ಅಥವಾ ಮಾಂಸಾಹಾರ ಸೇವನೆ, ಹಾಲು ಬೆರೆಸಿ ತಯಾರಿಸಿರುವ ಚಹ ಅಥವಾ ಕಾಫಿಗೆ ಉಪ್ಪು ಹಾಕುವುದು, ಹುಳಿಹಣ್ಣುಗಳ ಪಾನಕಕ್ಕೆ ಉಪ್ಪು ಸೇರಿಸುವುದು. ಎಲ್ಲಾ ಆಹಾರಪದಾರ್ಥಗಳೂ ಸ್ವತಃ ಗುಣಯುಕ್ತವಾದದ್ದೇ ಆಗಿದ್ದರೂ ಒಂದರೊಡನೆ ಒಂದು ಬೆರೆತಾಗ ಅವು ರಕ್ತಾದಿ ಧಾತುಗಳ ಉತ್ಪತ್ತಿಯನ್ನು ವ್ಯತ್ಯಾಸಗೊಳಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.
4. ದೇಶಕಾಲಕ್ಕನುಗುಣವಾಗಿ ಆಹಾರದ ಬಗೆಯೂ ಬದಲಾದರೆ ಆರೋಗ್ಯಕರ. ಬೇಸಿಗೆಯಲ್ಲಿ ಅತಿಯಾದ ಖಾರ ಅಥವಾ ಜಿಡ್ಡಿನ ಪದಾರ್ಥಗಳ ಸೇವನೆ ಆಜೀರ್ಣ, ಅಮ್ಲಪಿತ್ತ, ಒಣಕೆಮ್ಮು, ಮೈ ತುರಿಕೆ, ಗಂಧೆ ಏಳುವುದು, ಮುಂತಾದ ಅನೇಕ ರೋಗಗಳಿಗೆ ಕಾರಣವಾಗುತ್ತದೆ.

ಬೇಸಿಗೆಯಲ್ಲಿ ಲಾವಂಚ, ಶ್ರೀಗಂಧ ಹಾಕಿ ಕುದಿಸಿದ ನೀರು, ಎಳೆನೀರು, ಬಾರ್ಲಿ ಗಂಜಿ ಅಥವಾ ಬಾರ್ಲಿನೀರು, ಮಜ್ಜಿಗೆ, ತಾಜಾ ಹಣ್ಣುಗಳ ಸೇವನೆ, ಅರಳಿನ ಗಂಜಿ ಅಥವಾ ಪಾನಕ, ಹೆಸರುಕಾಳಿನ ಪಾನಕ – ಹೀಗೆ ಜೀರ್ಣಶಕ್ತಿಯನ್ನು ಉದ್ದೀಪನಗೊಳಿಸುವ, ಆದರೆ ದೇಹಕ್ಕೆ ತಂಪನ್ನೀಯುವ ಪಾನೀಯಗಳು, ಮತ್ತು ತಂಬುಳಿ, ಪಳದ್ಯ, ತೊವ್ವೆ, ಇತ್ಯಾಗಿ ತಂಪಾದ ಆಹಾರಗಳ ಸೇವನೆ ಆರೋಗ್ಯಕರ.

ಆಯಾ ಪ್ರದೇಶದಲ್ಲಿ, ಆಯಾ ಕಾಲದಲ್ಲಿ ಬೆಳೆಯುವ ಆಹಾರ ಪದಾರ್ಥಗಳ ಸೇವನೆ ಒಳ್ಳೆಯದು. ಆಹಾರವನ್ನು ತಯಾರಿಸುವ, ಸೇವಿಸುವ ಕ್ರಮಗಳನ್ನೂ ಸಾಧ್ಯವಾದಷ್ಟೂ ಆಯಾ ಪ್ರದೇಶದ ವಾತಾವರಣಕ್ಕೆ ಸರಿಹೊಂದುವಂತೆ ತಯಾರಿಸಿ ಸೇವಿಸುವುದು ಆರೋಗ್ಯಕರ. ಸೇವಿಸುವ ಆಹಾರದ ಪ್ರಮಾಣ, ಆಹಾರಕಾಲ – ಇವು ಕೂಡ ಅಜೀರ್ಣ ಆಗದಂತೆ ತಡೆಗಟ್ಟಲು ಪೂರಕವಾದ ಅಂಶಗಳೇ ಆಗಿವೆ. ❖

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

CHEMISTRY

101). Which of the following vitamins is not stored in the adipose tissue?

a) D b) E
c) A d) B_6

Ans: (d)

Expln:- Adipose tissue stores those vitamins which are fat-soluble. Among the given vitamins, only A, D and E are fat-soluble. Vitamin B_6 is water-soluble and hence, is not stored in adipose tissue.

102) Hypothyroidism is caused by the deficiency of:

a) Thyroxine b) Glucocorticoid
c) Vitamin B-12 d) Adrenalin

Ans: (a)

Expln:- Hypothyroidism is caused by the deficiency of the hormone thyroxine which is produced by the thyroid gland.

103) Which of the following is NOT a characteristic of a covalent compound?

a) Low melting point b) No definite geometry
c) Insoluble in polar solvent
d) Small difference in electronegativity between the combining atoms

Ans:- (a)

105) Conductivity of a saturated solution of a sparingly salt AB at 298 K is 1.85×10^{-5} S m^{-1}. Solubility product of the salt AB at 298 K is

Given: Λ^o_m (AB) = 140×10^{-4} S m^2 mol^{-1}

a) 5.7×10^{-12} b) 1.32×10^{-12}
c) 7.5×10^{-12} d) 1.74×10^{-12}

Ans:- (d)

Expln:-using the relationship between solubility of sparingly soluble salt and Λ^o_m,

$K = 1.85 \times 10^{-5}\ S\,m^{-1} = 1.85 \times 10^{-7}\ S\,cm^{-1}$

$\Lambda^o_m = 140 \times 10^{-4}\ S\,m^2\,mol^{-1} = 140\ S\,cm^2\,mol^{-1}$

$$s = \frac{k \times 1000}{\Lambda^o_m} = \frac{1.85 \times 10^{-7} \times 1000}{140}$$

$= 1.32 \times 10^{-6}$

$K_{sp} = (s)^2$ [For AB type of salt]

$= (1.32 \times 10^{-6})^2 = 1.74 \times 10^{-12}$

104) On heating with concentrated NaOH solution in an inert atmosphere of CO_2, white phosphorous gives a gas. Which of the following statements is incorrect about the gas?

a) It is more basic than NH_3.
b) Its solution in water decomposes in the presence of lights
c) It is less basic than NH_3.
d) It is highly poisonous and has smell like rotten fish.

Ans: (a)

106) The last element of the p-block in the 6th period is represented by the outermost electronic configuration:

a) $4f^{14}\,5d^{10}6s^26p^4$ b) $4f^{14}\,5d^{10}6s^2\,6p^6$
c) $7s^2\,7p^6$ d) $4f^{14}\,6d^{10}7s^2\,7p^6$

Answer: (b)

Expln:- The last element of the p-block in 6th period is Radon (Rn)
The electronic configuration of Rn is

$[Xe]4f^{14}\,5d^{10}6s^2\,6p^6$

107) Which one of the following is an example for homogeneous catalysis?

a) Manufacture of ammonia by Haber's process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

108) H_2O_2 cannot oxidize..............

a) Na_2SO_3 b) KI
c) PbS d) O_3

Ans: - d

Expln:- O_3 is a stronger oxidizing agent than H_2O_2.

109) The set of quantum numbers for the outermost electron for copper in its ground state is ....

a) 3, 2 , 2 , + ½ b) 4, 1, 1, + ½
c) 4 , 2 , 2 , + ½ d) 4 , 0 , 0 , + ½

Ans:- d

110) For the reversible reaction

$A_{(g)} + B_{(g)} \rightleftharpoons C_{(g)} + D_{(g)};\ \Delta G^0 = -350\,kJ$

Which of the following statements is true?

a) Equilibrium constant is greater than 1
b) The entropy change is negative
c) The reaction is thermodynamically not feasible
d) The reaction should be instantaneous

Ans:- a

111) Copper is extracted from copper pyrites by heating in a Bessemer converter. The method is based on the principle that

a) Iron has less affinity for oxygen than sulphur at high temperature.
b) Sulphur has less affinity for oxygen at high temperature.
c) Copper has more affinity for oxygen than sulphur at high temperature.
d) Copper has less affinity for oxygen than sulphur at high temperature.

Ans: (C) Copper has more affinity for oxygen than sulphur at high temperature.

MATHEMATICS

MULTIPLE CHOICE QUESTIONS

64) The expression

$$\frac{1}{\sqrt{(3x+1)}}\left\{\left(\frac{1+\sqrt{3x+1}}{2}\right)^7-\left(\frac{1-\sqrt{3x+1}}{2}\right)^7\right\}$$ **is a polynomial in x of degree**

(A) 7 (B) 5
(C) 4 (D) 3

Ans: (D) 3

Expln :– Numerator is of degree $\frac{7}{2}$ in x.

Denominator is of degree $\frac{1}{2}$ in x.

$\therefore$ Total dehree $= \frac{7}{2} - \frac{1}{2} = 3$.

65) Amplitude of the complex number i sin $\left(\frac{\pi}{19}\right)$ is

(A) $\frac{\pi}{19}$ (B) $-\frac{\pi}{19}$
(C) $\frac{\pi}{2}$ (D) $\frac{\pi}{2} - \frac{\pi}{19}$

Ans : (C) $\frac{\pi}{2}$

Expln :–

Let the complex number be of the form

$Z = r(\cos\theta + i\sin\theta) = i\sin\frac{\pi}{19}$ (given)

$\Rightarrow r = 1;\ \cos\theta = 0$ i.e., $\theta = \frac{\pi}{2}$.

66) The maximum area in square units of an isosceles triangle inscribed in an ellipse $\frac{x^2}{a^2}+\frac{y^2}{b^2}=1$ with its vertex at one end of the major axis is ....

(A) $\sqrt{3}ab$ (B) $\frac{3\sqrt{3}}{4}ab$
(C) $\frac{5\sqrt{3}}{4}ab$ (D) None of these

Ans : (B) $\frac{3\sqrt{3}}{4}ab$

Expln: Let ABC be an isosceles triangle
Let ABC be an isosceles triangle with A (a, 0).
Let B (a cos θ , b sin θ), C (a cos θ , -b sin θ)



Area $A = \frac{1}{2}(2b\sin\theta)(a - a\cos\theta)$

$A = ab(\sin\theta)(a - a\cos\theta)$

$\frac{dA}{d\theta} = ab(\cos\theta - \cos^2\theta + \sin^2\theta)$

$\frac{dA}{d\theta} = ab(\cos\theta - \cos 2\theta)$

$\frac{dA}{d\theta} = 0$ (for max. area).

$\therefore \cos\theta - \cos 2\theta = 0 \Rightarrow \cos\theta = \cos 2\theta$

i.e., $\theta = 2\pi - 2\theta \quad \therefore \theta = \frac{2\pi}{3}$.

Max. area $= ab\left(\sin\frac{2\pi}{3} - \sin\frac{2\pi}{3}\cos\frac{2\pi}{3}\right)$

$= ab\left(\frac{\sqrt{3}}{2} + \frac{\sqrt{3}}{2} \times \frac{1}{2}\right) = \frac{3\sqrt{3}}{4}ab.$

67) Binary operation* on R- {-1} defined by $a*b = \frac{a}{b+1}$ is

(A) * is associative and Commutative
(B) * is associative and not Commutative
(C) * is neither and nor Commutative
(D) * is Commutative and associative

Ans:- C

Expln:-

Let x, y, z $\in R - (-1)$

Consider $x*(y*z) = x * a \text{ say} = \frac{x}{a+1} = \frac{x}{(y+z)+1}$

$= \frac{x}{\frac{y}{x+1}} = \frac{x(z+1)}{y+z+1}$ ....(1)

Consider $(x*y)*z = b + a \text{ say} = \frac{b}{z+1} = \frac{x+y}{z+1}$

$= \frac{x}{\frac{y+1}{x+1}} = \frac{x}{(y+1)(z+1)}$ ....(2)

$(1) \neq (2) \therefore *$ is not associative

Consider $a*b = \frac{a}{b+1},\ b*a = \frac{b}{a+1}$

Clearly $a*b \neq b*a$ ie * is not commutative

$\therefore$ * **is neither and nor Commutative**

68) If f (x + y) = f (x) f (y) for all x and y and f (5) = 2, f'(0) = 3, then f'(5) is

(A) 5 (B) 6
(C) 0 (D) None of these

Ans: (B) 6

Expln:-

$f(x+y) = f(x)\,f(y)\ \forall\ x, y$

$\therefore f(0+5) = f(0)\,f(5)$ i.e., $f(5) = f(0)\,f(5)\ \therefore f(0) = 1$

$f'(5) = \lim_{\Delta x \to 0}\left\{\frac{f(5+\Delta x) - f(5)}{\Delta x}\right\}$

$= \lim_{\Delta x \to 0}\frac{f(5).\,f(\Delta x) - f(5)}{\Delta x}$

$= \lim_{\Delta x \to 0} f(5)\left[\frac{f(\Delta x) - 1}{\Delta x}\right] = \lim_{\Delta x \to 0} f(5)\left[\frac{f(\Delta x) - f(0)}{\Delta x - 0}\right]$

$= f(5).\,f'(0) = 2 . 3 = 6$

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಕಣದಿಂದ ಹಿಂದೆ ಸರಿದ ಎಐಎಡಿಎಂಕೆ ಏಕೈಕ ಅಭ್ಯರ್ಥಿ

ಚೆನ್ನೈ (ಪಿಟಿಐ): ತಮಿಳುನಾಡಿನ ಎಡಪ್ಪಾಡಿ ಕೆ. ಪಳನಿಸ್ವಾಮಿ ನೇತೃತ್ವದ ಎಐಎಡಿಎಂಕೆ ಮೇ 10 ರಂದು ನಡೆಯಲಿರುವ ಕರ್ನಾಟಕ ವಿಧಾನಸಭೆ ಚುನಾವಣೆ ಕಣದಿಂದ ಹಿಂದೆ ಸರಿದಿದೆ.

ಬೆಂಗಳೂರಿನ ಪುಲಕೇಶಿನಗರ ವಿಧಾನಸಭಾ ಕ್ಷೇತ್ರಕ್ಕೆ (ಎಸ್‌ಸಿ) ಸ್ಪರ್ಧಿಸಿದ್ದ ಪಕ್ಷದ ಏಕೈಕ ಅಭ್ಯರ್ಥಿ ಡಿ.ಅನ್ಬರಸನ್ ಅವರು ಸೋಮವಾರ ನಾಮಪತ್ರ ಹಿಂಪಡೆದಿದ್ದಾರೆ.

ದೆಹಲಿಯಿಂದ ಬಿಜೆಪಿ ಹಿರಿಯ ನಾಯಕರು ಸೋಮವಾರ ಪಳನಿಸ್ವಾಮಿ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದು, ನಾಮಪತ್ರ ಹಿಂಪಡೆಯಲು ಕೋರಿದ್ದರು ಎಂದು ಎಐಎಡಿಎಂಕೆ ಹೇಳಿಕೆಯಲ್ಲಿ ತಿಳಿಸಿದೆ.

ಕಾಂಗ್ರೆಸ್ ಪಕ್ಷದಿಂದ ಈಡಿಗ ಸಮುದಾಯಕ್ಕೆ ಅನ್ಯಾಯ: ಪ್ರಣವಾನಂದ

ಕಾರವಾರ: 'ವಿಧಾನಸಭೆ ಚುನಾವಣೆಯ ಟಿಕೆಟ್ ಹಂಚಿಕೆಯಲ್ಲಿ ನಾಮಧಾರಿ, ಈಡಿಗ ಸಮುದಾಯಕ್ಕೆ ಕಾಂಗ್ರೆಸ್ ಅನ್ಯಾಯ ಮಾಡಿದೆ' ಎಂದು ರಾಷ್ಟ್ರೀಯ ಈಡಿಗ ಮಹಾಮಂಡಳದ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ ಆರೋಪಿಸಿದರು.

'ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದಲ್ಲಿ ನಾಮಧಾರಿ, ಬಿಲ್ಲವ ಸಮುದಾಯದ ಮತದಾರರ ಸಂಖ್ಯೆ ಹೆಚ್ಚಿದ್ದರೂ ಇಲ್ಲಿ ತಲಾ ಒಬ್ಬರಿಗೆ ಮಾತ್ರ ಟಿಕೆಟ್ ನೀಡಲಾಗಿದೆ. ಕಾಂಗ್ರೆಸ್ ಪಕ್ಷದ ಜತೆ ಸಮುದಾಯ ಮುಂಚಿನಿಂದಲೂ ಬೆಂಬಲವಾಗಿ ನಿಂತಿತ್ತು' ಎಂದರು.

'ಕಾಂಗ್ರೆಸ್‌ನಲ್ಲಿರುವ ಸಮುದಾಯದ ಮುಖಂಡರಿಗೆ ಕೆಪಿಸಿಸಿ ಹುದ್ದೆ, ನಿಗಮ ಮಂಡಳಿಯಲ್ಲಿ ಸ್ಥಾನ ಕಲ್ಪಿಸಬೇಕು ಅಥವಾ ಒಬ್ಬರು ಅಥವಾ ಇಬ್ಬರನ್ನು ವಿಧಾನ ಪರಿಷತ್ ಚುನಾವಣೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಡಬೇಕು. ಇದನ್ನು ರಾಹುಲ್ ಗಾಂಧಿ ಗಮನಕ್ಕೂ ತರಲಾಗಿದೆ. ಎರಡು ವಾರದೊಳಗೆ ಬೇಡಿಕೆ ಈಡೇರಿಸದಿದ್ದರೆ ಕಾಂಗ್ರೆಸ್ ವಿರುದ್ಧ ಮತ ಚಲಾಯಿಸುವ ಬಗ್ಗೆ ನಿರ್ಣಯಿಸಲಾಗುವುದು' ಎಂದರು.

ಚುನಾವಣೆ ಪ್ರಚಾರಕ್ಕೆ ಮೋದಿ, ಶಾ, ನಡ್ಡಾ

ರಾಮನಗರ: ಈ ಬಾರಿಯ ವಿಧಾನಸಭೆ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಭರ್ಜರಿ ಪ್ರಚಾರಕ್ಕೆ ಬಿಜೆಪಿ ಸಿದ್ಧತೆ ನಡೆಸಿದ್ದು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಪಕ್ಷದ ಅಗ್ರ ರಾಷ್ಟ್ರೀಯ ನಾಯಕರ ದಂಡೇ ಜಿಲ್ಲೆಗೆ ಬರಲಿದೆ.

ಬಿಜೆಪಿ ರಾಷ್ಟ್ರೀಯ ನಾಯಕರ ಪ್ರವಾಸದ ಕಾರ್ಯಕ್ರಮ ಪಟ್ಟಿ ಬಹುತೇಕ ಅಂತಿಮಗೊಂಡಿದೆ. ಇದೇ ಮೊದಲ ಬಾರಿಗೆ ಮೋದಿ ಆದಿಯಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸಹ ಜಿಲ್ಲೆಯಲ್ಲಿ ಪ್ರಚಾರ ಕೈಗೊಳ್ಳಲಿರುವುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಇದೇ 30ರಂದು ಚನ್ನಪಟ್ಟಣದಲ್ಲಿ ಬೃಹತ್ ಸಮಾವೇಶ ನಡೆಸಲಿದ್ದಾರೆ.

ಇದಕ್ಕಾಗಿ ಚನ್ನಪಟ್ಟಣದ ಮತ್ತಿಕೆರೆ–ಶೆಟ್ಟಿಹಳ್ಳಿ ಬಳಿ 30 ಎಕರೆ ಪ್ರದೇಶದಲ್ಲಿ ವೇದಿಕೆ ನಿರ್ಮಾಣಕ್ಕೆ ಸಿದ್ಧತೆ ನಡೆದಿದೆ. ಅಂದು ರಾಮನಗರ ಹಾಗೂ ಮಂಡ್ಯ ಜಿಲ್ಲೆಗಳ 10ಕ್ಕೂ ಹೆಚ್ಚು ವಿಧಾನಸಭಾ ಕ್ಷೇತ್ರದಿಂದ 2 ಲಕ್ಷಕ್ಕೂ ಹೆಚ್ಚು ಮಂದಿ ಸಮಾವೇಶದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಇದರ ಬೆನ್ನಲ್ಲೇ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಮೇ 1ರಂದು ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪ್ರಚಾರ ಕೈಗೊಳ್ಳಲಿದ್ದಾರೆ. ಮೇ 5ರಂದು ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ಜೆ.ಪಿ. ನಡ್ಡಾ ಪ್ರವಾಸ ಕೈಗೊಳ್ಳುವುದು ಬಹುತೇಕ ಖಚಿತವಾಗಿದೆ.

ಕಣದಲ್ಲಿ ಉಳಿದ ಅಭ್ಯರ್ಥಿಗಳು

ಬೆಂಗಳೂರು: ವಿಧಾನಸಭೆ ಚುನಾವಣೆಯ ನಾಮಪತ್ರ ವಾಪಸ್ ಪಡೆಯುವ ಪ್ರಕ್ರಿಯೆ ಸೋಮವಾರ ಮುಕ್ತಾಯವಾಗಿದ್ದು, ನಗರದ 11 ವಿಧಾನಸಭಾ ಕ್ಷೇತ್ರಗಳಲ್ಲಿ ಅಂತಿಮವಾಗಿ ಕಣದಲ್ಲಿ ಉಳಿದಿರುವ ಅಭ್ಯರ್ಥಿಗಳ ವಿವರ ಕೆಳಗಿನಂತಿದೆ.

150– ಯಲಹಂಕ (20)	
ಬಿಜೆಪಿ	ಎಸ್.ಆರ್. ವಿಶ್ವನಾಥ್
ಕಾಂಗ್ರೆಸ್	ಕೇಶವ ರಾಜಣ್ಣ ಬಿ.
ಜೆಡಿಎಸ್	ಎಂ. ಮುನೇಗೌಡ
ಆಮ್ ಆದ್ಮಿ ಪಾರ್ಟಿ	ಪಿ. ಮಂಜುನಾಥ
ಬಿಎಸ್‌ಪಿ	ಸಂದೀಪ್ ಮಾರಸಂದ್ರ ಮುನಿಯಪ್ಪ
ಉತ್ತಮ ಪ್ರಜಾಕೀಯ ಪಾರ್ಟಿ	ಅಶ್ವಥ್.ಎಂ.ಎಂ
ಇಂಡಿಯನ್ ಲೇಬರ್ ಪಾರ್ಟಿ (ಅಂಬೇಡ್ಕರ್ ಫುಲೆ)	ಟಿ.ಆರ್.ನಾರಾಯಣರಾವ್
ರಾಷ್ಟ್ರೀಯ ಜನಹಿತ ಪಾರ್ಟಿ	ಮುನಿರಾಜು.ಎಂ
ಕರ್ನಾಟಕ ರಾಷ್ಟ್ರ ಸಮಿತಿ	ಜೆ.ಪಿ.ರಘುನಂದನ
ಸಂಯುಕ್ತ ವಿಕಾಸ್ ಪಾರ್ಟಿ	ವಿಶಾಲ್ ಗೌಡ
ಪಕ್ಷೇತರ	ಭಾಗ್ಯ.ಎನ್, ಮುನೇಗೌಡ.ಎನ್, ಬಿ.ಎಂ.ಮುನೇಗೌಡ, ಮುನೇಗೌಡ. ವಿ, ಕೆ.ರಮೇಶ, ಬಿ.ಲಕ್ಷ್ಮಯ್ಯ, ಎಸ್. ವಿ.ವಿಶ್ವನಾಥ, ವಿಶ್ವನಾಥ್.ಎಚ್.ಜೆ, ಸಂದೇಶ್.ಜಿ ಹಾಗೂ ಹೇಮ ರಾಜ್ ವೈ.ಸಿ
154– ರಾಜರಾಜೇಶ್ವರಿನಗರ (14)	
ಬಿಜೆಪಿ	ಮುನಿರತ್ನ
ಕಾಂಗ್ರೆಸ್	ಕುಸುಮಾ ಎಚ್.
ಜೆಡಿಎಸ್	ಡಾ. ವಿ. ನಾರಾಯಣಸ್ವಾಮಿ
ಆಮ್ ಆದ್ಮಿ ಪಾರ್ಟಿ	ಅನಂತ ಸುಭಾಷ್‌ಚಂದ್ರ
ಬಿಎಸ್‌ಪಿ	ಎನ್. ನಾಗರಾಜು
ಕರ್ನಾಟಕ ರಾಷ್ಟ್ರ ಸಮಿತಿ	ಎಸ್. ಚಂದ್ರಶೇಖರ್
ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯೂನಿಸ್ಟ್)	ಜ್ಞಾನಮೂರ್ತಿ ವಿ
ಉತ್ತಮ ಪ್ರಜಾಕೀಯ ಪಾರ್ಟಿ	ಮಂಜುನಾಥ ಎಂ
ಜೆಡಿಯು	ಲಕ್ಷ್ಮೀ
ಜೈ ಮಹಾಭಾರತ ಪಾರ್ಟಿ	ಎಂ. ಲಿಂಗರಾಜು
ಪಕ್ಷೇತರ	ಆರೀಫ್ ಪಾಷಾ, ಕಾಳಪ್ಪ ಎ, ಎಚ್. ರುಕ್ಮಿಣಿ, ಸುಭಾಷ್ ಎಸ್.
162– ಶಿವಾಜಿನಗರ (15)	
ಬಿಜೆಪಿ	ಚಂದ್ರ ಎನ್.
ಕಾಂಗ್ರೆಸ್	ರಿಜ್ವಾನ್ ಅರ್ಶದ್
ಆಮ್ ಆದ್ಮಿ ಪಾರ್ಟಿ	ಪ್ರಕಾಶ್ ನೆಡುಂಗಾಡಿ
ಪ್ರೊಟೆಸ್ಟ್ ಬ್ಲಾಕ್ ಇಂಡಿಯ	ಬಿ.ಕೆ. ಪ್ರಸಾದ್
ಕರ್ನಾಟಕ ಕಾರ್ಮಿಕರ ಪಕ್ಷ	ಮೊಹ್ತಾಶೆಮ್ ಅಲಿ ಖಾನ್
ಕರ್ನಾಟಕ ರಾಷ್ಟ್ರ ಸಮಿತಿ	ಹಬೀಬ್ ಸಾಬ್
ಪಕ್ಷೇತರ	ಅನ್ವರ್ ಬಾಷಾ, ಜಮಿಲ್ ಅಹ್ಮದ, ತನ್ವೀರ್ ಅಹಮದ್, ಮೊಹಮ್ಮದ್ ಹನೀಫ್, ಎಂ. ರಫೀಕ್ ಅಹಮದ್, ರಾಬರ್ಟ್ ಕ್ಲೈವ್, ಶಾನವಾಜ್ ಅಹಮದ್, ಸರವಣನ್ ಎಸ್, ಎಂ. ಸಾದಿಕ್ ಅಲಿ.
163– ಶಾಂತಿನಗರ (10)	
ಬಿಜೆಪಿ	ಕೆ. ಶಿವಕುಮಾರ್
ಕಾಂಗ್ರೆಸ್	ಎನ್.ಎ. ಹ್ಯಾರಿಸ್
ಜೆಡಿಎಸ್	ಎಚ್. ಮಂಜುನಾಥ
ಆಮ್ ಆದ್ಮಿ ಪಾರ್ಟಿ	ಮಥಾಯಿ ಕೆ
ಬಿಎಸ್‌ಪಿ	ಸತೀಶ್ ಚಂದ್ರ ಎಂ
ಇಂಡಿಯನ್ ಕ್ರಿಸ್ಟಿಯನ್ ಫ್ರಂಟ್	ಅಂತೋಣಿ ಎ. ಸಂತೋಷ್
ಆಲ್ ಇಂಡಿಯಾ ಮಹಿಳಾ ಎಂಪವರ್‌ಮೆಂಟ್ ಪಾರ್ಟಿ	ಡಿ. ರೂಬನ್ ಮೋಸಸ್
ಕರ್ನಾಟಕ ರಾಷ್ಟ್ರ ಸಮಿತಿ	ರೋಲ್ಯಾಂಡ್ ಸೋನ್ಸ್ ಎ
ಭಾರತೀಯ ಪ್ರಜೆಗಳ ಕಲ್ಯಾಣ ಪಕ್ಷ	ಸೈಯದ್ ಆಸಿಫ್ ಬುಖಾರಿ
ಪಕ್ಷೇತರ	ಕೆ. ನಟರಾಜು
164– ಗಾಂಧಿನಗರ (15)	
ಬಿಜೆಪಿ	ಎ.ಆರ್. ಸಪ್ತಗಿರಿ ಗೌಡ
ಕಾಂಗ್ರೆಸ್	ದಿನೇಶ್ ಗುಂಡೂರಾವ್
ಜೆಡಿಎಸ್	ವಿ. ನಾರಾಯಣಸ್ವಾಮಿ
ಆಮ್ ಆದ್ಮಿ ಪಾರ್ಟಿ	ಎಸ್. ಗೋಪಿನಾಥ್
ಇಂಡಿಯನ್ ಮೂವ್‌ಮೆಂಟ್ ಪಾರ್ಟಿ	ಅರುಣ್‌ಕುಮಾರ್ ಡಿ
ರಾಷ್ಟ್ರೀಯ ಸಮಾಜದಳ	ಕೃಷ್ಣಯ್ಯ
ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠಾವಲೆ)	ಎಂ.ಎಸ್. ದಿವಾಕರ್
ಕರ್ನಾಟಕ ರಾಷ್ಟ್ರ ಸಮಿತಿ	ಪ್ರಕಾಶ್ ಕೆ.
ಜನಹಿತ ಪಕ್ಷ	ಪ್ರಶಾಂತ್ ಕುಮಾರ್
ಉತ್ತಮ ಪ್ರಜಾಕೀಯ ಪಾರ್ಟಿ	ಬಸವರಾಜ ಎಂ.ಡಿ
ಆಲ್ ಇಂಡಿಯಾ ಮಹಿಳಾ ಎಂಪವರ್‌ಮೆಂಟ್ ಪಾರ್ಟಿ	ಕೆ. ಸ್ಟೀಫನ್
ಪಕ್ಷೇತರ	ಕೃಷ್ಣಯ್ಯ ಶೆಟ್ಟಿ ಎಸ್.ಎನ್. ಮಾಲೂರು, ಜಿ. ಗಜೇಂದ್ರ, ಪುಷ್ಪರಾಣಿ ಎಸ್, ಪಿ. ಬಸಪ್ಪಚಾರ್.
166– ಗೋವಿಂದರಾಜನಗರ (14)	
ಬಿಜೆಪಿ	ಕೆ. ಉಮೇಶ್ ಶೆಟ್ಟಿ
ಕಾಂಗ್ರೆಸ್	ಪ್ರಿಯಕೃಷ್ಣ
ಜೆಡಿಎಸ್	ಆರ್. ಪ್ರಕಾಶ್
ಆಮ್ ಆದ್ಮಿ ಪಾರ್ಟಿ	ಅಂಜನಾ ಗೌಡ
ಬಿಎಸ್‌ಪಿ	ಪರ್ವೇಜ್ ಖಾನ್ ಪಿ
ಉತ್ತಮ ಪ್ರಜಾಕೀಯ ಪಾರ್ಟಿ	ಬಾಲಕೃಷ್ಣ ಎಂ
ಇಂಡಿಯನ್ ಮೂವ್‌ಮೆಂಟ್ ಪಾರ್ಟಿ	ಎ. ರಾಜ್
ಕರ್ನಾಟಕ ರಾಷ್ಟ್ರ ಸಮಿತಿ	ಬಿ.ಆರ್. ಶಶಿಕುಮಾರ್
ಪಕ್ಷೇತರ	ಅಮ್ಜದ್ ಖಾನ್, ಗೋಪಾಲ, ಮೋಹನ್‌ಕುಮಾರ್ ಬಿ.ಎನ್, ಲೋಹಿತ್ ಎಂ., ಎಸ್. ಸುರೇಶ್, ಸಂತೋಷ್ ಕುಮಾರ್ ಕೆ.ಎಸ್
167– ವಿಜಯನಗರ (15)	
ಬಿಜೆಪಿ	ಎಚ್. ರವೀಂದ್ರ
ಕಾಂಗ್ರೆಸ್	ಎಂ.ಕೃಷ್ಣಪ್ಪ
ಬಿಎಸ್‌ಪಿ	ಗುಲ್ ಶನ್ ಬಾನು
ಆಮ್ ಆದ್ಮಿ ಪಾರ್ಟಿ	ಡಾ. ರಮೇಶ್ ಬೆಲ್ಲಂಕೊಂಡ
ಆಲ್ ಇಂಡಿಯಾ ಫಾರ್ವರ್ಡ್ ಬ್ಲಾಕ್	ಅರುಣ್‌ಕುಮಾರ್ ಸಿ
ಕರ್ನಾಟಕ ರಾಷ್ಟ್ರ ಸಮಿತಿ	ನರಸಿಂಹ ರೆಡ್ಡಿ ಕೆ.ಎಲ್
ಉತ್ತಮ ಪ್ರಜಾಕೀಯ ಪಾರ್ಟಿ	ಎನ್. ಮಂಜುನಾಥ್
ಸಮಾಜವಾದಿ ಜನತಾ ಪಾರ್ಟಿ (ಕರ್ನಾಟಕ)	ರವೀಂದ್ರ ಎ.ಎಂ
ಪಕ್ಷೇತರ	ಅಮ್ಜದ್‌ಖಾನ್, ಎಂ.ಕೃಷ್ಣಪ್ಪ, ಆರ್. ನಂಜುಂಡಪ್ಪ, ಪದ್ಮಾವತಿ ಕೆ.ಎಂ, ರವೀಂದ್ರ, ವೆಂಕಟೇಶ್, ಸೈಯದ್ ಶಬ್ಬೀರ್.
168– ಚಾಮರಾಜಪೇಟೆ (12)	
ಬಿಜೆಪಿ	ಭಾಸ್ಕರ್ ರಾವ್
ಕಾಂಗ್ರೆಸ್	ಬಿ.ಝಡ್. ಜಮೀರ್ ಅಹ್ಮದ್ ಖಾನ್
ಜೆಡಿಎಸ್	ಸಿ. ಗೋವಿಂದರಾಜ್
ಆಮ್ ಆದ್ಮಿ ಪಾರ್ಟಿ	ಜಗದೀಶ್ ಚಂದ್ರ ಸಿ
ಬಿಎಸ್‌ಪಿ	ನರಸಿಂಹ ಮೂರ್ತಿ
ಭಾರತೀಯ ಪ್ರಜೆಗಳ ಕಲ್ಯಾಣ ಪಕ್ಷ	ಟಿ.ಆರ್. ಜಗನ್ನಾಥ ರಾವ್
ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ	ಪವನ್‌ಕುಮಾರ್ ಕೆ.ಜಿ.
ನವಭಾರತ್ ಸೇನಾ	ರುಕ್ಮಾಂಗದಾ ಎಸ್
ಉತ್ತಮ ಪ್ರಜಾಕೀಯ ಪಾರ್ಟಿ	ವಿ. ಸೋಮಶೇಖರ್
ಪಕ್ಷೇತರ	ಅಸ್ಗರ್ ಎ. ಮೋಹಿನ್ ಎಸ್.ಎಂ, ಆನಂದ್ ಕೆ.ಎಸ್, ಡಾ. ಶಿವಕುಮಾರ್ ಎಂ.
169– ಚಿಕ್ಕಪೇಟೆ (15)	
ಬಿಜೆಪಿ	ಉದಯ್ ಬಿ. ಗರುಡಾಚಾರ್
ಕಾಂಗ್ರೆಸ್	ಆರ್.ವಿ. ದೇವರಾಜು
ಜೆಡಿಎಸ್	ಇಮ್ರಾನ್ ಪಾಷ
ಬಿಎಸ್‌ಪಿ	ಅರುಣ್ ಪ್ರಸಾದ್ ಎ
ಆಮ್ ಆದ್ಮಿ ಪಾರ್ಟಿ	ಬ್ರಿಜೇಶ್ ಕಾಳಪ್ಪ
ಕರ್ನಾಟಕ ರಾಷ್ಟ್ರ ಸಮಿತಿ	ಕೆ.ಎಚ್. ನವೀನ್
ಉತ್ತಮ ಪ್ರಜಾಕೀಯ ಪಾರ್ಟಿ	ಎಂ.ವಿ. ವಿಷ್ಣು
ಪಕ್ಷೇತರ	ಪಿ. ಅಮರನಾಥ್, ಅಸ್ಗರ್ ಎ. ಮೊಹಿನ್ ಎಸ್.ಎಂ, ಸಿ. ನಂಜುಂಡಪ್ಪ, ಪ್ರೀತಮ್ ಕುಮಾರ್, ಕೆ.ಜಿ.ಎಫ್ ಬಾಬು/ ಯೂಸುಫ್ ಷರೀಫ್, ಎಂ. ಶ್ರೀನಿವಾಸ ಮೂರ್ತಿ, ಡಾ. ಆರ್. ಶೇಖರ್ ತೋಳ್ ತಿರುಮಾವಳವನ್, ಸುನೀಲ್ ಶಂಕರ್
170– ಬಸವನಗುಡಿ (12)	
ಬಿಜೆಪಿ	ರವಿಸುಬ್ರಮಣ್ಯ ಎಲ್.ಎ
ಕಾಂಗ್ರೆಸ್	ಯು.ಬಿ. ವೆಂಕಟೇಶ್
ಜೆಡಿಎಸ್	ಅರಮನೆ ಶಂಕರ್
ಆಮ್ ಆದ್ಮಿ ಪಾರ್ಟಿ	ಸತ್ಯಲಕ್ಷ್ಮೀ ರಾವ್
ಕರ್ನಾಟಕ ರಾಷ್ಟ್ರ ಸಮಿತಿ	ಎಲ್. ಜೀವನ್
ಜೈ ಮಹಾಭಾರತ ಪಾರ್ಟಿ	ದಿಲೀಪ್ ಎಂ.
ಸ್ವಯಂ ಕೃಷಿ ಪಾರ್ಟಿ	ನಾಗಮುನಿ
ಉತ್ತಮ ಪ್ರಜಾಕೀಯ ಪಾರ್ಟಿ	ಡಾ. ರಜಿನಿ ಜೆ
ಪಕ್ಷೇತರ	ಅಶ್ವಥ್ ಕುಮಾರ್ ಕೆ.ವಿ, ಯೋಗೇಶ, ಶ್ರೇಯಸ್ ಎಚ್.ಎನ್, ಬಿ.ಎಸ್. ಸತ್ಯನಾರಾಯಣ.
171– ಪದ್ಮನಾಭನಗರ (13)	
ಬಿಜೆಪಿ	ಆರ್. ಅಶೋಕ
ಕಾಂಗ್ರೆಸ್	ವಿ. ರಘುನಾಥ ನಾಯ್ಡು
ಜೆಡಿಎಸ್	ಮಂಜುನಾಥ ಬಂಜಾರಪಾಳ್ಯ
ಆಮ್ ಆದ್ಮಿ ಪಾರ್ಟಿ	ಅಜಯ್ ಗೌಡ
ಬಿಎಸ್‌ಪಿ	ಮೊಹಮ್ಮದ್ ಇದ್ರಿಸ್ ಕೆ.ಎಸ್
ಸಮಾಜವಾದಿ ಪಾರ್ಟಿ	ಅಫ್‌ಸರ್ ಖಾನ್
ಕರ್ನಾಟಕ ರಾಷ್ಟ್ರ ಸಮಿತಿ	ದೀಪಕ್ ಶೆಟ್ಟಿ ಆರ್.ವಿ
ಸ್ವಯಂ ಕೃಷಿ ಪಾರ್ಟಿ	ಮಂಜುನಾಥ ಎನ್
ಕರ್ನಾಟಕ ಕಾರ್ಮಿಕರ ಪಕ್ಷ	ಮೊಹಮ್ಮದ್ ಅಬ್ಜಲ್ ಪಾಷ
ಉತ್ತಮ ಪ್ರಜಾಕೀಯ ಪಾರ್ಟಿ	ರಕ್ಷಿತ್ ಆರ್
ರಾಷ್ಟ್ರೀಯ ಜನಹಿತ ಪಾರ್ಟಿ	ಡಾ. ಎಸ್. ರಾಘವೇಂದ್ರ ಮೋಕ್ಷಗುಂಡಂ
ಕನ್ನಡ ಪಕ್ಷ	ಶಿವರಾಮಕೃಷ್ಣ ಬಿ.ಕೆ.
ಪಕ್ಷೇತರ	ರಾಜ್‌ಕಟ್ಟೆ ಮಂಜುನಾಥ್ ಎನ್
173– ಜಯನಗರ (15)	
ಬಿಜೆಪಿ	ಸಿ.ಕೆ. ರಾಮಮೂರ್ತಿ
ಕಾಂಗ್ರೆಸ್	ಸೌಮ್ಯ ರೆಡ್ಡಿ
ಜೆಡಿಎಸ್	ಕಾಳೇಗೌಡ
ಆಮ್ ಆದ್ಮಿ ಪಾರ್ಟಿ	ಮಹಾಲಕ್ಷ್ಮಿ ಸಿ
ಬಿಎಸ್‌ಪಿ	ಆರ್. ಸೆಲ್ವಕುಮಾರ್
ಕರ್ನಾಟಕ ರಾಷ್ಟ್ರ ಸಮಿತಿ	ಬಿ. ಮಣಿಕಂಠ ದ್ರಾವಿಡರ್
ಉತ್ತಮ ಪ್ರಜಾಕೀಯ ಪಾರ್ಟಿ	ಎಂ.ಡಿ. ಸಂತೋಷ್ ಬಿ. ನಾಯಕ್
ಪಕ್ಷೇತರ	ಭಾವೈಕ್ಯತಾ ನಂಜೇಶ್ ಭಾರತೀಯ, ಮುನೀರ್ ಖಾನ್, ಮೌಲಾ, ವಿ. ರವಿಕುಮಾರ್, ಬಿ. ರಾಮಮೂರ್ತಿ, ಸರವಣ ಎಸ್, ಸೌಮ್ಯ ಎ. ರೆಡ್ಡಿ, ಹೇಮಾಗೌಡ.

ಬೆಂಗಳೂರಿನ ಪದ್ಮನಾಭನಗರ ವಿಧಾನಸಭಾ ಕ್ಷೇತ್ರದ ಪುಟ್ಟೇನಹಳ್ಳಿಯಲ್ಲಿ ಸೋಮವಾರ ರೋಡ್ ಶೋ ವೇಳೆ ಮಹಿಳೆಯೊಬ್ಬರು ತನ್ನ ಪುಟ್ಟ ಕಂದಮ್ಮನನ್ನು ಎತ್ತಿಕೊಂಡೇ ಬಿಜೆಪಿ ಅಭ್ಯರ್ಥಿ ಆರ್.ಅಶೋಕ ಪರ ಮತಯಾಚಿಸಿದರು
— ಪ್ರಜಾವಾಣಿ ಚಿತ್ರ/ ರಂಜು ಪಿ.

'20 ರಂದು ಖರೀದಿಸಿ 19ರಂದೇ ಅಪ್ಲೋಡ್ ಹೇಗೆ ಸಾಧ್ಯ?'

ಬೆಂಗಳೂರು: 'ಏಪ್ರಿಲ್ 20ರಂದು ಖರೀದಿಸಿರುವ ಛಾಪಾಕಾಗದದ ದಾಖಲೆಯನ್ನು ಚುನಾವಣಾ ಆಯೋಗ ತನ್ನ ವೆಬ್‌ಸೈಟ್‌ನಲ್ಲಿ ಏಪ್ರಿಲ್ 19 ರಂದೇ ಅಪ್ಲೋಡ್ ಮಾಡಿದೆ. ಇದು ಹೇಗೆ ಸಾಧ್ಯ' ಎಂದು ಕೆಪಿಸಿಸಿ ವಕ್ತಾರ ರಮೇಶ್ ಬಾಬು ಪ್ರಶ್ನಿಸಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಂಶುಲ್ ಜೊತೆ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಸವದತ್ತಿ ಯಲ್ಲಮ್ಮ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಮಪತ್ರ ಸಲ್ಲಿಕೆ ಗಡುವು ಮುಗಿದ ನಂತರ ಆಯೋಗಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಪ್ರಮಾಣ ಪತ್ರದ ಛಾಪಾ ಕಾಗದವನ್ನು 20 ರಂದು ಸಂಜೆ 7.30ಕ್ಕೆ ವಿಕಾಸ್ ಕೋ ಆಪರೇಟಿವ್ ಸೊಸೈಟಿಯಿಂದ ಖರೀದಿಸಲಾಗಿದೆ. ಇ ಸ್ಟಾಂಪಿಂಗ್ ಪ್ರಕಾರ ಇಡೀ ರಾಜ್ಯದಲ್ಲಿ ಅದನ್ನು ಸಂಜೆ 5ಗಂಟೆ ಒಳಗಾಗಿ ನೀಡಬೇಕು ಎಂದು ಕಾನೂನು ಇದೆ. ಇಂತಹ ಪರಿಸ್ಥಿತಿಯಲ್ಲಿ ರಾತ್ರಿ 7.38 ಗಂಟೆಗೆ ಛಾಪಾಕಾಗದ ನೀಡಲಾಗಿದೆ. ಈ ಛಾಪಾಕಾಗದ ಖರೀದಿ ಮಾಡಿರುವುದೇ ಅಕ್ರಮ' ಎಂದರು.

'ಬಿಜೆಪಿ ಅಭ್ಯರ್ಥಿ ನಾಮಪತ್ರ ರಕ್ಷಣೆ ಮಾಡಲು ರಾಜ್ಯ ಚುನಾವಣಾ ಆಯೋಗ ನೀತಿ ನಿಯಮ ಉಲ್ಲಂಘಿಸಿದ್ದು, 20ರಂದು ಸಲ್ಲಿಕೆ ಮಾಡಲಾಗಿರುವ ದಾಖಲೆಯನ್ನು 19ರಂದೇ ಅಪ್ಲೋಡ್ ಮಾಡಲಾಗಿದೆ ಎಂದು ತೋರಿಸಲಾಗಿದೆ. ಇದು ಹೇಗೆ ಸಾಧ್ಯ? ನಡ್ಡಾ, ಅಮಿತ್ ಶಾ, ಮೋದಿ ಅಥವಾ ನಮ್ಮ ಪೇಸಿಎಂ ಬೊಮ್ಮಾಯಿ ಇದರಲ್ಲಿ ಹಸ್ತಕ್ಷೇಪ ಮಾಡಿದ್ದಾರಾ? ಕೇಂದ್ರ ಚುನಾವಣಾ ಆಯೋಗದ ರಾಜ್ಯ ವಿಭಾಗದ ಅಧಿಕಾರಿಗಳು, ಐಎಎಸ್ ಅಧಿಕಾರಿಗಳು ಪ್ರಭಾವ ಬೀರಿದ್ದಾರೆಯೇ ಎನ್ನುವುದನ್ನು ಮುಖ್ಯಚುನಾವಣಾಧಿಕಾರಿ ತಿಳಿಸಬೇಕು' ಎಂದು ಆಗ್ರಹಿಸಿದ್ದಾರೆ.

'ರಾಜ್ಯದ ಆರೂವರೆ ಕೋಟಿ ಜನರ ನಂಬಿಕೆಗೆ ಚುನಾವಣಾ ಆಯೋಗ ದ್ರೋಹ ಬಗೆಯಬಾರದು. ಡಬಲ್ ಎಂಜಿನ್ ಸರ್ಕಾರದ ಕಚೇರಿಗಳಿಂದ ಒತ್ತಡ ಬಂದಿದ್ದರೆ ಅದನ್ನು ಬಹಿರಂಗಪಡಿಸಬೇಕು' ಎಂದೂ ಒತ್ತಾಯಿಸಿದ್ದಾರೆ.

ಯಲಹಂಕ, ರಾಜಾಜಿನಗರ, ಬ್ಯಾಟರಾಯನಪುರದಲ್ಲಿ ಅತಿಹೆಚ್ಚು

28 ಕ್ಷೇತ್ರ: 389 ಅಭ್ಯರ್ಥಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 28 ವಿಧಾನಸಭೆ ಕ್ಷೇತ್ರಗಳ ಚುನಾವಣೆಯ ಅಂತಿಮ ಕಣದಲ್ಲಿ 389 ಅಭ್ಯರ್ಥಿಗಳಿದ್ದು, ಬಿಜೆಪಿ, ಕಾಂಗ್ರೆಸ್ ಹಾಗೂ ಆಮ್ ಆದ್ಮಿ ಪಾರ್ಟಿಯ ಅಭ್ಯರ್ಥಿಗಳು ಎಲ್ಲ ಕ್ಷೇತ್ರಗಳಲ್ಲೂ ಕಣದಲ್ಲಿದ್ದಾರೆ.

ಕೆ.ಆರ್. ಪುರದಲ್ಲಿ ಸಿಪಿಎಂ, ಸಿ.ವಿ. ರಾಮನ್ ನಗರ, ಮಹದೇವಪುರ ಹಾಗೂ ವಿಜಯನಗರದಲ್ಲಿ ಆರ್‌ಪಿಐಗೆ ಜೆಡಿಎಸ್ ಅಧಿಕೃತವಾಗಿ ಬೆಂಬಲ ಘೋಷಿಸಿದೆ. ಇದರಂತೆ 24 ಕ್ಷೇತ್ರಗಳಲ್ಲಿ ಜೆಡಿಎಸ್ ಸ್ಪರ್ಧಿಸಿದೆ. ಆದರೆ, ಕೆ.ಆರ್. ಪುರದಲ್ಲಿ ವೆಂಕಟಾಚಲಪತಿ ಅವರು ಜೆಡಿಎಸ್‌ನಿಂದ ಅಂತಿಮ ಪಟ್ಟಿಯಲ್ಲಿಯೂ ಇದ್ದಾರೆ. ಹೀಗಾಗಿ ಗೊಂದಲ ಮುಂದುವರಿದಿದೆ.

ಗಾಂಧಿನಗರ ವಿಧಾನಸಭೆ ಕ್ಷೇತ್ರದಲ್ಲಿ ಮಾಲೂರಿನ ಬಿಜೆಪಿಯ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಪಕ್ಷೇತರರಾಗಿ ಸ್ಪರ್ಧೆಯಲ್ಲಿ ಉಳಿದಿದ್ದಾರೆ.

ನಾಮಪತ್ರ ಹಿಂಪಡೆಯಲು ಏ.24ರ ಸೋಮವಾರ ಅಂತಿಮ ದಿನವಾಗಿದ್ದು, 56 ಅಭ್ಯರ್ಥಿಗಳು ನಾಮಪತ್ರವನ್ನು ವಾಪಸ್ ಪಡೆದರು. 137 ಅಭ್ಯರ್ಥಿಗಳು ಪಕ್ಷೇತರರಾಗಿ, 115 ಅಭ್ಯರ್ಥಿಗಳು ನೋಂದಾಯಿತ ರಾಜಕೀಯ ಪಕ್ಷಗಳಡಿ ಸ್ಪರ್ಧಿಸಿದ್ದಾರೆ.

ಯಲಹಂಕ ವಿಧಾನಸಭೆ ಕ್ಷೇತ್ರದಲ್ಲಿ ಅತಿಹೆಚ್ಚು ಅಂದರೆ 20 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ರಾಜಾಜಿನಗರ ಮತ್ತು ಬ್ಯಾಟರಾಯನಪುರದಲ್ಲಿ ಕ್ರಮವಾಗಿ 18 ಮತ್ತು 17 ಅಭ್ಯರ್ಥಿಗಳಿದ್ದು, ಇಲ್ಲಿ ಎರಡು ಮತಯಂತ್ರಗಳನ್ನು ಬಳಸಲಾಗುತ್ತದೆ. ಒಂದು ಮತಯಂತ್ರದಲ್ಲಿ 15 ಅಭ್ಯರ್ಥಿಗಳು ಮತ್ತು ನೋಟಾಗೆ ಅವಕಾಶವಿದೆ. ಶಾಂತಿನಗರ ಹಾಗೂ ಸಿ.ವಿ. ರಾಮನ್ ನಗರದಲ್ಲಿ ಅತಿ ಕಡಿಮೆ ಅಂದರೆ ತಲಾ 10 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಕಣದಲ್ಲಿ ಉಳಿದ ಕೆಜಿಎಫ್ ಬಾಬು

ಕಾಂಗ್ರೆಸ್ ಟಿಕೆಟ್ ದೊರೆಯುವ ನಿರೀಕ್ಷೆಯಲ್ಲೇ ನಾಮಪತ್ರ ಸಲ್ಲಿಸಿದ್ದ ಬಿಬಿಎಂಪಿ ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್ ಅವರು ಕೊನೆಯ ಕ್ಷಣದಲ್ಲಿ ನಾಮಪತ್ರ ವಾಪಸ್ ಪಡೆದುಕೊಂಡು, ಪಕ್ಷದ ಅಧಿಕೃತ ಅಭ್ಯರ್ಥಿ ಆರ್. ವಿ.ದೇವರಾಜ್‌ಗೆ ಬೆಂಬಲ ಘೋಷಿಸಿದ್ದಾರೆ.

ಕಾಂಗ್ರೆಸ್‌ಗೆ ರಾಜೀನಾಮೆ ನೀಡಿರುವ ಯೂಸುಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಅವರು ಪಕ್ಷೇತರ ಅಭ್ಯರ್ಥಿಯಾಗಿ ಕಣದಲ್ಲಿ ಉಳಿದಿದ್ದಾರೆ. ಅವರ ಪತ್ನಿ ಶಾಝಿಯಾ ತರನ್ನುಮ್ ನಾಮಪತ್ರ ವಾಪಸ್ ಪಡೆದುಕೊಂಡಿದ್ದಾರೆ. ಬಾಬು ಸಹ ಕಾಂಗ್ರೆಸ್ ಟಿಕೆಟ್ ನಿರೀಕ್ಷೆಯಲ್ಲಿ ನಾಮಪತ್ರ ಸಲ್ಲಿಸಿದ್ದರು. ಆದರೆ, ಟಿಕೆಟ್ ದೊರೆಯದ ಕಾರಣ ವರಿಷ್ಠರ ವಿರುದ್ಧ ಮುನಿಸಿಕೊಂಡಿದ್ದರು. ಈಗ ಪಕ್ಷೇತರ ಅಭ್ಯರ್ಥಿಯಾಗಿ ಚಿಕ್ಕಪೇಟೆ ಅಖಾಡದಲ್ಲಿ ಉಳಿದಿದ್ದಾರೆ. ಬಾಬು ಅವರನ್ನು ಮನವೊಲಿಸುವ ಪ್ರಯತ್ನಗಳು ನಡೆದಿದ್ದವು. ಆದರೆ, ವರಿಷ್ಠರ ಮಾತಿಗೆ ಬಾಬು ಮಣೆ ಹಾಕಿಲ್ಲ ಎನ್ನಲಾಗಿದೆ. ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಗೇ ಸವಾಲೊಡ್ಡಲು ಮುಂದಾಗಿದ್ದಾರೆ.

‘ನಾನು ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಎಂ.ಬಿ.ಪಾಟೀಲ ಅವರು ಮಾತುಕತೆ ನಡೆಸಿದ್ದರು. ಅವರ ಮಾರ್ಗದರ್ಶನದಂತೆ ನಾಮಪತ್ರ ವಾಪಸ್ ಪಡೆದುಕೊಂಡಿದ್ದೇನೆ. ಪಕ್ಷದ ಪರವಾಗಿ ಕೆಲಸ ಮಾಡುತ್ತೇನೆ’ ಎಂದು ಗಂಗಾಂಬಿಕೆ ತಿಳಿಸಿದ್ದಾರೆ.

ಅಂಕಿ-ಅಂಶಗಳು

704 ಸಲ್ಲಿಕೆಯಾದ ನಾಮಪತ್ರಗಳು

389 ಕಣದಲ್ಲಿ ಉಳಿದ ಅಭ್ಯರ್ಥಿಗಳು

56 ನಾಮಪತ್ರ ವಾಪಸ್ ಪಡೆದವರು

351 ಪುರುಷರು

38 ಮಹಿಳೆಯರು

ಪಕ್ಷ	ಒಟ್ಟು ಕ್ಷೇತ್ರ
ಬಿಜೆಪಿ	28
ಕಾಂಗ್ರೆಸ್	28
ಆಮ್ ಆದ್ಮಿ ಪಾರ್ಟಿ	28
ಬಿಎಸ್‌ಪಿ	21
ಜೆಡಿಎಸ್	24
ಜೆಡಿಯು	5
ಎನ್‌ಪಿಪಿ	2
ಸಿಪಿಎಂ	1
ನೋಂದಾಯಿತ ಪಕ್ಷಗಳು	115
ಪಕ್ಷೇತರ	137

ಮತಗಟ್ಟೆ ಸಾಮಗ್ರಿಗಾಗಿ ಟೆಂಡರ್ ‘ಕಪ್ಪುಪಟ್ಟಿ’ಯಲ್ಲಿದ್ದ ಚಿಲುಮೆ ಭಾಗಿ

● ನವೀನ್ ಮಿನೇಜಸ್

ಬೆಂಗಳೂರು: ಮತದಾರರ ಮಾಹಿತಿ ಕಳವು ಮಾಡಿರುವ ಆರೋಪ ಹೊತ್ತಿರುವ ಚಿಲುಮೆ ಶಿಕ್ಷಣ, ಸಂಸ್ಕೃತಿ ಮತ್ತು ಗ್ರಾಮೀಣ ಅಭಿವೃದ್ಧಿ ಟ್ರಸ್ಟ್, ನಗರದ ಮತಗಟ್ಟೆಗಳಿಗೆ ಸಾಮಗ್ರಿ ವಿತರಿಸುವ ಹಲವು ಟೆಂಡರ್‌ನಲ್ಲಿ ಭಾಗವಹಿಸಿದೆ. ಬಿಬಿಎಂಪಿ ಈ ಟ್ರಸ್ಟ್ ಅನ್ನು ಕಳೆದ ವರ್ಷ ಡಿಸೆಂಬರ್‌ನಲ್ಲಿ ಕಪ್ಪುಪಟ್ಟಿಗೆ ಸೇರಿಸಿತ್ತು.

ಹೆಚ್ಚುವರಿ ಜಿಲ್ಲಾ ಚುನಾವಣೆ ಅಧಿಕಾರಿಗಳು ಮತದಾನದ ದಿನದಂದು ಮತಗಟ್ಟೆಗಳಲ್ಲಿ ಸಿದ್ಧತೆ ಮಾಡಿಕೊಳ್ಳುವ ಹಿನ್ನೆಲೆಯಲ್ಲಿ ಟೆಂಡರ್ ಕರೆದಿದ್ದರು. ಕಳೆದ ಲೋಕಸಭೆ ಚುನಾವಣೆಯಲ್ಲಿ ಭಾಗವಹಿಸಿದ್ದ ಇತಿಹಾಸದೊಂದಿಗೆ ಎನ್‌ಜಿಒ ಚಿಲುಮೆ ಕೂಡ ಹಲವು ಟೆಂಡರ್‌ಗಳಲ್ಲೂ ಪಾಲ್ಗೊಂಡಿತ್ತು ಎಂದು ಮೂಲಗಳು ತಿಳಿಸಿವೆ.

ಚಿಲುಮೆ ಹೊಸ ಟೆಂಡರ್‌ನಲ್ಲಿ ಭಾಗವಹಿಸಿದ್ದು, ಅದರ ಬಗ್ಗೆ ಕ್ರಮ ಕೈಗೊಳ್ಳುವಲ್ಲಿ ಕೆಳಹಂತದ ಅಧಿಕಾರಿಗಳಲ್ಲಿ ಗೊಂದಲವಿತ್ತು. ಬಿಬಿಎಂಪಿ ಅಧಿಕಾರಿಗಳನ್ನು ಭೇಟಿ ಮಾಡಿದ್ದ ಚಿಲುಮೆ ಪ್ರತಿನಿಧಿಗಳು, ‘ಬಿಬಿಎಂಪಿ ಡಿಸೆಂಬರ್‌ನಲ್ಲಿ ನೀಡಿದ್ದ ಆದೇಶಕ್ಕೆ ನ್ಯಾಯಾಲಯ ತಡೆ ನೀಡಿದೆ’ ಎಂದು ಮಾಹಿತಿ ನೀಡಿದ್ದಾರೆ.

ಹೈಕೋರ್ಟ್ ಆದೇಶ ಆರು ವಾರಕ್ಕೆ ಮಾತ್ರ ಸೀಮಿತವಾಗಿದ್ದು, ತಾಂತ್ರಿಕ ಮೌಲ್ಯಮಾಪನದೊಂದಿಗೆ ಬಿಬಿಎಂಪಿಯ ಕೆಲವು ಅಧಿಕಾರಿಗಳು ಚಿಲುಮೆ ಟ್ರಸ್ಟ್‌ಗೆ ಟೆಂಡರ್ ಅನ್ನು ತಿರಸ್ಕರಿಸಿದ್ದಾರೆ. ಟ್ರಸ್ಟ್ ಮತ್ತೆ ಮನವಿಯನ್ನು ಸಲ್ಲಿಸಿದ್ದು, ನ್ಯಾಯಾಲಯ ಒಂದೆರಡು ದಿನಗಳಲ್ಲಿ ವಿಚಾರಣೆ ನಡೆಸಲಿದೆ. ಅದಾದ ನಂತರ ಮುಂದಿನ ಕ್ರಮ ಕೈಗೊಳ್ಳುತ್ತೇವೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅವರು ಇತ್ತೀಚೆಗೆ ನೀಡಿದ್ದ ತನಿಖಾ ವರದಿಯಲ್ಲಿ, ಚಿಲುಮೆ ಅಕ್ರಮವಾಗಿ ಮತದಾರರ ಮಾಹಿತಿ ಸಂಗ್ರಹಿಸಿದ್ದು, ಅದನ್ನು ವಿದೇಶದ ಸರ್ವರ್‌ನಲ್ಲಿ ಸಂಗ್ರಹಿಸಿದೆ ಎಂದು ತಿಳಿಸಲಾಗಿತ್ತು.

ಮತಗಟ್ಟೆ ಸಾಮಗ್ರಿಗಳಲ್ಲಿ ಬ್ಯಾರಿಕೇಡ್, ಸಿಸಿ ಟಿವಿ, ಪೀಠೋಪಕರಣ, ಕಂಪ್ಯೂಟರ್‌ಗಳನ್ನು ಬಾಡಿಗೆಗೆ ಪಡೆಯುವುದು, ಆಹಾರ ಸರಬರಾಜು ಇತ್ಯಾದಿ ಸೇರಿರುತ್ತದೆ. ಇದಕ್ಕಾಗಿ, ಬಿಬಿಎಂಪಿ ಹಾಗೂ ಜಿಲ್ಲಾಧಿಕಾರಿ ಕಚೇರಿಯ ಅಧಿಕಾರಿಗಳು 2019ರ ಲೋಕಸಭೆ ಚುನಾವಣೆಯಲ್ಲಿ ₹5 ಕೋಟಿಗೂ ಹೆಚ್ಚು ಹಣ ವ್ಯಯ ಮಾಡಿದ್ದರು. ಇಂತಹ ಕೆಲಸ ಪಡೆಯಲು ಚಿಲುಮೆ ಟೆಂಡರ್ ಸಲ್ಲಿಸಿದೆ ಎಂದು ಮೂಲಗಳು ತಿಳಿಸಿವೆ.

ಬಿಎಸ್‌ಪಿ ಅಭ್ಯರ್ಥಿಯಾಗಿ ಅಖಂಡ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುಲಕೇಶಿನಗರ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿದ್ದ ಅಖಂಡ ಶ್ರೀನಿವಾಸಮೂರ್ತಿ, ಪಕ್ಷದಿಂದ ಟಿಕೆಟ್ ಸಿಗದ ಹಿನ್ನೆಲೆಯಲ್ಲಿ ಬಹುಜನ ಸಮಾಜ ಪಕ್ಷದಿಂದ (ಬಿಎಸ್‌ಪಿ) ಕಣಕ್ಕಿಳಿದಿದ್ದಾರೆ.

ಅಖಂಡ

ಅಖಂಡ ಅವರು ಪಕ್ಷೇತರ ಮತ್ತು ಬಿಎಸ್‌ಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು.

ಬಿಎಸ್‌ಪಿ ರಾಜ್ಯ ಘಟಕದ ಅಧ್ಯಕ್ಷ ಕೃಷ್ಣಮೂರ್ತಿ, ಉಸ್ತುವಾರಿ ಮಾರಸಂದ್ರ ಮುನಿಯಪ್ಪ ನೇತೃತ್ವದಲ್ಲಿ ಅಖಂಡ ಅವರು ತಮ್ಮ ಬೆಂಬಲಿಗರ ಜೊತೆ ಸೋಮವಾರ ಬಿಎಸ್‌ಪಿ ಸೇರಿದರು.

‘ನಾನು ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದೇನೆ. ನನಗೆ ಗೆಲ್ಲುವ ವಿಶ್ವಾಸವಿದೆ’ ಎಂದು ಅಖಂಡ ಶ್ರೀನಿವಾಸಮೂರ್ತಿ ಹೇಳಿದ್ದಾರೆ.

ಧಾರ್ಮಿಕ ಹಕ್ಕುಗಳ ನಿರ್ವಹಣೆಗೆ ಅವಕಾಶ ಕೊಡಿ: ಶೋಭಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಚುನಾವಣಾ ಪ್ರಕ್ರಿಯೆಯಲ್ಲಿ ಧಾರ್ಮಿಕ ಹಕ್ಕುಗಳನ್ನು ನಿರ್ವಹಿಸಲು ಅವಕಾಶ ನೀಡುವಂತೆ ಚುನಾವಣಾ ಆಯೋಗಕ್ಕೆ ಮನವಿ ಮಾಡಿರುವುದಾಗಿ ಬಿಜೆಪಿಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ತಿಳಿಸಿದರು.

ಶೋಭಾ ಕರಂದ್ಲಾಜೆ

ಮುಖ್ಯಚುನಾವಣಾ ಅಧಿಕಾರಿಗೆ ಸೋಮವಾರ ಈ ಸಂಬಂಧ ಮನವಿ ಪತ್ರ ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ಸಂವಿಧಾನದ 25ನೇ ವಿಧಿ ಪ್ರಕಾರ ಯಾವುದೇ ಧಾರ್ಮಿಕ ಭಾವನೆಗೆ ಧಕ್ಕೆ ಬರದಂತೆ ನಡೆದುಕೊಳ್ಳಬೇಕು. ಆದರೆ, ಚುನಾವಣಾ ಆಯೋಗವು ಪ್ರಸಾದ ವಿನಿಯೋಗ ಮಾಡಲು ತಡೆಯೊಡ್ಡಿದೆ ಎಂದು ದೂರಿದರು.

‘ಉತ್ತರ ಕನ್ನಡ, ಕರಾವಳಿ ಸೇರಿ ಎಲ್ಲ ಕಡೆಗಳಲ್ಲಿ ಜಾತ್ರೆ ಆರಂಭವಾಗಿದೆ. ದೈವಾರಾಧನೆ ಮುಂತಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪ್ರಸಾದದ ವಿತರಣೆಯೂ ನಡೆಯುತ್ತದೆ. ಆದ್ದರಿಂದ ಇವುಗಳಿಗೆ ತಡೆ ಆಗದಂತೆ ಚುನಾವಣಾ ಆಯೋಗ ನಡೆದುಕೊಳ್ಳಬೇಕು. ಜಾತ್ರೆಗಳಲ್ಲಿ ಅನ್ನದಾನ ಸಾಮಾನ್ಯ, ದೂರದಿಂದ ಬರುವ ಭಕ್ತರಿಗೆ ಪ್ರಸಾದ ವಿತರಣೆಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದ್ದೇವೆ’ ಎಂದು ಹೇಳಿದರು.

‘ರ‍್ಯಾಲಿ, ರೋಡ್ ಶೋಗಳಿಗೆ ಅನುಮತಿ ಕೊಡುತ್ತಿಲ್ಲ. 24 ಗಂಟೆಯಲ್ಲಿ ಅನುಮತಿ ಕೊಡಬೇಕು. ಆದರೆ, ವಾರಗಟ್ಟಲೆ ಅನುಮತಿ ಕೊಡುತ್ತಿಲ್ಲ. ರಾಷ್ಟ್ರೀಯ ನಾಯಕರ ಕಾರುಗಳಿಗೆ ಸಂಚಾರ ಮಾಡಲು ಅನುಮತಿ ನೀಡುತ್ತಿಲ್ಲ. ಇದಲ್ಲದೇ, ಮಾಧ್ಯಮದವರಿಗೂ ಸಮಸ್ಯೆಯಾಗಿದೆ. ಇದೆಲ್ಲ ಸರಿಪಡಿಸುವಂತೆ ಕೋರಿದ್ದೇವೆ’ ಎಂದರು.



ನಗರದ ವಿಜಯ ಕಾಲೇಜಿನಲ್ಲಿ ಸೋಮವಾರ ನಡೆದ ಜಾಗೃತಿ ಕಾರ್ಯಕ್ರಮದಲ್ಲಿ ಮತದಾನದ ಕುರಿತು ಎನ್‌ಸಿಸಿ ಕೆಡೆಟ್‌ಗಳು ಜಾಗೃತಿ ಮೂಡಿಸಿದರು
– ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಕರ್ತವ್ಯಕ್ಕೆ ಅಡ್ಡಿ: ‘ಕೈ’ ಕಚೇರಿ ಸಿಬ್ಬಂದಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಚುನಾವಣೆ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಕಾಂಗ್ರೆಸ್ ಮುಖ್ಯ ಕಚೇರಿಯ ಸಿಬ್ಬಂದಿ ಶ್ರೀನಿವಾಸಲು ಎಂಬುವವರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಚುನಾವಣಾಧಿಕಾರಿಗಳ ತಂಡದಲ್ಲಿರುವ ಬಸವರಾಜು ಅವರು ದೂರು ನೀಡಿದ್ದಾರೆ. ಶ್ರೀನಿವಾಸಲು ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಅವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಗಳಿಗೆ ಅನುಮತಿ ಪಡೆಯುವ ಹಾಗೂ ಇತರೆ ಕೆಲಸಗಳ ಜವಾಬ್ದಾರಿಯನ್ನು ಶ್ರೀನಿವಾಸಲು ನಿರ್ವಹಿಸುತ್ತಿದ್ದಾರೆ. ಕಾರ್ಯದರ್ಶಿ ಎಂಬುದಾಗಿಯೂ ಹೇಳಿಕೊಳ್ಳುತ್ತಾರೆ.’

‘ಏಪ್ರಿಲ್ 19ರಂದು ಮಧ್ಯಾಹ್ನ ರ‍್ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಕಾಂಗ್ರೆಸ್ ಪಕ್ಷದ ವೀಕ್ಷಕರ ಸಭೆ ನಡೆಯುತ್ತಿತ್ತು. ಮಾಹಿತಿ ತಿಳಿದ ಚುನಾವಣಾಧಿಕಾರಿಗಳ ತಂಡ ಸ್ಥಳಕ್ಕೆ ಹೋಗಿ, ವಿಡಿಯೊ ಚಿತ್ರೀಕರಣ ಮಾಡಿಕೊಳ್ಳಲು ಮುಂದಾಗಿತ್ತು. ಅದೇ ಸಂದರ್ಭದಲ್ಲಿ ಆರೋಪಿ, ಚಿತ್ರೀಕರಣಕ್ಕೆ ಅಡ್ಡಿಪಡಿಸಿದ್ದನೆಂದು ದೂರುದಾರರು ಹೇಳಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನೇಮಕ

ಕೆ.ಆರ್.ಪುರ: ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಮಹದೇವಪುರ ವಿಧಾನಸಭಾ ಕ್ಷೇತ್ರದ ಮುಖಂಡ ನಲ್ಲೂರಹಳ್ಳಿ ಟಿ. ನಾಗೇಶ್ ಅವರನ್ನು ನೇಮಕ ಮಾಡಲಾಗಿದೆ.



ನಲ್ಲೂರಹಳ್ಳಿ ನಾಗೇಶ್

ನಲ್ಲೂರಹಳ್ಳಿ ನಾಗೇಶ್ ಈ ಹಿಂದೆ ಕೆಪಿಸಿಸಿ ಎಸ್‌ಸಿ ಘಟಕದ ರಾಜ್ಯ ಉಪಾಧ್ಯಕ್ಷರಾಗಿದ್ದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಆದೇಶದಂತೆ ಈ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಿಜಯ ಕಾಲೇಜಿನಲ್ಲಿ ಮತದಾನ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಜಾಪ್ರಭುತ್ವದ ಮತದಾನೋತ್ಸವ ದಿನ ಮೇ 10ರಂದು ಎಲ್ಲಾ ಯುವ ಮತದಾರರು ತಪ್ಪದೆ ಮತದಾನ ಮಾಡಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ತುಷಾರ್ ಗಿರಿನಾಥ್ ಮನವಿ ಮಾಡಿದರು.

ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ದಕ್ಷಿಣ ವಲಯದ ಜಯನಗರ 4ನೇ ಬ್ಲಾಕ್‌ನಲ್ಲಿರುವ ವಿಜಯ ಕಾಲೇಜಿನಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಮತದಾನ ಮಾಡದಿದ್ದರೆ ಉತ್ತಮ ಪ್ರಜಾಪ್ರಭುತ್ವ ಕಟ್ಟಲು ಸಾಧ್ಯವಿಲ್ಲ. ನಾವು ನಮ್ಮ ಸುಂದರ ಭವಿಷ್ಯವನ್ನು ರೂಪಿಸಿಕೊಳ್ಳಬೇಕಾದರೆ ಸರಿಯಾದ ಅಭ್ಯರ್ಥಿಗೆ ಮತ ಚಲಾಯಿಸಿ ಗೆಲ್ಲಿಸಬೇಕು’ ಎಂದು ಹೇಳಿದರು.

ದೂರು ದಾಖಲಿಸಿ: ‘ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ನೀವು ವಾಸಿಸುವ ಸ್ಥಳದಲ್ಲಿ ಏನಾದರು ಅಕ್ರಮ ಅಥವಾ ಮಾದರಿ ನೀತಿ ಸಂಹಿತೆ ಉಲ್ಲಂಘನೆ ಕಂಡುಬಂದಲ್ಲಿ ಸಿ–ವಿಜಿಲ್ ತಂತ್ರಾಂಶದಲ್ಲಿ ಚಿತ್ರ ಹಾಗೂ ವಿಡಿಯೊ ಮೂಲಕ ದೂರು ದಾಖಲಿಸಿದರೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಸ್ಥಳಕ್ಕೆ ಭೇಟಿ ನೀಡಿ ಕ್ರಮ ಕೈಗೊಳ್ಳಲಿದ್ದಾರೆ’ ಎಂದು ಹೇಳಿದರು.

ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ಮಾತನಾಡಿ, ‘ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಎಲ್ಲರೂ ಯೋಚಿಸಿ ಉತ್ತಮ ಅಭ್ಯರ್ಥಿಯನ್ನು ಆಯ್ಕೆ ಮಾಡಿದರೆ ಉತ್ತಮ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ. ಅದೆಲ್ಲವೂ ಎಲ್ಲರೂ ಮತ ಚಲಾಯಿಸುವುದರಿಂದ ಮಾತ್ರ ಸಾಧ್ಯ’ ಎಂದರು.

ಸಂಕಲ್ಪ ನಾಟಕ ಪ್ರದರ್ಶನ: ಬಿಎಂಟಿಸಿ ಹಾಗೂ ಕೆಎಸ್‌ಆರ್‌ಟಿಸಿ ಸಿಬ್ಬಂದಿಯ ನಾಟಕ ತಂಡವು ಪ್ರಜಾಪ್ರಭುತ್ವದಲ್ಲಿ ಮತದಾನದ ಪ್ರಾಮುಖ್ಯ ತಿಳಿಸುವ ‘ಮತದಾನ ಸಂಕಲ್ಪ’ ಎಂಬ ನಾಟಕವನ್ನು ಪ್ರದರ್ಶಿಸಿತು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತದಾನದ ಪ್ರತಿಜ್ಞೆ ವಿಧಿ ಸ್ವೀಕರಿಸಿದರು.

‘ಸಂದರ್ಶನ ಸಮಿತಿ’ ರಚನೆ ವಿಚಾರ: ಕಾರ್ಯದರ್ಶಿ ಮತ್ತು ಅಧ್ಯಕ್ಷ, ಸದಸ್ಯರ ನಡುವೆ ತಿಕ್ಕಾಟ

ಎಸಿಎಫ್ ಆಯ್ಕೆ: ಸರ್ಕಾರಕ್ಕೆ ಕೆಪಿಎಸ್‌ಸಿ ಸಡ್ಡು!

• ರಾಜೇಶ್ ರೈ ಚಟ್ಲ

ಬೆಂಗಳೂರು: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ಹುದ್ದೆಗಳಿಗೆ ನೇಮಕಾತಿಗೆ ನಾಲ್ವರ ಸದಸ್ಯರ ಸಂದರ್ಶನ ಸಮಿತಿ ರಚಿಸಬೇಕೆಂಬ ರಾಜ್ಯ ಸರ್ಕಾರದ ನಿರ್ದೇಶನವನ್ನು ಒಪ್ಪಲು ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರು ಮತ್ತು ಸದಸ್ಯರು ನಿರಾಕರಿಸಿದ್ದಾರೆ.

ಆದರೆ, ‘ಸಂದರ್ಶನ ಸಮಿತಿ ರಚಿಸಿ ಮಾನದಂಡಗಳನ್ನು ನಿಗದಿಪಡಿಸಿರುವ ಸರ್ಕಾರದ ಕ್ರಮ ಅಳವಡಿಸಿಕೊಂಡರೆ ಪಾರದರ್ಶಕವಾಗಿ ಸಂದರ್ಶನ ಪ್ರಕ್ರಿಯೆ ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದು’ ಎಂದು ಕೆಪಿಎಸ್‌ಸಿ ಕಾರ್ಯದರ್ಶಿ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ.

ವಿವಿಧ ಹುದ್ದೆಗಳಿಗೆ ಅಭ್ಯರ್ಥಿಗಳ ನೇಮಕಾತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕೆಪಿಎಸ್‌ಸಿ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಹಾಗೂ ಸದಸ್ಯರ ಮಧ್ಯೆ ಕೆಲವು ತಿಂಗಳುಗಳಿಂದ ಮುಸುಕಿನ ಗುದ್ದಾಟ ನಡೆಯುತ್ತಿದ್ದು, ಈ ಭಿನ್ನ ನಿಲುವು ಆಯೋಗದೊಳಗಿನ ತಿಕ್ಕಾಟವನ್ನು ಮತ್ತಷ್ಟು ತೀವ್ರಗೊಳಿಸಿದೆ.

ಸರ್ಕಾರ ತಿಳಿಸಿದಂತೆ ಸಂದರ್ಶನ ಸಮಿತಿ ರಚಿಸಿದರೆ ಪಾರದರ್ಶಕವಾಗಿ, ನ್ಯಾಯಯುತವಾಗಿ, ಮುಕ್ತವಾಗಿ ಸಂದರ್ಶನ ನಡೆಸಿ, ಪ್ರತಿಭಾನ್ವಿತ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದು

ಸುರಳ್ಕರ್ ವಿಕಾಸ್ ಕಿಶೋರ್,

ಕಾರ್ಯದರ್ಶಿ, ಕೆಪಿಎಸ್‌ಸಿ

ಎಸಿಎಫ್ ಹುದ್ದೆಗಳ ನೇಮಕಾತಿಗೆ ಮೌಖಿಕ ಸಂದರ್ಶನ ನಡೆಸಲು ಸಮಿತಿ ರಚಿಸುವ ಪ್ರಸ್ತಾವಕ್ಕೆ ಮುಖ್ಯಮಂತ್ರಿ ಅನುಮೋದನೆ ನೀಡಿದ್ದು, ಈ ಬಗ್ಗೆ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮಾರ್ಚ್ 15ರಂದು ಕೆಪಿಎಸ್‌ಸಿ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಆದರೆ, ಈ ನಿರ್ದೇಶನ ಒಪ್ಪಲು ಅಸಾಧ್ಯ ಎಂದು ಇದೇ 13ರಂದು ನಡೆದ ಸಭೆಯಲ್ಲಿ ಆಯೋಗ ನಿರ್ಣಯಿಸಿದೆ. ನಿರ್ಣಯ ಮತ್ತು ತಮ್ಮ ಅಭಿಪ್ರಾಯವನ್ನು ಪ್ರತ್ಯೇಕ ಪತ್ರಗಳ ಮೂಲಕ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಕೆಪಿಎಸ್‌ಸಿ ಕಾರ್ಯದರ್ಶಿ ಇದೇ 17ರಂದು ತಿಳಿಸಿದ್ದಾರೆ.

ಏನಿದು ಪ್ರಕರಣ?: ಕೆಪಿಎಸ್‌ಸಿ ಒಬ್ಬರು ಸದಸ್ಯ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ಸಲ್ಲಿಸಿದ ಒಬ್ಬ ನಿವೃತ್ತ ಐಎಎಸ್ ಅಥವಾ ಐಪಿಎಸ್ ಅಧಿಕಾರಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹುದ್ದೆಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ಸಲ್ಲಿಸಿದ ಒಬ್ಬ ನಿವೃತ್ತ ಐಎಫ್‌ಎಸ್ ಅಧಿಕಾರಿ, ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಹುದ್ದೆಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ಸಲ್ಲಿಸುತ್ತಿರುವ ಒಬ್ಬ ಸಂಬಂಧಿಸಿದ ವಿಷಯ ತಜ್ಞ ಹೀಗೆ ನಾಲ್ವರು ಎಸಿಎಫ್ ಹುದ್ದೆಗಳಿಗೆ ಆಯ್ಕೆಯ ಸಂದರ್ಶನ ಸಮಿತಿಯಲ್ಲಿ ಇರಬೇಕು ಎಂದು ಕೆಪಿಎಸ್‌ಸಿಗೆ ಅರಣ್ಯ ಇಲಾಖೆ ತಿಳಿಸಿತ್ತು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಕೆಪಿಎಸ್‌ಸಿ, ‘ಈ ರೀತಿಯ ನಿರ್ದೇಶನವು ಸಂವಿಧಾನದ 320ನೇ ವಿಧಿಯಲ್ಲಿ ಆಯೋಗಕ್ಕೆ ನೀಡಿರುವ ಸ್ವಾಯತ್ತತೆಯ ಸ್ಪಷ್ಟ ಉಲ್ಲಂಘನೆ. ಸಂವಿಧಾನದ 320 (3) (ಎ)ಅಡಿ ಆಯ್ಕೆ ವಿಧಾನದ ನಿಯಮಗಳನ್ನು ಬದಲಿಸುವುದಾದರೆ ರಾಜ್ಯ ಸರ್ಕಾರವು ಆಯೋಗದೊಂದಿಗೆ ಸಮಾಲೋಚಿಸಬೇಕೆಂಬ ನಿಬಂಧನೆಯಿದೆ. ಆಯೋಗದ ಅಭಿಪ್ರಾಯ ಪಡೆಯದೆ ಈ ನಿರ್ದೇಶನ ನೀಡಲಾಗಿದೆ. ಎಸಿಎಫ್ ಹುದ್ದೆಗಳಿಗೆ ಪೂರ್ವಭಾವಿ ಮತ್ತು ಮುಖ್ಯ ಪರೀಕ್ಷೆ ಈಗಾಗಲೇ ನಡೆದಿದ್ದು, ಈ ಹಂತದಲ್ಲಿ ಬದಲಾವಣೆ ಅಳವಡಿಸಿಕೊಳ್ಳಲು ಆಯೋಗಕ್ಕೆ ಸಾಧ್ಯವಿರುವುದಿಲ್ಲ’ ಎಂದು ಆಯೋಗದ ನಿರ್ಣಯವನ್ನು ಕಾರ್ಯದರ್ಶಿ ಸರ್ಕಾರಕ್ಕೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ಇದರ ಜತೆಗೆ ತಮ್ಮ ಅಭಿಪ್ರಾಯ ತಿಳಿಸಿರುವ ಕಾರ್ಯದರ್ಶಿ, ‘ಸರ್ಕಾರದ ನಿರ್ದೇಶನದಂತೆ ಸಮಿತಿ ರಚಿಸಿದರೆ ಪಾರದರ್ಶಕ ಮತ್ತು ಮುಕ್ತ ವ್ಯವಸ್ಥೆಯಡಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಬಹುದು. ಆಯೋಗ ನಡೆಸುತ್ತಿರುವ ನೇಮಕಾತಿಗಳ ವ್ಯಕ್ತಿತ್ವದ ಪರೀಕ್ಷೆಗಳ (ಸಂದರ್ಶನ) ಕುರಿತು ಸಾರ್ವಜನಿಕ ವಲಯದಲ್ಲಿ ಅಪನಿಂದನೆ, ಅಸಮಾಧಾನ ವ್ಯಕ್ತವಾಗುತ್ತಿದೆ. ಅದನ್ನು ಹೋಗಲಾಡಿಸಲು ಇಂತಹ ಸುಧಾರಣಾ ಕ್ರಮ ತೆಗೆದುಕೊಳ್ಳಲು ಆಯೋಗವೇ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಬೇಕಿತ್ತು. ಆದರೆ, ಸರ್ಕಾರವೇ ತಿಳಿಸಿರುವುದು ಶ್ಲಾಘನೀಯ. ಅಭ್ಯರ್ಥಿಗಳೂ ಇದಕ್ಕೆ ಸಕಾರಾತ್ಮಕ ಪ್ರತಿಕ್ರಿಯೆ ವ್ಯಕ್ತಪಡಿಸುತ್ತಿದ್ದಾರೆ’ ಎಂದಿದ್ದಾರೆ.

ಎಸಿಎಫ್ 16 ಹುದ್ದೆಗಳಿಗೆ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಅರ್ಹತೆ ಪಡೆದ 80 ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದನೆಗಾಗಿ ಆಯೋಗಕ್ಕೆ ಏಪ್ರಿಲ್ 3ರಂದೇ ಕಾರ್ಯದರ್ಶಿ ಸಲ್ಲಿಸಿದ್ದಾರೆ. ಆದರೆ, ಸಂದರ್ಶನ ಸಮಿತಿ ರಚಿಸುವ ಕುರಿತ ಗೊಂದಲ ಅಂತ್ಯಗೊಳ್ಳುವವರೆಗೆ ಪಟ್ಟಿಗೆ ಅನುಮೋದನೆ ನೀಡದಿರಲು ಆಯೋಗ ನಿರ್ಧರಿಸಿದೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಕೆಪಿಎಸ್‌ಸಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರಿಗೆ ಕರೆ ಮಾಡಿದರೂ, ಅವರು ಸಂಪರ್ಕಕ್ಕೆ ಲಭ್ಯರಾಗಲಿಲ್ಲ.

ಪೊಲೀಸ್ ಇಲಾಖೆಯ ಎಡಿ ಹುದ್ದೆ ಆಯ್ಕೆಗೂ ‘ಸಂದರ್ಶನ ಸಮಿತಿ’

ಅರಣ್ಯ ಇಲಾಖೆ ಸೂಚಿಸಿದ ಮಾದರಿಯಲ್ಲಿಯೇ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಖಾಲಿ ಇರುವ ಗ್ರೂಪ್ ‘ಎ’ ವೃಂದದ ಸಹಾಯಕ ನಿರ್ದೇಶಕರ ಹುದ್ದೆಗಳಿಗೆ ಮೌಖಿಕ ಸಂದರ್ಶನ ನಡೆಸಲು ನಾಲ್ವರು ಸದಸ್ಯರ ಸಂದರ್ಶನ ಸಮಿತಿ ರಚಿಸುವಂತೆ ಒಳಾಡಳಿತ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆಪಿಎಸ್‌ಸಿ ಕಾರ್ಯದರ್ಶಿಗೆ ಏ. 12ರಂದು ಪತ್ರ ಬರೆದಿದ್ದಾರೆ.

‘ಕೆಪಿಎಸ್‌ಸಿಯ ಒಬ್ಬ ಸದಸ್ಯ, ಪ್ರಧಾನ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ನಿರ್ವಹಿಸಿದ ಒಬ್ಬ ನಿವೃತ್ತ ಐಎಎಸ್/ ಐಪಿಎಸ್ ಅಧಿಕಾರಿ, ಎಡಿಜಿಪಿ ಹುದ್ದೆಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ಸಲ್ಲಿಸಿರುವ ಒಬ್ಬ ನಿವೃತ್ತ ಐಪಿಎಸ್ ಅಧಿಕಾರಿ, ವಿಶ್ವವಿದ್ಯಾಲಯ ಪ್ರೊಫೆಸರ್ ಹುದ್ದೆಗಿಂತ ಕಡಿಮೆ ಇಲ್ಲದಂತೆ ಕರ್ತವ್ಯ ನಿರ್ವಹಿಸುತ್ತಿರುವ ಸಂಬಂಧಿಸಿದ ಒಬ್ಬ ವಿಷಯ ತಜ್ಞ ಸಮಿತಿಯಲ್ಲಿರಬೇಕು’ ಎಂದು ಸೂಚಿಸಿ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಬರೆದ ಪತ್ರವನ್ನು ಅವರು ಉಲ್ಲೇಖಿಸಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಬಿಜೆಪಿಯಲ್ಲಿ ಲಿಂಗಾಯತರ ಕಡೆಗಣನೆ ಮಾಡಲಾಗುತ್ತಿದ್ದು, ಇದರಿಂದ 25 ರಿಂ 30 ಕ್ಷೇತ್ರಗಳ ಮೇಲೆ ಪರಿಣಾಮ ಬೀರಲಿದೆ ಎಂದು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವ ಜಗದೀಶ ಶೆಟ್ಟರ್ ಹೇಳಿರುವುದನ್ನು ನಂಬಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಮಾಚಾರು ಗೋಪಾಲ ನಾಯ್ಕ ನಿಧನ

ಉಜಿರೆ (ದಕ್ಷಿಣ ಕನ್ನಡ): ಬೆಳ್ತಂಗಡಿ ತಾಲ್ಲೂಕಿನ ಬೆಲಾಲು ಗ್ರಾಮದ ನಿವಾಸಿ ಜಾನಪದ ವಿದ್ವಾಂಸ, ಪಾಡ್ದನ–ಸಂಧಿಗಳ ಗಾಯಕ ಮತ್ತು ವಿವರಣೆಕಾರ ಮಾಚಾರು ಗೋಪಾಲ ನಾಯ್ಕ (85) ಅಲ್ಪಕಾಲದ ಅನಾರೋಗ್ಯದಿಂದ ಸೋಮವಾರ ಸ್ವಗೃಹದಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಮತ್ತು ನಾಲ್ವರು ಪುತ್ರಿಯರು ಇದ್ದಾರೆ. ತುಳುನಾಡಿನ ಆಚಾರ, ನಂಬಿಕೆ, ಆರಾಧನಾ ಪದ್ಧತಿಗಳ ಆಳವಾದ ಮಾಹಿತಿ ಹೊಂದಿದ್ದರು.

ಕಾವ್ಯ ಕಟ್ಟುವ ಕಲೆ ಗೋಪಾಲ ನಾಯ್ಕ ಅವರಿಗೆ ಸಿದ್ಧಿಸಿತ್ತು. ಸಿರಿ, ಕುಮಾರ, ಸೊನ್ನೆ, ಅಬ್ಬಗ-ದಾರಗ, ಕಾಂತುಪೂಂಜ ಮೊದಲಾದ ಪಾತ್ರಗಳ ಚಿತ್ರಣವನ್ನು ಅವರು ಸಂಧಿಗಳಲ್ಲಿ ಕಟ್ಟಿಕೊಡುತ್ತಿದ್ದರು. ಸುಶ್ರಾವ್ಯವಾಗಿ ಹಾಡುವ ಕಲೆಯೂ ಕರಗತವಾಗಿತ್ತು.

ಉಜಿರೆಯ ನಿಡ್ಗಲ್ ಸಿರಿಗಳ ಜಾತ್ರೆಯಲ್ಲಿ 60 ವರ್ಷ ಸಿರಿ ಮಹಿಳೆಯರ ತಂಡದ ನಾಯಕನಾಗಿದ್ದ ಅವರು ಜಾಗತಿಕ ಜಾನಪದ ಸಮಾವೇಶಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡಿದ್ದಾರೆ. ಅವರು ರಚಿಸಿರುವ 15,683 ಸಾಲುಗಳ ಸಿರಿ ಕಾವ್ಯ ಪ್ರಸಿದ್ಧಿ ಗಳಿಸಿದೆ. 1990ರಲ್ಲಿ ಧರ್ಮಸ್ಥಳಕ್ಕೆ ಬಂದಿದ್ದ ಫಿನ್ಲೆಂಡ್‌ನ ಜಾನಪದ ವಿದ್ವಾಂಸರಾದ ಲೌರಿ ಹಾಂಕೊ ಮತ್ತು ಅನೆಲಿ ಹಾಂಕೊ 8 ವರ್ಷ ಕ್ಷೇತ್ರ ಅಧ್ಯಯನದ ಮೂಲಕ ಗೋಪಾಲ ನಾಯ್ಕರ ಸಂಧಿ-ಪಾಡ್ದನಗಳ ಮೇಲೆ ಬೆಳಕು ಚೆಲ್ಲಿದ್ದರು.

ನೀರಡಿಕೆ... ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಗೊಬ್ಬರ (ಬಿ) ಗ್ರಾಮದಲ್ಲಿ ನೀರಿನ ಸಮಸ್ಯೆ ತೀವ್ರವಾಗಿದ್ದು, ಗ್ರಾಮಸ್ಥರು ತಳ್ಳು ಗಾಡಿಯ ಸಹಾಯದಿಂದ ಪ್ಲಾಸ್ಟಿಕ್ ಕೊಡಗಳಲ್ಲಿ ನೀರು ತುಂಬಿಕೊಂಡರು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ವಿಧವಾ ವೇತನ ದುರ್ಬಳಕೆ ಮಾಡಿದ ಆರೋಪ: 36 ವರ್ಷಗಳ ಹಿಂದಿನ ಪ್ರಕರಣ

ಒಂದು ವರ್ಷದ ಜೈಲು ಶಿಕ್ಷೆ 1 ದಿನಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧವಾ ವೇತನ ದುರ್ಬಳಕೆ ಮಾಡಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಒಂದು ವರ್ಷದ ಜೈಲು ಶಿಕ್ಷೆಗೆ ಗುರಿಯಾಗಿದ್ದ 80 ವರ್ಷದ ವೃದ್ಧರೊಬ್ಬರಿಗೆ ಕರುಣೆ ತೋರಿರುವ ಹೈಕೋರ್ಟ್, ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ಒಂದು ದಿನಕ್ಕೆ ಇಳಿಸಿದೆ.

ಈ ಸಂಬಂಧ ಮೈಸೂರು ಜಿಲ್ಲೆ ಕೆ.ಆರ್. ನಗರದ ನಿವಾಸಿ ಹನುಮಂತರಾವ್ ಎಂಬುವವರು ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ವಿಶ್ವನಾಥ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಇದೇ ವೇಳೆ ವಿಚಾರಣಾ ನ್ಯಾಯಾಲಯವು ಆರೋಪಿಗೆ ವಿಧಿಸಿದ್ದ ತೀರ್ಪನ್ನು ಎತ್ತಿಹಿಡಿದಿರುವ ನ್ಯಾಯಪೀಠ, ‘ಅಪರಾಧ ಕೃತ್ಯ 36 ವರ್ಷಗಳ ಹಿಂದೆಯೇ ನಡೆದಿದೆ. ಅರ್ಜಿದಾರರು ದುರ್ಬಳಕೆ ಮಾಡಿಕೊಂಡಿದ್ದ ಹಣವನ್ನು ಸರ್ಕಾರ 36 ವರ್ಷಗಳ ಹಿಂದೆಯೇ ವಸೂಲಿ ಮಾಡಿಕೊಂಡಿದೆ. ಅಂತೆಯೇ, ಅರ್ಜಿದಾರರಿಗೆ ಈಗ 80 ವರ್ಷವಾಗಿದ್ದು ಅವರು ಯಾವುದೇ ಅಪರಾಧಿಕ ಹಿನ್ನೆಲೆ ಹೊಂದಿಲ್ಲ. ಹಾಗಾಗಿ, ಒಂದು ವರ್ಷದ ಜೈಲು ಶಿಕ್ಷೆಯನ್ನು ಒಂದು ದಿನಕ್ಕೆ (ಕೋರ್ಟ್ ಕಲಾಪ ಆರಂಭವಾಗಿ ಮುಕ್ತಾಯಗೊಳ್ಳುವವರೆಗೆ) ಇಳಿಸಲಾಗುತ್ತಿದೆ. ಆದರೆ, ತಮ್ಮ ವಿರುದ್ಧ ಸಾಬೀತಾಗಿರುವ ಎರಡೂ ಅಪರಾಧಗಳಿಗೆ ತಲಾ ₹ 10 ಸಾವಿರ ದಂಡ ಪಾವತಿಸಬೇಕು. ತಪ್ಪಿದರೆ ಮೂರು ತಿಂಗಳ ಸಾಧಾರಣ ಜೈಲು ಶಿಕ್ಷೆ ಅನುಭವಿಸಬೇಕು’ ಎಂದು ಆದೇಶಿಸಿದೆ.

ಪ್ರಕರಣವೇನು?: ಹನುಮಂತ್ ರಾವ್ 1981ರ ನವೆಂಬರ್ 21ರಿಂದ 1987ರ ಜನವರಿ 5ರ ಅವಧಿಯಲ್ಲಿ ಮಂಡ್ಯದ ಕೆ.ಆರ್. ಪೇಟೆಯಲ್ಲಿ ರಾಜ್ಯ ಖಜಾನೆ ಇಲಾಖೆ ಅಧಿಕಾರಿಯಾಗಿದ್ದರು. ಈ ಅವಧಿಯಲ್ಲಿ ಲೆಕ್ಕ ಪರಿಶೋಧನೆ ವೇಳೆ ಅವರು ವಿಧವಾ ವೇತನ ಮಂಜೂರಾತಿಯಲ್ಲಿ ₹ 54,299 ದುರ್ಬಳಕೆ ಮಾಡಿಕೊಂಡಿದ್ದು ಬಯಲಾಗಿತ್ತು. ಈ ಸಂಬಂಧ ಅವರಿಗೆ ನೋಟಿಸ್ ಜಾರಿಗೊಳಿಸಿದ್ದ ಸರ್ಕಾರ, ದುರ್ಬಳಕೆ ಮಾಡಿಕೊಂಡ ಹಣವನ್ನು 1987ರ ಜನವರಿ 31ರ ಅಂತ್ಯದೊಳಗೆ ಹಿಂದಿರುಗಿಸುವಂತೆ ಸೂಚಿಸಿತ್ತು. ನಂತರ ಈ ಮೊತ್ತವನ್ನು ಅವರ ವೇತನದಿಂದಲೇ ಪಡೆದಿತ್ತು.

ಏತನ್ಮಧ್ಯೆ, ಅಂದಿನ ಮಂಡ್ಯ ಜಿಲ್ಲಾ ಖಜಾನೆ ಅಧಿಕಾರಿ ಸಿ.ಎಸ್. ಮುತ್ತಣ್ಣ, ಸರ್ಕಾರಿ ಆಸ್ತಿಗೆ ಸಂಬಂಧಿಸಿದಂತೆ ನಂಬಿಕೆ ದ್ರೋಹ (ಭಾರತೀಯ ದಂಡ ಸಂಹಿತೆ ಕಲಂ 409) ಮತ್ತು ಸುಳ್ಳು ಲೆಕ್ಕ ಬರೆದ (ಐಪಿಸಿ ಕಲಂ 477ಎ) ಆರೋಪದಡಿ ಹನುಮಂತರಾವ್ ವಿರುದ್ಧ ಕೆ.ಆರ್.ಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದರನ್ವಯ ಪ್ರಕರಣ ಕೋರ್ಟ್ ಮೆಟ್ಟಿಲೇರಿತ್ತು. ವಿಚಾರಣೆ ನಡೆಸಿದ್ದ ಕೆ.ಆರ್. ಪೇಟೆ ಜೆಎಂಎಫ್‌ಸಿ ನ್ಯಾಯಾಲಯ, ಎರಡೂ ಅಪರಾಧಗಳಿಗೆ ತಲಾ ಒಂದು ವರ್ಷ ಜೈಲು ಶಿಕ್ಷೆ ಮತ್ತು ₹ 3 ಸಾವಿರ ದಂಡ ವಿಧಿಸಿ 2009ರ ಏಪ್ರಿಲ್ 8ರಂದು ಆದೇಶಿಸಿತ್ತು. ಈ ಆದೇಶವನ್ನು ಮಂಡ್ಯದ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಎತ್ತಿ ಹಿಡಿದಿತ್ತು. ಹನುಮಂತ್ ರಾವ್ ಶಿಕ್ಷೆಯ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು.

ನಟ ಚೇತನ್ ಅಹಿಂಸಾ ವಿರುದ್ಧದ ಕ್ರಮಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ನಟ ಚೇತನ್ ಎ. ಕುಮಾರ್ ಅಲಿಯಾಸ್ ಚೇತನ್ ಅಹಿಂಸಾ ಅವರ ಸಾಗರೋತ್ತರ ಭಾರತೀಯ ನಾಗರಿಕ (ಒಸಿಐ) ಕಾರ್ಡ್ ಅನ್ನು ರದ್ದುಪಡಿಸಿರುವ ಕೇಂದ್ರ ಸರ್ಕಾರದ ಕ್ರಮಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದ್ದು, ಜೂನ್ 2ರವರೆಗೆ ಯಾವುದೇ ಕ್ರಮ ಕೈಗೊಳ್ಳದಂತೆ ಆದೇಶಿಸಿದೆ.

ಈ ಸಂಬಂಧ ಚೇತನ್ ಎ. ಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಕೇಂದ್ರ ಸರ್ಕಾರದ ಪರ ಹಾಜರಿದ್ದ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಹಾಗೂ ರಾಜ್ಯದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಂ.ಅರುಣ್ ಶ್ಯಾಮ್ ವಾದ ಮಂಡಿಸಿ, ‘ಅರ್ಜಿದಾರರು ಅನೇಕ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಆರೋಪಗಳಿವೆ ಮತ್ತು ಪದೇ ಪದೇ ಕಾನೂನು ನಿಂದನೆಯಾಗುವಂತಹ ಹೇಳಿಕೆ ನೀಡುವುದು ಹಾಗೂ ಸಮುದಾಯಗಳ ಮಧ್ಯೆ ವಿದ್ವೇಷದ ನುಡಿಗಳನ್ನು ಬಿತ್ತುವ ಕೆಲಸ ಮಾಡುತ್ತಿರುವ ಕಾರಣಕ್ಕಾಗಿಯೇ ಕೇಂದ್ರ ಸರ್ಕಾರ ಈ ಕ್ರಮ ಕೈಗೊಂಡಿದೆ. ಹಾಗಾಗಿ ಅರ್ಜಿದಾರರಿಗೆ ರಕ್ಷಣೆ ನೀಡಬಾರದು’ ಎಂದು ಪ್ರತಿಪಾದಿಸಿದರು.

ಆದರೆ, ಅರ್ಜಿದಾರರ ಪರ ವಕೀಲರ ಮನವಿಯನ್ನು ಮನ್ನಿಸಿರುವ ನ್ಯಾಯಪೀಠ, ‘ಅರ್ಜಿದಾರರು ನ್ಯಾಯಾಂಗ ನಿಂದನೆಯಾಗುವಂತಹ ಮತ್ತು ವಿಚಾರಣೆಗೆ ಬಾಕಿ ಇರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ತಮ್ಮ ಟ್ವಿಟರ್ ಖಾತೆಯಲ್ಲಿ ಯಾವುದೇ ಟ್ವೀಟ್ ಮಾಡುವಂತಿಲ್ಲ’ ಎಂದು ನಿರ್ಬಂಧ ವಿಧಿಸಿ ವಿಚಾರಣೆಯನ್ನು ಜೂನ್ 2ಕ್ಕೆ ಮುಂದೂಡಿದೆ.

ಪ್ರಕರಣದಲ್ಲಿ ಕೇಂದ್ರ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿ, ವಲಸೆ ವಿಭಾಗದ ಉಪ ನಿರ್ದೇಶಕರು, ಬೆಂಗಳೂರಿನ ವಿದೇಶಿ ನೋಂದಣಿ ಪ್ರಾದೇಶಿಕ ಕಚೇರಿ (ಎಫ್‌ಆರ್‌ಆರ್‌ಒ) ಮತ್ತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಪ್ರಕರಣವೇನು?: ಭಾರತ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿದ ಆರೋಪಕ್ಕೆ ಸಂಬಂಧಿಸಿದಂತೆ ಚೇತನ್ ಎ.ಕುಮಾರ್ ವಿರುದ್ಧ ಕ್ರಮ ಕೈಗೊಂಡಿದ್ದ ಕೇಂದ್ರ ಸರ್ಕಾರ, ಅವರ ಒಸಿಐ ಕಾರ್ಡ್ ಅನ್ನು 2023ರ ಮಾರ್ಚ್ 28ರಂದು ರದ್ದುಪಡಿಸಿತ್ತು. ಇದರಿಂದ ಗಡಿಪಾರು ಭೀತಿಗೆ ಒಳಗಾಗಿದ್ದ ಚೇತನ್ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ.

‘ಕೇಂದ್ರ ಸರ್ಕಾರ ಕೈಗೊಂಡಿರುವ ಈ ಕ್ರಮ ಸಂವಿಧಾನದ 14 ಮತ್ತು 21ನೇ ವಿಧಿಗಳಿಗೆ ವಿರುದ್ಧವಾಗಿದೆ. ಆದ್ದರಿಂದ, ಸರ್ಕಾರ ನಾಗರಿಕ ಕಾಯ್ದೆ–1955ರ ಕಲಂ 7 ಡಿ (ಬಿ) ಮತ್ತು (ಇ) ಅನುಸಾರ ನನ್ನ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗದಂತೆ ನಿರ್ದೇಶಿಸಬೇಕು’ ಎಂದು ಕೋರಿದ್ದರು.

ಲೋಕಾಯುಕ್ತ ದಾಳಿ: ಮನೆ ಮುಂದೆ ಬಿದ್ದು ಹೊರಳಾಡಿದ ಇ.ಒ!

ಪ್ರಜಾವಾಣಿ ವಾರ್ತೆ

ಕೋಲಾರ: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಮೇಲೆ ಲೋಕಾಯುಕ್ತ ಪೊಲೀಸರು ಸೋಮವಾರ ಬಂಗಾರಪೇಟೆಯ ತಮ್ಮ ನಿವಾಸದಲ್ಲಿ ಶೋಧಿಸುತ್ತಿದ್ದಾಗ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ (ಇ.ಒ) ಎನ್. ವೆಂಕಟೇಶಪ್ಪ ಮನೆಯ ಮುಂದಿನ ರಸ್ತೆಯಲ್ಲಿ ಬಿದ್ದು ಹೊರಳಾಡಿದರು.

‘ಅಯ್ಯಯ್ಯೋ ಅಯ್ಯಯ್ಯೋ’ ಎಂದು ಕೂಗುತ್ತಾ ರಾದ್ಧಾಂತ ಮಾಡಿದರು. ಇದರಿಂದ ಲೋಕಾಯುಕ್ತ ಪೊಲೀಸರು, ಕುಟುಂಬದ ಸದಸ್ಯರು, ಅಕ್ಕಪಕ್ಕದವರು, ದಾರಿಯಲ್ಲಿ ಹೋಗುವವರು ಒಮ್ಮೆಲೇ ಕಕ್ಕಾಬಿಕ್ಕಿಯಾದರು.

ದಾಳಿ ವೇಳೆ ವೆಂಕಟೇಶಪ್ಪ ನಿವಾಸದಲ್ಲಿ ಇರಲಿಲ್ಲ. ಎಂಟು ವರ್ಷಗಳಿಂದ ಬಂಗಾರಪೇಟೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಆಗಿ ಕೆಲಸ ಮಾಡುತ್ತಿದ್ದ ಅವರು ಮೂರು ದಿನಗಳ ಹಿಂದೆಯಷ್ಟೇ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಗೆ ವರ್ಗಾವಣೆಗೊಂಡಿದ್ದರು.

ಶೋಧ ನಡೆಸುತ್ತಿರುವ ಸುದ್ದಿ ಮನೆಯವರಿಂದ ಗೊತ್ತಾಗುತ್ತಿದ್ದಂತೆ ಬಾಗೇಪಲ್ಲಿಯಿಂದ ಕೆಲಸ ಬಿಟ್ಟು ಧಾವಿಸಿ ಬಂದರು. ಕೈಯಲ್ಲಿ ಬ್ಯಾಗ್ ಹಿಡಿದು ನಡೆದುಕೊಂಡು ಬಂದ ಅವರು ಮನೆ ಹತ್ತಿರ ಬರುತ್ತಿದ್ದಂತೆ ಓಡಿ ಹೋಗಿ ಗೇಟ್ ಎದುರು ರಸ್ತೆಯಲ್ಲಿ ಮಲಗಿ ಹೊರಳಾಡಿದರು.

ಎನ್‌.ವೆಂಕಟೇಶಪ್ಪ ತಮ್ಮ ಮನೆ ಎದುರು ಉರುಳಾಡಿದರು

ವೆಂಕಟೇಶಪ್ಪ ಅವರಿಗೆ ಕುಟುಂಬ ಸದಸ್ಯರು ನೀರು ಕುಡಿಸಿ ಎಷ್ಟೇ ಸಮಾಧಾನಪಡಿಸಲು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಲೋಕಾಯುಕ್ತ ಪೊಲೀಸರೂ ಕೈಜೋಡಿಸಿ ಮೇಲೇಳಿಸಲು ಪ್ರಯತ್ನಿಸಿದರು. ‘ಅಯ್ಯಯ್ಯೋ’ ಎಂದು ಗೋಳಾಡುತ್ತಲೇ ಇದ್ದರು.

ಒತ್ತಡಕ್ಕೆ ಒಳಗಾಗಿದ್ದ ಅವರನ್ನು ಪೊಲೀಸರ ಸೂಚನೆ ಮೇರೆಗೆ ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ದಾಖಲಿಸಲಾಯಿತು. ಅವರು ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ ಎನ್ನಲಾಗಿದೆ.

ವೆಂಕಟೇಶಪ್ಪ ಅವರಿಗೆ ಸೇರಿದ ಬಂಗಾರಪೇಟೆಯ ನಾಲ್ಕು ಕಡೆ, ಮುಳಬಾಗಿಲು ತಾಲ್ಲೂಕು ತಿಪ್ಪದೊಡ್ಡಿ ಗ್ರಾಮದಲ್ಲಿ ಒಂದು ಕಡೆ ಲೋಕಾಯುಕ್ತ ಜಿಲ್ಲಾ ಎಸ್.ಪಿ ಬಿ.ಕೆ.ಉಮೇಶ್ ನೇತೃತ್ವದ ತಂಡ ಶೋಧಿಸಿತು.

‘ಬಂಗಾರಪೇಟೆಯಲ್ಲಿನ ಎಸ್.ಎನ್.ಸಿಟಿಯಲ್ಲಿಯ ಮನೆ, ಪಟ್ಟಣದಲ್ಲಿ ವಾಸದ ಮನೆ, ಹಾರ್ಡ್‌ವೇರ್ ಶಾಪ್ ಸೇರಿದಂತೆ ನಾಲ್ಕು ಕಡೆ ದಾಳಿ ನಡೆಸಿ ಶೋಧ ನಡೆಸಿದೆವು. ಮುಳಬಾಗಿಲು ತಿಪ್ಪದೊಡ್ಡಿಯಲ್ಲಿರುವ ಕೋಳಿ ಫಾರಂ ಹಾಗೂ ಮನೆ ಇದ್ದು ಅಲ್ಲೂ ಪರಿಶೀಲಿಸಿದೆವು’ ಎಂದು ಲೋಕಾಯುಕ್ತ ಎಸ್.ಪಿ ‘ಪ್ರಜಾವಾಣಿ’ಗೆ ತಿಳಿಸಿದರು.

ಶೋಧದಲ್ಲಿ ಏನೇನು ಸಿಕ್ಕಿತು?: ವೆಂಕಟೇಶಪ್ಪ ಅವರ ಬಳಿ ವಿವಿಧೆಡೆ ಮೂರು ಮನೆ, ಒಂದು ವಾಣಿಜ್ಯ ಕಟ್ಟಡವಿದೆ. 14 ಎಕರೆ ಕೃಷಿ ಜಮೀನು, ನಾಲ್ಕು ಕೋಳಿ ಶೆಡ್ ಇರುವುದು ಪತ್ತೆಯಾಗಿದೆ. ಇದಲ್ಲದೇ, ಎರಡು ಕಾರು, ಮೂರು ಬೈಕ್, ಒಂದು ಟ್ರ್ಯಾಕ್ಟರ್ ಇರುವುದು ಗೊತ್ತಾಗಿದೆ.

ದಾಳಿ ವೇಳೆ ಮನೆಯಲ್ಲಿ 500 ಗ್ರಾಂ ಚಿನ್ನ, 3.5 ಕೆ.ಜಿ.ಬೆಳ್ಳಿ ಸಾಮಗ್ರಿ ಹಾಗೂ ₹ 2.3 ಲಕ್ಷ ನಗದು ಸಿಕ್ಕಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ತಿಳಿಸಿದ್ದಾರೆ.

‘ನೀತಿ ಸಂಹಿತೆ ಮುಗಿದ ನಂತರ ತುಟ್ಟಿ ಭತ್ಯೆ ಆದೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಮುಗಿದ ನಂತರ ಬಾಕಿ ತುಟ್ಟಿ ಭತ್ಯೆ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಕೇಂದ್ರ ಚುನಾವಣಾ ಆಯೋಗವು ರಾಜ್ಯ ಸರ್ಕಾರಕ್ಕೆ ಸೂಚಿಸಿದೆ’ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ತಿಳಿಸಿದ್ದಾರೆ.

‘ಕೇಂದ್ರ ಸರ್ಕಾರದ ಆದೇಶದಂತೆ ರಾಜ್ಯ ಸರ್ಕಾರಿ ನೌಕರರಿಗೂ ಶೇ 4ರಷ್ಟು ತುಟ್ಟಿಭತ್ಯೆ ನೀಡುವಂತೆ ಏಪ್ರಿಲ್ 3ರಂದು ಸರ್ಕಾರಕ್ಕೆ ಸಂಘದಿಂದ ಪತ್ರ ಬರೆಯಲಾಗಿದೆ. ನೀತಿ ಸಂಹಿತೆ ಜಾರಿಯಲ್ಲಿ ಇರುವುದರಿಂದ ತುಟ್ಟಿ ಭತ್ಯೆ ಪ್ರಸ್ತಾವವನ್ನು ಸರ್ಕಾರದಿಂದ ರಾಜ್ಯ ಚುನಾವಣಾ ಆಯೋಗದ ಮೂಲಕ ಕೇಂದ್ರ ಚುನಾವಣಾ ಆಯೋಗಕ್ಕೆ ಕಳುಹಿಸಲಾಗಿತ್ತು’ ಎಂದಿದ್ದಾರೆ.

‘ನೀತಿ ಸಂಹಿತೆ ಅಂತ್ಯಗೊಂಡ ಬಳಿಕ 2023ರ ಜ. 1ರಿಂದ ಜಾರಿಗೆ ಬರುವಂತೆ ಆರ್ಥಿಕ ಇಲಾಖೆ ಆದೇಶ ಹೊರಡಿಸಲಿದೆ. ಏ. 1ರಿಂದ ಶೇ 17ರಷ್ಟು ಮಧ್ಯಂತರ ಪರಿಹಾರದ ಮೊತ್ತವನ್ನು ಏಪ್ರಿಲ್ 2023ರ ವೇತನದಲ್ಲಿ ಸೆಳೆಯಲು ಎಚ್‌ಆರ್‌ಎಂಎಸ್ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಏಪ್ರಿಲ್ ತಿಂಗಳ ವೇತನದಲ್ಲಿ ಸಿಗಲಿದೆ’ ಎಂದೂ ಅವರು ವಿವರಿಸಿದ್ದಾರೆ.

ರಾಜ್ಯದಲ್ಲಿ ಮೂರು ದಿನ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಉತ್ತರ ಹಾಗೂ ದಕ್ಷಿಣ ಒಳನಾಡಿನ ಅಲ್ಲಲ್ಲಿ ಮಂಗಳವಾರದಿಂದ ಮೂರು ದಿನಗಳ ಕಾಲ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುನ್ಸೂಚನೆ ನೀಡಿದೆ.

ಉತ್ತರ ಒಳನಾಡಿನ ಬೀದರ್, ಬೆಳಗಾವಿ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಕಲಬುರಗಿ, ಯಾದಗಿರಿ, ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ತುಮಕೂರು, ಶಿವಮೊಗ್ಗ, ರಾಮನಗರ ಜಿಲ್ಲೆಯಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ.

ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಉಷ್ಣಾಂಶವು ಸಾಮಾನ್ಯಕ್ಕಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಂಭವವಿದೆ. ರಾಯಚೂರು ಜಿಲ್ಲೆಯಲ್ಲಿ ಸೋಮವಾರ ಗರಿಷ್ಠ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು ಸಂಜೆ ಅಥವಾ ರಾತ್ರಿ ವೇಳೆ ಮಳೆಯಾಗಲಿದೆ ಎಂದು ಸೂಚನೆ ನೀಡಿದೆ.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಬಂಡೀಪುರದಲ್ಲಿ 4 ಸೆಂ.ಮೀ ಮಳೆಯಾಗಿದೆ.

ಹೊಗೆಸೊಪ್ಪು ಬೆಳೆಗಾರರಲ್ಲಿ ಹರ್ಷ

ಕೊಣನೂರು (ಹಾಸನ): ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳ ವ್ಯಾಪ್ತಿಯಲ್ಲಿ ಸೋಮವಾರ ಹದ ಮಳೆ ಸುರಿಯಿತು. ಸಂಜೆ 5 ಗಂಟೆಗೆ ಪ್ರಾರಂಭವಾದ ಮಳೆ, ಸುಮಾರು 30 ನಿಮಿಷಕ್ಕೂ ಹೆಚ್ಚು ಸಮಯ ಸುರಿಯಿತು.

ವರ್ಷದ ಮೊದಲ ಮಳೆಯು, ಹೊಗೆಸೊಪ್ಪು ಸಸಿಗಳನ್ನು ನಾಟಿ ಮಾಡಲು ಕಾಯುತ್ತಿದ್ದ ಬೆಳೆಗಾರರಲ್ಲಿ ಹರ್ಷ ಮೂಡಿಸಿದೆ. ‘ಮುಂಗಾರು ಹಂಗಾಮಿಗೆ ಹೊಲಗಳನ್ನು ಸಿದ್ಧಪಡಿಸಿಕೊಳ್ಳಲು ಅವಕಾಶ ಸಿಕ್ಕಂತಾಗಿದೆ’ ಎಂದು ರೈತರು ತಿಳಿಸಿದ್ದಾರೆ.

ಎಂಟು ಅಧಿಕಾರಿಗಳ ಮನೆ ಮೇಲೆ ಲೋಕಾಯುಕ್ತ ದಾಳಿ

ಒಂದನೇ ಪುಟದಿಂದ...

ಮನೆ, ಶಿಡಿಗಿನಮೊಳದಲ್ಲಿ ಫಾರ್ಮ್ ಹೌಸ್, 6 ಎಕರೆ ತೋಟ, ₹ 23 ಲಕ್ಷ ನಗದು, 1 ಕೆ.ಜಿ. ಚಿನ್ನ ಸೇರಿದಂತೆ ಹಲವು ಆಸ್ತಿಗಳು ಪತ್ತೆಯಾಗಿವೆ ಎಂದು ಮೂಲಗಳು ತಿಳಿಸಿವೆ.

ತಹಶೀಲ್ದಾರ್ ಎನ್. ನಾಗರಾಜ್ ತಂಗಿದ್ದ ಹೊಳಲ್ಕೆರೆಯ ಹೋಟೆಲ್ ಕೊಠಡಿ, ದಾವಣಗೆರೆ ಜಿಲ್ಲೆಯ ಚನ್ನಗಿರಿ ಮತ್ತು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿರುವ ಅವರ ಮನೆಗಳಲ್ಲಿ ಲೋಕಾಯುಕ್ತ ಪೊಲೀಸರು ಶೋಧ ನಡೆಸಿದ್ದಾರೆ. ಹನುಮಂತರಾಯಪ್ಪ ಚಿತ್ರದುರ್ಗ ಜಿಲ್ಲೆಯ ಬೋಚಾಪುರದಲ್ಲಿ ಹೊಂದಿರುವ ಫಾರ್ಮ್ ಹೌಸ್ ಮೇಲೂ ದಾಳಿ ನಡೆಸಲಾಗಿದೆ.

ಸುರೇಶ್ ಮೇದಾ ಬಳಿ ಮನೆಗಳು ಸೇರಿ ಹಲವು ಆಸ್ತಿಗಳು ಪತ್ತೆಯಾಗಿವೆ. ವಿಜಯ ಕುಮಾರಸ್ವಾಮಿ ಮನೆ, ಗ್ಯಾರೇಜ್ ಮತ್ತಿತರ ಆಸ್ತಿ ಹೊಂದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

ಬಿಬಿಎಂಪಿ ಅಧಿಕಾರಿ ಬಳಿ ₹ 1.47 ಕೋಟಿ ನಗದು

ಬಿಬಿಎಂಪಿ ನಗರ ಯೋಜನಾ ವಿಭಾಗದ ಸಹಾಯಕ ನಿರ್ದೇಶಕ ಕೆ.ಎಲ್. ಗಂಗಾಧರಯ್ಯ ಅವರಿಗೆ ಸಂಬಂಧಿಸಿದ ಮೂರು ಸ್ಥಳಗಳಲ್ಲಿ ಒಟ್ಟು ₹ 1.47 ಕೋಟಿ ನಗದನ್ನು ಲೋಕಾಯುಕ್ತ ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಒಟ್ಟು ಏಳು ಸ್ಥಳಗಳಲ್ಲಿ ಶೋಧ ನಡೆದಿದ್ದು, ಯಲಹಂಕ, ಜೆ.ಸಿ.ನಗರ, ನಾಗವಾರ ಮತ್ತು ಹೆಬ್ಬಾಳದಲ್ಲಿ 14 ಫ್ಲ್ಯಾಟ್, ನೆಲಮಂಗಲದಲ್ಲಿ ₹ 1.5 ಕೋಟಿ ಮೌಲ್ಯದ 5 ಎಕರೆ ಜಮೀನು, ಮಲ್ಲೇಶ್ವರದಲ್ಲಿ ₹ 3.5 ಕೋಟಿ ಮೌಲ್ಯದ ನಿವೇಶನ ಹೊಂದಿರುವುದು ಪತ್ತೆಯಾಗಿದೆ.

1.43 ಕೆ.ಜಿ. ಚಿನ್ನ, 8.7 ಕೆ.ಜಿ. ಬೆಳ್ಳಿ, ವಜ್ರದ ಆಭರಣಗಳು, 10,298 ಅಮೆರಿಕನ್ ಡಾಲರ್, 1,180 ಅರಬ್ ಸಂಯುಕ್ತ ಸಂಸ್ಥಾನದ ದಿರ್‌ಹಂ ಗಂಗಾಧರಯ್ಯ ಮನೆಯಲ್ಲಿ ಸಿಕ್ಕಿವೆ. 2 ಬ್ಯಾಂಕ್ ಲಾಕರ್‌ಗಳ ಕೀ ದೊರಕಿದ್ದು, ಮಂಗಳವಾರ ಪರಿಶೀಲನೆ ನಡೆಸಲಾಗುವುದು ಎಂದು ಮೂಲಗಳು ತಿಳಿಸಿವೆ.

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಬಿಜೆಪಿ ಸೇರಿದ್ದ ನಿವೃತ್ತರ ಬಳಿ ₹4.23 ಕೋಟಿ ಆಸ್ತಿ

ಮೂರು ತಿಂಗಳ ಹಿಂದೆ ನಿವೃತ್ತರಾಗಿದ್ದ ಐ.ಎಂ. ನಾಗರಾಜ, ಇತ್ತೀಚೆಗೆ ಬಿಜೆಪಿ ಸೇರಿದ್ದರು. ಶಿಕಾರಿಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಿ.ವೈ. ವಿಜಯೇಂದ್ರ ಪರವಾಗಿ ಚುನಾವಣಾ ಪ್ರಚಾರದಲ್ಲೂ ನಿರತರಾಗಿದ್ದರು.

ನಾಗರಾಜ್ ಬಳಿ ಶಿವಮೊಗ್ಗದಲ್ಲಿ ಮನೆ, ವಾಣಿಜ್ಯ ಕಟ್ಟಡ, 10 ಎಕರೆ ಅಡಿಕೆ ತೋಟ, ಎರಡು ಸರ್ವೀಸ್ ಸ್ಟೇಷನ್ ಸೇರಿದಂತೆ ₹ 4.23 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ. ಅವರ ಮನೆಯಲ್ಲಿ 8 ಇಂಚು ಉದ್ದದ ಆನೆ ದಂತವೊಂದನ್ನು ತನಿಖಾ ತಂಡ ವಶಕ್ಕೆ ಪಡೆದಿದ್ದು, ಪರೀಕ್ಷೆಗಾಗಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂಬ ಮಾಹಿತಿ ಲಭಿಸಿದೆ.

ಲೋಕಾಯುಕ್ತ ದಾಳಿ ವೇಳೆ ದಾಖಲೆ ಪತ್ತೆ

ನಿವೃತ್ತ ಡಿಸಿಎಫ್ ₹ 4.23 ಕೋಟಿ ಒಡೆಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ನಿವೃತ್ತ ಉಪ ಅರಣ್ಯ ಸಂರಕ್ಷಣಾಧಿಕಾರಿ ಐ.ಎಂ. ನಾಗರಾಜ ಅವರು ₹4.23 ಕೋಟಿ ಮೌಲ್ಯದ ಸ್ಥಿರ ಹಾಗೂ ಚರಾಸ್ತಿ ಹೊಂದಿರುವುದು ಲೋಕಾಯುಕ್ತ ಪೊಲೀಸರು ಸೋಮವಾರ ದಾಳಿ ನಡೆಸಿದ ವೇಳೆ ಪತ್ತೆಯಾಗಿದೆ.

ಶಿವಮೊಗ್ಗ ನಗರದ ಗೋಪಾಳ ಬಡಾವಣೆಯ ಮನೆ, ಹೊನ್ನಾಳಿ ಪಟ್ಟಣದಲ್ಲಿರುವ ಮನೆ ಹಾಗೂ ಶಿವಮೊಗ್ಗ ತಾಲ್ಲೂಕಿನ ಅನುಪಿನಕಟ್ಟೆ ಗ್ರಾಮದ ಫಾರಂ ಹೌಸ್‌ಗಳಲ್ಲಿ ಪೊಲೀಸರು ಶೋಧ ಕಾರ್ಯ ನಡೆಸಿದರು.

₹16.08 ಲಕ್ಷ ಮೌಲ್ಯದ ಬಂಗಾರ ಮತ್ತು ಬೆಳ್ಳಿಯ ಆಭರಣಗಳು, ₹ 70 ಲಕ್ಷ ಬೆಲೆಬಾಳುವ ಎರಡು ಟ್ಯಾಂಕರ್ ಲಾರಿಗಳು, ₹ 16 ಲಕ್ಷದ ಇನ್ನೊವಾ ಕಾರು, ₹6 ಲಕ್ಷದ ಮಾರುತಿ ಸುಜುಕಿ ಕಾರು, ₹80,000 ಬೆಲೆ ಬಾಳುವ ಯಮಹಾ ರೇಯ್ ಮೋಟರ್ ಸೈಕಲ್, ₹4 ಲಕ್ಷ ಮೌಲ್ಯದ ಗೃಹೋಪಯೋಗಿ ವಸ್ತುಗಳು ಪತ್ತೆಯಾಗಿವೆ.

ಶಿವಮೊಗ್ಗದ ಲಗಾನ್ ಮಂದಿರ ರಸ್ತೆಯಲ್ಲಿ ₹ 50 ಲಕ್ಷ ಬೆಲೆಬಾಳುವ ಒಂದು ಮನೆ, ₹60 ಲಕ್ಷ ಮೌಲ್ಯದ ನಾಲ್ಕು ಮಳಿಗೆಗಳು ಹಾಗೂ ಎರಡನೇ ಮಹಡಿಯಲ್ಲಿರುವ ಒಂದು ಮನೆ, ಬೆಂಗಳೂರಿನ ಕಗ್ಗಲೀಪುರದಲ್ಲಿ ₹25 ಲಕ್ಷದ ಒಂದು ಫ್ಲ್ಯಾಟ್, ಅನುಪಿನಕಟ್ಟೆ ಗ್ರಾಮದಲ್ಲಿ ₹ 10 ಲಕ್ಷದ ಒಂದು ಫಾರ್ಮ್ ಹೌಸ್ ಹಾಗೂ ಅದೇ ಗ್ರಾಮದಲ್ಲಿ ₹ 20 ಲಕ್ಷದ ಮೌಲ್ಯದ 10 ಎಕರೆ ಅಡಿಕೆ ತೋಟ ಪತ್ತೆಯಾಗಿವೆ.

ಐ.ಎಂ. ನಾಗರಾಜ

ಎನ್‌.ಜೆ. ನಾಗರಾಜ

ಶಿವಮೊಗ್ಗ ನಗರ ಸಾಗರ ಹಾಗೂ ಭದ್ರಾವತಿಯ ಚನ್ನಗಿರಿ ರಸ್ತೆಯಲ್ಲಿರುವ ತಲಾ ₹20 ಲಕ್ಷ ಬೆಲೆ ಬಾಳುವ ತಲಾ ಒಂದೊಂದು ಸರ್ವೀಸ್ ಸ್ಟೇಷನ್‌ಗಳು, ಶಿವಮೊಗ್ಗ ನಗರ ಅಟಲ್ ಬಿಹಾರಿ ವಾಜಪೇಯಿ (ಮಲ್ಲಿಗೇನಹಳ್ಳಿ) ಬಡಾವಣೆಯಲ್ಲಿ ₹12.50 ಲಕ್ಷದ 2 ನಿವೇಶನಗಳು, ಶಿವಮೊಗ್ಗ ನಗರದ ದೇವಕಾತಿಕೊಪ್ಪದ ಇಂಡಸ್ಟ್ರೀಯಲ್ ಏರಿಯಾದಲ್ಲಿ ₹37.66 ಲಕ್ಷದ ಒಂದು ಫ್ಲಾಟ್, ಶಿವಮೊಗ್ಗ ತಾಲ್ಲೂಕು ಕಸಬಾ ಹೋಬಳಿಯ ಶ್ರೀರಾಂಪುರ ಗ್ರಾಮದಲ್ಲಿ ₹ 13.54 ಲಕ್ಷ ಬೆಲೆ ಬಾಳುವ ಎರಡು ನಿವೇಶನಗಳನ್ನು ಲೋಕಾಯುಕ್ತ ಅಧಿಕಾರಿಗಳು ಪತ್ತೆ ಹಚ್ಚಿದ್ದಾರೆ.

ತಹಶೀಲ್ದಾರ್ ಮನೆಯಲ್ಲಿ ₹ 10 ಲಕ್ಷ ಬಂಗಾರದ ಆಭರಣ: ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ತಹಶೀಲ್ದಾರ್ ಎನ್.ಜೆ. ನಾಗರಾಜ ನಿವಾಸದಲ್ಲಿ 244 ಗ್ರಾಂ ಚಿನ್ನ ಹಾಗೂ 533 ಗ್ರಾಂ ಬೆಳ್ಳಿಯ ಆಭರಣಗಳು ಸೇರಿ ಒಟ್ಟು ₹10 ಲಕ್ಷ ಮೌಲ್ಯದ ಆಭರಣಗಳು ಪತ್ತೆಯಾಗಿವೆ.

ಎನ್.ಜೆ. ನಾಗರಾಜ ಅವರ ಶಿಕಾರಿಪುರ ಟೌನ್‌ನಲ್ಲಿರುವ ಚನ್ನಕೇಶವ ನಗರದ ಮನೆ, ಚನ್ನಗಿರಿ ತಾಲ್ಲೂಕಿನ ನಿಂಬಾಪುರದಲ್ಲಿರುವ ಸ್ವಂತ ಮನೆ ಹಾಗೂ ಹೊಳಲ್ಕೆರೆ ತಾಲ್ಲೂಕು ತಹಶೀಲ್ದಾರ್ ವಸತಿ ಗೃಹ ಹಾಗೂ ತಾಲ್ಲೂಕು ಕಚೇರಿಗಳ ಮೇಲೆ ಪೊಲೀಸರು ದಾಳಿ ನಡೆಸಿದ್ದರು.

ಆಸ್ತಿ ವಿವರ: ಎನ್.ಜೆ. ನಾಗರಾಜ ಅವರು ಶಿಕಾರಿಪುರ ಟೌನ್‌ನ ಚನ್ನಕೇಶವ ನಗರದಲ್ಲಿ ₹ 75 ಲಕ್ಷ ಬೆಲೆಬಾಳುವ ಮನೆ, ನಿಂಬಾಪುರದಲ್ಲಿ ₹ 25 ಲಕ್ಷ ಮೌಲ್ಯದ ಮನೆ, ಚನ್ನಗಿರಿ ತಾಲ್ಲೂಕು ಸಂತೇಬೆನ್ನೂರು ನುಗ್ಗಿಹಳ್ಳಿ ಗ್ರಾಮದ ಬಳಿ ₹ 5.25 ಲಕ್ಷ ಬೆಲೆ ಬಾಳುವ 5 ಗುಂಟೆ ಜಮೀನು, ಅದೇ ಗ್ರಾಮದಲ್ಲಿ ₹ 4.50 ಲಕ್ಷ ಬೆಲೆ ಬಾಳುವ 1.05 ಗುಂಟೆ ಜಮೀನು, 12 ಲಕ್ಷ ಮೌಲ್ಯದ ಡಸ್ಟರ್ ಕಾರು, ₹50,000 ಮೌಲ್ಯದ ಒಂದು ಹೊಂಡಾ ಆಕ್ಟೀವಾ ಹೊಂದಿದ್ದಾರೆ.

ಸಿಡಿಲು ಬಡಿದು ರೈತ ಸಾವು

ಸರಗೂರು: ತಾಲ್ಲೂಕಿನ ಹಲ್ಲೇಮಾಳದಲ್ಲಿ ಸೋಮವಾರ ಸಿಡಿಲು ಬಡಿದು ರೈತ ಮುತ್ತಯ್ಯ (65) ಜಮೀನಿನಲ್ಲಿ ನಿಂತಿದ್ದ ಸ್ಥಳದಲ್ಲೇ ಮೃತಪಟ್ಟರು. ಜೋರು ಮಳೆಯ ನಡುವೆ ಅವರು, ಸಮೀಪದ ಹುಣಸೆ ಮರದ ಕೆಳಗೆ ನಿಂತಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರಿದ್ದಾರೆ.

ಸ್ಥಳಕ್ಕೆ ಕಂದಾಯ ನಿರೀಕ್ಷಕರಾದ ಗೋವಿಂದರಾಜು, ನರಸಿಂಹಶೆಟ್ಟಿ, ಪಟ್ಟಣ ಠಾಣೆ ಇನ್‌ಸ್ಪೆಕ್ಟರ್ ಶ್ರವಣದಾಸರೆಡ್ಡಿ ಭೇಟಿ ನೀಡಿದ್ದರು.

ಬನ್ನೇರುಘಟ್ಟ ಉದ್ಯಾನಕ್ಕೆ ಬಿಳಿ ಹುಲಿ

ಪ್ರಜಾವಾಣಿ ವಾರ್ತೆ

ಆನೇಕಲ್ (ಬೆಂಗಳೂರು ಗ್ರಾಮಾಂತರ): ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಹೊಸ ಅತಿಥಿಯ ಆಗಮನವಾಗಿದ್ದು, ಹುಲಿ ಕುಟುಂಬಕ್ಕೆ ಬಿಳಿ ಗಂಡು ಹುಲಿಯೊಂದು ಶುಕ್ರವಾರ ಸೇರ್ಪಡೆಯಾಗಿದೆ.

ಪ್ರಾಣಿ ವಿನಿಮಯ ಯೋಜನೆ ಅಡಿ ಚೆನ್ನೈನ ವಂಡಲೂರಿನ ಅರಿಗ್ನಾರ್ ಅಣ್ಣಾ ಜೈವಿಕ ಉದ್ಯಾನದಿಂದ ಇದೇ 21ರಂದು ಈ ಬಿಳಿ ಹುಲಿಯನ್ನು ತರಲಾಗಿತ್ತು.

ವಂಡಲೂರು ಮೃಗಾಲಯದ ಭೀಷ್ಮಾ ಮತ್ತು ಮೀನಾಗೆ ಜನಿಸಿರುವ ಮೂರು ವರ್ಷದ ಈ ಬಿಳಿ ಹುಲಿಯನ್ನು ಉದ್ಯಾನದಲ್ಲಿಯೇ ಕೆಲ ದಿನ ಪ್ರತ್ಯೇಕವಾಗಿ (ಕ್ವಾರೆಂಟೈನ್) ಇಡಲಾಗುವುದು. ನಂತರ ನಾಮಕರಣ ಮಾಡಲಾಗುವುದು ಎಂದು ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ಅವರು ತಿಳಿಸಿದ್ದಾರೆ.

ಈಗಾಗಲೇ ಉದ್ಯಾನದಲ್ಲಿ 16 ಸಾಮಾನ್ಯ ಹುಲಿಗಳಿದ್ದು, ಒಂದು ಬಿಳಿ ಹೆಣ್ಣು ಹುಲಿ ಕೂಡ ಇದೆ. ಬಿಳಿ ಹುಲಿಗಳ ಸಂತತಿ ಅಭಿವೃದ್ಧಿ ದೃಷ್ಟಿಯಿಂದ ಈ ಗಂಡು ಹುಲಿ ತರಲಾಗಿದೆ ಎಂದು ಅವರು ತಿಳಿಸಿದರು.

ಬನ್ನೇರುಘಟ್ಟ ಜೈವಿಕ ಉದ್ಯಾನದ ಸನಾ ಮತ್ತು ಶಂಕರ್‌ಗೆ 2020ರಲ್ಲಿ ಜನಿಸಿದ್ದ ಶೇರ್‌ಯಾರ್ ಎಂಬ ಹೆಸರಿನ ಮೂರು ವರ್ಷದ ಗಂಡು ಸಿಂಹವನ್ನು ವಂಡಲೂರು ಮೃಗಾಲಯಕ್ಕೆ ಹಸ್ತಾಂತರಿಸಲಾಗಿದೆ.

ಗುಂಡ್ಲುಪೇಟೆ, ಆಲೂರಿನಲ್ಲಿ ಅಮಿತ್ ಶಾ ರೋಡ್ ಶೋ

‘ಜೆಡಿಎಸ್‌ಗೆ ಮತ ಹಾಕಿದರೆ ಕಾಂಗ್ರೆಸ್‌ಗೇ ಹಾಕಿದಂತೆ’

ಪ್ರಜಾವಾಣಿ ವಾರ್ತೆ

ಮೈಸೂರು/ಗುಂಡ್ಲುಪೇಟೆ/ಆಲೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಮತ್ತು ಹಾಸನ ಜಿಲ್ಲೆಯ ಸಕಲೇಶಪುರ ಕ್ಷೇತ್ರದ ಆಲೂರಿನಲ್ಲಿ ರೋಡ್ ಶೋ ನಡೆಸಿ, ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಕೈಗೊಂಡರು.

ಸಾವಿರಾರು ಕಾರ್ಯಕರ್ತರು ಅವರನ್ನು ಬರಮಾಡಿಕೊಂಡರು. ಬಿರುಬಿಸಿಲನ್ನೂ ಲೆಕ್ಕಿಸದೆ ರೋಡ್ ಶೋದಲ್ಲಿ ಪಾಲ್ಗೊಂಡು, ಪ್ರಧಾನಿ ನರೇಂದ್ರ ಮೋದಿ ಹಾಗೂ ಪಕ್ಷದ ಪರ ಘೋಷಣೆಗಳನ್ನು ಕೂಗಿದರು.

ಗುಂಡ್ಲುಪೇಟೆಯಲ್ಲಿ ಪಕ್ಷದ ಅಭ್ಯರ್ಥಿ, ಶಾಸಕ ಸಿ.ಎಸ್.ನಿರಂಜನಕುಮಾರ್ ಪರವಾಗಿ, ಪಟ್ಟಣದ ಊಟಿ ರಸ್ತೆಯಲ್ಲಿ ಒಂದೂವರೆ ಕಿ.ಮೀನಷ್ಟು ದೂರ ತೆರೆದ ವಾಹನದಲ್ಲಿ ಸಾಗಿದ ಶಾ, ಕಾರ್ಯಕರ್ತರು ಹಾಗೂ ಮುಖಂಡರಲ್ಲಿ ಉತ್ಸಾಹ ತುಂಬಿದರು.

ನಂತರ, ಸಕಲೇಶಪುರಪುರ ಕ್ಷೇತ್ರದ ಆಲೂರಿಗೆ ತೆರಳಿ, ಅಭ್ಯರ್ಥಿ ಸಿಮೆಂಟ್ ಮಂಜುನಾಥ ಪರ ಪ್ರಚಾರ ಕೈಗೊಡ ಅವರು, ‘ಕಳೆದ ಬಾರಿ ಜಿಲ್ಲೆಯಲ್ಲಿ ಜೆಡಿಎಸ್‌ಗೆ ಮತ ನೀಡಿದ್ದಿರಿ. ಏನಾಯಿತು? ಅವರು ಕಾಂಗ್ರೆಸ್ ಜೊತೆಗೆ ಸೇರಿ ಸರ್ಕಾರ ರಚಿಸಿದರು. ಅದರರ್ಥ ಜೆಡಿಎಸ್‌ಗೆ ಮತ ಹಾಕಿದರೆ, ಕಾಂಗ್ರೆಸ್‌ಗೆ ನೀಡಿದಂತೆ’ ಎಂದು ಪ್ರತಿಪಾದಿಸಿದರು.

‘ಕಳೆದ ಬಾರಿ ಹಾಸನ ಜಿಲ್ಲೆಯಲ್ಲಿ ಬಿಜೆಪಿಗೆ ಒಂದೇ ಸ್ಥಾನ ಸಿಕ್ಕಿತ್ತು. ಶಾಸಕ ಪ್ರೀತಂ ಗೌಡರು ಜೆಡಿಎಸ್‌ನ ಕುಟುಂಬ ರಾಜಕಾರಣದ ವಿರುದ್ಧ, ಅಭಿವೃದ್ಧಿ ರಾಜಕಾರಣ ಮಾಡಿ ತೋರಿಸಿದ್ದಾರೆ. ಅದರ ಆಧಾರದಲ್ಲಿ ಜಿಲ್ಲೆಯಲ್ಲಿ ಪಕ್ಷ ನಾಲ್ಕು ಸ್ಥಾನ ಗೆಲ್ಲಲಿದೆ’ ಎಂದರು.

‘ಜೆಡಿಎಸ್ ನಾಯಕರು, ಪ್ರೀತಂ ಗೌಡರನ್ನು ಕ್ಷೇತ್ರದಿಂದ ಓಡಿಸಿ ಎನ್ನುತ್ತಿದ್ದಾರೆ. ನನ್ನನ್ನೂ ಸೇರಿಸಿದಂತೆ ಕಾರ್ಯಕರ್ತರು ಹಾಗೂ ಪಕ್ಷವನ್ನು ಮೈದಾನದಿಂದ ಓಡಿಸುವುದು ಅಷ್ಟು ಸುಲಭವಲ್ಲ’ ಎಂದು ತಿರುಗೇಟು ನೀಡಿದರು.

ಮೈಸೂರಿನ ಚಾಮುಂಡೇಶ್ವರಿ ಗುಡಿಗೆ ಬೆಳಿಗ್ಗೆ ಭೇಟಿ ನೀಡಿದ ಶಾ ಪೂಜೆ ಸಲ್ಲಿಸಿ, ನಂತರ ಗುಂಡ್ಲುಪೇಟೆಗೆ ತೆರಳಿದರು. ಆ ಸಂದರ್ಭದಲ್ಲಿ ಕೃಷ್ಣರಾಜ ಕ್ಷೇತ್ರದ ಟಿಕೆಟ್ ವಂಚಿತ ಶಾಸಕ ಎಸ್.ಎ.ರಾಮದಾಸ್ ಅವರನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡಿದ್ದು ಗಮನ ಸೆಳೆಯಿತು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸೋಮವಾರ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಯಲ್ಲಿ ರೋಡ್ ಶೋ ನಡೆಸಿದರು –ಪಿಟಿಐ ಚಿತ್ರ

ರೈತರ ಆದಾಯ ದ್ವಿಗುಣ: ರಾಹುಲ್

ಪ್ರಜಾವಾಣಿ ವಾರ್ತೆ

ರಾಮದುರ್ಗ (ಬೆಳಗಾವಿ ಜಿಲ್ಲೆ): ‘ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಯಾದರೆ ಕಬ್ಬಿಗೆ ಏಕರೂಪದ ದರ ನಿಗದಿ ಮಾಡಲಾಗುವುದು. ಅದು ಈಗಿರುವ ದರಕ್ಕಿಂತ ಅತಿ ಹೆಚ್ಚಾಗಿರುತ್ತದೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದರು.

ಪಟ್ಟಣದಲ್ಲಿ ಸೋಮವಾರ ರೈತರೊಂದಿಗೆ ಸಂವಾದದಲ್ಲಿ ಮಾತನಾಡಿದ ಅವರು, ‘ಕಬ್ಬು ಬೆಳೆ ದರ ಹೆಚ್ಚಳ ಮಾತ್ರವಲ್ಲ; ರೈತರ ಆದಾಯ ದ್ವಿಗುಣ ಮಾಡಲು ಯತ್ನಿಸುತ್ತೇವೆ’ ಎಂದೂ ಹೇಳಿದರು.

‘ಸಕ್ಕರೆ ಕಾರ್ಖಾನೆಗಳು ಟನ್ ಕಬ್ಬಿಗೆ ಕೇವಲ ₹2,700 ದರ ನೀಡುತ್ತಿದ್ದು, ಯಾವುದಕ್ಕೂ ಸಾಲುವುದಿಲ್ಲ. ಪಂಜಾಬ್, ಹರಿಯಾಣಕ್ಕೆ ಹೋಲಿಸಿದರೆ ನಾವು 10 ವರ್ಷ ಹಿಂದಿದ್ದೇವೆ. ಹಾಗಾಗಿ, ಟನ್ ಕಬ್ಬಿಗೆ ₹5 ಸಾವಿರ ನೀಡುವಂತಾಗಬೇಕು’ ಎಂದು ರೈತ ಆನಂದ ಜಗತಾಪ ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಾಹುಲ್, ‘ನಿಮ್ಮ ಮಾತಿಗೆ ಸಹಮತವಿದೆ. ಕೃಷಿ ವೆಚ್ಚ ಅಧಿಕವಾಗಿದೆ. ಆದಾಯ ಪ್ರಮಾಣ ಕಡಿಮೆಯಾಗಿದೆ. ಕೃಷಿ ಪರಿಕರಗಳಿಗೂ ಜಿಎಸ್‌ಟಿ ವಿಧಿಸಿ, ಬಿಜೆಪಿ ಸರ್ಕಾರ ರೈತರನ್ನು ಸಂಕಷ್ಟಕ್ಕೆ ತಳ್ಳಿದೆ. ಮುಂದಿನ ಬಾರಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಬಂದರೆ ಜಿಎಸ್‌ಟಿಯನ್ನು ಸಂಪೂರ್ಣ ಬದಲಿಸುತ್ತೇವೆ. ಐದು ತರಹದ ಜಿಎಸ್‌ಟಿ ತೆಗೆದುಹಾಕಿ, ಏಕರೂಪದ ಹಾಗೂ ಅತಿ ಕಡಿಮೆ ತೆರಿಗೆ ಜಾರಿಗೊಳಿಸುತ್ತೇವೆ’ ಎಂದೂ ಹೇಳಿದರು.

ರೈತ ಈರನಗೌಡ ಪಾಟೀಲ, ‘ಹಳ್ಳಿಗಳಲ್ಲೂ ಉದ್ಯಮ ಸ್ಥಾಪಿಸಬೇಕು. ರೈತರ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡಿ, ಅವರ ಆದಾಯ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು’ ಎಂದು ಮನವಿ ಮಾಡಿದರು.

3,000ಕ್ಕೂ ಅಧಿಕ ರೈತರು ಭಾಗವಹಿಸಿದ್ದರು. ಆಯ್ದ ರೈತರು ಪ್ರಶ್ನೋತ್ತರದಲ್ಲಿ ಭಾಗಿಯಾದರು.

ರಾಮದುರ್ಗದಲ್ಲಿ ಸೋಮವಾರ ಆಯೋಜಿಸಿದ್ದ ರೈತರೊಂದಿಗಿನ ಸಂವಾದ ಕಾರ್ಯಕ್ರಮಕ್ಕೂ ಮುನ್ನ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮುಖಂಡರ ಕುಶಲೋಪರಿ ವಿಚಾರಿಸಿದರು –ಪಿಟಿಐ ಚಿತ್ರ

‘ಪ್ರಶ್ನಿಸುವುದನ್ನು ನಿಲ್ಲಿಸಲು ಸಾಧ್ಯವಿಲ್ಲ’

ಗದಗ: ‘ಬಿಜೆಪಿಯ ಕೆಲವರು ಸಂವಿಧಾನ ಬದಲಿಸುವ ಮಾತನಾಡುತ್ತಾರೆ. ಕಾಂಗ್ರೆಸ್ ಇರುವವರೆಗೂ ಸಂವಿಧಾನ ಮುಟ್ಟುವುದಕ್ಕೆ ಸಾಧ್ಯವಿಲ್ಲ’ ಎಂದು ರಾಹುಲ್ ಗಾಂಧಿ ಗುಡುಗಿದರು.

ನಗರದಲ್ಲಿ ಸೋಮವಾರ ನಡೆದ ‘ಯುವ ಸಂವಾದ’ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಕಟುವಾಗಿ ಟೀಕಿಸಿದರು.

‘ಇತಿಹಾಸ ನೋಡಿದರೆ ಆರ್‌ಎಸ್‌ಎಸ್‌ನವರು ಸಂವಿಧಾನ ವಿರೋಧಿಗಳು ಎಂಬುದು ತಿಳಿಯುತ್ತದೆ. ಅವರು ಬ್ರಿಟಿಷರು, ಮಹಾರಾಜರ ಜತೆಗೆ ನಿಂತಿದ್ದರೇ ಹೊರತು; ಸಾಮಾನ್ಯ ಜನರ ಜತೆಗಲ್ಲ. ಈಗಲೂ ಅಷ್ಟೇ ಬಿಜೆಪಿಯವರು ದುಡ್ಡಿರುವ ಉದ್ಯಮಿಗಳ ಜತೆಗೆ ನಿಂತಿದ್ದಾರೆ’ ಎಂದು ಆರೋಪಿಸಿದರು.

‘ಸಂಸದ ಸ್ಥಾನ, ಮನೆ ಕಿತ್ತುಕೊಂಡರೆ ನನ್ನ ಧ್ವನಿ ಅಡಗಿಸಬಹುದು ಎಂದು ಬಿಜೆಪಿ ನಾಯಕರು ಭಾವಿಸಿದರು. ಆದರೆ, ನಾನು ಪ್ರಶ್ನಿಸುವುದನ್ನು ನಿಲ್ಲಿಸುವುದಿಲ್ಲ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ ಮೋದಿ ಅವರಿಗೆ ಎಂಜಿನಿಯರಿಂಗ್ ಪದವೀಧರರು ಡೆಲಿವರಿ ಬಾಯ್, ದಿನಗೂಲಿ ಕಾರ್ಮಿಕರಾಗಿ ದುಡಿಯುತ್ತಿರುವುದು ಕಾಣಿಸುತ್ತಿಲ್ಲ. ಅದಾನಿ ಅವರಿಂದ ಈ ದೇಶದ ಎಷ್ಟು ಮಂದಿ ಯುವಕರಿಗೆ ನೌಕರಿ ಹೋಗಿದೆ ಎಂಬುದನ್ನು ಮೋದಿ ಅವರು ತಿಳಿಸಬೇಕು’ ಎಂದು ಟೀಕಿಸಿದರು.

‘ವಿಮಾನ ನಿಲ್ದಾಣ ನಿರ್ವಹಣೆ ಮಾಡಿದ ಅನುಭವ ಇಲ್ಲದವರಿಗೆ, ಎರಡಕ್ಕಿಂತ ಹೆಚ್ಚು ವಿಮಾನ ನಿಲ್ದಾಣಗಳನ್ನು ಒಬ್ಬರಿಗೇ ನಿರ್ವಹಣೆ ಮಾಡಲು ಕೊಡಬಾರದು ಎಂಬ ಕಾನೂನು ಇದೆ. ಈ ಬಗ್ಗೆ ಕಾನೂನು ಯಾವಾಗ ಬದಲಾಯಿತು ಎಂದು ಮೋದಿ ಅವರನ್ನು ಪ್ರಶ್ನಿಸಿದೆ. ಅವರು ಸಂಸತ್‌ನಲ್ಲಿ ನಾನು ಮಾಡಿದ ಭಾಷಣವನ್ನು ಅಳಿಸಿಹಾಕಿದರು. ಬಳಿಕ ಸಂಸದ ಸ್ಥಾನ ರದ್ದಾಯಿತು. ಆದರೆ, ನಾನು ಪ್ರಶ್ನೆಗಳನ್ನು ಕೇಳುವುದನ್ನು ನಿಲ್ಲಿಸುವುದಿಲ್ಲ’ ಎಂದು ಮತ್ತೇ ಹೇಳಿದರು.

ಸಂಕ್ಷಿಪ್ತ ಸುದ್ದಿ

ಎಂ.ಪಿ.ಪ್ರಕಾಶ್ ಪುತ್ರಿ ಬಿಜೆಪಿ ಸೇರ್ಪಡೆ

ಬೆಂಗಳೂರು: ಮಾಜಿ ಉಪಮುಖ್ಯಮಂತ್ರಿ, ದಿವಂಗತ ಎಂ.ಪಿ.ಪ್ರಕಾಶ್ ಅವರ ಪುತ್ರಿ ಎಂ.ಪಿ. ಸುಮಾ ವಿಜಯ ಮತ್ತು ಬೆಂಬಲಿಗರು ಬಿಜೆಪಿಯನ್ನು ಸೇರಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸಮ್ಮುಖದಲ್ಲಿ ಸೇರ್ಪಡೆ ಕಾರ್ಯಕ್ರಮ ನಡೆಯಿತು.

ಎಂ.ಪಿ.ಪ್ರಕಾಶ್ ಅವರ ಮೊಮ್ಮಗ ಸಾತ್ವಿಕ್ ವಿಜಯಕುಮಾರ್ ಹಿರೇಮಠ, ಅಳಿಯ ವಿಜಯಕುಮಾರ್ ಬಸವಣ್ಣಯ್ಯ ಹಿರೇಮಠ, ಹೂವಿನ ಹಡಗಲಿಯ ಪುರಸಭೆ ಮಾಜಿ ಅಧ್ಯಕ್ಷೆ ಹಣ್ಣೆ ವೀರಮ್ಮ ಸೇರಿ ಹಲವು ಬೆಂಬಲಿಗರು ಬಿಜೆಪಿ ಸೇರಿದರು.

ಪ್ರಿಯಾಂಕಾ ಗಾಂಧಿ ಇಂದು ಪ್ರಚಾರ

ಮೈಸೂರು: ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಮಂಗಳವಾರ (ಇದೇ 25) ಮೈಸೂರು ಹಾಗೂ ಚಾಮರಾಜ ನಗರ ಜಿಲ್ಲೆಯಲ್ಲಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಲಿದ್ದಾರೆ. ಮಹಿಳೆಯರೊಂದಿಗೆ ಸಂವಾದ ನಡೆಸಲಿರುವ ಅವರು ರೋಡ್ ಶೋ ಕೂಡ ನಡೆಸಲಿದ್ದಾರೆ.

‘ಬಡವರ ಕಣ್ಣೀರು ಒರೆಸಲು ಎಚ್‌ಡಿಕೆ ಸಿ.ಎಂ ಆಗಲಿ’

ನನಗೆ ಕಣ್ಣೀರು ತರಿಸಿದವರ ಕಣ್ಣಲ್ಲಿ ನೀರು ತರಿಸಿ: ಎಚ್‌ಡಿಡಿ

ಪ್ರಜಾವಾಣಿ ವಾರ್ತೆ

ತುಮಕೂರು: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಸೋಮವಾರ ಶಿರಾ, ಕೊರಟಗೆರೆ ಮತ್ತು ಮಧುಗಿರಿಯಲ್ಲಿ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದರು.

ಪಟ್ಟನಾಯಕನಹಳ್ಳಿಯ ಗುರು ಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಅವರು ಸುಡುವ ಬಿಸಿಲು ಲೆಕ್ಕಿಸದೆ ಇಡೀ ದಿನ ಪ್ರಚಾರದಲ್ಲಿ ತೊಡಗಿದ್ದರು.

‘ಕುಮಾರಸ್ವಾಮಿ ಈಗಾಗಲೇ ಎರಡು ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಮತ್ತೆ ಮುಖ್ಯಮಂತ್ರಿಯಾಗುವ ಆಸೆ ಕೂಡ ಇಲ್ಲ. ಆದರೆ, ಬಡವರ ಕಣ್ಣೀರು ಒರೆಸಲು ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾಗಬೇಕು. ನೀವು ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಬೇಕು’ ಎಂದು ಶಿರಾದಲ್ಲಿ ನಡೆದ ಬಹಿರಂಗ ಪ್ರಚಾರ ಸಭೆಯಲ್ಲಿ ಮನವಿ ಮಾಡಿದರು.

ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿ ಡಿ.ಕೈಮರ ಗ್ರಾಮದಲ್ಲಿ ಮಾತನಾಡಿದ ಅವರು, ‘ಕಳೆದ ಲೋಕಸಭಾ ಚುನಾವಣೆಯಲ್ಲಿ ತುಮಕೂರಿನಿಂದ ಸ್ಪರ್ಧಿಸಲು ನಾನು ಬಯಸಿರಲಿಲ್ಲ. ಮಂಡಿನೋವಿದ್ದು, ಎದ್ದು ನಿಲ್ಲೋಕೆ ಕಷ್ಟ ಆಗುತ್ತೆ. ಚುನಾವಣಾ ರಾಜಕೀಯ ಸಾಕಾಗಿದೆ. ರಾಜಕೀಯ ನಿವೃತ್ತಿ ಘೋಷಿಸಲು ಬಯಸಿದ್ದೆ. ಆದರೆ ಜಿಲ್ಲೆಯ ಕೆಲವು ಮುಖಂಡರು ನನ್ನನ್ನು ಚುನಾವಣೆಗೆ ನಿಲ್ಲಿಸಿ ಬಲಿಪಶು ಮಾಡಿದರು’ ಎಂದು ಹರಿಹಾಯ್ದರು.

‘ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಸೋಲಿಸಿ ಕಣ್ಣೀರು ಹಾಕಿಸಲು ಕಾರಣರಾದವರನ್ನು ಕ್ಷೇತ್ರದ ಜನತೆ ಕಣ್ಣೀರು ಹಾಕಿಸಿದಾಗ ಮಾತ್ರ ನನ್ನ ಆತ್ಮಕ್ಕೆ ಶಾಂತಿ ದೊರೆಯಲಿದೆ’ ಎಂದು ದೇವೇಗೌಡ ತಿಳಿಸಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ಶಾಸಕ ಎಂ.ವಿ. ವೀರಭದ್ರಯ್ಯ, ಜೆಡಿಎಸ್ ಜಿಲ್ಲಾಧ್ಯಕ್ಷ ಅಂಜಿನಪ್ಪ, ಶಿರಾ ಜೆಡಿಎಸ್ ಅಭ್ಯರ್ಥಿ ಆರ್.ಉಗ್ರೇಶ್, ತಾಲ್ಲೂಕು ಜೆಡಿಎಸ್ ಅಧ್ಯಕ್ಷ ಸತ್ಯಪ್ರಕಾಶ್, ಎಸ್.ಅರ್. ಗೌಡ, ರಾಮಕೃಷ್ಣ, ತಿಪ್ಪೇಸ್ವಾಮಿ ಭಾಗವಹಿಸಿದ್ದರು.

ಕೊರಟಗೆರೆಯಲ್ಲಿ ನಡೆದ ಸಭೆಯಲ್ಲಿ ಅಭ್ಯರ್ಥಿ ಪಿ.ಆರ್.ಸುಧಾಕರ್ ಲಾಲ್ ಅವರಿಗೆ ಮತ ನೀಡುವಂತೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಮನವಿ ಮಾಡಿದರು. ಸಿ.ಎಂ. ಇಬ್ರಾಹಿಂ ಇದ್ದರು

ಬಿಜೆಪಿಯದ್ದು ಒಡಕಿನ ರಾಜಕಾರಣ: ಖರ್ಗೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ‘ಬಿಜೆಪಿ ಧರ್ಮ ಧರ್ಮಗಳ ನಡುವೆ ಜಗಳ ಹಚ್ಚಿ ಒಡಕು ಮೂಡಿಸುವಲ್ಲಿ ತೊಡಗಿದ್ದರೆ, ಕಾಂಗ್ರೆಸ್ ಎಲ್ಲರನ್ನು ಒಟ್ಟಾಗಿ ಬೆಸೆಯುವ ಮತ್ತು ಅವರ ಬದುಕು ರೂಪಿಸುವ ಕಾರ್ಯದಲ್ಲಿ ತೊಡಗಿದೆ. ಜನರು ಇದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.



ನಗರದಲ್ಲಿ ಸೋಮವಾರ ಆಯೋಜಿಸಿದ್ದ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

‘ಬಿಜೆಪಿಯವರು ಸುಳ್ಳು ಹೇಳುವುದನ್ನು ರೂಢಿಸಿಕೊಂಡಿದ್ದಾರೆ. ಬರೀ ಮಾತಿನ ಮಲ್ಲರು, ಅವರು ಅಭಿವೃದ್ಧಿ ಮಾಡಿಲ್ಲ’ ಎಂದು ಜರಿದರು.

‘ಬಿಜೆಪಿಯವರ ಮಾತಿಗೆ ಮರುಳಾಗಬೇಡಿ, ಅವರ ಪಾಶಕ್ಕೆ ಬೀಳಬೇಡಿ. ಬಿಜೆಪಿಯು ಜನರ ನಡುವೆ ಜಗಳ ಹಚ್ಚುವ ಕೆಲಸ ಮಾಡುತ್ತಿದೆ. ಆ ಪಕ್ಷ ಶ್ರೀಮಂತರ ಪರವಾಗಿದೆ’ ಎಂದು ದೂರಿದರು.

‘ಚಿಕ್ಕಮಗಳೂರು ಕಾಂಗ್ರೆಸ್‌ಗೆ ‘ಲಕ್ಕಿ’ ಜಿಲ್ಲೆ’: ‘ಚಿಕ್ಕಮಗಳೂರು ಕಾಂಗ್ರೆಸ್‌ಗೆ ಅದೃಷ್ಟದ (ಲಕ್ಕಿ) ಜಿಲ್ಲೆ. ಈ ಲೋಕಸಭಾ ಕ್ಷೇತ್ರದಲ್ಲಿ1978ರಲ್ಲಿ ನಡೆದಿದ್ದ ಉಪಚುನಾವಣೆಯಲ್ಲಿ ಇಂದಿರಾ ಗಾಂಧಿ ಸ್ಪರ್ಧಿಸಿದ್ದರು, ಆಗ ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿದ್ದ ಬೆಳ್ತಂಗಡಿ ಭಾಗದ ಉಸ್ತುವಾರಿಯಾಗಿ ಕಾರ್ಯನಿರ್ವಹಿಸಿದ್ದೆ. ಒಂದು ತಿಂಗಳು ಪ್ರಚಾರ ಮಾಡಿದ್ದೆ’ ಎಂದು ಮಲ್ಲಿಕಾರ್ಜುನ ಖರ್ಗೆ ನೆನಪಿಸಿಕೊಂಡರು.

‘ಆ ಚುನಾವಣೆಯಲ್ಲಿ ಇಂದಿರಾ ಅವರು ಗೆದ್ದ ನಂತರ ಇಡೀ ದೇಶದಲ್ಲಿ ಕಾಂಗ್ರೆಸ್ ಚಿತ್ರಣ ಬದಲಾಯಿತು. 1980ರ ಚುನಾವಣೆಯಲ್ಲಿ ದೇಶದಲ್ಲಿ ಕಾಂಗ್ರೆಸ್ ಬಹುಮತ ಪಡೆದಿತ್ತು. ಈಗ ಈ ಕ್ಷೇತ್ರದಿಂದಲೇ ಪ್ರಚಾರ ಆರಂಭಿಸಿದ್ದೇನೆ. ಚಿಕ್ಕಮಗಳೂರು ಕ್ಷೇತ್ರದಿಂದ ಪುನಃ ಶಕ್ತಿಯನ್ನು ಈ ಚುನಾವಣೆಯಲ್ಲಿ ಪಕ್ಷ ಪಡೆಯಲಿದೆ’ ಎಂದು ಪತ್ರಿಕಾಗೋಷ್ಠಿಯಲ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಮಂಗಳೂರು ವರದಿ: ಜಗದೀಶ ಶೆಟ್ಟರ್ ಬಿಜೆಪಿಗೆ ಮರಳುತ್ತಾರೆ ಎಂದು ಬಿಜೆಪಿ ಮುಖಂಡರು ಹೇಳಿಕೆ ನೀಡಿರುವ ಕುರಿತು ಪ್ರತಿಕ್ರಿಯಿಸಿದ ಖರ್ಗೆ, ‘ಈ ಬಗ್ಗೆ ನಾನು ಭವಿಷ್ಯ ನುಡಿಯಲು ಆಗದು. ಅವರು ಹೋಗುತ್ತಾರೆ– ಇವರು ಬರುತ್ತಾರೆ ಎಂದು ಯಾರೋ ನೀಡುವ ಹೇಳಿಕೆಗೂ ನನಗೂ ಸಂಬಂಧ ಇಲ್ಲ. ಪಕ್ಷದ ತತ್ವ ಒಪ್ಪಿ ನಿಯತ್ತಿನಿಂದ ಕಾಂಗ್ರೆಸ್‌ಗೆ ಬರುವವರಿಗೆ ಈಗಲೂ ಸ್ವಾಗತ ಇದೆ’ ಎಂದರು.

ಇಂದಿನಿಂದ ಬಿಜೆಪಿ ವಿಶೇಷ ಮಹಾ ಪ್ರಚಾರ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲಿ ಮನೆ ಮನೆಗಳಿಗೆ ಹೋಗಿ ಮತದಾರರನ್ನು ಸಂಪರ್ಕಿಸುವ ವಿಶೇಷ ಮಹಾ ಪ್ರಚಾರ ಅಭಿಯಾನವನ್ನು ಮಂಗಳವಾರ ಮತ್ತು ಬುಧವಾರ (ಏ.25 ಮತ್ತು 26) ಬಿಜೆಪಿ ಹಮ್ಮಿಕೊಂಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿ, ಈ ಅಭಿಯಾನದಲ್ಲಿ ಅಪಾರ ಪ್ರಮಾಣದಲ್ಲಿ ಕಾರ್ಯಕರ್ತರು ಮತದಾರರ ಮನೆಗಳಿಗೆ ಭೇಟಿ ನೀಡಲಿದ್ದಾರೆ ಎಂದರು.

ಇದೊಂದು ಬೃಹತ್ ಪ್ರಮಾಣದ ಪ್ರಚಾರ ಅಭಿಯಾನವಾಗಿದ್ದು, ಇದರಲ್ಲಿ ಕೇಂದ್ರದ 98 ಸಚಿವರು ಮತ್ತು ನಾಯಕರು, 150ಕ್ಕೂ ಹೆಚ್ಚು ರಾಜ್ಯದ ಸಚಿವರು, ಶಾಸಕರು, ಸಂಸದರು, ವಿಧಾನಪರಿಷತ್ ಸದಸ್ಯರು ಹಾಗೂ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಚುನಾವಣೆಯಲ್ಲಿ 150 ಕ್ಷೇತ್ರಗಳನ್ನು ಗೆಲ್ಲುವ ಗುರಿಯ ಭಾಗವಾಗಿ ಪ್ರಚಾರ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಸುದ್ದಿಗೋಷ್ಠಿ ನಡೆಸಲಾಗುವುದು, ಹೋಬಳಿ ಮತ್ತು ತಾಲ್ಲೂಕು ಮಟ್ಟದಲ್ಲಿ ರೋಡ್ ಶೋ, ಸಂಪರ್ಕ ಸಭೆ ಮತ್ತು ಸಮಾವೇಶಗಳನ್ನು ನಡೆಸಲಾಗುವುದು ಎಂದರು.

ಈ ಅಭಿಯಾನದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್, ರಾಜ್ಯ ಬಿಜೆಪಿ ಚುನಾವಣಾ ಉಸ್ತುವಾರಿ ಧರ್ಮೇಂದ್ರ ಪ್ರಧಾನ್, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಕೇಂದ್ರ ಸಚಿವೆ ಸ್ಮೃತಿ ಇರಾನಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಭಾಗವಹಿಸಲಿದ್ದಾರೆ ಎಂದು ನಳಿನ್ ಕುಮಾರ್ ತಿಳಿಸಿದರು.

ಎಲ್ಲ ನಾಯಕರು ಮಠ–ಮಂದಿರಗಳಿಗೆ ಭೇಟಿ ನೀಡುವ ಮೂಲಕ ಪ್ರಚಾರ ಅಭಿಯಾನ ಆರಂಭಿಸಲಿದ್ದಾರೆ. ಮಠ–ಮಂದಿರಗಳಿಗೆ ಭೇಟಿ ನೀಡುವ ಮೂಲಕವೇ ಪ್ರಚಾರ ಆರಂಭಿಸಿ ಎಂದು ಸೂಚನೆ ನೀಡಿದ್ದೇವೆ. ಒಂದು ವೇಳೆ ಅವರು ಬಯಸಿದರೆ ಚರ್ಚ್ ಮತ್ತು ಮಸೀದಿಗಳಿಗೂ ಹೋಗಬಹುದು. ಅದಕ್ಕೆ ಅವರು ಸ್ವತಂತ್ರರಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಶೋಭಾ ಕರಂದ್ಲಾಜೆ ಹೇಳಿದರು.

ಯೋಗಿ 4 ದಿನ ಪ್ರವಾಸ: ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ರಾಜ್ಯದಲ್ಲಿ ನಾಲ್ಕು ದಿನಗಳ ಕಾಲ ದಕ್ಷಿಣ ಕನ್ನಡ, ಕರಾವಳಿ, ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದ ಭಾಗಗಳಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ ಎಂದರು.

ಮುಸ್ಲಿಮರ ಮತ ನಮಗೆ ಬೇಡ: ಈಶ್ವರಪ್ಪ

ಶಿವಮೊಗ್ಗ: ‘ಶಿವಮೊಗ್ಗ ನಗರ ಕ್ಷೇತ್ರದಲ್ಲಿ 50,000ದಿಂದ 55,000 ಮುಸ್ಲಿಮರ ಮತಗಳಿದ್ದು, ನಮಗೆ ಅವರ ಒಂದೂ ಮತ ಬೇಡ. ನಮ್ಮ ನೆರವು ಪಡೆದ ಮುಸ್ಲಿಮರು ನಮಗೆ ಮತ ಹಾಕೇ ಹಾಕುತ್ತಾರೆ’ ಎಂದು ಶಾಸಕ ಕೆ.ಎಸ್.ಈಶ್ವರಪ್ಪ ಹೇಳಿದರು.

ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ನಿವಾಸದಲ್ಲಿ ಸೋಮವಾರ ನಡೆದ ವೀರ ಶೈವ– ಲಿಂಗಾಯತ ಸಮಾಜದ ಸಭೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಕಾಂಗ್ರೆಸ್‌ನವರು ಹಿಂದೂ–ಮುಸ್ಲಿಮರನ್ನು ಅನೇಕ ವರ್ಷಗಳಿಂದ ವಿಭಜಿಸಿ ಮುಸ್ಲಿಮರ ಮತ ಪಡೆಯುವ ಕೆಲಸ ಮಾಡಿದ್ದಾರೆ. ಮುಸ್ಲಿಮರನ್ನು ಓಲೈಸಲು ಹಿಂದೂ ಸಮಾಜವನ್ನು ನಿಕೃಷ್ಟಗೊಳಿಸುವುದನ್ನು ನಾನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ. ಯಾರು ರಾಷ್ಟ್ರದ್ರೋಹಿ ಮುಸಲ್ಮಾನರು ಇದ್ದಾರೋ ಅಂಥವರ ಮತ ನಮಗೆ ಬೇಡ’ ಎಂದರು.

ಶೆಟ್ಟರ್ ಬದಲಾಯಿಸಲು ತೀರ್ಮಾನಿಸಿದ್ದೇ ಮೋದಿ, ಅಮಿತ್ ಶಾ: ಪ್ರಲ್ಹಾದ ಜೋಶಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಹುಬ್ಬಳ್ಳಿ– ಧಾರವಾಡ ಸೆಂಟ್ರಲ್ ಕ್ಷೇತ್ರದಲ್ಲಿ ಶೆಟ್ಟರ್ ಅವರನ್ನು ಬದಲಾಯಿಸಿ, ಹೊಸಬರಿಗೆ ಅವಕಾಶ ನೀಡಬೇಕೆಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರೇ ತೀರ್ಮಾನಿಸಿದರು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ತಮಗೆ ಟಿಕೆಟ್ ತಪ್ಪಿಸಿರುವ ವಿಷಯ ನರೇಂದ್ರ ಮೋದಿ ಹಾಗೂ ಅಮಿತ್ ಶಾ ಅವರ ಗಮನಕ್ಕಿಲ್ಲ ಎಂದು ಪಕ್ಷ ತೊರೆದು ಕಾಂಗ್ರೆಸ್ ಸೇರಿರುವ ಜಗದೀಶ ಶೆಟ್ಟರ್ ಅವರ ಹೇಳಿಕೆಗೆ ಜೋಶಿ ಅವರು ನಗರದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದರು.

‘ಅಮಿತ್ ಶಾ ಅವರು ಶೆಟ್ಟರ್ ಅವರಿಗೆ ದೂರವಾಣಿ ಕರೆ ಮಾಡಿ, ರಾಜ್ಯಸಭಾ ಸದಸ್ಯ ಸ್ಥಾನ ಅಥವಾ ನೀವು ಕೇಳುವ ಬೇರೆ ಯಾವುದಾದರೂ ಸ್ಥಾನ ನೀಡುತ್ತೇವೆ. ಚುನಾವಣೆಗೆ ಸ್ಪರ್ಧಿಸಲು ಹೊಸಬರಿಗೆ ಅವಕಾಶ ಮಾಡಿಕೊಡಿ. ನೀವು ಹೇಳುವ ಕಾರ್ಯಕರ್ತನಿಗೇ ಟಿಕೆಟ್ ನೀಡುತ್ತೇವೆ ಎಂದೂ ಹೇಳಿದ್ದರು’ ಎಂದು ವಿವರಿಸಿದರು.

‘ಮೋದಿ, ಅಮಿತ್ ಶಾ ಅವರ ವಿರುದ್ಧ ಹೇಳಿಕೆ ನೀಡಿದರೆ ಜನ ವೋಟ್ ಹಾಕಲ್ಲ ಎಂದು ಅವರಿಗೆ ಗೊತ್ತಿದೆ. ಅದಕ್ಕೆ ಅವರು, ಮೋದಿ, ಅಮಿತ್ ಶಾ ಅವರಿಗೆ ಈ ವಿಷಯ ಗೊತ್ತಿಲ್ಲ ಎನ್ನುವ ಮೂಲಕ ರಕ್ಷಣೆ ಪಡೆಯಲು ಪ್ರಯತ್ನಿಸುತ್ತಿದ್ದಾರೆ’ ಎಂದರು.

ಕನಸಿನಲ್ಲಾದರೂ ಸಂತೋಷಪಡಲಿ: ತಾವು ಬಿಜೆಪಿ ತ್ಯಜಿಸಿ ಕಾಂಗ್ರೆಸ್ ಸೇರಿರುವುದರಿಂದ 25ರಿಂದ 30 ಸ್ಥಾನಗಳ ಮೇಲೆ ಪರಿಣಾಮ ಬೀರಲಿದೆ ಎಂದು ಶೆಟ್ಟರ್ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಲ್ಹಾದ ಜೋಶಿ ಅವರು, ‘ಬಹುಶಃ ಅವರು ಕನಸು ಕಾಣುತ್ತಿದ್ದಾರೆ. ಕನಸು ಕಾಣುವುದನ್ನು ತಡೆಯಲು ಸಾಧ್ಯವಿಲ್ಲ. ಕನಿಷ್ಠ ಕನಸಿನಲ್ಲಾದರೂ ಸಂತೋಷಪಡಲಿ’ ಎಂದು ವ್ಯಂಗ್ಯವಾಡಿದರು.

ಕ್ಷಮೆಯಾಚಿಸದಿದ್ದರೆ ಸಿದ್ದರಾಮಯ್ಯ ವಿರುದ್ಧ ದೂರು

ಲಿಂಗಾಯತರ ಬಗ್ಗೆ ಅವಮಾನಕಾರಿ ಹೇಳಿಕೆ ನೀಡಿರುವ ಸಿದ್ದರಾಮಯ್ಯ ತಕ್ಷಣ ಕ್ಷಮೆಯಾಚಿಸದಿದ್ದರೆ ಅವರ ವಿರುದ್ಧ ಕ್ರಮಕೈಗೊಳ್ಳುವಂತೆ ಚುನಾವಣಾ ಆಯೋಗಕ್ಕೆ ಸದ್ಯದಲ್ಲಿಯೇ ದೂರು ಸಲ್ಲಿಸಲಿದ್ದೇವೆ ಎಂದು ಪ್ರಲ್ಹಾದ ಜೋಶಿ ಹೇಳಿದರು.

‘ಲಿಂಗಾಯತ ಸಮುದಾಯಕ್ಕೆ ಅವಮಾನ ಮಾಡಿರುವುದಕ್ಕೆ ಬಹಿರಂಗವಾಗಿ ಕ್ಷಮೆ ಕೇಳಬೇಕೆಂದು ಒತ್ತಾಯಿಸಿದ್ದರೂ, ಇಲ್ಲಿಯವರೆಗೆ ಅವರು ಕ್ಷಮೆ ಕೇಳಿಲ್ಲ. ತಮ್ಮ ವಾದವನ್ನೇ ಸಮರ್ಥಿಸಿಕೊಳ್ಳುತ್ತಿದ್ದಾರೆ’ ಎಂದು ಟೀಕಿಸಿದರು.

ಅದೇ ಸಮುದಾಯದವರಿಗೆ ಟಿಕೆಟ್: ಅಮಿತ್ ಶಾ

‘ಲಿಂಗಾಯತ ಸಮುದಾಯವನ್ನು ಅವಮಾನಿಸಿಲ್ಲ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಲಿಂಗಾಯತ ಸಮುದಾಯದವರಿಗೆ ನಾವು ಅವಮಾನಿಸಿಲ್ಲ. ಲಿಂಗಾಯತ ಸಮುದಾಯದ ಕೆಲವು ಅಭ್ಯರ್ಥಿಗಳನ್ನು ಬದಲಾಯಿಸಿ, ಅದೇ ಸಮುದಾಯದವರಿಗೆ ಟಿಕೆಟ್ ನೀಡಿದ್ದೇವೆ. ಬೇರೆಯವರಿಗೆ ನೀಡಿಲ್ಲ ಎಂದು ಗೃಹ ಸಚಿವ ಅಮಿತ್ ಶಾ ಸ್ಪಷ್ಟನೆ ನೀಡಿದರು.

ನಗರದಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ಜಗದೀಶ ಶೆಟ್ಟರ್ ಅವರು ಬಿಟ್ಟು ಹೋಗಿದ್ದಕ್ಕೆ ಪಕ್ಷಕ್ಕೆ ಏನೂ ನಷ್ಟವಿಲ್ಲ. ಅವರು ಈ ಚುನಾವಣೆಯಲ್ಲಿ ಖಂಡಿತವಾಗಿ ಸೋಲುತ್ತಾರೆ. ಪಕ್ಷದ ಅಭ್ಯರ್ಥಿ ಗೆಲ್ಲುತ್ತಾರೆ. ಇಷ್ಟು ವರ್ಷ ಹುಬ್ಬಳ್ಳಿ– ಧಾರವಾಡ ಸೆಂಟ್ರಲ್ ಕ್ಷೇತ್ರದ ಮತದಾರರು ಪಕ್ಷಕ್ಕೆ ಮತ ನೀಡಿದ್ದಾರೆ. ವ್ಯಕ್ತಿಗಲ್ಲ’ ಎಂದು ಹೇಳಿದರು.

ಶೆಟ್ಟರ್‌ಗೆ ಕಾರಣ ಹೇಳಲಾಗಿದೆ: ‘ಯಾವ ಕಾರಣಕ್ಕಾಗಿ ಟಿಕೆಟ್ ನಿರಾಕರಿಸಲಾಗಿದೆ ಎನ್ನುವುದನ್ನು ಶೆಟ್ಟರ್‌ಗೆ ತಿಳಿಸಲಾಗಿದೆ. ಆ ಕಾರಣವನ್ನು ಸಾರ್ವಜನಿಕವಾಗಿ, ನಿಮಗೆ (ಮಾಧ್ಯಮದವರು) ಹೇಳುವ ಅವಶ್ಯಕತೆ ಇಲ್ಲ. ಮತದಾರರಿಗೆ ತಿಳಿಸುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಒಂದಿಬ್ಬರು ಲಿಂಗಾಯತ ಮುಖಂಡರು ಹೋಗಿದ್ದಕ್ಕೆ ಆ ಕಡೆಯವರು (ಕಾಂಗ್ರೆಸ್) ಖುಷಿಯಾಗಿದ್ದಾರೆ. ಇಷ್ಟು ವರ್ಷ ಕಾಂಗ್ರೆಸ್ ಅವರಿಗೆ ಏನು ಮಾಡಿದೆ. ಇದುವರೆಗೆ ಈ ಸಮುದಾಯದ ಇಬ್ಬರನ್ನು ಮಾತ್ರ ಮುಖ್ಯಮಂತ್ರಿಯನ್ನಾಗಿ ಮಾಡಿತ್ತು ಹಾಗೂ ಅವಮಾನ ಮಾಡಿ ಕೆಳಗಿಳಿಸಿತ್ತು. ಕಾಂಗ್ರೆಸ್‌ನಂತೆ ನಾವು ಅವಮಾನಿಸಿಲ್ಲ. ನಮ್ಮ ಬಗ್ಗೆ ಮಾತನಾಡುವ ಅಧಿಕಾರ ಅವರಿಗೆ ಇಲ್ಲ. ಲಿಂಗಾಯತ ಸಮುದಾಯ ಬಿಜೆಪಿ ಜೊತೆಗೆ ಇದೆ’ ಎಂದರು.

ಕಪಿಮುಷ್ಟಿಯಲ್ಲಿಲ್ಲ: ಪಕ್ಷ ಕೆಲವೇ ಜನರ ಕಪಿಮುಷ್ಟಿಯಲ್ಲಿದೆ ಎಂದು ಲಕ್ಷ್ಮಣ ಸವದಿ ಮಾಡಿದ ಆರೋಪಕ್ಕೆ ಉತ್ತರಿಸಿದ ಅವರು, ‘ಸವದಿ ಉಪ ಮುಖ್ಯಮಂತ್ರಿಯಾಗಿದ್ದಾಗ ಪಕ್ಷ ಯಾರ ಕಪಿಮುಷ್ಟಿಯಲ್ಲಿ ಇತ್ತಂತೆ. ಪಕ್ಷ ಯಾರೊಬ್ಬರ ಕೈಯಲ್ಲಿಲ್ಲ. ತಂಡವಾಗಿ ಕೆಲಸ ಮಾಡುತ್ತದೆ’ ಎಂದು ಹೇಳಿದರು.

ಮುಸ್ಲಿಂ ಆಕಾಂಕ್ಷಿಗೆ ಟಿಕೆಟ್ ನೀಡದಿರುವ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ‘ಗೆಲ್ಲುವ ಸಾಮರ್ಥ್ಯ ಹಾಗೂ ಅರ್ಹತೆಯನ್ನು ಆಧರಿಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೇವೆ. ಅಲ್ಪಸಂಖ್ಯಾತರು, ಬಹುಸಂಖ್ಯಾತರು ಎನ್ನುವ ಆಧಾರದ ಮೇಲಲ್ಲ’ ಎಂದು ಹೇಳಿದರು,

ಪರಿವಾರ ರಾಜಕಾರಣಕ್ಕೆ ವಿರೋಧ: ‘ಪರಿವಾರ ರಾಜಕಾರಣವನ್ನು ಬಿಜೆಪಿ ವಿರೋಧಿಸುತ್ತದೆ. ಆದರೂ ಕೆಲವೆಡೆ ಸ್ಪರ್ಧಿಸಲು ಕೆಲವರಿಗೆ ಅವಕಾಶ ನೀಡಲಾಗಿದೆ. ಇವರ‍್ಯಾರೂ ಪಕ್ಷದ ಅಧ್ಯಕ್ಷ ಸ್ಥಾನ, ಮುಖ್ಯಮಂತ್ರಿ ಸ್ಥಾನ ಸೇರಿದಂತೆ ಮಹತ್ವದ ಹುದ್ದೆಗಳನ್ನು ಅಲಂಕರಿಸಿಲ್ಲ. ಬೇರೆ ಬೇರೆಯವರೇ ಅಲಂಕರಿಸಿದ್ದಾರೆ. ಪರಿವಾರದ ಆಧಾರದ ಮೇಲೆ ಅವರನ್ನು ನೇಮಿಸಿಲ್ಲ. ಜೆಡಿಎಸ್‌ನಲ್ಲಿ ನೋಡಿ,ಪಕ್ಷದ ಅಧ್ಯಕ್ಷ, ಮುಖ್ಯಮಂತ್ರಿ ಎಲ್ಲವೂ ಅವರೇ ಆಗುತ್ತಾರೆ’ ಎಂದರು.

ಕಣ ಸ್ಪಷ್ಟ: ಇನ್ನು ಹಣಾಹಣಿ ಆಟ

ಒಂದನೇ ಪುಟದಿಂದ...

ಎಲ್ಲ 224 ಕ್ಷೇತ್ರಗಳಲ್ಲೂ ಬಿಜೆಪಿ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಮೇಲುಕೋಟೆಯಲ್ಲಿ ಸರ್ವೋದಯ ಪಕ್ಷದ ಅಭ್ಯರ್ಥಿ ದರ್ಶನ್ ಪುಟ್ಟಣ್ಣಯ್ಯ ಅವರಿಗೆ ಬೆಂಬಲ ಘೋಷಿಸಿದ್ದು, ಉಳಿದ 223 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಹಾಕಿದೆ. 209 ಕ್ಷೇತ್ರಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳಿದ್ದರು, ಶಿವಾಜಿ ನಗರದ ಅಭ್ಯರ್ಥಿ ಆರ್.ಮಂಜುನಾಥ್ ನಾಮಪತ್ರ ತಿರಸ್ಕೃತವಾಗಿದೆ. ಮಂಗಳೂರು (ಉಳ್ಳಾಲ) ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದ್ದ ಅಲ್ತಾಫ್ ಕುಂಪಲ ನಾಮಪತ್ರ ಹಿಂಪಡೆದಿದ್ದು, ಅಂತಿಮವಾಗಿ ಜೆಡಿಎಸ್‌ನ 207 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಶಮನವಾಗದ ಬಂಡಾಯ: ಟಿಕೆಟ್ ಸಿಗದ ಅಥವಾ ಪಕ್ಷ ನಿರಾಕರಿಸಿದ ಕಾರಣಕ್ಕೆ ಬಂಡಾಯವೆದ್ದು ಪಕ್ಷೇತರರಾಗಿ ಸ್ಪರ್ಧಿಸಿದ್ದ ಅಭ್ಯರ್ಥಿಗಳ ಮನವೊಲಿಸುವ ಕೆಲಸವನ್ನು ಕೊನೆ ಕ್ಷಣದವರೆಗೂ ಆಯಾ ಪಕ್ಷದ ನಾಯಕರು ನಡೆಸಿದರು. ಕೆಲವು ಕ್ಷೇತ್ರಗಳಲ್ಲಿ ಯಶಸ್ಸು ಸಿಕ್ಕಿತಾದರೂ, ಕೆಲವರು ಕಣದಿಂದ ಹಿಂದೆ ಸರಿಯಲಿಲ್ಲ. ಹೀಗಾಗಿ, ಆಡಳಿತಾರೂಢ ಬಿಜೆಪಿ ಹಾಗೂ ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ ಹಲವು ಕ್ಷೇತ್ರಗಳಲ್ಲಿ ತೀವ್ರ ಪೈಪೋಟಿ ಎದುರಿಸುತ್ತಿದೆ.

‘ಹಿರಿಯರ ನಿವೃತ್ತಿ; ಹೊಸಬರಿಗೆ ಟಿಕೆಟ್’ ಎಂಬ ಪ್ರಯೋಗವನ್ನು ಬಿಜೆಪಿ ಈ ಬಾರಿ ನಡೆಸಿದ್ದರಿಂದಾಗಿ, ಆ ಪಕ್ಷದಲ್ಲೇ ಅತೃಪ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಪಕ್ಷೇತರರಾಗಿ ಕಣಕ್ಕೆ ಇಳಿದಿರುವವರ ಪೈಕಿ, ‘ಕೈ’ ಮತ್ತು ಕಮಲ ಪಾಳಯದಲ್ಲೇ ಹೆಚ್ಚಿದ್ದಾರೆ.

ಟಿಕೆಟ್ ಸಿಗದ ಕಾರಣಕ್ಕೆ ಬಿಜೆಪಿಯಿಂದ ಹೊರಬಂದ 15ಕ್ಕೂ ಹೆಚ್ಚು ಜನರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ. ರಾಯಚೂರು ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷ ಹಾಗೂ ಮಾಜಿ ಸಂಸದ ಬಿ.ವಿ. ನಾಯಕ ಅವರನ್ನೇ ಸೆಳೆದ ಬಿಜೆಪಿ, ಮಾನ್ವಿಯಲ್ಲಿ ಕಣಕ್ಕೆ ಇಳಿಸಿದೆ. ಬಿಜೆಪಿ ಹಾಗೂ ಕಾಂಗ್ರೆಸ್‌ನಿಂದ ಟಿಕೆಟ್ ಸಿಗದ ಅನೇಕರು ಕೊನೆಗಳಿಗೆಯಲ್ಲಿ ಜೆಡಿಎಸ್‌ಗೆ ಜಿಗಿದಿದ್ದರಿಂದಾಗಿ, ಅತಿ ಹೆಚ್ಚು ಅನುಕೂಲಪಡೆದ ಪಕ್ಷವಾಗಿ ಈ ಚುನಾವಣೆಯಲ್ಲಿ ಜೆಡಿಎಸ್ ಹೊರಹೊಮ್ಮಿದೆ.

₹ 2.76 ಕೋಟಿ ಮೌಲ್ಯದ ಸ್ವತ್ತುಗಳ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ನಡೆಸಿರುವ ಕಾರ್ಯಾಚರಣೆಯಲ್ಲಿ ಭಾನುವಾರ ₹ 96.37 ಲಕ್ಷ ನಗದು ಸೇರಿದಂತೆ ₹ 2.76 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

₹ 1.20 ಕೋಟಿ ಮೌಲ್ಯದ 1.97 ಕೆ.ಜಿ. ಚಿನ್ನ, ₹ 4.46 ಲಕ್ಷ ಮೌಲ್ಯದ 5.87 ಕೆ.ಜಿ. ಬೆಳ್ಳಿ, ₹17.27 ಲಕ್ಷ ಮೌಲ್ಯದ 4,032 ಲೀಟರ್ ಮದ್ಯ, ₹38 ಲಕ್ಷ ಮೌಲ್ಯದ ಉಚಿತ ಕೊಡುಗೆಗಳನ್ನು ಚುನಾವಣಾ ಅಕ್ರಮ ತಡೆಗೆ ನೇಮಿಸಿರುವ ಜಾಗೃತ ದಳಗಳ ಕಾರ್ಯಾಚರಣೆ ಹಾಗೂ ತನಿಖಾ ಠಾಣೆಗಳಲ್ಲಿನ ತಪಾಸಣೆ ವೇಳೆ ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿಯವರ ಕಚೇರಿ ಪ್ರಕಟಣೆ ತಿಳಿಸಿದೆ.

ಚುನಾವಣಾ ನೀತಿಸಂಹಿತೆ ಜಾರಿಯಾದ ದಿನದಿಂದ ಭಾನುವಾರದವರೆಗೆ ಒಟ್ಟು ₹256.98 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ 1,967 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಡಿಕೆಶಿ ಅವರಿಂದ ಚಂಡಿಕಾ ಯಾಗ

ಒಂದನೇ ಪುಟದಿಂದ...

‘ಯಾಗದ ಪೂರ್ಣಾಹುತಿಯಲ್ಲಿ ಮುಖ್ಯಮಂತ್ರಿ ಹುದ್ದೆ ಪ್ರಾಪ್ತಿಯಾಗಲಿ’ ಎಂಬ ಪ್ರಾರ್ಥನೆ ಸಲ್ಲಿಸಲಾಯಿತೇ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ನಾನು ರಾಜಕಾರಣಿ, ಖಾವಿ ಬಟ್ಟೆ ಹಾಕಿಕೊಂಡಿಲ್ಲ; ಬಿಳಿ ಬಟ್ಟೆ ಹಾಕಿದ್ದೇನೆ’ ಎಂದು ಮಾರ್ಮಿಕವಾಗಿ ಉತ್ತರಿಸಿದರು.

‘ಒಳ್ಳೆಯ ಕೆಲಸ, ಹೋರಾಟ, ಯುದ್ಧ ಮಾಡಬೇಕಾದರೆ ದೇವರ ಅನುಗ್ರಹ ಮುಖ್ಯ. ಹಾಗಾಗಿ, ಕೊಲ್ಲೂರು ಮೂಕಾಂಬಿಕೆ, ಧರ್ಮಸ್ಥಳದ ಮಂಜುನಾಥ ಸ್ವಾಮಿಯ ದರ್ಶನ ಮಾಡಿದ್ದೇನೆ’ ಎಂದರು.

ಪ್ರಧಾನ ಅರ್ಚಕರಾದ ಎನ್. ನರಸಿಂಹ ಅಡಿಗ, ಎನ್. ಸುಬ್ರಮಣ್ಯ ಅಡಿಗ ಅವರ ನೇತೃತ್ವದಲ್ಲಿ ನಡೆದ ಯಾಗದ ಪೂರ್ಣಾಹುತಿ, ಧಾರ್ಮಿಕ ವಿಧಿಯಲ್ಲಿ ಡಿಕೆಶಿ ಅವರು ಪತ್ನಿ ಉಷಾ ಅವರೊಂದಿಗೆ ಪಾಲ್ಗೊಂಡಿದ್ದರು.

ಅರ್ಚಕರು ಹೇಳಿದ್ದೇನು: ‘ರಾಜ್ಯ ಹಾಗೂ ದೇಶ ಸುಭಿಕ್ಷವಾಗಿರಲಿ ಎಂಬ ಸಂಕಲ್ಪದೊಂದಿಗೆ ಡಿ.ಕೆ.ಶಿವಕುಮಾರ್ ನವ ಚಂಡಿಕಾಯಾಗ ಮಾಡಿಸಿದ್ದಾರೆ. ಯಾಗದ ಪೂರ್ಣಾಹುತಿಯಲ್ಲಿ ಡಿಕೆಶಿ ಅವರ ಮನದ ಇಷ್ಟಾರ್ಥಗಳು ಈಡೇರಲಿ ಎಂದಷ್ಟೇ ದೇವರಲ್ಲಿ ಪ್ರಾರ್ಥಿಸಿದ್ದೇನೆ. ಅವರಿಗೆ ಮುಖ್ಯಮಂತ್ರಿ ಹುದ್ದೆ ಸಿಗಲಿ ಎಂಬ ಬದ ಬಳಸಿಲ್ಲ’ ಎಂದು ದೇವಸ್ಥಾನದ ಅರ್ಚಕ ಡಾ.ನರಸಿಂಹ ಅಡಿಗ ಪತ್ರಿಕೆಗೆ ಸ್ಪಷ್ಟನೆ ನೀಡಿದರು.

‘ಸಮೀಕ್ಷೆ’ಗಳ ಬೆನ್ನೇರಿ ಗದ್ದುಗೆಯ ಕನಸು

● ರಾಜೇಶ್ ರೈ ಚಟ್ಲ

ವಿಧಾನಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆಗೆ ಇದೇ ಮೊದಲ ಬಾರಿಗೆ ಪ್ರಮುಖ ಮೂರೂ ಪಕ್ಷಗಳು (ಕಾಂಗ್ರೆಸ್, ಬಿಜೆಪಿ, ಜೆಡಿಎಸ್) ಕ್ಷೇತ್ರವಾರು ಸಮೀಕ್ಷೆಗಳ ಮೊರೆ ಹೋಗಿದ್ದವು. ಕ್ಷೇತ್ರ ಗೆಲ್ಲಲು ಕಾಸ್ಟ್ (ಜಾತಿ), ಕ್ಯಾಂಡಿಡೇಟ್ (ಅಭ್ಯರ್ಥಿ), ಕ್ಯಾಶ್ (ಹಣ)– ಮೂರು ‘ಸಿ’ಗಳು ಮುಖ್ಯ ಎನ್ನುವುದು ಸಾಮಾನ್ಯ ಅಭಿಪ್ರಾಯ. ಈ ಮೂರು ಅಂಶಗಳನ್ನು ಕೇಂದ್ರವಾಗಿಟ್ಟುಕೊಂಡು, ‘ಗೆಲುವೊಂದೇ ಮಾನದಂಡ’ವೆಂದು ಪರಿಗಣಿಸಿ ಗೆಲ್ಲುವ ಕಲಿಗಳ ಶೋಧ ಮತ್ತು ಅದಕ್ಕೆ ಪೂರಕ ಕಾರ್ಯತಂತ್ರ ರೂಪಿಸಲು ಪಕ್ಷಗಳು ಸಮೀಕ್ಷೆಗಳನ್ನು ಮಾಡಿವೆ. ಪ್ರತ್ಯೇಕ ಏಜೆನ್ಸಿಗಳನ್ನು ನೇಮಿಸಿಕೊಂಡು ‘ಜನಾಭಿಪ್ರಾಯ’ ಸಂಗ್ರಹಿಸಲು ಕೋಟಿಗಟ್ಟಲೆ ಹಣ ವ್ಯಯ ಮಾಡಿವೆ.

ಚುನಾವಣೆಗಳಲ್ಲಿ ಗೆಲುವಿನ ಅಂಶದ ಮೇಲೆ ಟಿಕೆಟ್ ಹಂಚಿಕೆ ಅವಲಂಬಿತವಾಗಿರುತ್ತದೆ. ಅದರಲ್ಲಿ ಅಭ್ಯರ್ಥಿಯ ಜಾತಿ ಮತ್ತು ಸಮುದಾಯವು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಜೊತೆಗೆ, ಹಿಂದಿನ ಅವಧಿಯ ಕಾರ್ಯಕ್ಷಮತೆ, ಜನಪ್ರಿಯತೆ, ಸಂಘಟನಾ ಕೌಶಲ, ಪಕ್ಷ ಚಟುವಟಿಕೆಯೂ ಮುಖ್ಯವಾಗುತ್ತದೆ. ಚುನಾವಣೆಗೆ ಆರು ತಿಂಗಳು ಇರುವಾಗಲೇ 150 ಕ್ಷೇತ್ರಗಳಿಗೆ ಅಭ್ಯರ್ಥಿ ಘೋಷಿಸಿ, ಅಖಾಡಕ್ಕಿಳಿಯಲು ಕಾಂಗ್ರೆಸ್ ಚಿಂತನೆ ನಡೆಸಿತ್ತು. ಆ ಮೂಲಕ, ಕೊನೆ ಕ್ಷಣದಲ್ಲಿ ಅಭ್ಯರ್ಥಿಯ ಹೆಸರು ಪ್ರಕಟಿಸುವುದರಿಂದ ಎದುರಾಗುವ ಅಪಸ್ವರ, ಭಿನ್ನಮತದ ಸುಳಿಯಿಂದ ಪಾರಾಗುವ ಆ ಪಕ್ಷದ ನಾಯಕರು ಮುಂದಾಗಿದ್ದರು. ಆಡಳಿತರೂಢ ಬಿಜೆಪಿ ಕೈಯಿಂದ ಅಧಿಕಾರ ಚುಕ್ಕಾಣಿ ಕಿತ್ತುಕೊಳ್ಳಬೇಕೆಂದು ಪಣ ತೊಟ್ಟಿರುವ ಕಾಂಗ್ರೆಸ್, ತಾನು ನಡೆಸಿದ್ದ ಸಮೀಕ್ಷೆಗಳ ಫಲಿತಾಂಶ, ದತ್ತಾಂಶಗಳನ್ನು ಮುಂದಿಟ್ಟುಕೊಂಡು, ಅಳೆದುತೂಗಿ ಬಹುತೇಕ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದೆ.

ಚುನಾವಣೆಯ ಹೊಸ್ತಿಲಲ್ಲಿ ಕಾಂಗ್ರೆಸ್ಸಿಗಾಗಿ ಚುನಾವಣಾ ನೀತಿ ತಜ್ಞ ಸುನೀಲ್ ಕನುಗೋಲ್ ನೇತೃತ್ವದ ತಂಡ ರಾಜ್ಯದ ಎಲ್ಲ 224 ಕ್ಷೇತಗಳಲ್ಲಿ ಅಭ್ಯರ್ಥಿಗಳ ಗೆಲ್ಲುವ ಸಾಧ್ಯತೆಯನ್ನು ಆಧರಿಸಿ ಸಮೀಕ್ಷೆ ನಡೆಸಿದೆ. ಈ ವರದಿಯನ್ನು ನವೆಂಬರ್ ತಿಂಗಳ ಕೊನೆಯಲ್ಲಿಯೇ ಪಡೆದುಕೊಂಡಿದ್ದ ಎಐಸಿಸಿ, ಅದರಲ್ಲಿರುವ ಅಂಶಗಳನ್ನು ಆಧರಿಸಿ ಡಿಸೆಂಬರ್‌ನಲ್ಲಿ ಕನಿಷ್ಠ 150 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಮುಂದಾಗಿತ್ತು. ಕನುಗೋಲ್ ತಂಡ ನಡೆಸಿದ್ದ ‘ಜನಾಭಿಪ್ರಾಯ’, ಕರ್ನಾಟಕದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಆಶಾದಾಯಕವಾಗಿದೆ ಎಂಬ ವರದಿ ನೀಡಿತ್ತು. ಪಕ್ಷದ ಪರವಾದ ವಾತಾವರಣ ಇದ್ದರೂ ಬಿಜೆಪಿ ಭಾರಿ ಪೈಪೋಟಿ ನೀಡುವುದು ಖಚಿತ. ಈ ಪೈಪೋಟಿ ಎದುರಿಸಿ, ನೂರರ ಗಡಿ ದಾಟಬೇಕಿದ್ದರೆ ಪ್ರಚಾರ, ಕಾರ್ಯತಂತ್ರದ ಶೈಲಿಯನ್ನು ಪುನರ್ ರೂಪಿಸಿಕೊಳ್ಳಬೇಕಾದ ಅಗತ್ಯದ ಬಗ್ಗೆಯೂ ಸಮೀಕ್ಷೆಯ ದತ್ತಾಂಶಗಳನ್ನು ಆಧರಿಸಿ ಸಲಹೆ ಕೊಟ್ಟಿತ್ತು. ಅದನ್ನು ಆಧರಿಸಿ ಪಕ್ಷ ಸಂಘಟನೆ ಬಲಪಡಿಸಿ, ಅಧಿಕಾರ ಗದ್ದುಗೆ ಹಿಡಿಯಲು ರೂಪಿಸಿಕೊಳ್ಳಬೇಕಾದ ಕಾರ್ಯತಂತ್ರವನ್ನೂ ಕಾಂಗ್ರೆಸ್ ಬದಲಿಸಿಕೊಂಡಿದೆ.

ಬಿಜೆಪಿ ಕೂಡಾ ತನ್ನ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮೊದಲು ಆಂತರಿಕ ಪರಿಶೀಲನೆಯ ಪ್ರಕ್ರಿಯೆ ನಡೆಸಿದೆ. ಕಳೆದೊಂದು ವರ್ಷದಲ್ಲಿ 10 ಕ್ಕೂ ಹೆಚ್ಚು ಸಮೀಕ್ಷೆಗಳನ್ನು ಕ್ಷೇತ್ರವಾರು ನಡೆಸಿದೆ. ಪಕ್ಷದ ವತಿಯಿಂದ ಮೂರರಿಂದ ನಾಲ್ಕು ಬಾರಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ವೈಯಕ್ತಿಕವಾಗಿ ನಾಲ್ಕು ಬಾರಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವೈಯಕ್ತಿಕವಾಗಿ ಎರಡರಿಂದ ಮೂರು ಬಾರಿ ಸಮೀಕ್ಷೆಗಳನ್ನು ನಡೆಸಿದ್ದಾರೆ. ಕಳೆದ ಲೋಕಸಭಾ ಚುನಾವಣೆಯಲ್ಲಿ 25 ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ ಅಭೂತಪೂರ್ವ ರೀತಿಯಲ್ಲಿ ವಿಜಯ ಸಾಧಿಸಿತ್ತು. ಇದನ್ನು ಗಮನದಲ್ಲಿಟ್ಟುಕೊಂಡು, ಬಿಜೆಪಿ ಈವರೆಗೆ ಗೆಲ್ಲಲಾಗದ ವಿಧಾನಸಭಾ ಕ್ಷೇತ್ರಗಳಲ್ಲಿ ಜಯಿಸಲು ಮಾಡಬೇಕಾದ ಕಾರ್ಯತಂತ್ರಗಳಿಗೆ ಸಮೀಕ್ಷೆಯ ಮೊರೆ ಹೋಗಿತ್ತು. ಆಡಳಿತ ವಿರೋಧಿ ಅಲೆಯನ್ನು ಮೆಟ್ಟಿ ನಿಲ್ಲಲು ಹೊಸ ಅಭ್ಯರ್ಥಿಗಳನ್ನು ಕಣಕ್ಕಿಳಿಸಲು ಮುಂದಾಗಿದ್ದೂ ಸಮೀಕ್ಷಾ ವರದಿಯನ್ನು ಆಧರಿಸಿಯೇ.

ಇನ್ನು ಜೆಡಿಎಸ್ ಪಕ್ಷ ಚುನಾವಣಾ ತಯಾರಿಯ ಮೇಲುಸ್ತುವಾರಿ ಮತ್ತು ಸಲಹೆ ನೀಡುವುದಕ್ಕಾಗಿ ರಚಿಸಿರುವ ‘ವಾರ್ ರೂಂ’ನಿಂದಲೇ ಸಮೀಕ್ಷೆಗಳನ್ನು ಮಾಡಿಸಿದೆ. ವಿವಿಧ ಕ್ಷೇತ್ರದ ವೃತ್ತಿಪರರನ್ನು ಒಳಗೊಂಡಿರುವ 300ಕ್ಕೂ ಹೆಚ್ಚು ಜನರು ಈ ವಾರ್ ರೂಂನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಂದಲೇ ನಿಯಮಿತವಾಗಿ ವರದಿ ಪಡೆದಿರುವ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ, ಗೆಲುವಿನ ಸಾಧ್ಯತೆ ಇರುವ ಕ್ಷೇತ್ರಗಳಲ್ಲಿ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದಾರೆ. ಚುನಾವಣಾ ಕಾರ್ಯತಂತ್ರ ಮತ್ತು ಸಮೀಕ್ಷೆಯಲ್ಲಿ ಮುಂಚೂಣಿಯಲ್ಲಿರುವ ಸಂಸ್ಥೆಗಳ ನೆರವನ್ನು ಜೆಡಿಎಸ್ ಪಡೆದಿಲ್ಲ. ಸ್ವತಂತ್ರ ವಾರ್ ರೂಂನಿಂದಲೇ ಸಮೀಕ್ಷೆ ನಡೆಸುವ ಹೊಸ ಪ್ರಯೋಗವನ್ನು ಕುಮಾರಸ್ವಾಮಿ ಮಾಡಿದ್ದರು. ಅವರ ಸಿಬ್ಬಂದಿಯೊಬ್ಬರು ನೇರವಾಗಿ ಸಮೀಕ್ಷೆಯ ಮೇಲೆ ನಿಗಾ ಇರಿಸಿದ್ದರು ಎನ್ನುತ್ತವೆ ಜೆಡಿಎಸ್ ಮೂಲಗಳು.

(ಪೂರಕ ಮಾಹಿತಿ– **ಎಸ್.ರವಿಪ್ರಕಾಶ್ ಮತ್ತು ವಿ.ಎಸ್. ಸುಬ್ರಹ್ಮಣ್ಯ**)

ಆರು ತಿಂಗಳು: ಎಂಟು ‘ಜನಾಭಿಪ್ರಾಯ’

- ಅಭ್ಯರ್ಥಿಗಳ ಆಯ್ಕೆ, ಪ್ರಚಾರ ಕಾರ್ಯತಂತ್ರ ರೂಪಿಸಲು ಕಾಂಗ್ರೆಸ್ ಆರು ತಿಂಗಳ ಅವಧಿಯಲ್ಲಿ ಎಲ್ಲ 224 ಕ್ಷೇತ್ರಗಳಲ್ಲಿ ಎಂಟು ಸಮೀಕ್ಷೆಗಳು
- ಚುನಾವಣಾ ನೀತಿತಜ್ಞ ಸುನೀಲ್ ಕನುಗೋಲ್ ನೇತೃತ್ವದ ‘ಇನ್‌ಕ್ಲ್ಯೂಸಿವ್ ಮೈಂಡ್ಸ್’ ತಂಡದಿಂದ 5 ಸಮೀಕ್ಷೆ
- ‘ಡಿಸೈನ್ ಬಾಕ್ಸ್’ ತಂಡದಿಂದ ಮೂರು ಸಮೀಕ್ಷೆ
- ಕೆಲವು ಕ್ಷೇತ್ರಗಳ ಮೇಲೆ ಮಾತ್ರ ನಿಗಾ ಇಟ್ಟು ‘ಅಡೋಸ್ಪಿಯರ್ ಇಂಡಿಯಾ’ ತಂಡದಿಂದ ಸಮೀಕ್ಷೆ
- ಎಲ್ಲ ಸಮೀಕ್ಷೆಗಳು ರಾಜ್ಯದಲ್ಲಿ ಕಾಂಗ್ರೆಸ್ ಪರ ವಾತಾವರಣ ಇರುವುದನ್ನು ತೋರಿಸಿವೆ
- ಆರಂಭದ 2–3 ಸಮೀಕ್ಷೆಗಳಲ್ಲಿ ಕರಾವಳಿ ಭಾಗದಲ್ಲಿ ಪಕ್ಷಕ್ಕೆ ಪೂರಕ ಸ್ಥಿತಿ ವ್ಯಕ್ತವಾಗಿರಲಿಲ್ಲ. ಆದರೆ, ನಂತರ ಸಮೀಕ್ಷೆಗಳು ಆ ಭಾಗದಲ್ಲೂ ಕೆಲವು ಸ್ಥಾನಗಳನ್ನು ಪಕ್ಷ ಗೆಲ್ಲುವ ಸಾಧ್ಯತೆಯನ್ನು ತೋರಿಸಿವೆ

ನಾಲ್ಕು ಸಮೀಕ್ಷೆ: ಹೊಸಬರಿಗೆ ಅವಕಾಶ

- ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಂದ ಮೂರು ಪ್ರತ್ಯೇಕ ಸಂಸ್ಥೆಗಳ ಮೂಲಕ ಸಮೀಕ್ಷೆ
- ಮೂರು ಸಂಸ್ಥೆಗಳ ಸಮೀಕ್ಷೆ ಫಲಿತಾಂಶ ವಿಭಿನ್ನವಾಗಿದ್ದರಿಂದ ನಾಲ್ಕನೇ ಸಮೀಕ್ಷೆ
- ನಾಲ್ಕನೇ ಸಮೀಕ್ಷೆ ಆಧರಿಸಿ ಹೊಸಬರಿಗೆ ಅವಕಾಶ. ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದ ಶಾಸಕರಿಗೆ ಕೊಕ್
- ಅಮಿತ್ ಶಾ ಅವರಿಗೆ ಕೆಲಸ ಮಾಡುವ ನಾಲ್ಕನೇ ಸಂಸ್ಥೆಯ ಸುಮಾರು 400ಕ್ಕೂ ಹೆಚ್ಚು ಮಂದಿ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಟಿಕೆಟ್ ಹಂಚಿಕೆಗೆ ಮೊದಲು ನಿರ್ಣಾಯಕ ಎನಿಸಿದ 30 ಕ್ಷೇತ್ರಗಳಲ್ಲಿ ತುರ್ತು ಸಮೀಕ್ಷೆಯನ್ನು ನಡೆಸಿದ ಬಳಿಕ ಟಿಕೆಟ್
- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 2– 3 ಸಮೀಕ್ಷೆಗಳನ್ನು ಮಾಡಿಸಿದ್ದಾರೆ. ಅದನ್ನು ಆಧರಿಸಿ ತಮ್ಮ ಕಾರ್ಯತಂತ್ರ ಬದಲಿಸಿಕೊಂಡಿದ್ದಾರೆ.

ವಾರ್ ರೂಂನಿಂದ ಸ್ವತಂತ್ರ ಸಮೀಕ್ಷೆ

- ಜೆಡಿಎಸ್ ಪಕ್ಷದ ಸಂಘಟನೆ ಪ್ರಬಲವಾಗಿರುವ ಕ್ಷೇತ್ರಗಳಲ್ಲಿ ವಿಸ್ತೃತವಾದ ಸಮೀಕ್ಷೆ
- ಇತರ ಪಕ್ಷಗಳಿಂದ ಪ್ರಭಾವಿ ಮುಖಂಡರು ಪಕ್ಷಾಂತರ ಮಾಡುವ ಸಾಧ್ಯತೆ ಇದ್ದ ಕ್ಷೇತ್ರಗಳಲ್ಲೂ ನಿರಂತರ ಸಮೀಕ್ಷೆ
- ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳು ವಿವಿಧ ಸಂಸ್ಥೆಗಳಿಂದ ನಡೆಸಿದ್ದ ಸಮೀಕ್ಷೆಗಳ ವರದಿಗಳೂ ಕುಮಾರಸ್ವಾಮಿ ಅವರಿಗೆ ಲಭ್ಯ
- ಎದುರಾಳಿ ಪಕ್ಷಗಳ ಸಮೀಕ್ಷಾ ವರದಿ ಹಾಗೂ ತಮ್ಮ ವಾರ್ ರೂಂನ ಸ್ವತಂತ್ರ ಸಮೀಕ್ಷೆಯ ವರದಿಗಳಲ್ಲಿನ ಮಾಹಿತಿ, ಅಂಕಿಅಂಶದ ಪರಿಶೀಲನೆ



ಸೆಲೆಬ್ರಿಟಿ ಮಾತು

ಜವಾಬ್ದಾರಿಯುತ ನಡೆಯಾಗಬೇಕು

ಪ್ರೊ.ಜಿ.ಎಸ್.ಜಯದೇವ, ಲೇಖಕ, ಶಿಕ್ಷಣ ತಜ್ಞ

ಮತದಾನ ಎನ್ನುವುದು ವ್ಯಾಪಾರ ಅಥವಾ ಲಾಭದ ಪ್ರಕ್ರಿಯೆಯಾಗದೇ ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿಯುತ ನಡೆಯಾಗಬೇಕು. ನಮ್ಮ ಭವಿಷ್ಯವನ್ನು ನಾವೇ ಆಯ್ಕೆ ಮಾಡಿಕೊಳ್ಳುವ ಸಂದರ್ಭ ಇದು. ನಮ್ಮ ಸುತ್ತಲಿನ ಸ್ಥಿತಿಗತಿಗಳು, ನಿರ್ಧರಿಸುವ ಹೊಣೆಗಾರಿಕೆಯ ಕೆಲಸ. ಮನೆಯಲ್ಲಿ ಹೆಣ್ಣುಮಗಳಿಗೆ ಮದುವೆ ಮಾಡುವಾಗ ವರನ ಬಗ್ಗೆ ವಿಚಾರಣೆ ಮಾಡಿ ನಿರ್ಧರಿಸುತ್ತೇವೆ. ಮತ ಹಾಕುವಾಗಲೂ ನಮಗೆ ಅಷ್ಟೇ ಜವಾಬ್ದಾರಿ ಇರಬೇಕು. ಪಕ್ಷಕ್ಕಿಂತಲೂ ಚುನಾವಣೆಯಲ್ಲಿ ಕಣಕ್ಕಿಳಿದಿರುವ ವ್ಯಕ್ತಿ ಒಳ್ಳೆಯವನೇ ಎನ್ನುವುದನ್ನು ನೋಡಬೇಕು. ಪಕ್ಷ ಚೆನ್ನಾಗಿದ್ದರೂ, ವ್ಯಕ್ತಿ ನೀಚನಾಗಿದ್ದರೆ ಪ್ರಯೋಜನ ಇರುವುದಿಲ್ಲ.

ಪ್ರಜಾ ಪತ್ರ

ಮತದಾನ ನಮ್ಮ ಹಕ್ಕು

ಡಾ. ಬಿ.ಆರ್. ಅಂಬೇಡ್ಕರ್ ಭಾರತೀಯರಿಗೆ ಸಂವಿಧಾನಬದ್ಧವಾಗಿ ಮತದಾನದ ಹಕ್ಕು ನೀಡಿದ್ದಾರೆ. ನಮ್ಮ ಅಭ್ಯರ್ಥಿಯನ್ನು ನಾವೇ ಆಯ್ಕೆ ಮಾಡಿಕೊಳ್ಳುವ ಜವಾಬ್ದಾರಿಯನ್ನು ಸಂವಿಧಾನ ಮೂಲಕ ನೀಡಲಾಗಿದೆ. ಜಾತಿ ಭೇದ ಮಾಡದೆ, ಮತ ಮಾರಿಕೊಳ್ಳದೆ, ಅಭಿವೃದ್ಧಿ ಮಾಡುವವರನ್ನು ಆಯ್ಕೆ ಮಾಡಬೇಕು.

ಭಾಗ್ಯಲಕ್ಷ್ಮಿ ಮುಕೇಶ್, ಮಸ್ಕಿ, ರಾಯಚೂರು ಜಿಲ್ಲೆ

ಉತ್ತಮ ಸರ್ಕಾರ ರಚಿಸುವಲ್ಲಿ ಭಾಗಿಯಾಗಿ

ನಾವು ಉತ್ತಮ ಸರ್ಕಾರ ರಚಿಸಲು ಮತಗಟ್ಟೆಗೆ ತೆರಳಿ ರಾಜ್ಯದ ಪ್ರಗತಿಗೆ ಶ್ರಮಿಸುವ ವ್ಯಕ್ತಿಯನ್ನು ಆಯ್ಕೆ ಮಾಡಬೇಕು. ಯಾವುದೇ ರೀತಿಯ ಆಸೆಗಳಿಗೆ ಒಳಗಾಗದೆ, ಒತ್ತಡಕ್ಕೆ ಮಣಿಯದೆ ಮತ ಚಲಾಯಿಸಿ ಉತ್ತಮ ನಾಯಕನನ್ನು ಆಯ್ಕೆ ಮಾಡಬೇಕು.

ಕರುಣಾವತಿ. ಎಂ, ವಿದ್ಯಾರಣ್ಯಪುರ, ಬೆಂಗಳೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಓಡಾಟಕ್ಕೆ ಹೆಲಿಕಾಪ್ಟರ್ ಅವಲಂಬಿಸಿದ ತಾರಾ ಪ್ರಚಾರಕರು

ಹೆಲಿಕಾಪ್ಟರ್‌ಗಳಿಗೆ ಭಾರೀ ಬೇಡಿಕೆ

● ಓದೇಶ ಸಕಲೇಶಪುರ

ಹುಬ್ಬಳ್ಳಿ: ವಿಧಾನಸಭಾ ಚುನಾವಣೆಯ ಪ್ರಚಾರದ ಕಾವು ದಿನೇದಿನೇ ಏರುತ್ತಲೇ ಇದೆ. ಪ್ರಚಾರಕ್ಕಾಗಿ ಬಿಜೆಪಿ, ಕಾಂಗ್ರೆಸ್, ಜೆಡಿಎಸ್–ಈ ಮೂರು ಪಕ್ಷಗಳ ತಾರಾ ಪ್ರಚಾರಕರು ಹೆಲಿಕಾಪ್ಟರ್‌ಗಳ ಮೊರೆ ಹೋಗಿದ್ದಾರೆ. ಹೀಗಾಗಿ ಹೆಲಿಕಾಪ್ಟರ್‌ಗಳಿಗೆ ಭಾರೀ ಬೇಡಿಕೆ ಬಂದಿದೆ.

ಬೆಂಗಳೂರು ಮತ್ತು ಹುಬ್ಬಳ್ಳಿ ಸೇರಿದಂತೆ, ಕೆಲ ನಗರಗಳಲ್ಲಿರುವ ಹೆಲಿಕಾಪ್ಟರ್ ಸೇವೆ ಒದಗಿಸುವ ಏಜೆನ್ಸಿಗಳಿಗೆ ಈ ಚುನಾವಣೆಯು ಸುಗ್ಗಿಯಂತಾಗಿದೆ. ಪಕ್ಷಗಳು ತಮ್ಮ ನಾಯಕರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಚಾರಕ್ಕೆ ಕಳಿಸಲು ಹೆಲಿಕಾಪ್ಟರ್‌ಗಳ ವ್ಯವಸ್ಥೆ ಮಾಡಿವೆ.

100ಕ್ಕೂ ಹೆಚ್ಚು ಹೆಲಿಕಾಪ್ಟರ್: ‘ಚುನಾವಣೆ ಸಲುವಾಗಿಯೇ ರಾಜ್ಯದಲ್ಲಿ ನೂರಕ್ಕೂ ಹೆಚ್ಚು ಹೆಲಿಕಾಪ್ಟರ್‌ಗಳು ಹಾರಾಡುತ್ತಿವೆ’ ಎಂದು ಹುಬ್ಬಳ್ಳಿಯ ಬಾಹುಬಲಿ ಹೆಲಿಪ್ಯಾಡ್ ಟೂರಿಸಂ ಸಂಸ್ಥೆಯ ಮಾಲೀಕ ಬಾಹುಬಲಿ ಧರೆಪ್ಪನವರ ತಿಳಿಸಿದರು.

‘ರಾಜ್ಯದಲ್ಲಿ ಬೇಡಿಕೆಗೆ ತಕ್ಕಂತೆ ಹೆಲಿಕಾಪ್ಟರ್‌ಗಳು ಲಭ್ಯ ಇಲ್ಲದಿರುವುದರಿಂದ, ಮುಂಬೈ, ಪುಣೆ, ಪಣಜಿ ಹಾಗೂ ಹೈದರಾಬಾದ್‌ನಿಂದ ತರಿಸಿ ಕೊಂಡು ಬಾಡಿಗೆ ಕೊಡುತ್ತಿದ್ದೇವೆ. ಬಹಿರಂಗ ಪ್ರಚಾರ ಅಂತ್ಯವಾಗುವವರೆಗೆ ರಾಜಕಾರಣಿಗಳು ಹೆಲಿಕಾಪ್ಟರ್‌ಗಳನ್ನು ಕಾಯ್ದಿರಿಸಿದ್ದಾರೆ’ ಎಂದು ಹೇಳಿದರು.

ಹೆಲಿಪ್ಯಾಡ್ ಬಳಕೆಗೂ ಬಾಡಿಗೆ: ‘ಹೆಲಿಕಾಪ್ಟರ್‌ಗಳು ಇಳಿಯಲು ನಗರಗಳ ವಿಮಾನ ನಿಲ್ದಾಣಗಳ ಹೆಲಿಪ್ಯಾಡ್‌ಗಳನ್ನೇ ಸಾಮಾನ್ಯವಾಗಿ ಬಳಸಲಾಗುತ್ತವೆ. ಕೆಲವೆಡೆ ಖಾಸಗಿ ಹೆಲಿಪ್ಯಾಡ್‌ಗಳಿದ್ದರೆ, ಉಳಿದೆಡೆ ಪಕ್ಷಗಳೇ ತಾತ್ಕಾಲಿಕವಾಗಿ ನಿರ್ಮಿಸಿಕೊಂಡಿವೆ’ ಎಂದು ಬಾಹುಬಲಿ ಹೇಳಿದರು.

‘ಬೆಂಗಳೂರು, ಜಕ್ಕೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ, ಮೈಸೂರಿನ ವಿಮಾನ ನಿಲ್ದಾಣಗಳಲ್ಲಿರುವ ಹೆಲಿಪ್ಯಾಡ್ ಬಳಕೆಗಾಗಿ 8 ತಾಸಿಗೆ ಸುಮಾರು ₹25 ಸಾವಿರದಿಂದ ₹30 ಸಾವಿರ ಬಾಡಿಗೆ ಪಾವತಿಸಲಾಗುತ್ತಿದೆ. ಬಹುತೇಕ ರಾಜಕಾರಣಿಗಳು ವಿಮಾನ ನಿಲ್ದಾಣದಲ್ಲಿ ಇಳಿದು, ಅಲ್ಲಿಂದ ಕಾರಿನಲ್ಲಿ ಬೇರೆ ಸ್ಥಳಗಳಿಗೆ ಹೋಗುತ್ತಾರೆ’ ಎಂದು ತಿಳಿಸಿದರು.

ಧಾರವಾಡ ಜಿಲ್ಲೆಯ ಕುಂದಗೋಳಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಭೇಟಿ ನೀಡಿದ್ದ ಹಿನ್ನೆಲೆಯಲ್ಲಿ ಹೆಲಿಪ್ಯಾಡ್ ನಿರ್ಮಿಸಲಾಗಿತ್ತು. ಇದೀಗ, ಕ್ಷೇತ್ರದಲ್ಲಿ ಚುನಾವಣೆ ಪ್ರಚಾರಕ್ಕಾಗಿ ಹೆಲಿಕಾಪ್ಟರ್‌ನಲ್ಲಿ ಬರುವ ಬಿಜೆಪಿಯ ಕೇಂದ್ರ ಸಚಿವರು ಹಾಗೂ ರಾಜಕಾರಣಿಗಳು ಸಹ ಇದೇ ಹೆಲಿಪ್ಯಾಡ್ ಬಳಸುತ್ತಿದ್ದಾರೆ.

ಬಾಡಿಗೆ ದರ ಗಗನಕ್ಕೆ

‘ಬೇಡಿಕೆ ಹೆಚ್ಚಾಗಿರುವುದರಿಂದ ಹೆಲಿಕಾಪ್ಟರ್‌ಗಳ ಬಾಡಿಗೆಯೂ ಹೆಚ್ಚಾಗಿದೆ. ಮುಂಚೆ ಒಂದು ಗಂಟೆಗೆ ಸುಮಾರು ₹1 ಲಕ್ಷ ಇದ್ದ 2 ಆಸನದ ಹೆಲಿಕಾಪ್ಟರ್ ಬಾಡಿಗೆ, ಇದೀಗ ₹2 ಲಕ್ಷಕ್ಕೆ ಏರಿಕೆಯಾಗಿದೆ’ ಎಂದು ಬಾಹುಬಲಿ ಹೇಳಿದರು.

‘ಅದೇ ರೀತಿ 4 ಆಸನದ ಹೆಲಿಕಾಪ್ಟರ್ ₹2.30 ಲಕ್ಷ, 8 ಆಸನ ₹3.50 ಲಕ್ಷ, 15 ಆಸನಗಳ ಹೆಲಿಕಾಪ್ಟರ್ ಬಾಡಿಗೆ ₹5 ಲಕ್ಷದವರೆಗೆ ಇದೆ.ರಾಜಕೀಯ ಪಕ್ಷಗಳಿಂದ ಬೇಡಿಕೆ ಯಾವ ಮಟ್ಟಿಗೆ ಇದೆ ಎಂದರೆ, ಜಾತ್ರೆ ಸೇರಿದಂತೆ ಇತರ ಯಾವುದೇ ಬಾಡಿಗೆಗಳನ್ನು ನಾವು ಒಪ್ಪಿಕೊಳ್ಳುವ ಸ್ಥಿತಿಯಲ್ಲಿಲ್ಲ’ ಎಂದರು.

ಮಾತಿನೇಟು

ಬಿಜೆಪಿಯವರು ತಾವು ಮಾಡಿದ ಕೆಲಸದಿಂದ ಮತ ಬರುತ್ತದೆ ಎಂದು ಹೇಳುತ್ತಿಲ್ಲ. ಲಿಂಗಾಯತ ಮುಖ್ಯಮಂತ್ರಿ ಕುರಿತಾಗಿ ಸಿದ್ದರಾಮಯ್ಯ ಅವರ ಹೇಳಿಕೆಯಿಂದ ಅನುಕೂಲವಾಗುತ್ತಿದೆ ಎಂದು ಬಿಜೆಪಿಯವರು ನಂಬಿದ್ದರೆ, ಅವರು ಇಲ್ಲಿಯವರೆಗೆ ಏನೂ ಕೆಲಸ ಮಾಡಿಲ್ಲ ಎಂದೇ ಅರ್ಥ. ಅವರು ಹತಾಶೆಗೆ ಒಳಗಾಗಿದ್ದಾರೆ ಎಂಬುದನ್ನು ಇದು ಸೂಚಿಸುತ್ತದೆ. ಅವರು ಗೆಲ್ಲುವ ಸ್ಥಿತಿಯಲ್ಲಿ ಇಲ್ಲ. ಹಾಗಾಗಿ ಇಂಥ ಮಾತುಗಳನ್ನು ಆಡುತ್ತಾರೆ. ಮತ ಗಳಿಕೆಗಾಗಿ ಇಂತಹ ಮಾತು ಆಡಿದರೆ ಅದು ದೇಶಕ್ಕೆ ಹಾಗೂ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಲಿಂಗಾಯತರ ಡ್ಯಾಂ ಒಡೆದಿದ್ದೇವೆಂದು ಕೆಪಿಸಿಸಿ ಅಧ್ಯಕ್ಷರು ಹೇಳಿದ್ದಾರೆ. ಒಡೆಯುವುದು ಆ ಪಕ್ಷಕ್ಕೆ ಮೊದಲಿಂದಲೂ ಇರುವ ಚಾಳಿ. ದೇಶ ಒಡೆದರು, ಜಾತಿಗಳನ್ನು ಒಡೆದರು. ಎಡಗೈ– ಬಲಗೈ ಎಂದು ಒಡೆದು ಆಳುವ ನೀತಿಯ ವಿರುದ್ಧ ಒಳ ಮೀಸಲಾತಿ ನೀಡಿ ಡ್ಯಾಂ ಅನ್ನು ಬಿಗಿಗೊಳಿಸಿದ್ದೇವೆ. ಹಿಂದುತ್ವದ ಡ್ಯಾಂ ಎತ್ತರವನ್ನು ಮತ್ತಷ್ಟು ಹೆಚ್ಚಿಸಿದ್ದೇವೆ. ಅನುಭವ ಮಂಟಪ, ಕೆಂಪೇಗೌಡರ ಪ್ರತಿಮೆ ಸ್ಥಾಪಿಸಿದ್ದೇವೆ. ಎಲ್ಲ ಸಮುದಾಯಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೇವೆ. ಅಭಿವೃದ್ಧಿ ಅಸ್ತ್ರ ನಮ್ಮ ಕೈಯಲ್ಲಿದೆ.

ಸಿ.ಟಿ.ರವಿ. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

‘ಮಣಿಕಂಠ ಪರ ಪ್ರಧಾನಿ ಮೋದಿ ಪ್ರಚಾರ’

ಚಿತ್ತಾಪುರ (ಕಲಬುರಗಿ): ‘ಚಿತ್ತಾಪುರ ವಿಧಾನಸಭಾ ಕ್ರೇತ್ರದ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ ಪರ ಪ್ರಚಾರ ಮಾಡಲು ಪ್ರಧಾನಿ ನರೇಂದ್ರ ಮೋದಿ ಅವರು ಕ್ಷೇತ್ರಕ್ಕೆ ಬರಲಿದ್ದಾರೆ’ ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿದರು.

‘ಪ್ರಧಾನಿ ಮೋದಿ ಅವರು ಮೇ 2ರಂದು ಕಲಬುರಗಿಯಲ್ಲಿ ರೋಡ್ ಶೋ ನಡೆಸಿ ವಾಪಸ್ ತೆರಳುವರು. ಮೇ 6ರಂದು ಚಿತ್ತಾಪುರ ಕ್ಷೇತ್ರದ ರಾವೂರ ಸಮೀಪದ ಸಮಾವೇಶ ನಡೆಸಲಾಗುವುದು ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶಿಕ್ಷೆಗೆ ಒಳಗಾದ ಕಳ್ಳನ ಪರವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮತ ಕೇಳಲು ಬರುತ್ತಿದ್ದಾರೆ. ಅವರಲ್ಲಿ ಯಾವ ನೈತಿಕತೆಯಿದೆ?
ಪ್ರಿಯಾಂಕ್ ಖರ್ಗೆ ಚಿತ್ತಾಪುರ ಶಾಸಕ

ಮಣಿಕಂಠ ಮೇಲೆ ಕರ್ನಾಟಕ, ತೆಲಂಗಾಣ ಮತ್ತು ಮಹಾರಾಷ್ಟ್ರದ ವಿವಿಧ ಪೊಲೀಸ್ ಠಾಣೆಗಳಲ್ಲಿ 40 ಪ್ರಕರಣಗಳು ದಾಖಲಾಗಿವೆ. ಯಾದಗಿರಿ ಜಿಲ್ಲಾ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿರುವ ಮಣಿಕಂಠ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ.

ರಕ್ಷಣಾ ಇಲಾಖೆಗೆ ಸೇರಿದ ಪ್ರದೇಶದಲ್ಲಿ ಪ್ರಚಾರಕ್ಕೆ ಕಾಂಗ್ರೆಸ್ ಆಕ್ಷೇಪ

ನೌಕಾನೆಲೆ ಜಾಗದಲ್ಲಿ ಬಿಜೆಪಿ ಸಮಾವೇಶ?

● ಗಣಪತಿ ಹೆಗಡೆ

ಕಾರವಾರ: ವಿಧಾನಸಭೆ ಚುನಾವಣೆ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಉತ್ತರ ಕನ್ನಡ ಜಿಲ್ಲೆಗೆ ಕರೆಯಿಸಲು ಬಿಜೆಪಿ ಜಿಲ್ಲಾ ಘಟಕ ಪ್ರಯತ್ನಿಸುತ್ತಿದೆ. ಆದರೆ ಸಮಾವೇಶಕ್ಕಾಗಿ ನೌಕಾನೆಲೆಯ ಅಧೀನದಲ್ಲಿರುವ ಜಾಗವನ್ನು ಗುರುತಿಸಿರುವುದು ಆಕ್ಷೇಪಕ್ಕೆ ಕಾರಣವಾಗಿದೆ.

ಬಿಜೆಪಿ ಮೂಲಗಳ ಪ್ರಕಾರ ಮೇ 1 ರಿಂದ 3ರ ಅವಧಿಯಲ್ಲಿ ಸಮಾವೇಶಕ್ಕೆ ಅವಕಾಶ ಕೇಳಲಾಗಿದೆ. ಮೋದಿ ಜಿಲ್ಲೆಯಲ್ಲಿ ಸಮಾವೇಶ ನಡೆಸಲು ಒಪ್ಪಿದರೆ 20 ಎಕರೆಗೂ ಹೆಚ್ಚು ವಿಶಾಲವಾದ ಜಾಗದ ಅಗತ್ಯವಿದೆ ಎಂಬ ಕಾರಣಕ್ಕೆ ವಾರದ ಹಿಂದಿನಿಂದಲೂ ಬಿಜೆಪಿ ಸೂಕ್ತ ಜಾಗದ ಹುಡುಕಾಟ ನಡೆಸಿತ್ತು. ಕುಮಟಾದಲ್ಲಿ ಮತ್ತು ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿ ಗ್ರಾಮದ ಬಳಿಯ ಕಂಚಿನಬೈಲ್‌ನಲ್ಲಿಯೂ ಜಾಗ ಗುರುತಿಸಲಾಗಿತ್ತು.

ಕಂಚಿನಬೈಲ್‌ನಲ್ಲಿ ಗುರುತಿಸಲಾದ ಸರ್ವೆ ನಂ.10, 11 ಮತ್ತು 51ರ ಜಾಗದಲ್ಲೇ ಸಮಾವೇಶ ನಡೆಸಲು ಮುಖಂಡರು ಅಂತಿಮಗೊಳಿಸಿದ್ದಾರೆ ಎಂದು ಬಿಜೆಪಿ ಮೂಲಗಳು ಖಚಿತಪಡಿಸಿವೆ. ಆದರೆ ಈ ಜಾಗ ನೌಕದಳಕ್ಕೆ ಸೇರಿದೆ. ಹೀಗಾಗಿ ರಕ್ಷಣಾ ಇಲಾಖೆಯ ಜಾಗದಲ್ಲಿ ಪಕ್ಷದ ಪ್ರಚಾರ ಸಮಾವೇಶ ನಡೆಸಲು ಮುಂದಾಗಿರುವುದಕ್ಕೆ ಕಾಂಗ್ರೆಸ್ ಆಕ್ಷೇಪಿಸಿದೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸಮಾವೇಶ ನಡೆಸಲು ಬಿಜೆಪಿ ಗುರುತಿಸಿದ ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿಯಲ್ಲಿರುವ ನೌಕಾದಳದ ಸ್ವಾಧೀನದಲ್ಲಿರುವ ಜಾಗ.

ರಕ್ಷಣಾ ಇಲಾಖೆಯ ಜಾಗದಲ್ಲಿ ಬಿಜೆಪಿ ಸಮಾವೇಶ ನಡೆಸಲು ಅವಕಾಶ ಕಲ್ಪಿಸಿದರೆ ಅದು ಅಧಿಕಾರದ ದುರುಪಯೋಗವಾಗಲಿದೆ. ಈ ಬಗ್ಗೆ ಕೋರ್ಟ್ ಮೆಟ್ಟಿಲೇರುತ್ತೇವೆ.
ಬಿ.ಕೆ.ಹರಿಪ್ರಸಾದ್ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ

ನೌಕಾನೆಲೆ ಯೋಜನೆಗೆ ಭೂಮಿ ನೀಡಿ ಸಂತ್ರಸ್ತರಿಗೆ ಪರಿಹಾರ ನೀಡಲು ಕಾಂಗ್ರೆಸ್ ಸರ್ಕಾರಕ್ಕೆ ಸಾಧ್ಯವಾಗಿರ ಲಿಲ್ಲ. ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಪರಿಹಾರ ನೀಡಿತು.
ನಾಗರಾಜ ನಾಯಕ ಬಿಜೆಪಿ ಜಿಲ್ಲಾ ಘಟಕದ ವಕ್ತಾರ

‘ಮೋದಿ ನೇತೃತ್ವದಲ್ಲಿ ಸಮಾವೇಶ ಏರ್ಪಡಿಸಲು ತಯಾರಿ ಮಾಡಿಕೊಳ್ಳುತ್ತಿದ್ದೇವೆ. ರಾಷ್ಟ್ರೀಯ ಹೆದ್ದಾರಿ ಅಂಚಿನಲ್ಲೇ ಇರುವ ಜಾಗದಲ್ಲಿ ಕಾರ್ಯಕ್ರಮ ನಡೆಸಲು ನಿರ್ಧರಿಸಿದ್ದೇವೆ. ನೌಕಾದಳದ ಒಪ್ಪಿಗೆಗೆ ಮನವಿ ಮಾಡಿದ್ದೇವೆ’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ವೆಂಕಟೇಶ ನಾಯಕ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸಮೀಪದಲ್ಲೇ ನೌಕಾನೆಲೆ ಇರುವ ಕಾರಣ ಪ್ರಧಾನಿ ರಕ್ಷಣೆ ಹಿತದೃಷ್ಟಿ ಹಾಗೂ ಲಕ್ಷಾಂತರ ಕಾರ್ಯಕರ್ತರು ಸೇರುವ ಹಿನ್ನೆಲೆಯಲ್ಲಿ ಈಗ ಗುರುತಿಸಲಾದ ಜಾಗವೇ ಸೂಕ್ತ ಎಂಬ ಕಾರಣಕ್ಕೆ ಕಂಚಿನಬೈಲ್‌ನ ಜಾಗದಲ್ಲಿ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಅದು ನೌಕಾದಳದ ಅಧೀನದಲ್ಲಿ ಇದ್ದರೂ ನೌಕಾದಳದ ಚಟುವಟಿಕೆ ನಡೆಯುತ್ತಿರುವ ಸ್ಥಳ ಅಲ್ಲ’ ಎಂದು ಬಿಜೆಪಿ ಮುಖಂಡರೊಬ್ಬರು ಪ್ರತಿಪಾದಿಸಿದರು.

‘ಪ್ರಧಾನಿ ಭೇಟಿ ಬಗ್ಗೆ ಈವರೆಗೆ ಯಾವುದೇ ಪೂರ್ವ ಮಾಹಿತಿ ಬಂದಿಲ್ಲ. ಪ್ರಧಾನಿ ನೇತೃತ್ವದಲ್ಲಿ ಸಮಾವೇಶ ನಡೆಸಲು ರಾಜ್ಯ ಚುನಾವಣಾ ಆಯೋಗದ ಅನುಮತಿ ಪಡೆಯಬೇಕಾಗುತ್ತದೆ. ಜಿಲ್ಲಾ ಹಂತದಲ್ಲಿ ಅನುಮತಿ ಅಗತ್ಯವಿಲ್ಲ’ ಎಂದು ಜಿಲ್ಲಾಡಳಿತ ತಿಳಿಸಿದೆ. ನೌಕಾದಳದ ಅಧಿಕಾರಿಗಳು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಮಂಡ್ಯ ಜೆಡಿಎಸ್ ಬಂಡಾಯ: ಕಣದಲ್ಲಿ ಕೆ.ಎಸ್.ವಿಜಯ್ ಆನಂದ್

ಮಂಡ್ಯ:ಮಂಡ್ಯ ಕ್ಷೇತ್ರದ ಜೆಡಿಎಸ್ ಬಂಡಾಯ ಅಭ್ಯರ್ಥಿಯಾಗಿ ಕೆ.ವಿ.ಶಂಕರಗೌಡರ ಮೊಮ್ಮಗ, ಜನತಾ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್ ಕಣದಲ್ಲಿದ್ದಾರೆ.

ಪಕ್ಷದ ನಾಯಕರ ವಿರುದ್ಧ ಬಂಡೆದ್ದು ಶಾಸಕ ಸ್ಥಾನ ತೊರೆದಿರುವ ಎಂ.ಶ್ರೀನಿವಾಸ್ ಅವರ ‘ಸ್ವಾಭಿಮಾನಿ ಪಡೆ’ಯ ಪ್ರಮುಖರಾದ ವಿಜಯ್ ಆನಂದ್, ಎಚ್.ಎನ್.ಯೋಗೇಶ್ ಹಾಗೂ ಮುದ್ದನಘಟ್ಟ ಮಹಾಲಿಂಗೇಗೌಡ ನಾಮಪತ್ರ ಸಲ್ಲಿಸಿದ್ದರು. ಸೋಮವಾರ ಇಬ್ಬರು ನಾಮಪತ್ರ ವಾಪಸು ಪಡೆದರು.

ಬೆಂಬಲಿಗರ ಸಭೆಯಲ್ಲಿ ಮಾತನಾಡಿದ ಎಂ.ಶ್ರೀನಿವಾಸ್, ‘ಮೊದಲ ಪಟ್ಟಿಯಲ್ಲಿ ನನ್ನ ಹೆಸರು ಘೋಷಿಸಿ ನಂತರ ಬೇರೆಯವರಿಗೆ ಟಿಕೆಟ್ ನೀಡಿರುವುದರಿಂದ ಕ್ಷೇತ್ರದ ಜನರ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ. ಬಿ.ಆರ್.ರಾಮಚಂದ್ರ ಅವರಿಗೆ ಟಿಕೆಟ್ ನೀಡಿರುವುದನ್ನು ಒಪ್ಪಲು ಸಾಧ್ಯವಿಲ್ಲ. ನಾವೆಲ್ಲರೂ ಸೇರಿ ವಿಜಯ್ ಆನಂದ್ ಅವರನ್ನು ಗೆಲ್ಲಿಸಬೇಕು ಎಂದರು.

ಯಾವುದೇ ಸಿ.ಎಂ ಕಣ್ಣಲ್ಲಿ ನಾವು ನೀರು ಹಾಕಿಸಿಲ್ಲ– ಡಿಕೆಶಿ

ಬೆಂಗಳೂರು: ‘ಯಾವುದೇ ಲಿಂಗಾಯತ ನಾಯಕ ಅಥವಾ ಮುಖ್ಯಮಂತ್ರಿ ಕಣ್ಣಲ್ಲಿ ನಾವು (ಕಾಂಗ್ರೆಸ್) ನೀರು ಹಾಕಿಸಿಲ್ಲ’ ಎಂದು ಕೇಂದ್ರ ಸಚಿವ ಅಮಿತ್ ಶಾ ಅವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು.

‘ಲಿಂಗಾಯತ ಮುಖ್ಯಮಂತ್ರಿಗಳಿಗೆ ತಮ್ಮ ಅವಧಿ ಪೂರ್ಣಗೊಳಿಸಲು ಕಾಂಗ್ರೆಸ್ ಅವಕಾಶ ನೀಡಿಲ್ಲ’ ಎಂಬ ಶಾ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಅವರಿಗೆ ರಾಜ್ಯ ರಾಜಕೀಯ ಇತಿಹಾಸ ಗೊತ್ತಿಲ್ಲ. ನಾನು ವಿರೇಂದ್ರ ಪಾಟೀಲರ ಸರ್ಕಾರದ ಭಾಗವಾಗಿದ್ದೆ. ನಾವು ಬಿಜೆಪಿಯವರಂತೆ ಯಾವುದೇ ಮುಖ್ಯಮಂತ್ರಿಯಿಂದ ಕಣ್ಣೀರು ಹಾಕಿಸಿಲ್ಲ. ಯಡಿಯೂರಪ್ಪ ಅವರು ಅಧಿಕಾರದಿಂದ ಕೆಳಗೆ ಇಳಿಯುವಾಗ ಯಾವ ಮಾತು ಆಡಿದ್ದಾರೆ. ಅದಕ್ಕೆ ಕಾರಣವೇನು ಎನ್ನುವುದು ನನಗೆ ಗೊತ್ತಿದೆ’ ಎಂದರು.

‘ಬಿಜೆಪಿಗೆ ಯಡಿಯೂರಪ್ಪ ಅವರ ಕಣ್ಣೀರಿನ ಶಾಸ್ತಿ ಆಗಲಿದೆ. ಜಗದೀಶ ಶೆಟ್ಟರ್ ಮತ್ತು ಲಕ್ಷ್ಮಣ ಸವದಿ ಕಣ್ಣೀರು ಹಾಕದಿರಬಹುದು. ಆದರೆ, ಅವರ ಮನಸ್ಸು ಅತ್ತಿದೆ’ ಎಂದೂ ಹೇಳಿದರು.

ಲಿಂಗಾಯತ ಸಮುದಾಯದ ಕುರಿತ ಸಿದ್ದರಾಮಯ್ಯ ಹೇಳಿಕೆ ಬಗ್ಗೆ, ‘ಸಿದ್ದರಾಮಯ್ಯ ಪ್ರಬುದ್ಧರು. ಅವರಿಗೆ ಸಾಮಾನ್ಯ ಪ್ರಜ್ಞೆ ಇದೆ. ಅವರು ಸಮುದಾಯದ ಬಗ್ಗೆ ಮಾತನಾಡಿಲ್ಲ. ಸರ್ಕಾರದ ವಿಚಾರವಾಗಿ ಮಾತನಾಡಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

‘ಲಿಂಗಾಯತ ಸಮುದಾಯ ಬಿಜೆಪಿ ಜತೆಗಿದ್ದು, ಶೆಟ್ಟರ್ ಅವರಿಂದ ಕಾಂಗ್ರೆಸ್‌ಗೆ ಲಾಭ ಇಲ್ಲ’ ಎಂಬ ಶಾ ಹೇಳಿಕೆ ಬಗ್ಗೆ ಕೇಳಿದಾಗ, ‘ಲಿಂಗಾಯತರು ಕೇವಲ ಬಿಜೆಪಿ ಜತೆಗಿಲ್ಲ, ಕಾಂಗ್ರೆಸ್ ಜತೆಗೂ ಇದ್ದಾರೆ ಎಂದು ಹೇಳಿದರು.

ಕ್ಷೇತ್ರದ ಕೂಗು

● **ಕ್ಷೇತ್ರ: ವಿಜಯನಗರ**
● **ಶಾಸಕ: ಆನಂದ್ ಸಿಂಗ್** (ಬಿಜೆಪಿ)

- ವಿಜಯನಗರ ಕ್ಷೇತ್ರದಲ್ಲಿ ಕಬ್ಬು ಬೆಳೆಗಾರರು ಅತ್ಯಧಿಕ ಸಂಖ್ಯೆಯಲ್ಲಿದ್ದು, ಸಕ್ಕರೆ ಕಾರ್ಖಾನೆ ಆರಂಭಿಸಬೇಕೆನ್ನುವುದು ಬಹುವರ್ಷಗಳ ಪ್ರಮುಖ ಬೇಡಿಕೆ. ಕ್ಷೇತ್ರದಲ್ಲೇ ತುಂಗಭದ್ರಾ ಜಲಾಶಯವಿದ್ದರೂ ಶುದ್ಧ ಕುಡಿಯುವ ನೀರಿಗೆ ಹಾಹಾಕಾರವಿದೆ. ಕೊಳೆಗೇರಿ ನಿವಾಸಿಗಳಿಗೆ ನಿವೇಶನ ಕೊಡಬೇಕೆಂಬ ಬೇಡಿಕೆ ನನೆಗುದಿಗೆ ಬಿದ್ದಿದೆ. ಹಂಪಿಯಲ್ಲಿ ಮೂಲಸೌಕರ್ಯ ಮರೀಚಿಕೆಯಾಗಿದೆ.

● **ಕ್ಷೇತ್ರ: ಹೂವಿನಹಡಗಲಿ**
● **ಶಾಸಕ: ಪಿ.ಟಿ. ಪರಮೇಶ್ವರ ನಾಯ್ಕ** (ಕಾಂಗ್ರೆಸ್)

- ಸಿಂಗಟಾಲೂರು ಏತ ನೀರಾವರಿ ಯೋಜನೆ ಪೂರ್ಣಗೊಳಿಸಬೇಕೆಂಬ ದಶಕಗಳ ಬೇಡಿಕೆ ಈಗಲೂ ನನೆಗುದಿಗೆ ಬಿದ್ದಿದೆ. ಕ್ಷೇತ್ರದಿಂದ ಜನ ಹೆಚ್ಚಿನ ಸಂಖ್ಯೆಯಲ್ಲಿ ಕೆಲಸಕ್ಕೆ ಗುಳೆ ಹೋಗುತ್ತಾರೆ. ಸ್ಥಳೀಯವಾಗಿ ಉದ್ಯೋಗ ಸೃಷ್ಟಿಸಬೇಕೆಂಬ ಬೇಡಿಕೆ ಇದೆ.

● **ಕ್ಷೇತ್ರ: ಹಗರಿಬೊಮ್ಮನಹಳ್ಳಿ**
● **ಶಾಸಕ: ಭೀಮ ನಾಯ್ಕ** (ಕಾಂಗ್ರೆಸ್)

- ಭದ್ರಾ ಜಲಾಶಯದಿಂದ 14 ಕೆರೆಗಳಿಗೆ ನೀರು ತುಂಬಿಸಬೇಕೆಂಬ ಹಲವು ವರ್ಷಗಳ ಬೇಡಿಕೆ ಇನ್ನೂ ಈಡೇರಿಲ್ಲ. ತುಂಗಭದ್ರಾ ಜಲಾಶಯದ ಹಿನ್ನೀರು ಇರುವುದರಿಂದ ಕೈಗಾರಿಕೆಗಳನ್ನು ಸ್ಥಾಪಿಸಿ ಉದ್ಯೋಗ ಸೃಷ್ಟಿಸಬೇಕೆಂಬ ಬೇಡಿಕೆಯೂ ಈಡೇರಿಲ್ಲ. ಗುಳೆ ತಪ್ಪಿಲ್ಲ.

● **ಕ್ಷೇತ್ರ: ಹರಪನಹಳ್ಳಿ**
● **ಶಾಸಕ: ಕರುಣಾಕರ ರೆಡ್ಡಿ** (ಬಿಜೆಪಿ)

- ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆರೆಗಳನ್ನು ತುಂಬಿಸಬೇಕೆಂಬ ಬೇಡಿಕೆ ಇದೆ. ಆದರೆ, ಚುನಾವಣೆ ಘೋಷಣೆಗೂ ಕೆಲ ತಿಂಗಳ ಮುಂದೆ ಅದಕ್ಕೆ ಚಾಲನೆ ಕೊಡಲಾಗಿತ್ತು. ಆದರೆ, ಕಾಮಗಾರಿ ಕಳಪೆ ಎಂಬ ಆರೋಪಗಳು ಕೇಳಿ ಬಂದಿವೆ. ಕೆರೆ ತುಂಬಿಸುವ ಯೋಜನೆ ಪರಿಣಾಮಕಾರಿ ಅನುಷ್ಠಾನಕ್ಕೆ ತರಬೇಕೆಂಬುದು ಸ್ಥಳೀಯರ ಪ್ರಮುಖ ಬೇಡಿಕೆ.

● **ಕ್ಷೇತ್ರ: ಕೂಡ್ಲಿಗಿ**
● **ಶಾಸಕ: ಎನ್.ವೈ. ಗೋಪಾಲಕೃಷ್ಣ** (ಬಿಜೆಪಿ)

- ವಿಜಯನಗರ ಜಿಲ್ಲೆಯಲ್ಲಿ ಅತಿ ಹಿಂದುಳಿದ ತಾಲ್ಲೂಕು ಹಾಗೂ ಕ್ಷೇತ್ರವೆಂದರೆ ಕೂಡ್ಲಿಗಿ. ಉತ್ತಮ ವೈದ್ಯಕೀಯ ಸೌಲಭ್ಯ, ಕಿರು ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂಬ ದಶಕಗಳ ಬೇಡಿಕೆ ಕಾರ್ಯರೂಪಕ್ಕೆ ಬಂದಿಲ್ಲ. ಇದರ ಪರಿಣಾಮ ದೊಡ್ಡ ಪ್ರಮಾಣದಲ್ಲಿ ಕ್ಷೇತ್ರದ ಜನ ಬೇರೆಡೆ ವಲಸೆ ಹೋಗುತ್ತಾರೆ.

❦ ಸುಭಾಷಿತ ❦

ಅರಿತು ಮಾಡಿದ್ದು ಪಾಪ, ಮರೆತು ಮಾಡಿದ್ದು ಮನುಷ್ಯ ಸ್ವಭಾವ. -ತ.ರಾ.ಸು.

ಬೆಂಗಳೂರಿನಲ್ಲಿ ನೀರಿನ ಬವಣೆ ಉಲ್ಬಣಿಸದಂತೆ ನೋಡಿಕೊಳ್ಳಿ

ಬೆಂಗಳೂರಿನಲ್ಲಿ ಆಗಾಗ ಮಹಾಪೂರ ಉಂಟಾಗುವಷ್ಟು ಮಳೆ ಬಂದರೂ ಕುಡಿಯುವ ನೀರಿನ ಕೊರತೆಯನ್ನೂ ಈ ನಗರ ಎದುರಿಸಬೇಕಾದುದು ಒಂದು ವೈರುಧ್ಯ. ಈ ಬಾರಿಯ ಬೇಸಿಗೆ ಹಿಂದೆಂದಿಗಿಂತಲೂ ಪ್ರಖರವಾಗಿದೆ. ಸಹಜವಾಗಿಯೇ ಈ ದಿನಗಳಲ್ಲಿ ನೀರಿನ ದಾಹ ಹೆಚ್ಚಾಗಿದೆ. ಆದರೆ, ಬೇಸಿಗೆಯಲ್ಲಿ ಸೃಷ್ಟಿಯಾಗುವ ನೀರಿನ ಬೇಡಿಕೆಗೆ ತಕ್ಕಂತೆ ಮೊದಲೇ ಸೂಕ್ತ ಸಿದ್ಧತೆ ಮಾಡಿಕೊಳ್ಳಬೇಕಿದ್ದ ಜಲಮಂಡಳಿಯು ಅದನ್ನು ಸಮರ್ಪಕವಾಗಿ ಮಾಡಿಕೊಂಡಂತಿಲ್ಲ. ಹೀಗಾಗಿ ನಗರದ ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರಿನ ತೀವ್ರ ಕೊರತೆ ಎದುರಾಗಿದೆ. ನೂರು ಕಿ.ಮೀ.ಗಿಂತಲೂ ಹೆಚ್ಚು ದೂರದ ಕಾವೇರಿ ನದಿಯಿಂದ ಪಂಪ್ ಮಾಡಿ ತರುವ ನೀರನ್ನೇ ಬೆಂಗಳೂರು ಬಹುವಾಗಿ ಆಶ್ರಯಿಸಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿ ಈ ಸಲ ಕಡಿಮೆ ಮಳೆಯಾಗಿದ್ದು, ನೀರಿನ ಹರಿವು ಸಹ ಕಡಿಮೆ ಇದೆ. ಬೇಸಿಗೆಯಲ್ಲಿ ಸಾಮಾನ್ಯವಾಗಿ ನೀರಿನ ಬಳಕೆ ಶೇ 5ರಷ್ಟು ಹೆಚ್ಚಾಗುತ್ತದೆ. ನೀರು ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗಿಲ್ಲ ಎಂದು ಜಲಮಂಡಳಿಯೇನೋ ಹೇಳುತ್ತಿದೆ. ಹೀಗಿದ್ದೂ ನೀರು ಪೂರೈಕೆ ವ್ಯತ್ಯಯ ಆಗಿದೆ ಎಂದರೆ ನಿರ್ವಹಣೆಯ ವೈಫಲ್ಯವೇ ಇದಕ್ಕೆ ಕಾರಣ ಎಂದು ಅರ್ಥೈಸಬೇಕಾಗುತ್ತದೆ. ಬೆಂಗಳೂರಿನ ಪೂರ್ವ ಭಾಗದ ಒಎಂಬಿಆರ್ ಬಡಾವಣೆಯಲ್ಲಿ ಒಂದು ವಾರ ನೀರು ಪೂರೈಕೆಯಾಗಿಲ್ಲ ಎಂದು ವರದಿಯಾಗಿದೆ. ಮುಖ್ಯ ಜಲ ಸಂಗ್ರಹಾಗಾರದಿಂದ ನೀರು ಪೂರೈಕೆ ಆಗದಿರುವುದು, ವಿದ್ಯುತ್ ಸರಬರಾಜಿನಲ್ಲಿ ಪದೇಪದೇ ಅಡಚಣೆ ಆಗುತ್ತಿರುವುದು ಮತ್ತು ಪಂಪ್ ಮಾಡುವ ಮೋಟಾರ್ ದುರಸ್ತಿ ಮಾಡಬೇಕಾದುದು ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲು ಕಾರಣ ಎಂದು ಅಧಿಕಾರಿಗಳು ಹೇಳಿದ್ದಾರೆ. ಕಾರಣಗಳು ಏನೇ ಇರಲಿ, ವಾರಗಟ್ಟಲೆ ನೀರು ಪೂರೈಕೆ ಆಗದಿರುವುದಂತೂ ಸಮರ್ಥನೀಯವಲ್ಲ. ಸಮಸ್ಯೆಗಳ ಕುರಿತು ಹೇಳಿ ಕೊಂಡರೆ ಜಲಮಂಡಳಿಯಿಂದ ಸೂಕ್ತ ಸ್ಪಂದನ ಸಿಗುತ್ತಿಲ್ಲ ಎಂದೂ ನಾಗರಿಕರು ದೂರಿದ್ದಾರೆ. ಟ್ಯಾಂಕ್ ಮೂಲಕ ನೀರು ಪೂರೈಸುವವರ ಜತೆ ಅನೈತಿಕ ಮೈತ್ರಿ ಹೊಂದಿರುವ ಮಂಡಳಿಯ ಕೆಲವು ಅಧಿಕಾರಿಗಳು ಕೃತಕವಾಗಿ ನೀರಿನ ಅಭಾವ ಸೃಷ್ಟಿಸುತ್ತಿದ್ದಾರೆ ಎಂಬ ಆರೋಪವೂ ಕೇಳಿಬಂದಿದೆ.

ಕಾರಣಗಳು ಏನೇ ಇರಲಿ, ಕೆಲವು ಪ್ರದೇಶಗಳಿಗೆ ಸಮರ್ಪಕವಾಗಿ ನೀರು ಪೂರೈಕೆ ಆಗದಿರುವುದು ಸಮರ್ಥನೀಯವಲ್ಲ

ದಶಕಗಳ ಅವಧಿಯಲ್ಲಿ ಬೆಂಗಳೂರಿನ ನೀರಿನ ಬೇಡಿಕೆ ಮತ್ತು ಪೂರೈಕೆ ನಡುವೆ ಕಂದರ ಸೃಷ್ಟಿಯಾಗುತ್ತಾ ಬಂದಿರುವುದು ಎದ್ದು ಕಾಣುವ ಅಂಶ. ಸೋರಿಕೆ, ಅಪವ್ಯಯ ಮತ್ತು ಅಕ್ರಮ ಸಂಪರ್ಕಗಳು ಸಮಸ್ಯೆಯ ತೀವ್ರತೆಯನ್ನು ಮತ್ತಷ್ಟು ಹೆಚ್ಚಿಸಿವೆ. ನಗರದಲ್ಲಿ ಒಂದಾಗಿ ಹೋಗಿರುವ ಹಳ್ಳಿಗಳಿಗೆ ಒಂದೊಮ್ಮೆ ನೀರು ಪೂರೈಸುತ್ತಿದ್ದ ಜಲಮೂಲಗಳೆಲ್ಲ ಈಗ ಜೀವ ಕಳೆದುಕೊಂಡಿವೆ. ಮಳೆ ನೀರಿನ ಸಂಗ್ರಹದ ಕಡೆಗೆ ಏಕೋ ಸರ್ಕಾರ, ಸಮುದಾಯ ಎರಡಕ್ಕೂ ನಿರ್ಲಕ್ಷ್ಯ. ಕಾವೇರಿ ನೀರಿನ ಅಪವ್ಯಯವನ್ನು ತಪ್ಪಿಸಬೇಕು, ಶೌಚಾಲಯಗಳು, ಉದ್ಯಾನಗಳಲ್ಲಿ ಮಾತ್ರವಲ್ಲದೆ ವಾಹನಗಳನ್ನು ತೊಳೆಯಲು ಸಹ ಸಂಸ್ಕರಿಸಿದ ನೀರನ್ನೇ ಬಳಕೆ ಮಾಡಬೇಕು ಎಂದು ಜಲಮಂಡಳಿಯು ನಾಗರಿಕರಿಗೆ ಸಲಹೆ ನೀಡುತ್ತಲೇ ಬಂದಿದೆ. ಆದರೆ, ನಿತ್ಯ 144 ಕೋಟಿ ಲೀಟರ್‌ಗಳಷ್ಟು ತ್ಯಾಜ್ಯ ನೀರು ಉತ್ಪಾದನೆಯಾದರೆ 42.75 ಕೋಟಿ ಲೀಟರ್ ನೀರನ್ನು ಮಾತ್ರ ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತಿದೆ ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ರಚಿಸಿದ್ದ ಕೇಂದ್ರ ಮೇಲ್ವಿಚಾರಣಾ ಸಮಿತಿಯ ವರದಿಯಲ್ಲಿ ಹೇಳಲಾಗಿದೆ. ಸಂಸ್ಕರಿಸಿದ ನೀರಿನ ಬಳಕೆಗೆ ಜನ ಸಿದ್ಧವಿದ್ದರೂ ಪೂರೈಕೆ ಇಲ್ಲವಾಗಿದೆ. ಬೆಂಗಳೂರಿನಲ್ಲಿ ಸೇರ್ಪಡೆಯಾಗಿರುವ 110 ಹಳ್ಳಿಗಳ ಸ್ಥಿತಿಯಂತೂ ಇನ್ನೂ ಚಿಂತಾಜನಕವಾಗಿದೆ. ಈ ಪ್ರದೇಶಗಳ ಜನ, ಕೊಳವೆಬಾವಿ ಹಾಗೂ ಟ್ಯಾಂಕರ್ ಮೂಲಕ ಪೂರೈಕೆಯಾಗುತ್ತಿರುವ ನೀರನ್ನೇ ಹೆಚ್ಚಾಗಿ ಅವಲಂಬಿಸಬೇಕಾಗಿದೆ.

ಮಳೆ ನೀರು ಸಂಗ್ರಹದ ಪರಿಪಾಟ ನಗರದಾದ್ಯಂತ ಹೆಚ್ಚಿದರೆ ಮತ್ತು ಕೆರೆಗಳನ್ನು ಪುನರುಜ್ಜೀವನಗೊಳಿಸಿ ಶುದ್ಧ ನೀರು ಅಲ್ಲಿ ಸಂಗ್ರಹವಾಗುವಂತೆ ಮಾಡಿದರೆ ನೀರಿನ ವಿಷಯದಲ್ಲಿ ಬೆಂಗಳೂರು ಸ್ವಾವಲಂಬಿಯಾಗಬಹುದು ಎಂಬ ಸಲಹೆ ಪದೇ ಪದೇ ಕೇಳಿಬಂದಿದೆ. ಒಂದೊಮ್ಮೆ ಸಾವಿರಕ್ಕೂ ಅಧಿಕ ಕೆರೆಗಳಿದ್ದ ನಗರದಲ್ಲಿ ಈಗ ಕೇವಲ 200 ಕೆರೆಗಳು ಉಳಿದಿರುವುದು ಮತ್ತು ಅವುಗಳು ಕೂಡ ಮಾಲಿನ್ಯದ ಆಗರವಾಗಿರುವುದು ಕಳವಳಕಾರಿ. ನಗರದ ಬೇಡಿಕೆಯ ಶೇ 70ರಷ್ಟು ಪ್ರಮಾಣದ ನೀರನ್ನು ಮಳೆ ನೀರಿನ ಸಂಗ್ರಹದಿಂದಲೇ ಪಡೆಯಬಹುದು ಎನ್ನುವುದು ತಜ್ಞರ ಲೆಕ್ಕಾಚಾರ. ಅದಕ್ಕೆ ತಕ್ಕ ಪ್ರಯತ್ನಗಳು ಕಾಣುತ್ತಿಲ್ಲ. ಮಳೆ ನೀರು ಸಂಗ್ರಹಕ್ಕೆ ಜಲಮಂಡಳಿಯು ನಿಯಮ ಮಾಡಿ ಸುಮ್ಮನೆ ಕುಳಿತರೆ ಏನೂ ಪ್ರಯೋಜನವಿಲ್ಲ. ನಾಗರಿಕರಲ್ಲಿ ಅರಿವು ಮೂಡಿಸುವ ಕೆಲಸವನ್ನು ಅದು ಮಾಡಬೇಕು. ಅಲ್ಲದೆ, ಇಂತಹ ಕೆಲಸಗಳೆಲ್ಲ ದೀರ್ಘಾವಧಿಯಲ್ಲಿ ಪರಿಹಾರ ಒದಗಿಸಬಲ್ಲಂಥವು. ತಕ್ಷಣಕ್ಕೆ ಮಾಡಬೇಕಾದ ಕೆಲಸವೆಂದರೆ ನಗರದ ಪ್ರತಿಯೊಂದು ಮನೆಗೂ ಸಮರ್ಪಕವಾಗಿ ನೀರು ಪೂರೈಸುವುದು. ತನ್ನ ಹೊಣೆಗಾರಿಕೆಯನ್ನು ನಿರ್ವಹಣೆ ಮಾಡುವಲ್ಲಿ ವಿಫಲವಾಗಿರುವುದಕ್ಕೆ ಕುಂಟು ನೆಪವನ್ನು ಮುಂದೆಮಾಡಿ ಕಾಲಹರಣ ಮಾಡಲು ಅವಕಾಶವಿಲ್ಲ. ನೀರಿನ ಕೊರತೆಯನ್ನು ನೀಗಿಸುವುದಕ್ಕಿಂತ ಬೇರೆ ಯಾವ ಮಹತ್ವದ ಕೆಲಸವೂ ಅದಕ್ಕಿಲ್ಲ. ಜಲಮಂಡಳಿ ಎಚ್ಚೆತ್ತುಕೊಳ್ಳಲು ಇದು ಸಕಾಲ.

ದಿನದ ಟ್ವೀಟ್

ಎಂತಹ ವಿಪರ್ಯಾಸ?

ಕರ್ನಾಟಕದಲ್ಲಿ ಬಿಜೆಪಿಯವರೇ ಮುಖ್ಯಮಂತ್ರಿಯಾಗಿದ್ದಾರೆ. ಹೀಗಿದ್ದರೂ ಆ ಪಕ್ಷ ಮುಂಬರುವ ವಿಧಾನಸಭಾ ಚುನಾವಣೆಗೆ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿಲ್ಲ. ಆದರೆ, ರಾಷ್ಟ್ರ ಮಟ್ಟದ ಚುನಾವಣೆ ಬಂದಾಗ, ಪ್ರಧಾನಿ ಅಭ್ಯರ್ಥಿಯನ್ನು ಮೊದಲು ಘೋಷಿಸುವಂತೆ ಪ್ರತಿಯೊಬ್ಬರೂ ವಿರೋಧ ಪಕ್ಷಗಳನ್ನು ಕೇಳಲು ಆರಂಭಿಸುತ್ತಾರೆ. ಎಂತಹ ವಿಪರ್ಯಾಸ?

ಯಶವಂತ ಸಿನ್ಹಾ, ಕೇಂದ್ರದ ಮಾಜಿ ಸಚಿವ

ಕಿಡಿನುಡಿ

ಸಲಿಂಗ ಮದುವೆ ಕುರಿತ ಪ್ರಕರಣದ ವಿಚಾರಣೆ ನಡೆಸದಂತೆ ಸುಪ್ರೀಂ ಕೋರ್ಟ್ ಅನ್ನು ಒತ್ತಾಯಿಸಿರುವ ವಕೀಲರ ಪರಿಷತ್ತು, ಶೇ 99ರಷ್ಟು ಭಾರತೀಯರು ಇದಕ್ಕೆ ವಿರುದ್ಧವಾಗಿ ಇದ್ದಾರೆ ಎಂದು ಹೇಳಿದೆ! ಮಹನೀಯರೇ, ತಾವು ಮನಸ್ಸಿನ ಮೇಲೆ ಹಿಡಿತ ಕಳೆದುಕೊಂಡಿದ್ದೀರಾ? ಸಾಂವಿಧಾನಿಕ ನೈತಿಕತೆಯ ಸಂರಕ್ಷಣೆಗೆ ನೀವು ಬದ್ಧರಾಗಿರಬೇಕೆ ವಿನಾ ಜನಪ್ರಿಯ ಭಾವನೆಗಳಿಗಲ್ಲ. ಒಬ್ಬನೇ ಒಬ್ಬ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಧಕ್ಕೆಯಾದರೂ ಅದನ್ನು ಆಲಿಸಲು ಸುಪ್ರೀಂ ಕೋರ್ಟ್ ಬದ್ಧವಾಗಿರುತ್ತದೆ.

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

25 ವರ್ಷಗಳ ಹಿಂದೆ

ಶನಿವಾರ, 25-4-1998

• **ನಾಳೆ ದೇವೇಗೌಡ- ಪಟೇಲ್ ಭೇಟಿ**

ಬೆಂಗಳೂರು, ಏ. 24- ಆಡಳಿತ ಪಕ್ಷದಲ್ಲಿನ ಇತ್ತೀಚಿನ ಬೆಳವಣಿಗೆ ಹಾಗೂ ವಿಧಾನ ಪರಿಷತ್ ಚುನಾವಣೆ ಸಂಬಂಧದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹಾಗೂ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರಿಬ್ಬರೂ ಸೇರಿ ಭಾನುವಾರ ನಡೆಸುವ ಚರ್ಚೆ ರಾಜಕೀಯ ವಲಯದಲ್ಲಿ ಕುತೂಹಲ ಕೆರಳಿಸಿದೆ.

ಈ ಚರ್ಚೆಯ ಸಂದರ್ಭದಲ್ಲಿ ವಿಧಾನ ಸಭಾಧ್ಯಕ್ಷ ರಮೇಶ್ ಕುಮಾರ್, ಉಪ ಮುಖ್ಯಮಂತ್ರಿ ಸಿದ್ದರಾಮಯ್ಯ, ಪಕ್ಷದ ಅಧ್ಯಕ್ಷ ಬಿ.ಎಲ್. ಶಂಕರ್, ಸಚಿವರಾದ ಡಿ. ಮಂಜುನಾಥ್, ಎಂ.ಪಿ. ಪ್ರಕಾಶ್ ಇತರೆ ಪ್ರಮುಖ ಸಚಿವರು ಹಾಜರಿರುವರು ಎಂದು ಹೇಳಲಾಗಿದೆ.

• **ಶಾರ್ಜಾ ಕ್ರಿಕೆಟ್: ಸಚಿನ್ ಸಾಹಸ ಭಾರತಕ್ಕೆ ಕಪ್**

ಶಾರ್ಜಾ, ಏ. 23- ಸಚಿನ್ ತೆಂಡೂಲ್ಕರ್ ಅವರ ಅಮೋಘ ಶತಕದ (134) ನೆರವಿನಿಂದ ಆಸ್ಟ್ರೇಲಿಯಾ ತಂಡದ ಮೇಲೆ 6 ವಿಕೆಟ್‌ಗಳಿಂದ ಗೆದ್ದ ಭಾರತ, ಮೂರು ರಾಷ್ಟ್ರಗಳ ಕೋಕಾ ಕೋಲ ಕಪ್ ಕ್ರಿಕೆಟ್ ಸರಣಿಯನ್ನು ಗೆದ್ದುಕೊಂಡಿತು.

ತೆಂಡೂಲ್ಕರ್‌ಗೆ ಇದು ಸತತ 2ನೇ ಶತಕ. ಇಂದು 25ಕ್ಕೆ ಕಾಲಿಟ್ಟ ಸಚಿನ್, 5 ಇನಿಂಗ್ಸ್‌ಗಳಿಂದ 435 ರನ್ ಗಳಿಸಿದ್ದು 'ಸರಣಿಯ ಆಟಗಾರ' ಗೌರವಕ್ಕೂ ಪಾತ್ರರಾದರು.

50 ವರ್ಷಗಳ ಹಿಂದೆ

ಬುಧವಾರ, 25-4-1973

• **ಸಂವಿಧಾನ ತಿದ್ದಲು ಸಂಸತ್ ಸಂಪೂರ್ಣ ಅಧಿಕಾರ ಸಂಪನ್ನ**

ನವದೆಹಲಿ, ಏ. 24- ಮೂಲಭೂತ ಹಕ್ಕುಗಳೂ ಸೇರಿದಂತೆ ಸಂವಿಧಾನದ ಎಲ್ಲ ವಿಧಿಗಳನ್ನು ತಿದ್ದುವ ಹಕ್ಕು ಸಂಸತ್ತಿಗಿದೆಯೆಂದು ಭಾರತದ ಸರ್ವೋಚ್ಚ ನ್ಯಾಯಾಲಯವು ಐತಿಹಾಸಿಕ ತೀರ್ಪಿನಲ್ಲಿ ಸಾರಿತು.

ಸಂಸತ್ತಿನ ಕೇಂದ್ರೀಕರಣದ ವಿರುದ್ಧ ಸಂವಿಧಾನದ ನಿರ್ದೇಶಕ ತತ್ವಗಳನ್ನು ಅನುಷ್ಠಾನಕ್ಕೆ ತರಲು ಮತ್ತು ರಾಷ್ಟ್ರದ ಭೌತಿಕ ಸಂಪನ್ಮೂಲಗಳ ಒಡೆತನ ಹಾಗೂ ನಿಯಂತ್ರಣದ ವಿತರಣವನ್ನು ಸಾಧಿಸಲು ಸಂಸತ್ತು ಮೂಲಭೂತ ಹಕ್ಕುಗಳನ್ನೂ ಮೊಟಕುಗೊಳಿಸಬಹುದೆಂಬ ಬಹುಮತ ಅಭಿಪ್ರಾಯವನ್ನು ನ್ಯಾಯಾಲಯ ವ್ಯಕ್ತಪಡಿಸಿತು. ಆದರೆ, ಸಂವಿಧಾನದ ಮೂಲ ಸ್ವರೂಪ ಅಥವಾ ಚೌಕಟ್ಟನ್ನು ಮಾರ್ಪಡಿಸುವ ಅಧಿಕಾರ ಸಂಸತ್ತಿಗಿಲ್ಲವೆಂದು ನ್ಯಾಯಾಲಯವು ಸಾರಿತು.

ಗೋಲಕನಾಥ್ ಮೊಕದ್ದಮೆ ಎಂದು ಹಿಂದೆ ಹೆಸರಾಗಿದ್ದ ಮೊಕದ್ದಮೆಯಲ್ಲಿ ವ್ಯಕ್ತಪಡಿಸಲಾಗಿದ್ದ ಇಂಥ ಹಕ್ಕು ಸಂಸತ್ತಿಗಿಲ್ಲವೆಂಬ ಅಭಿಪ್ರಾಯವನ್ನು ನ್ಯಾಯಾಲಯವು ತಳ್ಳಿಹಾಕಿತು.

ಗ್ರಾಮದ ಸಾಧನೆ ಪರಿಚಯಿಸುವ ಗ್ರಾಮಗೀತೆ ನಮಗೆ ಬೇಕಾಗಿದೆ

ಗ್ರಾಮ 'ವಿಧಾನಸಭೆ' ಬಲಪಡಿಸೋಣ

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಇಡೀ ಏಷ್ಯಾದ 'ಕ್ಲೀನ್ ವಿಲೇಜ್' ಎಂಬ ಗೌರವ ಸಂಪಾದಿಸಿರುವ ಮೇಘಾಲಯದ ಮಾವ್ಲಿನಾಂಗ್ ಗ್ರಾಮದಿಂದ ಫೋನ್ ಮಾಡಿದ ಗೌತಮ್ ವಾಂಖಿರಿ, ಇನ್ನೊಂದು ವಾರದಲ್ಲಿ 'ವಿಲೇಜ್ ದರ್ಬಾರ್' ಇರುತ್ತದೆ, ನೋಡುವ ಆಸೆ ಇದ್ದರೆ ಬನ್ನಿ ಎಂದರು. ಇಲ್ಲಿ ಊರಿನ ಜನರೇ ಸ್ವಯಂಸೇವಕರಾಗಿ ಪ್ರತಿ ನಾಲ್ಕು ತಾಸಿಗೊಮ್ಮೆ ರಸ್ತೆ ಗುಡಿಸುತ್ತಾರೆ, ಪ್ರಕೃತಿ ಸೌಂದರ್ಯ ಸವಿಯಲು ಬರುವ ಪ್ರವಾಸಿಗರನ್ನು ಎಲ್ಲೆಂದರಲ್ಲಿ ಕಸ ಹಾಕದಂತೆ ಎಚ್ಚರಿಸುತ್ತಾರೆ. ನೈರ್ಮಲ್ಯದ ಬಗ್ಗೆ ಕಟ್ಟುನಿಟ್ಟಿನ ಕಾಳಜಿ, ಪ್ಲಾಸ್ಟಿಕ್ ನಿಷೇಧ ಇರುವ ಗ್ರಾಮದಲ್ಲಿ ಕಸ ಹಾಕಲು ಬಿದಿರಿನಿಂದ ಮಾಡಿದ ಬುಟ್ಟಿಗಳು ಇವೆ. ಗ್ರಾಮ ಪಂಚಾಯಿತಿಯ ನಿರಂತರ ಕಾಳಜಿ ಮತ್ತು ಕೆಲಸಗಳಿಂದಾಗಿ ಮಾವ್ಲಿನಾಂಗ್ 'ದೇವರ ಸ್ವಂತ ತೋಟ' ಎನ್ನಿಸಿಕೊಂಡಿದೆ.

ಗ್ರಾಮ ಸ್ವರಾಜ್ಯದ ಕನಸು ಕಂಡಿದ್ದ ಗಾಂಧೀಜಿ, ನೈರ್ಮಲ್ಯವು ಬದುಕಿನ ರೀತಿ ಎಂದು ಪ್ರತಿಪಾದಿಸಿ, ಜನರ ಕೈಗೇ ಅಧಿಕಾರ ನೀಡುವ ಗ್ರಾಮ ಪಂಚಾಯಿತಿಗಳ ಮೂಲಕ ಅದನ್ನು ಸಾಧಿಸಬೇಕು ಎಂದಿದ್ದರು. ಗ್ರಾಮ ಪಂಚಾಯಿತಿಗಳ ಮೂಲಕ ಹಳ್ಳಿಗೆ ಹೆಚ್ಚಿನ ಅಧಿಕಾರ ನೀಡಿದ ಪ್ರಜಾಪ್ರಭುತ್ವದ ಮೊದಲ ನಾಡು ನಮ್ಮದು. ಪ್ರತಿ ಪಂಚಾಯಿತಿಗೂ ತನ್ನ ವ್ಯಾಪ್ತಿಯ ಸಂಪನ್ಮೂಲಗಳ ಮೇಲೆ ಸುಸ್ಥಿರ ಬಳಕೆಯ ಸಂಪೂರ್ಣ ಹಕ್ಕಿನ ಜೊತೆ ಅದನ್ನು ಸಂರಕ್ಷಿಸಿಕೊಂಡು ಹೋಗುವ ಜವಾಬ್ದಾರಿಯೂ ಇದೆ. ಊರಿನ ಕೆರೆ, ಕೊಳ, ಝರಿ, ದೇವಾಲಯ, ಜಲಪಾತ, ಬೃಹತ್ ಮರ, ಗಿಡಮೂಲಿಕೆ ವನ, ಪ್ರೇಕ್ಷಣಾ ಸ್ಥಳ, ಪಕ್ಷಿಧಾಮ, ಚಾರಣ ಮಾರ್ಗ, ಪವಿತ್ರ ವನ, ನೈಸರ್ಗಿಕ ಶಿಲಾರಚನೆ, ವನ್ಯಜೀವಿ ಸಂಪತ್ತಿನ ಮೇಲೆ ಪಂಚಾಯಿತಿಗಳಿಗೆ ಹಕ್ಕಿದೆ. ಅಭಿವೃದ್ಧಿ ಯೋಜನೆಗಳಿಗೆ ಒಪ್ಪಿಗೆ ನೀಡುವ ಇಲ್ಲವೇ ನಿರಾಕರಿಸುವ ಪರಮಾಧಿಕಾರ ಪಡೆದಿವೆ.

ಜಲಪಾತದಿಂದ ಹಣ ಸಂಪಾದಿಸಿ ಊರಿನ ಅಭಿವೃದ್ಧಿ ಮಾಡುವ ವಿಶಾಖಪಟ್ಟಣ ಜಿಲ್ಲೆಯ ಕಟಿಕಿ, ಸೀತಾಫಲ ಹಣ್ಣಿಗೆ ರಾಷ್ಟ್ರೀಯ ಮಾರುಕಟ್ಟೆ ಒದಗಿಸಿದ ಮಹಾರಾಷ್ಟ್ರದ ಪಾಯ್‌ವಿಹಿರ್, ಲಕ್ಷಾಧಿಪತಿಗಳೇ ತುಂಬಿರುವ ಹಿವರೆ ಬಜಾರ್ ಮತ್ತು ಕಡವಂಚಿ, ಉತ್ತರಾಖಂಡದ ಶುದ್ಧ ನೀರಿನ ಸುಂದರ್‌ಖಲ್, ವಿದ್ಯುತ್ತಿನ ಹಂಗಿಲ್ಲದ ರಾಜಸ್ಥಾನದ ನ್ಯೂಕೊಟ್ರ, 'ಸ್ವಚ್ಛಮೇವ ಜಯತೆ' ಎನ್ನುವ ಕರ್ನಾಟಕದ ಅರಂತೋಡು, ಸೂರ್ಯ ಶಕ್ತಿಯ ಗರಿಷ್ಠ ಬಳಕೆಯ ಅಮಾಸೆಬೈಲು, ಗಾಳಿಯನ್ನೇ ಬೆಳಕಾಗಿಸಿಕೊಂಡ ಗಿರಿಮರಡಿ, ಪಕ್ಷಿಧಾಮಕ್ಕೆ ಜನ್ಮ ನೀಡಿದ ಮುಂಡಿಗೆಕೆರೆ, ಪ್ಲಂಬಿಂಗ್‌ನಿಂದ ಹಣ ಗಳಿಸುವ ತಮಿಳುನಾಡಿನ ಕೀರಪಾಳ್ಯಂ, ಏರ್‌ಕಂಡೀಶನ್ಡ್ ಶಾಲೆ ನಡೆಸುವ ಗುಜರಾತ್‌ನ ಪುನ್ಸಾರಿ, ವಿದೇಶಿ ಗಣಿ ಕಂಪನಿಯನ್ನು ಒದ್ದೋಡಿಸಿದ ಒಡಿಶಾದ ನಿಯಮಗಿರಿ, ಹೆಣ್ಣುಮಗುವಿನ ಸಂರಕ್ಷಣೆಗೇ ಮೀಸಲಾದ ಪಿಪಲಾಂತ್ರಿ ಗ್ರಾಮ ಪಂಚಾಯಿತಿಗಳು ಅಭೂತಪೂರ್ವ ಸಾಧನೆ ಮಾಡಿವೆ.

ಗ್ರಾಮ ಪಂಚಾಯಿತಿಯ ಕೆಲಸಗಳಿಗೆ ಕಾರ್ಯಸೂಚಿ, ದಿಕ್ಸೂಚಿ ಒದಗಿಸಲು ಗ್ರಾಮಸಭೆ ಇರುತ್ತದೆ. ಗ್ರಾಮದ 'ವಿಧಾನಸಭೆ' ಎಂದೇ ಜನಜನಿತವಾಗಿರುವ ಗ್ರಾಮ ಸಭೆಯಷ್ಟು ಪವರ್‌ಫುಲ್ ವ್ಯವಸ್ಥೆ ವಿಶ್ವದ ಯಾವುದೇ ರಾಜಕೀಯ, ಸಾಮಾಜಿಕ ವ್ಯವಸ್ಥೆಯಲ್ಲಿ ಇಲ್ಲ. ಇಲ್ಲಿ ತೆಗೆದುಕೊಳ್ಳುವ ನಿರ್ಣಯಗಳನ್ನು ಮೀರಲು ನ್ಯಾಯಾಲಯಗಳಿಗೂ ಆಗುವುದಿಲ್ಲ. ಗ್ರಾಮಸಭೆಯ ಮೂಲಕ ಹಕ್ಕನ್ನು ಚಲಾಯಿಸಿ ಸಂಪನ್ಮೂಲಗಳನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಲು ಸುಪ್ರೀಂ ಕೋರ್ಟ್ ವರೆಗೂ ಹೋರಾಡಿ, ಕೇಸು ಗೆದ್ದು, ಬಹುರಾಷ್ಟ್ರೀಯ ಕಂಪನಿಗಳ ನಿದ್ದೆಗೆಡಿಸಿ, ಜಾಗ ಖಾಲಿ ಮಾಡಿಸಿ, ಗಣಿಗಾರಿಕೆ, ಅಣೆಕಟ್ಟು, ವಿದ್ಯುತ್ ಸ್ಥಾವರಗಳ ತೆಕ್ಕೆಯಿಂದ ನಿತ್ಯಹರಿದ್ವರ್ಣ ಕಾಡುಗಳನ್ನು ರಕ್ಷಿಸಿಕೊಂಡು ಇತಿಹಾಸ ನಿರ್ಮಿಸಿದ ಪಂಚಾಯಿತಿಗಳಿವೆ.

ನಮ್ಮ ರಾಜ್ಯ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಆಡಳಿತದಲ್ಲಿ ಜನರ ಸಹಭಾಗಿತ್ವ, ಪಾರದರ್ಶಕತೆ ತರಲು, ಸ್ಥಳೀಯ ಸಮಸ್ಯೆಗಳನ್ನು ಗುರುತಿಸಲು, ಶೋಷಿತ ವರ್ಗದ ಜನರಿಗೆ ಸಾಮಾಜಿಕ ನ್ಯಾಯ ಒದಗಿಸಲು, ಕಾರ್ಯಕ್ರಮದ ಸರಿಯಾದ ಅನುಷ್ಠಾನ ಮತ್ತು ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಸಮಗ್ರ ಅಭಿವೃದ್ಧಿಯ ಗುರಿ ಸಾಧಿಸಲು ಗ್ರಾಮಸಭೆಗಿಂತಲೂ ತಳಮಟ್ಟದ 'ವಾರ್ಡ್‌ಸಭೆ'ಗಳನ್ನು ಹುಟ್ಟುಹಾಕಿದೆ. ಹಳ್ಳಿಗರ ನೆರವಿಗೆ ನಿಲ್ಲಲು ವಿಲೇಜ್ ಡೆವಲಪ್‌ಮೆಂಟ್ ಕೌನ್ಸಿಲ್‌ಗಳಿವೆ. ಸುತ್ತಲಿನ ಅರಣ್ಯ ಕಾಪಾಡಲು ಗ್ರಾಮ ಅರಣ್ಯ ಸಮಿತಿಗಳೂ ಇವೆ.

ಗ್ರಾಮಸಭೆಯ ಅಂಗೀಕಾರವಿಲ್ಲದೆ ಯಾವುದೇ ಯೋಜನೆಯನ್ನು ಜಾರಿಗೆ ತರುವಂತಿಲ್ಲ ಎಂಬ ಪ್ರಬಲ ನಿಯಮ ಇದೆ. ವಸತಿ ಮತ್ತು ಇತರ ಯೋಜನೆಗಳಿಗೆ ಫಲಾನುಭವಿಗಳನ್ನು ಗುರುತಿಸುವುದರ ಜೊತೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, ಅರಣ್ಯ ಹಕ್ಕು ಕಾಯ್ದೆ, ಮಕ್ಕಳ ಮತ್ತು ಮಹಿಳಾ ಹಕ್ಕುಗಳು, ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಇನ್ನಿತರ ಯೋಜನೆಗಳ ಬಗ್ಗೆ ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ತರುವಲ್ಲಿ ಗ್ರಾಮಸಭೆಯ ಪ್ರಯತ್ನಗಳು ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬ ಮಾತಿದೆ. ಕಡ್ಡಾಯವಾಗಿ ಗ್ರಾಮಸಭೆ ನಡೆಸಬೇಕು ಎಂಬ ಕಾರಣಕ್ಕೆ ಕಾಟಾಚಾರದ ಗ್ರಾಮಸಭೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸ್ಥಳೀಯರ ನಿರಾಸಕ್ತಿಯೂ ಇದಕ್ಕೆ ಕಾರಣವಾಗಿದೆ.



ಸಿಕ್ಕ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಜನರ ನೆಮ್ಮದಿ ಹಾಳುಮಾಡಿ ಅಭಿವೃದ್ಧಿಯ ಅವಕಾಶ ಕಳೆದುಕೊಂಡ ಉದಾಹರಣೆಗಳು ಬಹಳಷ್ಟಿವೆ. ಆಡಳಿತ-ನ್ಯಾಯಾಂಗದಿಂದ ಛೀಮಾರಿ ಹಾಕಿಸಿಕೊಂಡು, ನೋಟಿಸ್ ಪಡೆದು, ವಜಾ ಆದ ಪಂಚಾಯಿತಿಗಳೂ ಇವೆ. ರಾಜಕೀಯ ಪಕ್ಷಗಳ ಬೆಂಬಲದಿಂದಲೋ ಅವುಗಳೆಡೆಗಿರುವ ಪ್ರೀತಿಯಿಂದಲೋ ಪಂಚಾಯಿತಿಯಲ್ಲಿ ಸ್ಥಾನ ಗಳಿಸುವ ಸದಸ್ಯರು ಪಕ್ಷಗಳ ಹಿತಾಸಕ್ತಿಗೆ ನೆರವಾಗಲು ಉತ್ತಮ ಕೆಲಸಗಳಿಗೆ ಅಡ್ಡಿಯಾದದ್ದೂ ಇದೆ.

ಮನರಂಜನೆ ಮತ್ತು ಪ್ರವಾಸೋದ್ಯಮದ ಹೆಸರಿನಲ್ಲಿ ಹಲವು ಪರಿಸರ ವಿರೋಧಿ ಯೋಜನೆಗಳು ಹಳ್ಳಿಗಳ ಬಳಿ ಬರುತ್ತಿವೆ. ನಗರಮುಖಿ ಅಭಿವೃದ್ಧಿಯ ಫಲವಾಗಿ ಹಳ್ಳಿಗಳು ನಗರಗಳ ತ್ಯಾಜ್ಯದ ತೊಟ್ಟಿಗಳಾಗಬಾರದು. ಗ್ರಾಮದ ಪರಿಸರ ಹಾಳು ಮಾಡುವ ಯಾವುದೇ ಯೋಜನೆ ಇರಲಿ, ಅದು ಚಿಕ್ಕದು, ದೊಡ್ಡದು ಎಂದು ನೋಡದೆ ಸಂಪೂರ್ಣವಾಗಿ ವಿರೋಧಿಸಿ, ಗ್ರಾಮದ ಆಸುಪಾಸಿನಲ್ಲಿ ಅನುಷ್ಠಾನಗೊಳ್ಳದಂತೆ ನೋಡಿಕೊಳ್ಳಬೇಕು. ಕೈಗಾ ಅಣುಸ್ಥಾವರ ಬೇಡ ಎಂದು ಉತ್ತರ ಕನ್ನಡ ಜಿಲ್ಲೆಯ ಎಲ್ಲ ಪಂಚಾಯಿತಿಗಳು ಒಕ್ಕೊರಲಿನಿಂದ ವಿರೋಧಿಸಿದ್ದವು. ತುಮಕೂರು ಜಿಲ್ಲೆಯ ಪಂಚಾಯಿತಿಗಳು ತಮ್ಮ ಹಳ್ಳಿಗಳ ಸುತ್ತಲೂ ಮಾಲಿನ್ಯ ಸೂಸುವ ಯಾವ ಉದ್ಯಮಗಳೂ ಬೇಡ ಎಂದು ಗಟ್ಟಿ ನಿರ್ಧಾರ ಮಾಡಿದ್ದವು.

ಅನುದಾನವಿಲ್ಲದೆಯೂ ಮಾಡಬಹುದಾದ ಅನೇಕ ಕೆಲಸಗಳಿವೆ. ದೇಶದ ಅನೇಕ ಗ್ರಾಮಗಳಲ್ಲಿ ಒಂದಿಲ್ಲೊಂದು ಜನಾಕರ್ಷಣೆಯ ಸ್ಥಳವಿದೆ. ಎಕೊ ಟೂರಿಸಂನ ಅಡಿಯಲ್ಲಿ ಆ ಪ್ರದೇಶವನ್ನು ಆದಾಯ ಮೂಲವನ್ನಾಗಿಸಿಕೊಂಡು ಸಂರಕ್ಷಿಸಬೇಕು. ಸ್ಥಳೀಯ ಉತ್ಪನ್ನಗಳನ್ನು ಹತ್ತಿರದ ಮಾರುಕಟ್ಟೆಗೆ ತಲುಪಿಸಿ ಹಣ ಗಳಿಸುವ ಅವಕಾಶಗಳಿವೆ. ಹಳ್ಳಿಯು ರಾಷ್ಟ್ರೀಯ ಹೆದ್ದಾರಿ ಅಥವಾ ರಾಜ್ಯ ಮುಖ್ಯ ರಸ್ತೆಗೆ ಅಂಟಿಕೊಂಡಂತಿದ್ದರೆ ಅಲ್ಲಿನ ವಿಶೇಷವನ್ನು ಸಾರುವ ಪ್ರತಿಮೆ, ಚಿತ್ರ, ಕಲಾಕೃತಿಯನ್ನು ದೊಡ್ಡದಾಗಿ ರಚಿಸಿ ದಾರಿಹೋಕರ ಕಣ್ಣಿಗೆ ಕಾಣಿಸುವಂತೆ ಇರಿಸಬೇಕು. ಪರಿಸರಕ್ಕೆ ಪೂರಕವಾಗುವ ರೀತಿಯಲ್ಲಿ ಸ್ಥಳದ ಮಹತ್ವವನ್ನು ಇತರರಿಗೆ ತಿಳಿಸಬೇಕು.

ಪ್ರತಿ ಪಂಚಾಯಿತಿಯೂ ಜೀವಿವೈವಿಧ್ಯ ಉಪಸಮಿತಿಯನ್ನು ಸ್ಥಾಪಿಸಿ, ಸ್ಥಳೀಯರ ಸಹಾಯದಿಂದ ಗಿಡ ಮೂಲಿಕೆಗಳು ಬಹುರಾಷ್ಟ್ರೀಯ ಕಂಪನಿಗಳ ಪಾಲಾಗದಂತೆ ತಡೆಯಬಹುದು. ಒಂದುವೇಳೆ ಕೊಡಲೇಬೇಕೆಂದಿದ್ದರೆ, ಅದಕ್ಕೆ ತೆರಿಗೆ ವಿಧಿಸಿ ಅದನ್ನು ಊರಿನ ಏಳಿಗೆಗೆ ಬಳಸಿಕೊಳ್ಳಬಹುದು. ಜೀವಿವೈವಿಧ್ಯಕ್ಕೆ ಹಾನಿ ತರಬಲ್ಲ ಯಾವುದೇ ಯೋಜನೆಯನ್ನು ಪಂಚಾಯಿತಿಗಳು ನಿರಾಕರಿಸಬಹುದು. ಸರ್ಕಾರಗಳು ಹೊರಗಿನ ಅನುದಾನಕ್ಕೆ ಕಾಯದೆ ಜೀವಿವೈವಿಧ್ಯದ ರಕ್ಷಣೆಗೆ ಗ್ರಾಮ ಅರಣ್ಯ ಸಮಿತಿಗಳನ್ನು ಕೂಡಲೇ ಪುನಶ್ಚೇತನಗೊಳಿಸಬೇಕು. ಅರಣ್ಯ ಇಲಾಖೆ ಮತ್ತು ಪಂಚಾಯಿತಿಗಳ ನಡುವಿನ ಮುನಿಸನ್ನು ಶಮನಗೊಳಿಸಬೇಕು. ಸರ್ವ ಶಿಕ್ಷಣ, ಗ್ರಾಮ ನೈರ್ಮಲ್ಯ, ಘನತ್ಯಾಜ್ಯ ವಿಲೇವಾರಿ ಆದ್ಯತೆಯ ವಿಷಯಗಳಾಗಬೇಕು. ಸೋಲಾರೀಕರಣ, ಮಳೆನೀರು ಸಂಗ್ರಹ, ಶೌಚಾಲಯ ನಿರ್ಮಾಣ, ಕೆರೆ ಹೂಳೆತ್ತುವುದು, ನಾಲೆ ದುರಸ್ತಿಗಾಗಿ ಶ್ರಮದಾನ, ರಾಸಾಯನಿಕ ಗೊಬ್ಬರಗಳ ಅತ್ಯಲ್ಪ ಬಳಕೆ ಕುರಿತು ವಿಶೇಷ ಕಾಳಜಿ ವಹಿಸಬೇಕು.

ದೇಶದ ಹೆಮ್ಮೆ ಸಾರುವ ರಾಷ್ಟ್ರಗೀತೆ, ನಾಡಿನ ಹೆಮ್ಮೆ ಹೇಳುವ ನಾಡಗೀತೆ ಇರುವಂತೆ ಗ್ರಾಮದ ಸಾಧನೆ ಪರಿಚಯಿಸುವ ಗ್ರಾಮಗೀತೆ ನಮಗೆ ಬೇಕು.

ಚುರುಮುರಿ



ತೋಟದಲ್ಲಿ ಮನಿಪ್ಲಾಂಟ್

• ಲಿಂಗರಾಜು ಡಿ.ಎಸ್.

'ಅಭಿಮಾನಿಗಳಿಗೆ ಸ್ವಾಗತ. ಇದು ರಾಜಕೀಯ ನಾಯಕರ Weak End ಬಗ್ಗೆ ವಿಶೇಷ ಕಾರ್ಯಕ್ರಮ. ಈವತ್ತಿನ ನಮ್ಮ ಅತಿಥಿ ಜನಪ್ರಿಯ ನಾಯಕರಾದ ತ್ರಿಶಂಕಪ್ಪ. ಎಂಟು ಸಾರಿ ಗೆದ್ರೂ ಇದೇ ನನ್ನ ಕೊನೇ ಚುನಾವಣೆ ಅಂತ ನಿಲ್ತಾನೇ ಇದ್ದಾರೆ, ಗೆಲ್ತಾನೆ ಇದ್ದಾರೆ. ತಮ್ಮ ಕೊನೆಗಾಲವನ್ನು ಶಾಸಕನಾಗೇ ಮುಗಿಸಬೇಕು ಅನ್ನೋ ಅದಮ್ಯ ಆಸೆ ಇವರಲ್ಲಿದೆ. ನಮಸ್ಕಾರ ತ್ರಿಶಂಕಪ್ಪನವರೇ, ಅಧಿಕಾರ ನಿಮ್ಮ ಕುಟುಂಬದಲ್ಲೇ ಇರಬೇಕು ಅಂತ ಯಾಕೆ ಬಯಸ್ತೀರ? ಇದು ಪೀಕ್ ಎಂಡ್ ಅನ್ನಿಸಲ್ವಾ?' ತುರೇಮಣೆ ಕೇಳಿದರು.

'ಅಧಿಕಾರ ಅನ್ನೋದು ಡ್ರಗ್ಸ್ ಇದ್ದಂಗೆ! ಒಂದು ಸಾರಿ ತಗಂಡ್ರೆ ಅದನ್ನ ಬಿಡಕ್ಕೆ ಮನಸ್ಸೇ ಬರಲ್ಲ. ಅಲ್ಲದೆ ಅಧಿಕಾರ ಯಾವಾಗಲೂ ಒಂದೇ ಕುಟುಂಬದ ಕೈಲಿರಬೇಕು. ಆಗಲೇ ಕ್ಷೇತ್ರದ ಬಗ್ಗೆ ತಿಳಕೊಳ್ಳೋಕೆ ಸಾಧ್ಯ' ಅಂದ್ರು ತ್ರಿಶಂಕಪ್ಪ.

'ನೀವು ಪಕ್ಷಾಂತರ ಮಾಡ್ಕೊಂಡೇ ಟಿಕೆಟ್ ಗಿಟ್ಟಿಸ್ತಾ ಬಂದಿದ್ದೀರಿ. ನಮ್ಮ ಸ್ಪೀಕ್ ಎಂಡ್ ಟೀಂ ನಿಮ್ಮ ಬಗ್ಗೆ ಒಂದು ವಿಡಿಯೊ ಮಾಡಿದೆ'.

'ನಮಸ್ಕಾರ. ನೀವು ನಮಗೆಲ್ಲಾ ಒಳೇಟು ಕೊಟ್ಟು ಸೀಟು ತಗಂಡು ಎಲೆಕ್ಷನ್ ಗೆಲ್ತಾ ಬಂದಿದ್ದೀರಿ. ನಿಮಗೆ ತೊಂಬತ್ತಾಯ್ತು, ಇನ್ನಾದ್ರು ಕಾರ್ಯಕರ್ತರಿಗೆ ಅವಕಾಶ ಕೊಡಿ' ಅಂತಂದ್ರು ಟಿಕೇಟು ಸಿಗದ ನಕಾರಪ್ಪ.

'ಇವನು ಯಾವಾಗ್ಲೂ ಹಂಗೇ. ಹೊಟ್ಟೇಕಿಚ್ಚು! ಕಾರ್ಯಕರ್ತರನ್ನ ಚೆನ್ನಾಗಿ ನೋಡಿಕ್ಯಬಕು ಅಂತ್ಲೇ ನಾವು ತೋಟದಲ್ಲೆಲ್ಲಾ ಮನಿಪ್ಲಾಂಟ್ ಹಾಕ್ಯಂಡಿದೀವಿ ಸ್ವಾಮಿ' ನಾಯಕರು ನೆಟಿಕೆ ಮುರಿದರು.

'ಈ ಬಾರಿ ನೀವು ಪುಕ್ಕಟೆ ಕೊಟ್ಟ ಕುಕ್ಕರ್ ಸಿಡಿದಿದೆ, ಆಭರಣ, ಟೀವಿ ನಕಲಿ ಅಂತ ಜನ ದೂರ್ತಾ ಇದಾರೆ?'

'ನಾವೇ ನಕಲಿ. ಇನ್ನು ಕುಕ್ಕರ್, ಆಭರಣ ಒರಿಜಿನಲ್ ಆಯ್ತದಾ ಸ್ವಾಮಿ!'

'ಚುನಾವಣೆ ಗೆಲ್ಲಕ್ಕೆ ನಿಮ್ಮ ಪ್ಲಾನ್ ಏನು?'

'ವೋಟಿಗೋಸ್ಕರ ನ್ಯಾಯ, ನೀತಿ, ಧರ್ಮವ ಬಲಿ ಕೊಡ್ತಿದ್ದೀವಿ. ಎಲೆಕ್ಷನ್ ಅಂದ್ರೆ ಸಮರಕೋಶ ಕನ್ರೀ, ನಿಮಗೆ ಅರ್ಥಾಗಲ್ಲ' ತ್ರಿಶಂಕಪ್ಪ ಎದ್ದು ಹೊಂಟರು.

ಸಂಗತ

ಅಕ್ರಮ ಸಕ್ರಮದ ನಡುವೆ ಮತಮೌಲ್ಯ

ಮತದಾರರಿಗೆ ಆಮಿಷ ಒಡ್ಡುವ ಮುಖಾಂತರ ಇಡೀ ಸಮಾಜವನ್ನು ಭ್ರಷ್ಟಗೊಳಿಸುವ ಪದ್ಧತಿಯನ್ನು ತಡೆಗಟ್ಟಲು ಏನು ಮಾಡಬೇಕು?

• ನಾ.ದಿವಾಕರ

ಪ್ರಜಾಪ್ರಭುತ್ವ, ಸಂವಿಧಾನ, ಜಾತ್ಯತೀತತೆ ಮತ್ತು ಸಮಗ್ರ ಅಭಿವೃದ್ಧಿ ಎಂಬ ನಾಲ್ಕು ಮೂಲ ಮಂತ್ರಗಳನ್ನು ಜಪಿಸುತ್ತಲೇ, ಮೇ 10ರಂದು ನಡೆಯಲಿರುವ ರಾಜ್ಯ ವಿಧಾನಸಭಾ ಚುನಾವಣೆಗೆ ಎಲ್ಲ ಪ್ರಮುಖ ರಾಜಕೀಯ ಪಕ್ಷಗಳೂ ಧುಮುಕಿವೆ. ಕನ್ನಡಿಗರು ಆಯ್ಕೆ ಮಾಡಬೇಕಿರುವುದು ಪಕ್ಷಗಳನ್ನೋ ಅಥವಾ ವ್ಯಕ್ತಿಗಳನ್ನೋ ಎನ್ನುವ ಮಟ್ಟಿಗೆ ವ್ಯಕ್ತಿಕೇಂದ್ರಿತ ಪ್ರಚಾರ ಮತ್ತು ವ್ಯಕ್ತಿ ಆರಾಧನೆಯ ಚಟುವಟಿಕೆಗಳು ಪರಾಕಾಷ್ಠೆ ತಲುಪಿವೆ.

ಕನ್ನಡಿಗರ ಆಯ್ಕೆ ಮತ್ತು ಆದ್ಯತೆಗಳೇನು ಎನ್ನುವ ಸುಳಿವೇ ಇಲ್ಲದಂತೆ ಚುನಾವಣೆಯ ಅಬ್ಬರದಲ್ಲಿ ಹಣದ ಹರಿವು ಹೆಚ್ಚಾಗಿದೆ. ಪ್ರಜಾಪ್ರಭುತ್ವದ ಮೂಲ ಬೇರುಗಳನ್ನು ಗಟ್ಟಿಗೊಳಿಸುವ ಪಂಚಾಯತ್ ವ್ಯವಸ್ಥೆಗೆ ಶುಭ ನಾಂದಿ ಹಾಡಿದ ಕರ್ನಾಟಕದಲ್ಲಿ ಇಂದು ಇಡೀ ಪ್ರಜಾತಂತ್ರ ವ್ಯವಸ್ಥೆಯನ್ನು ಸಂಪತ್ತು, ಅಧಿಕಾರ, ಹಣ ಮತ್ತು ಮಾರುಕಟ್ಟೆ ಆಳುತ್ತಿರುವುದನ್ನು ವಿಷಾದದಿಂದಲೇ ಗಮನಿಸಬೇಕಿದೆ. ಜನಪ್ರತಿನಿಧಿಗಳು ಅಕ್ಷರಶಃ ಧನಪ್ರತಿನಿಧಿಗಳಾಗಿರುವುದನ್ನು ಸಹಿಸಿಕೊಂಡೇ ರಾಜ್ಯದ ಜನತೆ 'ಉತ್ತಮ'ರನ್ನು ಆಯ್ಕೆ ಮಾಡಬೇಕಿದೆ. ಈ ಜಟಿಲ ಪ್ರಶ್ನೆಗಳನ್ನು ಹೊತ್ತುಕೊಂಡೇ ಕರ್ನಾಟಕದ ಮತದಾರರು ಮತಗಟ್ಟೆಗೆ ಹೋಗಬೇಕಾಗಿದೆ.

ಅಭ್ಯರ್ಥಿಗಳು ಅಧಿಕೃತವಾಗಿ ಘೋಷಿಸಿರುವ ಆಸ್ತಿಯನ್ನು ಒಮ್ಮೆ ಗಮನಿಸಿದಾಗ, ನಮ್ಮನ್ನು ಪ್ರತಿನಿಧಿಸುವವರು ಯಾವ ಸ್ತರದಲ್ಲಿದ್ದಾರೆ, ನಾವು ಅಂದರೆ ಸಾಮಾನ್ಯ ಪ್ರಜೆಗಳು ಯಾವ ಮಟ್ಟದಲ್ಲಿದ್ದೇವೆ ಎಂಬುದು ಸ್ಪಷ್ಟವಾಗಿ ಅರಿವಾಗುತ್ತದೆ. ಸಾವಿರ ಕೋಟಿಗೂ ಹೆಚ್ಚು ಆಸ್ತಿ ಹೊಂದಿರುವ ಭಾವಿ ಅಥವಾ ಸಂಭಾವ್ಯ ಜನಪ್ರತಿನಿಧಿಗಳ ಸ್ಥಿರಾಸ್ತಿಯ ಮೌಲ್ಯ ನಿಷ್ಕರ್ಷೆಯಾಗುವುದು ಸರ್ಕಾರ ನಿಗದಿಪಡಿಸಿರುವ ದರದಲ್ಲಿ. ಇದರ ಮಾರುಕಟ್ಟೆ ಮೌಲ್ಯವನ್ನು ಪರಿಗಣಿಸಿದರೆ, ಇಡೀ ಸಮಾಜವೇ ಹೃದಯಾಘಾತಕ್ಕೆ ಒಳಗಾಗಬಹುದು.

ಈ 'ಜನಸೇವಕ'ರ ಆಸ್ತಿಯ ಹೆಚ್ಚಳ ಹೇಗಾಗಿದೆ, ಆದಾಯದ ಮೂಲ ಏನು, ಐದು ವರ್ಷಗಳಲ್ಲಿ ಆಸ್ತಿ ಹಲವು ಪಟ್ಟು ಹೆಚ್ಚಾಗಲು ಹೇಗೆ ಸಾಧ್ಯವಾಗಿದೆ ಎಂಬಂತಹ ಪ್ರಶ್ನೆಗಳು ಬಹುಶಃ ಇತರ ಜ್ವಲಂತ ಸಮಸ್ಯೆಗಳ ಸುಳಿಯಲ್ಲಿ ಕಣ್ಣಿಗೆ ಗೋಚರಿಸದೇ ಹೋಗುತ್ತವೆ. ಶೇ 80ರಷ್ಟು ಬಡತನ ಹೊಂದಿರುವ ದೇಶದ ಕತೆ, ವ್ಯಥೆ ಇದು.

ಇದರ ನಡುವೆಯೇ ರಾಜಕಾರಣದ ಔದ್ಯಮೀಕರಣ ತನ್ನ ಅತ್ಯುನ್ನತ ಹಂತ ತಲುಪಿರುವುದನ್ನು ಈ ಚುನಾವಣೆಯಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಮತ್ತೊಂದೆಡೆ, ತಾವು ಸಂಪಾದಿಸಿ, ಶೇಖರಿಸಿ, ಸಂಗ್ರಹಿಸಿ, ಕೂಡಿಟ್ಟಿರುವ ಅಪಾರ ಆಸ್ತಿಯ ಒಂದು ತುಣುಕನ್ನು 'ಸಂಭಾವ್ಯ ಜನಪ್ರತಿನಿಧಿ'ಗಳು ಮತದಾರ ಪ್ರಭುಗಳತ್ತ ಎಸೆಯಲು ನಾನಾ ತಂತ್ರಗಾರಿಕೆಗಳನ್ನು ಅನುಸರಿಸುತ್ತಿದ್ದಾರೆ. ಹಣ, ಮದ್ಯ, ಪಂಚೆ, ಸೀರೆ ಅಂತಹವುಗಳ ಯುಗವನ್ನು ದಾಟಿ ನವ ಭಾರತ ಈಗ ಬಹಳ ಮುನ್ನಡೆದಿದೆ. ಆಮಿಷಗಳ ಸ್ವರೂಪ ಮತ್ತು ಮಾರುಕಟ್ಟೆ ಮೌಲ್ಯ ಎರಡೂ ರೂಪಾಂತರ ಹೊಂದಿವೆ. ಆದರೂ ಪಾರಂಪರಿಕವಾಗಿ ನಡೆದುಬಂದಿರುವ ಪದ್ಧತಿಯನ್ನು ಕೈಬಿಡದೆ 'ಸಂಭಾವ್ಯ ಜನಪ್ರತಿನಿಧಿ'ಗಳು ಪ್ರತಿಯೊಂದು ಮತಕ್ಕೂ ಒಂದು ಮೌಲ್ಯವನ್ನು ನಿಗದಿಪಡಿಸಿ ನಗದು ಹಂಚಿಕೆಯಲ್ಲಿ ತೊಡಗಿದ್ದಾರೆ. ಹಣದುಬ್ಬರಕ್ಕೆ ಅನುಗುಣವಾಗಿ ಈ ಮೌಲ್ಯವೂ ವೃದ್ಧಿಯಾಗಿದ್ದು, ಐನೂರು ರೂಪಾಯಿಯಿದ್ದ ಮತದ ಬೆಲೆ ಈಗ ಐದು ಸಾವಿರಕ್ಕೂ ತಲುಪಿದೆ.

ಚುನಾವಣಾ ಆಯೋಗ ಈವರೆಗೂ ಜಪ್ತಿ ಮಾಡಿ ವಶಪಡಿಸಿಕೊಂಡಿರುವ ಮೌಲ್ಯವೇ ₹ 239.52 ಕೋಟಿಯಷ್ಟಿದೆ. ಇದರಲ್ಲಿ ಹಣ, ಮದ್ಯ, ಗೃಹೋಪಯೋಗಿ ಸರಕು, ಚಿನ್ನ, ಬೆಳ್ಳಿ ಎಲ್ಲವೂ ಸೇರಿವೆ. ವಶಪಡಿಸಿಕೊಂಡ ಈ ವಸ್ತುಗಳು ಮತ್ತು ನಗದು ಎಲ್ಲವೂ ಮುಂದೆ ಏನಾಗುತ್ತವೆ? ಯಾರೂ ಇದನ್ನು ಪ್ರಶ್ನಿಸುತ್ತಿಲ್ಲ ಅಲ್ಲವೇ?

ಇಷ್ಟೆಲ್ಲಾ ಅಕ್ರಮಗಳ ನಡುವೆಯೂ ನಾಗರಿಕರು ಪ್ರಾಮಾಣಿಕ, ನಿಷ್ಪಕ್ಷಪಾತ, ಪಾರದರ್ಶಕ ಚುನಾವಣೆಯ ನಿರೀಕ್ಷೆಯಲ್ಲಿರುವುದು ನಿಜಕ್ಕೂ ಸೋಜಿಗವೇ. ಮತದಾರ ಏಕೆ 'ಸಂಭಾವ್ಯ ಜನಪ್ರತಿನಿಧಿ'ಗಳಿಂದ ಹಣ ಪಡೆಯುತ್ತಾನೆ? ಎಷ್ಟೇ ಕಷ್ಟಕಾರ್ಪಣ್ಯಗಳಿದ್ದರೂ ಕಡುಬಡತನದಲ್ಲಿರುವ ವ್ಯಕ್ತಿ ಸಹ ಈ ನಾಯಕರ ಬಳಿ ಸ್ವಇಚ್ಛೆಯಿಂದ ಹೋಗಿ, 'ನಿಮಗೆ ಮತ ಹಾಕುತ್ತೇನೆ, ನನಗೆ ಹಣ ಕೊಡಿ' ಎಂದು ಕೇಳುವುದಿಲ್ಲ. ಬದಲಾಗಿ, ನಾಯಕರು ಎನಿಸಿಕೊಂಡವರೇ ಅವನ ಮನೆ ಬಾಗಿಲಿಗೆ ಹೋಗಿ ಆಮಿಷಗಳನ್ನು ತಲುಪಿಸುತ್ತಾರೆ. ಸಾಮಾನ್ಯ ಚರ್ಚೆಯಲ್ಲಿ 'ಹಣಕ್ಕಾಗಿ ಮತ ಮಾರಿಕೊಳ್ಳಬೇಡಿ' ಎಂದು ಹೇಳುವುದುಂಟು. ಆದರೆ ಯಾರೂ ಮಾರಾಟ ಮಾಡುತ್ತಿಲ್ಲ, ಜನರ ಬಳಿ ಇರುವ ಅಮೂಲ್ಯ ಮತವನ್ನು ಆಮಿಷಗಳ ಮೂಲಕ ಖರೀದಿಸಲಾಗುತ್ತಿದೆ. ಅಂದರೆ ಭ್ರಷ್ಟತೆಯ ಮೂಲ ಇರುವುದು ಆಮಿಷ ಒಡ್ಡಿ ಕೊಡುವವರಲ್ಲೇ ವಿನಾ ಪಡೆಯುವವರಲ್ಲಿ ಅಲ್ಲ ಅಲ್ಲವೇ? ಮತದಾರರ ಮುಖಾಂತರ ಇಡೀ ಸಮಾಜವನ್ನು ಭ್ರಷ್ಟಗೊಳಿಸುವ ಈ ಪದ್ಧತಿಯನ್ನು ತಡೆಗಟ್ಟಲು ಏನು ಮಾಡಬೇಕು?

ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಪ್ರೀತಿಸುವ, ಗೌರವಿಸುವ ಪ್ರತಿಯೊಬ್ಬ ನಾಗರಿಕನನ್ನೂ ಈ ಪ್ರಶ್ನೆ ಕಾಡಲೇಬೇಕಿದೆ. ವೋಟಿಗಾಗಿ ನೋಟು ಅಥವಾ ಒಂದು ನೋಟಿಗೆ ಒಂದು ವೋಟು ಎನ್ನುವ ಒಂದು ಪರಂಪರೆಯನ್ನು ವ್ಯವಸ್ಥಿತಗೊಳಿಸಿರುವ ಸಮಾಜವನ್ನು ಸುಧಾರಿಸುವತ್ತ ಪ್ರಜ್ಞಾವಂತ ಸಮಾಜ ಯೋಚಿಸಲು ಇದು ಸಕಾಲ ಎನಿಸುವುದಿಲ್ಲವೇ?

ವಾಚಕರ ವಾಣಿ

ಅಂದು ಭರವಸೆ ಕಳೆದುಕೊಂಡಿದ್ದರೆ...

'ಫೇಲಾದರೇನಂತೆ, ಕತ್ತೆ ಬಾಲ...!' ಎಂಬ ಶೀರ್ಷಿಕೆಯ ಪ್ರೊ. ಎಂ. ಅಬ್ದುಲ್ ರೆಹಮಾನ್ ಪಾಷ ಅವರ ಲೇಖನ (ಸಂಗತ, ಏ. 24) ನನ್ನನ್ನು ನನ್ನ ಪಿಯು ದಿನಗಳಿಗೆ ಕರೆದೊಯ್ದಿತು. ರೈತ ಕುಟುಂಬದ ನಾನು ಓದಿನ ಜೊತೆ ಜೊತೆಗೆ ಹೈನುಗಾರಿಕೆ, ರೇಷ್ಮೆಹುಳು ಸಾಕಣೆಯಂತಹ, ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸಗಳನ್ನು ನಿರ್ವಹಿಸಿಕೊಂಡು, ಓದು ಮತ್ತು ಕೃಷಿ ಕೆಲಸಗಳ ನಡುವೆ ಸಮತೋಲನ ಸಾಧ್ಯವಾಗದೆ, ದ್ವಿತೀಯ ಪಿಯುಸಿಯಲ್ಲಿ ಮೂರು ವಿಷಯಗಳಲ್ಲಿ ಅನುತ್ತೀರ್ಣನಾದೆ. ನಂತರ ಓದಿನಿಂದ ವಿಮುಖನಾಗಿ ಭರವಸೆ ಕಳೆದುಕೊಂಡು, ಒಲ್ಲದ ಮನಸ್ಸಿನಿಂದಲೇ ಕೃಷಿ ಕೆಲಸಗಳಲ್ಲಿ ನಿರತನಾಗಿದ್ದ ನನ್ನನ್ನು ಪೂರಕ ಪರೀಕ್ಷೆಗಳನ್ನು ಬರೆಯಲು ಉತ್ತೇಜಿಸಿದ್ದು ನನ್ನ ಸ್ನೇಹಿತ. ಅಂತೂ ಇಂತೂ ಆತನ ಅವಿರತ ಬೆಂಬಲ, ಸಲಹೆಗಳಿಂದ ಐದು ವರ್ಷಗಳ ಬಳಿಕ ಪಿಯು ಪರೀಕ್ಷೆ ಪಾಸು ಮಾಡಿ, ನಂತರ ಕಲಾ ಮಾಧ್ಯಮದಲ್ಲಿ ಪದವಿ, ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿ, ಕೆಪಿಎಸ್‌ಸಿ ಪರೀಕ್ಷೆ ಪಾಸಾಗಿ, ಇಂದು ನಗರಾಭಿವೃದ್ಧಿ ಇಲಾಖೆಯಲ್ಲಿ ಕಚೇರಿ ವ್ಯವಸ್ಥಾಪಕನಾಗಿರುವೆ.

ಅಂದು ಫೇಲಾದೆನೆಂದು ಭರವಸೆ ಕಳೆದುಕೊಂಡಿದ್ದರೆ, ನನ್ನ ಸ್ನೇಹಿತ ಬೆಂಬಲಿಸದೇ ಇದ್ದಿದ್ದರೆ ನಾನು ಏನಾಗುತ್ತಿದ್ದೆನೋ ಅರಿಯೆ. ನಾನು ಎಲ್ಲರಿಗೂ ಹೇಳುವುದೆಂದರೆ, ಉತ್ತಮ ಸ್ನೇಹಿತರನ್ನು ಸಂಪಾದಿಸಿ, ಟೀಕೆ, ಕೊಂಕುನುಡಿಗಳನ್ನು ಸಕಾರಾತ್ಮಕವಾಗಿ ಸ್ವೀಕರಿಸಿ. ಈಸಬೇಕು, ಇದ್ದು ಜೈಸಬೇಕು ಎಂಬ ದಾಸರವಾಣಿಯಂತೆ ಬದುಕಿ ಸಾಧಿಸಿ ತೋರಿಸಿ.

ಮಧು ಎನ್. ಬೈಲಪ್ಪ, ನಾರನಹಳ್ಳಿ, ದೊಡ್ಡಬಳ್ಳಾಪುರ

ಮಾನವ ದಿನಗಳ ನಷ್ಟವಲ್ಲವೇ?

ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ, ತಮ್ಮ ನಾಯಕರ ಚುನಾವಣಾ ಸಭೆ, ಯಾತ್ರೆ, ಜಾಥಾ, ಮೆರವಣಿಗೆ, ಪ್ರತಿಭಟನೆಯಂತಹವುಗಳನ್ನು ನಡೆಸುವಾಗ, ಮನೆ ಮನೆಗೆ ಮತ ಯಾಚಿಸಲು ಹೋಗುವಾಗ ನೂರಾರು, ಸಾವಿರಾರು ಜನರನ್ನು ಸೇರಿಸುತ್ತಲೇ ಇರುತ್ತಾರೆ. ದಿನವೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಜನರಿಗೆ ಬೇರೆ ಉದ್ಯೋಗ ಇರುವುದಿಲ್ಲವೇ? ಅಥವಾ ಈ ರೀತಿ ಭಾಗವಹಿಸುವುದೇ ಅಂತಹವರ ಉದ್ಯೋಗವೇ? ಇವುಗಳಿಗೆಲ್ಲ ಎಷ್ಟೊಂದು ಮಾನವ ದಿನಗಳು ನಷ್ಟವಾಗುವುದಿಲ್ಲ? ಹಾಗೆಯೇ ಅಂತಹ ಸಂದರ್ಭಗಳಲ್ಲಿ ಓಡಾಡುವ ನೂರಾರು ವಾಹನಗಳಿಂದ ದೇಶಕ್ಕೆ ಅಮೂಲ್ಯವಾದ ಅಪಾರ ಇಂಧನ ವ್ಯಯವಾಗಿ ವಿದೇಶಿ ವಿನಿಮಯ ದಾಸ್ತಾನಿಗೆ ಹೊಡೆತ ಬೀಳುತ್ತದೆ.

ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಇಂತಹುದಕ್ಕೆಲ್ಲ ಕಡಿವಾಣ ಹಾಕುವುದು ಇಂದಿನ ಆದ್ಯತೆಯಾಗಬೇಕು.

ಬಿ.ಎನ್.ಭರತ್, ಬೆಂಗಳೂರು

ಚುನಾವಣಾ ಬಿರುಗಾಳಿ: ನಲುಗದಿರಲಿ ಸಂಬಂಧ

ರಾಜ್ಯ ವಿಧಾನಸಭಾ ಚುನಾವಣೆಯ ಪ್ರಚಾರದ ಕಾವು ವೇಗವಾಗಿ ಹಬ್ಬುತ್ತಿದೆ. ಅಲ್ಲಲ್ಲಿ ಪಕ್ಷಾಂತರ, ಬಂಡಾಯ, ಒಳ ರಾಜಕೀಯ ಒಪ್ಪಂದಗಳು ನಡೆಯುತ್ತಿವೆ. ಇದರೊಂದಿಗೆ ಕೆಲವೆಡೆ ಕಾರ್ಯಕರ್ತರಲ್ಲಿ ವೈಮನಸ್ಸು ಮೂಡುತ್ತಿದೆ. ಅವರು ನಮ್ಮವರು, ಇವರು ನಿಮ್ಮವರು, ಆ ಪಕ್ಷ, ಈ ಸಿದ್ಧಾಂತ, ಓಡಾಟ, ಸಂಘಟನೆ, ಜೈಕಾರ ಎಂದು ಇಲ್ಲಿಯವರೆಗೆ ಒಂದೇ ತಟ್ಟೆಯಲ್ಲಿ ಉಣ್ಣುತ್ತಿದ್ದ ಸ್ನೇಹಿತರು, ಅಣ್ಣ ತಮ್ಮಂದಿರು, ನೆರೆಯವರು ಬಿಗುವಿನ ವಾತಾವರಣ ಸೃಷ್ಟಿಸಿಕೊಂಡು ಸಮರಕ್ಕೆ ತಯಾರಾದವರಂತೆ ವರ್ತಿಸುತ್ತಿದ್ದಾರೆ. ಪರಸ್ಪರ ಎದುರಾದರೂ ನಗುವನ್ನೇ ಮರೆತಂತೆ ಇರತೊಡಗಿದ್ದಾರೆ.

ಇಲ್ಲಿ ಎಲ್ಲರೂ ನೆನಪಿಡಬೇಕಾದ ವಿಷಯವೆಂದರೆ, ಗೆದ್ದವರು ವಿಧಾನಸಭೆಗೆ ಹೋಗುತ್ತಾರೆ, ಸೋತವರು ಮತ್ತೆ ಸಂಘಟನೆ ಮಾಡುತ್ತಾರೆ ಇಲ್ಲವೇ ರಾಜಕೀಯ ಅಖಾಡದಿಂದ ಹಿಂದೆ ಸರಿಯುತ್ತಾರೆ. ಆದರೆ ಇವರ ಹಿಂದೆ ಬಿರುಸಿನಿಂದ ಓಡಾಡಿ, ಗೆಲ್ಲಿಸಿಕೊಂಡು ಬರಲು ಶ್ರಮಿಸಿದ ಅಥವಾ ನಿಷ್ಠೆಯಿಂದ ದುಡಿದ ಕಾರ್ಯಕರ್ತರು ಅದೇ ಹಳೆಯ ರಾಜಕೀಯ ನೆರಳಿನ ಹಗೆತನದಲ್ಲಿಯೇ ಇರುವಂಥ ಸ್ಥಿತಿ ತಲೆದೋರಬಹುದು. ಎಷ್ಟೋ ವರ್ಷಗಳ ಸ್ನೇಹ, ಪ್ರೀತಿ, ವಿಶ್ವಾಸ ಹಾಳಾಗಲೂಬಹುದು. ಎಚ್ಚರವಿರಲಿ, ಚುನಾವಣಾ ಬಿರುಗಾಳಿಯಲ್ಲಿ ಸಂಬಂಧಗಳು, ಮೌಲ್ಯಗಳು, ಪ್ರೀತಿ, ವಿಶ್ವಾಸ ಸಿಲುಕಿ ನಲುಗದಿರಲಿ.

ಬಸನಗೌಡ ಪಾಟೀಲ, ಯರಗುಪ್ಪಿ

ಹೀಗೆ ಕೇಳಿ ಮತ...

ನಮ್ಮ ನಾಡ ನಡೆಸುವ
ಅಧಿಕಾರ ಹಿಡಿಯಲು
ತುದಿಗಾಲಲಿ ನಿಂತಿರುವ
ನೇತಾರರೇ...
ವೇದಿಕೆಯಲಿ ಮೈಕ್ ಹಿಡಿದು
ಯಾರದೋ ಬಂಡವಾಳ ಬಿಚ್ತೀನಿ...
ಹೊಸ ಸಿ.ಡಿ ರಿಲೀಸ್ ಮಾಡ್ತೀನಿ...
ದಾಖಲೆ ಬಿಡುಗಡೆ ಮಾಡ್ತೀನಿ...
ಎಂದೆಲ್ಲ ಬಡಾಯಿ ಕೊಚ್ಚುವ ಬದಲು
ಸಮಾನ ಶಿಕ್ಷಣ, ಸರ್ವರ ಆರೋಗ್ಯ,
ಪರಿಸರ ಸಂರಕ್ಷಣೆ, ನಿರುದ್ಯೋಗ
ನಿರ್ಮೂಲನೆಗೆ ನಿಮ್ಮ
ಕಾರ್ಯಕ್ರಮಗಳೇನು ಹೇಳಿ...
ಆ ಮೂಲಕ ಮತ ಕೇಳಿ.

ಜೆ.ಬಿ.ಮಂಜುನಾಥ, ಪಾಂಡವಪುರ

ಅಪರಾಧ ಹಿನ್ನೆಲೆಯವರಿಗೆ ಬೀಳಲಿ ಕಡಿವಾಣ

ಗುರುತರ ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪ ಹೊತ್ತಿರುವ ಕೆಲವು ಅಭ್ಯರ್ಥಿಗಳು ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆಗಿಳಿದಿದ್ದಾರೆ. ರಾಷ್ಟ್ರೀಯ ಪಕ್ಷಗಳು ಇಂತಹ ಆರೋಪಿಗಳಿಗೆ ಮಣೆ ಹಾಕಿರುವುದನ್ನು ನೋಡಿದರೆ, ಅಪರಾಧ ಹಿನ್ನೆಲೆಯುಳ್ಳವರ ಸ್ಪರ್ಧೆಗೆ ಕಡಿವಾಣ ಹಾಕುವಂತಹ ಕಠಿಣ ಕಾನೂನು ಜಾರಿಗೆ ಬರುವ ಸಾಧ್ಯತೆ ಇದ್ದಂತಿಲ್ಲ. ಸಾರ್ವಜನಿಕರೇ ಜಾತಿ, ಹಣದಂತಹ ಕಾರಣಗಳನ್ನು ಬದಿಗಿಟ್ಟು ಯೋಗ್ಯ ಅಭ್ಯರ್ಥಿಯನ್ನು ಆಯ್ಕೆ ಮಾಡಿದರೆ, ಆಗಲಾದರೂ ರಾಷ್ಟ್ರೀಯ ಪಕ್ಷಗಳು ಅಪರಾಧ ಹಿನ್ನೆಲೆಯುಳ್ಳವರಿಗೆ ಟಿಕೆಟ್ ನೀಡುವ ಬಗ್ಗೆ ಮರುಚಿಂತನೆ ಮಾಡಬಹುದು.

ತಿಮ್ಮೇಶ ಮುಸ್ಟೂರು, ಜಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋಚ್‌ಗಳು ಮತ್ತು ಭಾರತ ಕುಸ್ತಿ ಫೆಡರೇಷನ್‌ನ ಅಧ್ಯಕ್ಷರು ಕುಸ್ತಿಪಟುಗಳಿಗೆ ಕಿರುಕುಳ ನೀಡಿದ್ದಾರೆ, ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂದು ಆರೋಪಿಸಿ ಮೂರು ತಿಂಗಳ ಹಿಂದೆ ಅಂತರರಾಷ್ಟ್ರೀಯ ಮಟ್ಟದ ಕುಸ್ತಿಪಟುಗಳು ದೆಹಲಿಯಲ್ಲಿ ಧರಣಿ ನಡೆಸಿದ್ದರು. ಆ ಆರೋಪಗಳ ತನಿಖೆಗೆ ಎರಡೆರಡು ಸಮಿತಿಗಳನ್ನು ರಚಿಸಲಾಗಿತ್ತು. ಒಂದು ಸಮಿತಿ ವರದಿ ಸಲ್ಲಿಸಿದ್ದರೂ, ಅದು ಬಹಿರಂಗವಾಗಿಲ್ಲ. ತನಿಖೆಯಲ್ಲಿ ನಮಗೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ಕುಸ್ತಿಪಟುಗಳು ಮತ್ತೆ ಬೀದಿಗೆ ಇಳಿದಿದ್ದಾರೆ. ಪೊಲೀಸರಿಗೆ ದೂರನ್ನೂ ನೀಡಿದ್ದಾರೆ, ನ್ಯಾಯ ಒದಗಿಸಿ ಎಂದು ಸುಪ್ರೀಂ ಕೋರ್ಟ್‌ಗೂ ಅರ್ಜಿ ಸಲ್ಲಿಸಿದ್ದಾರೆ

ಲೈಂಗಿಕ ಕಿರುಕುಳ ಆರೋಪ ನ್ಯಾಯಕ್ಕಾಗಿ ಕುಸ್ತಿಪಟುಗಳ ಪಟ್ಟು

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ನಡೆಯುವ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರಗಳಲ್ಲಿ, ಶೇ 30ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಪರಿಚಿತರಿಂದಲೇ ಅಂತಹ ಕೃತ್ಯ ನಡೆದಿರುತ್ತದೆ. ಕೆಲಸದ ಸ್ಥಳದಲ್ಲಿ ಹಿರಿಯ ಅಧಿಕಾರಿಗಳಿಂದ, ಸಹೋದ್ಯೋಗಿಗಳಿಂದಲೂ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ನಡೆದ ಪ್ರಕರಣಗಳೂ ಇವೆ. ದೇಶದಲ್ಲಿ ಪ್ರತಿ ವರ್ಷ ದಾಖಲಾಗುವ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಕೆಲಸದ ಸ್ಥಳದಲ್ಲಿ ನಡೆಯುವ ಕೃತ್ಯಗಳ ಪ್ರಮಾಣ ಶೇ 3ಕ್ಕಿಂತಲೂ ಹೆಚ್ಚು. ಕ್ರೀಡಾಕ್ಷೇತ್ರವೂ ಇದಕ್ಕೆ ಹೊರತಲ್ಲ. ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧವೂ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಲ್ಲಿ ದೂರುಗಳು ದಾಖಲಾಗಿವೆ.

ಬ್ರಿಜ್ ಭೂಷಣ್ ಶರಣ್ ಸಿಂಗ್

ಭಾರತೀಯ ಕ್ರೀಡಾ ಪ್ರಾಧಿಕಾರವು (ಎಸ್‌ಎಐ) ದೇಶದ ಅತ್ಯುನ್ನತ ಕ್ರೀಡಾಸಂಸ್ಥೆಯಾಗಿದೆ. ದೇಶದ ಬೇರೆಲ್ಲಾ ಕ್ರೀಡಾ ಸಂಸ್ಥೆಗಳು ಈ ಪ್ರಾಧಿಕಾರದ ಅಡಿಯಲ್ಲಿ ಬರುತ್ತವೆ. ಕ್ರೀಡಾಸಂಸ್ಥೆಗಳಲ್ಲಿ ತಲೆದೋರುವ ಯಾವುದೇ ಕುಂದು–ಕೊರತೆಗಳು ಮತ್ತು ದೂರುಗಳನ್ನು ನಿರ್ವಹಿಸುವ ಹೊಣೆಯೂ ಈ ಸಂಸ್ಥೆಯದ್ದೇ ಆಗಿದೆ. 2010ರಿಂದ 2020ರ ಮಧ್ಯೆ ಈ ಪ್ರಾಧಿಕಾರಕ್ಕೆ ಲೈಂಗಿಕ ದೌರ್ಜನ್ಯ ಕುರಿತ ಒಟ್ಟು 45 ದೂರುಗಳು ಬಂದಿವೆ. ಇವುಗಳಲ್ಲಿ 29 ದೂರುಗಳನ್ನು ಕ್ರೀಡಾಪಟುಗಳು ತಮ್ಮ ಕೋಚ್‌ಗಳ ವಿರುದ್ಧವೇ ನೀಡಿದ್ದಾರೆ. ಆರ್‌ಟಿಐ ಕಾರ್ಯಕರ್ತರೊಬ್ಬರು ಕೇಳಿದ್ದ ಪ್ರಶ್ನೆಗಳಿಗೆ ಕ್ರೀಡಾ ಪ್ರಾಧಿಕಾರವು ನೀಡಿದ್ದ ಮಾಹಿತಿ ಇದು. ಆದರೆ, ಇವುಗಳಲ್ಲಿ ಎಷ್ಟು ಪ್ರಕರಣಗಳು ಇತ್ಯರ್ಥವಾಗಿವೆ ಎಂಬುದರ ಮಾಹಿತಿಯನ್ನು ಪ್ರಾಧಿಕಾರ ನೀಡಿರಲಿಲ್ಲ. ಕೆಲವು ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. ಕೆಲವರನ್ನು ವರ್ಗಾವಣೆ ಮಾಡಲಾಗಿದೆ, ಕೆಲವರ ವೇತನವನ್ನು ಕಡಿತ ಮಾಡಲಾಗಿದೆ ಎಂಬ ವಿವರಗಳನ್ನಷ್ಟೇ ಪ್ರಾಧಿಕಾರ ನೀಡಿತ್ತು. 2020ರಿಂದ ಈವರೆಗೆ ಲೈಂಗಿಕ ದೌರ್ಜನ್ಯದ ಎಷ್ಟು ಪ್ರಕರಣಗಳು ದಾಖಲಾಗಿವೆ ಎಂಬ ಮಾಹಿತಿ ಸಾರ್ವಜನಿಕವಾಗಿ ಲಭ್ಯವಿಲ್ಲ. ಆದರೆ, ಈ ಅವಧಿಯಲ್ಲಿ ಕೆಲವಾರು ಪ್ರಕರಣಗಳು ಭಾರಿ ಸದ್ದು ಮಾಡಿವೆ.

ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ನೀತಿ –2011ರ ಪ್ರಕಾರ, ಯಾವುದೇ ಕ್ರೀಡಾ ಸಂಸ್ಥೆಯಲ್ಲಿ ಲೈಂಗಿಕ ದೌರ್ಜನ್ಯದ ದೂರುಗಳು ಬಂದರೆ, ಆಯಾ ಸಂಸ್ಥೆಯು ಅದನ್ನು ಪರಿಶೀಲಿಸಬೇಕು. ಇಂತಹ ದೂರುಗಳ ನಿರ್ವಹಣೆಗಾಗಿಯೇ ಪ್ರತ್ಯೇಕ ನಿಯಮಾವಳಿಗಳನ್ನು ಸಾಮಾನ್ಯ ಕಾರ್ಯನಿರ್ವಹಣಾ ಪ್ರಕ್ರಿಯೆಗಳನ್ನು ರೂಪಿಸಿಕೊಳ್ಳಬೇಕು. ದೂರುಗಳಲ್ಲಿ ಮಾಡಿರುವ ಆರೋಪವು ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದ್ದರೆ, ಸಂಬಂಧಿತ ಕಾನೂನು ಪ್ರಾಧಿಕಾರಕ್ಕೆ ದೂರು ನೀಡಬೇಕು ಎಂದು ಈ ನೀತಿ ಹೇಳುತ್ತದೆ.

ಕುಸ್ತಿ ಫೆಡರೇಷನ್‌ನ ಅಧ್ಯಕ್ಷ ಮತ್ತು ಕೆಲವು ಕೋಚ್‌ಗಳ ವಿರುದ್ಧ ಕುಸ್ತಿಪಟುಗಳು ಜನವರಿಯಲ್ಲಿಯೇ ದೂರು ನೀಡಿದ್ದರು. ಕ್ರೀಡಾ ಸಚಿವಾಲಯವೇ ಆ ದೂರುಗಳನ್ನು ನಿರ್ವಹಣೆ ಮಾಡಿತ್ತು. ಭಾರತೀಯ ಒಲಿಂಪಿಕ್ ಸಂಸ್ಥೆಯು ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿತ್ತು. ಕ್ರೀಡಾ ಸಚಿವಾಲಯವು ಮತ್ತೊಂದು ಮೇಲ್ವಿಚಾರಣಾ ಸಮಿತಿಯನ್ನು ರಚಿಸಿತ್ತು. ಮೇಲ್ವಿಚಾರಣಾ ಸಮಿತಿಯು ಏಪ್ರಿಲ್ ಮೊದಲ ವಾರದಲ್ಲಿ ತನ್ನ ವರದಿ ಸಲ್ಲಿಸಿದೆ. ವರದಿ ಬಹಿರಂಗವಾಗಿಲ್ಲ. 'ಸಮಿತಿಯು ವಿಚಾರಣೆ ನಡೆಸುವ ವೇಳೆ ನಿಯಮಗಳನ್ನು ಪಾಲಿಸಿಲ್ಲ. ಬ್ರಿಜ್ ಭೂಷಣ್ ಅವರ ಹೇಳಿಕೆ ದಾಖಲಿಸುವ ವೇಳೆ ವಕೀಲರು ಹಾಜರಿರಲಿಲ್ಲ. ಜತೆಗೆ, ವರದಿಯಲ್ಲಿನ ವಿವರಗಳಿಗೆ ನನ್ನ ಸಹಮತವಿರಲಿಲ್ಲ. ಅದನ್ನು ನಮೂದಿಸಿಯೇ ವರದಿಗೆ ಸಹಿ ಹಾಕಿದ್ದೇನೆ' ಎಂದು ಸಮಿತಿಯ ಸದಸ್ಯರೊಬ್ಬರು ಹೇಳಿದ್ದಾರೆ ಎಂದು ದಿ ಹಿಂದೂ ವರದಿ ಮಾಡಿತ್ತು. ಆದರೆ, ಹೀಗೆ ಹೇಳಿದ ಸದಸ್ಯ ಯಾರು ಎಂಬ ಮಾಹಿತಿ ಬಹಿರಂಗವಾಗಿಲ್ಲ. ಸಚಿವಾಲಯವೂ ಈ ವರದಿಯನ್ನು ಬಹಿರಂಗಪಡಿಸಿಲ್ಲ.

ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ನಡೆಸುತ್ತಿರುವ ಕುಸ್ತಿಪಟುಗಳು ಭಾನುವಾರ ರಾತ್ರಿ ಅಲ್ಲಿಯೇ ಮಲಗಿದ್ದರು

ನಿಯಮಗಳ ಪ್ರಕಾರ ಸಚಿವಾಲಯವು ಅಥವಾ ಭಾರತೀಯ ಕ್ರೀಡಾ ಪ್ರಾಧಿಕಾರವು ವರದಿಯನ್ನು ಪರಿಶೀಲಿಸಿದ ನಂತರ ಕ್ರಮ ತೆಗೆದುಕೊಳ್ಳಬೇಕು. ಅಗತ್ಯವಿದ್ದರೆ, ಪೊಲೀಸರಿಗೆ ದೂರು ನೀಡಬೇಕು. ವರದಿ ಸಲ್ಲಿಕೆಯಾಗಿ ಎರಡು ವಾರ ಕಳೆದರೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂಬುದು ಕುಸ್ತಿಪಟುಗಳ ಆಕ್ಷೇಪ. ಹೀಗಾಗಿಯೇ ನಾವು ಪೊಲೀಸರಿಗೆ ನೇರವಾಗಿ ದೂರು ನೀಡಿದ್ದೇವೆ ಎಂದು ಕುಸ್ತಿಪಟುಗಳು ಹೇಳಿಕೊಂಡಿದ್ದಾರೆ. ದೆಹಲಿ ಪೊಲೀಸರಿಗೆ ದೂರು ನೀಡಿ ಮೂರು ದಿನ ಕಳೆದಿದ್ದರೂ ಎಫ್‌ಐಆರ್ ದಾಖಲಾಗಿಲ್ಲ. ಕುಸ್ತಿ ಫೆಡರೇಷನ್‌ನಲ್ಲಿ ಬಾಲಕಿಯರ ಮೇಲೂ ಲೈಂಗಿಕ ದೌರ್ಜನ್ಯ ನಡೆದಿದೆ ಎಂದೂ ದೂರು ನೀಡಲಾಗಿದೆ. ಇದು ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೋಕ್ಸೊ) ಅಡಿಯಲ್ಲಿ ಬರುವ ಪ್ರಕರಣ. ಹೀಗಿದ್ದೂ ಎಫ್‌ಐಆರ್ ದಾಖಲಿಸುತ್ತಿಲ್ಲ ಎಂದು ಕುಸ್ತಿಪಟುಗಳು ಆರೋಪಿಸಿದ್ದಾರೆ. ತಮ್ಮ ಹೋರಾಟಕ್ಕೆ ಬೆಂಬಲ ನೀಡುವಂತೆ ಕೋರಿದ್ದಾರೆ. ಕುಸ್ತಿಪಟುಗಳು ಭಾನುವಾರ ರಾತ್ರಿ ಪಾದಚಾರಿ ಮಾರ್ಗದಲ್ಲಿ ಮಲಗಿ, ಧರಣಿ ಮುಂದುವರಿಸಿದ್ದು ಹೆಚ್ಚು ಸುದ್ದಿಯಾಗಿದೆ. ತಡರಾತ್ರಿ ಧರಣಿಯ ಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ನಂತರ, ಕುಸ್ತಿಪಟುಗಳಿಗೆ ವ್ಯಾಪಕ ಬೆಂಬಲ ವ್ಯಕ್ತವಾಗುತ್ತಿದೆ.

ಇದರ ಬೆನ್ನಲ್ಲೇ, ವರದಿಯನ್ನು ಸಲ್ಲಿಸಿ ಎಂದು ಕ್ರೀಡಾ ಪ್ರಾಧಿಕಾರಕ್ಕೆ ದೆಹಲಿ ಪೊಲೀಸರು ಸೂಚಿಸಿದ್ದಾರೆ.

ಬೆಂಬಲಕ್ಕಾಗಿ ಮನವಿ

ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ತನಿಖೆ ನಡೆಸುವಂತೆ ಇದೇ ಜನವರಿಯಲ್ಲಿ ಕುಸ್ತಿಪಟುಗಳು ಧರಣಿ ನಡೆಸಿದ್ದರು. ಆ ಧರಣಿಗೆ ಬೆಂಬಲ ಸೂಚಿಸಿ, ಸಿಪಿಐನ ಬೃಂದಾ ಕಾರಟ್ ಅವರು ಧರಣಿಯ ಸ್ಥಳಕ್ಕೆ ತೆರಳಿದ್ದರು. ಆಗ ಕುಸ್ತಿಪಟುಗಳು ತಮ್ಮ ಹೋರಾಟಕ್ಕೆ ರಾಜಕಾರಣಿಗಳು ಬರುವುದು ಬೇಡ ಎಂದು ಹೇಳಿದ್ದರು. 'ಇದು ಕುಸ್ತಿಪಟುಗಳ ಹೋರಾಟ. ಇದರಲ್ಲಿ ರಾಜಕಾರಣಿಗಳ ಪ್ರವೇಶದ ಅಗತ್ಯವಿಲ್ಲ' ಎಂದು ಹೇಳಿದ್ದರು. ಆದರೆ ಈಗ, 'ನಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಿ ಯಾವುದೇ ರಾಜಕೀಯ ಪಕ್ಷ ಬಂದರೂ ನಾವು ಸ್ವಾಗತಿಸುತ್ತೇವೆ' ಎಂದು ಕುಸ್ತಿಪಟುಗಳು ಹೇಳಿದ್ದಾರೆ.

'ಕಳೆದ ಧರಣಿ ವೇಳೆ ನಮ್ಮನ್ನು ಹಾದಿ ತಪ್ಪಿಸಲಾಯಿತು. ನಾವು ಯಾವುದೇ ಪಕ್ಷದ ಜತೆಗೆ ಇಲ್ಲ. ನಮ್ಮ ಹೋರಾಟಕ್ಕೆ ಯಾವ ಪಕ್ಷ ಬೆಂಬಲ ಸೂಚಿಸಿದರೂ, ನಾವು ಸ್ವಾಗತಿಸುತ್ತೇವೆ. ಅದು ಬಿಜೆಪಿಯೇ ಇರಬಹುದು, ಕಾಂಗ್ರೆಸ್ ಇರಬಹುದು ಅಥವಾ ಎಎಪಿಯೇ ಇರಬಹುದು' ಎಂದು ಕುಸ್ತಿಪಟುಗಳು ಹೇಳಿದ್ದಾರೆ.

ಕುಸ್ತಿಪಟುಗಳಿಗೆ ಬೆಂಬಲ ಸೂಚಿಸಿ ಸಾರ್ವಜನಿಕರು ಇದೇ ಜನವರಿಯಲ್ಲಿ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ್ದರು

ಕೆಲವು ಪ್ರಮುಖ ಪ್ರಕರಣಗಳು

- 2022ರಲ್ಲಿ ಭಾರತದ 17 ವರ್ಷದೊಳಗಿನವರ ಮಹಿಳಾ ಫುಟ್‌ಬಾಲ್ ತಂಡದ ಕೋಚ್ ಅಲೆಕ್ಸ್ ಆ್ಯಂಬ್ರೋಸ್ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಕೇಳಿಬಂದಿತ್ತು. ಯೂರೋಪ್ ಪ್ರವಾಸದ ವೇಳೆ ಅವರು ಆಟಗಾರ್ತಿಯರ ಜತೆಗೆ ಅಸಭ್ಯವಾಗಿ ನಡೆದುಕೊಂಡಿದ್ದಾರೆ ಎಂದು ದೂರಲಾಗಿತ್ತು. ಅವರನ್ನು ಆ ಹುದ್ದೆಯಿಂದ ತೆಗೆದುಹಾಕಲಾಗಿತ್ತು
- 2022ರಲ್ಲಿ ಸ್ಲೊವೇನಿಯಾ ಪ್ರವಾಸದ ವೇಳೆ ರಾಷ್ಟ್ರೀಯ ಸೈಕ್ಲಿಂಗ್ ಕೋಚ್ ಆರ್.ಕೆ.ಶರ್ಮಾ ಅವರು ಅಸಭ್ಯವಾಗಿ ನಡೆದುಕೊಂಡಿದ್ದರು ಎಂದು ಮಹಿಳಾ ಸೈಕ್ಲಿಸ್ಟ್ ಒಬ್ಬರು ದೂರು ನೀಡಿದ್ದರು
- 2021ರಲ್ಲಿ ತಮಿಳುನಾಡು ಅಥ್ಲೀಟ್ ಕೋಚ್ ಪಿ.ನಾಗರಾಜನ್ ಅವರು ತಮ್ಮ ಮೇಲೆ ಹಲವು ವರ್ಷಗಳಿಂದ ಲೈಂಗಿಕ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು 19 ವರ್ಷದ ಅಥ್ಲೀಟ್ ಒಬ್ಬರು ಆರೋಪಿಸಿದ್ದರು. ಅದರ ಬೆನ್ನಲ್ಲೇ ಇನ್ನೂ ಏಳು ಮಂದಿ ಅಥ್ಲೀಟ್‌ಗಳು ಪಿ.ನಾಗರಾಜನ್ ವಿರುದ್ಧ ದೂರು ದಾಖಲಿಸಿದ್ದರು
- ಹರಿಯಾಣದ ಕ್ರೀಡಾ ಸಚಿವ ಸಂದೀಪ್ ಸಿಂಗ್ (ಮಾಜಿ ಹಾಕಿಪಟುವೂ ಹೌದು) ವಿರುದ್ಧ ಮಹಿಳಾ ಅಥ್ಲೆಟಿಕ್ ತರಬೇತುದಾರರೊಬ್ಬರು ಎಫ್‌ಐಆರ್ ದಾಖಲಿಸಿದ್ದರು. ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಸಂದೀಪ್ ಸಿಂಗ್ ಅವರನ್ನು ಇನ್ನೊಂದು ಖಾತೆಯ ಸಚಿವರನ್ನಾಗಿ ನೇಮಕ ಮಾಡಲಾಯಿತು

ಆಧಾರ: ಪಿಟಿಐ, ರಾಯಿಟರ್ಸ್, ದಿ ಹಿಂದೂ

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಸಿನಿಮಾ ಸಂಸ್ಕೃತಿ ಸಂಬಂಧಕ್ಕೆ ಪ್ರಶಸ್ತಿಯ ಭಾಷ್ಯ

ಸಿನಿಮಾ ರಂಜನೆ

1985 ನವೆಂಬರ್ 1ರ ಪ್ರಜಾವಾಣಿ 'ಸಿನಿಮಾ ರಂಜನೆ' ಪುಟ

ಚಲನಚಿತ್ರೋದ್ಯಮದ ನಾಡಿಮಿಡಿತಗಳನ್ನು ಸೂಕ್ಷ್ಮವಾಗಿ ಕೇಳಿಸಬೇಕೆನ್ನುವುದು ಮೊದಲಿನಿಂದಲೂ 'ಪ್ರಜಾವಾಣಿ'ಯ ಉಮೇದು. ಚಿತ್ರರಂಗದ ಪಲ್ಲಟಗಳನ್ನು ಈ ಕಾರಣಕ್ಕೇ ಪತ್ರಿಕೆಯು ಹೊಣೆಗಾರಿಕೆಯಿಂದ ದಾಟಿಸುತ್ತಾ ಬಂದಿದೆ. ಸಿನಿಮಾ ಎನ್ನುವುದು ಯಃಕಶ್ಚಿತ್ ಮನೋರಂಜನೆಯ ಮಾಧ್ಯಮ ಎಂದು ಭಾವಿಸದೆ ಸಾಂಸ್ಕೃತಿಕ ದೃಷ್ಟಿಯಲ್ಲಿಯೇ ಸಿನಿಮಾಗಳನ್ನು ಬಗೆದು ನೋಡುವಂತಹ ಗಾಂಭೀರ್ಯವನ್ನು ಸದಾ ಕಾಲ ಉಳಿಸಿಕೊಂಡು ಬಂದಿದೆ. ಅದಕ್ಕೆ ಪತ್ರಿಕೆಯ ಮಾಹಿತಿ ಸಂಗ್ರಹಾಗಾರದಲ್ಲಿ ಸಿಗುವ 1950ರ ದಶಕದ ಪುಟಗಳೂ ಸಾಕ್ಷ್ಯಗಳಂತೆ ಇವೆ.

ಪತ್ರಿಕೆಯು ಎಪ್ಪತ್ತೈದು ವರ್ಷಗಳ ಪಯಣದಲ್ಲಿ ಚಿತ್ರರಂಗದ ಆಗುಹೋಗುಗಳನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ದಾಖಲಿಸುತ್ತಾ ಬಂದಿರುವುದಕ್ಕೆ ಸಿಗುವ ಉದಾಹರಣೆಗಳು ಅಸಂಖ್ಯ. ಉದ್ಯಮವಾಗಿ ಸಿನಿಮಾ ಬೆಳೆದ ಬಗೆ, ಚಳವಳಿಗಳಲ್ಲಿ ಚಿತ್ರರಂಗದವರ ಪಾತ್ರದ ಇಂಚಿಂಚನ್ನೂ ದಾಖಲಿಸಿದೆ. ಮದ್ರಾಸ್‌ನಲ್ಲಿ ಕನ್ನಡ ಚಿತ್ರರಂಗ ನೆಲೆಗೊಂಡಿದ್ದಾಗ ನಡೆಯುತ್ತಿದ್ದ ಚಟುವಟಿಕೆಗಳ ದಾಖಲಾತಿ, ಸಿನಿಮಾದ ದಿಗ್ಗಜರಿಗೆ ಸಮ್ಮಾನ–ಗೌರವಗಳು ಪ್ರಾಪ್ತಿಯಾದ ಸಂದರ್ಭಗಳ ಬರಹಗಳು, ಅಗಲಿದವರಿಗೆ ನುಡಿನಮನ...ಈ ಎಲ್ಲ ವಿಷಯಗಳಲ್ಲೂ ಪತ್ರಿಕೆಯದ್ದು ಜವಾಬ್ದಾರಿಯುತವಾದ ಧೋರಣೆ. ನಿಷ್ಠುರವಾದ ಚಲನಚಿತ್ರ ವಿಮರ್ಶೆ ಹಾಗೂ ತಲಸ್ಪರ್ಶಿ ವಿಶ್ಲೇಷಣೆಗಳು ಪತ್ರಿಕೆಯ ಹೊಣೆಗಾರಿಕೆಯನ್ನು ಇನ್ನಷ್ಟು ಸ್ಪಷ್ಟಪಡಿಸಿವೆ.

'ಪ್ರಜಾವಾಣಿ' ಮೊದಲಿನಿಂದಲೂ ಚಲನಚಿತ್ರರಂಗದ ಸುದ್ದಿಯನ್ನು ಭಾಷಾತೀತವಾಗಿಯೂ ದಾಖಲಿಸುತ್ತಾ ಬಂದಿದೆ. ಹಿಂದಿ ಚಿತ್ರರಂಗವಷ್ಟೆ ಅಲ್ಲದೆ, ಅಂತರರಾಷ್ಟ್ರೀಯ ಸಿನಿಮೋತ್ಸವಗಳಿಗೆ ಸಂಬಂಧಿಸಿದ ಸುದ್ದಿಗಳಿಗೆ 1950ರ ದಶಕದಿಂದಲೇ ಆದ್ಯತೆ ನೀಡಿರುವುದು ಇದಕ್ಕೆ ಉದಾಹರಣೆಯಷ್ಟೆ.

ಈಗ 'ಪ್ರಜಾವಾಣಿ ಸಿನಿ ಸಮ್ಮಾನ' ಪ್ರಶಸ್ತಿ ಪ್ರಾರಂಭಿಸುವ ಮೂಲಕ ಚಿತ್ರರಂಗದ ಜತೆಗಿನ ಸಾಂಸ್ಕೃತಿಕ ಹೊಣೆಗಾರಿಕೆಯ ಬಾಂಧವ್ಯವನ್ನು ಗಟ್ಟಿಗೊಳಿಸುವಲ್ಲಿ ದಿಟ್ಟ ಹೆಜ್ಜೆ ಇಟ್ಟಂತಾಗಿದೆ. ಈ ಪ್ರಶಸ್ತಿಯ ಸ್ವರೂಪ ಹಾಗೂ ಆಯ್ಕೆ ಪ್ರಕ್ರಿಯೆಯ ಬಗೆಯನ್ನು ತಿಳಿಯಲು ಈ ಪುಟವನ್ನು ನಿತ್ಯವೂ ಗಮನಿಸುತ್ತಿರಿ.

ಹೊಸ ಹೀರೊಗೆ ಸೋನಲ್ ಜೋಡಿ

ಸೋನಲ್, ಅಭಿಲಾಷ್

ಚಂದನವನದಲ್ಲಿ ನಟಿ ಸೋನಲ್ ಮೊಂತೆರೋ ಸಿನಿಮಾ ಬ್ಯಾಂಕ್ ಹಿಗ್ಗುತ್ತಲೇ ಇದೆ. 'ಬನಾರಸ್' ಮೂಲಕ ಪ್ಯಾನ್ ಇಂಡಿಯಾ ಲೋಕಕ್ಕೆ ಹೆಜ್ಜೆ ಇಟ್ಟಿರುವ ಸೋನಲ್ ಹೊಸ ಹೀರೊಗಳಿಗೂ ಜೋಡಿಯಾಗಿ ಕಾಣಿಸಿಕೊಳ್ಳುತ್ತಿರುವುದು ವಿಶೇಷ. 'ನಾಗರಹಾವು' ಚಿತ್ರದ ಪಾತ್ರಗಳ ಹೆಸರನ್ನೇ ಇಟ್ಟುಕೊಂಡು ಸಿನಿಮಾವೊಂದು ಸೆಟ್ಟೇರಿದ್ದು, 'ಮಾರ್ಗರೇಟ್ ಲವರ್ ಆಫ್ ರಾಮಾಚಾರಿ' ಎಂಬುದು ಚಿತ್ರದ ಶೀರ್ಷಿಕೆ. 'ಲವ್ ಮಾಕ್ಟೇಲ್', 'ಬಡವ ರಾಸ್ಕಲ್' ಹಾಗೂ 'ಹೊಯ್ಸಳ' ಸಿನಿಮಾದಲ್ಲಿ ಸಣ್ಣ ಪಾತ್ರಗಳಿಗೆ ಬಣ್ಣಹಚ್ಚಿದ್ದ ಅಭಿಲಾಷ್ ಇದೀಗ ಈ ಚಿತ್ರದ ಮುಖಾಂತರ ನಾಯಕ ನಟನಾಗಿದ್ದಾರೆ. ಇವರಿಗೆ ಸೋನಲ್ ಜೋಡಿಯಾಗಿದ್ದಾರೆ. ರಾಮಾಚಾರಿ ಅಲಿಯಾಸ್ ರಾಮು ಎಂಬ ಪಾತ್ರದಲ್ಲಿ ಅಭಿಲಾಷ್ ನಟಿಸಲಿದ್ದು, ಸೋನಲ್ 'ಮೀರಾ ರಾಘವ್ ರಾಮ್ ಅಲಿಯಾಸ್ ಮ್ಯಾಗಿ' ಎಂಬ ಪಾತ್ರಕ್ಕೆ ಬಣ್ಣ ಹಚ್ಚುತ್ತಿದ್ದಾರೆ. ಯಶ್ ಶೆಟ್ಟಿ 'ಜಯಂತ್' ಅಲಿಯಾಸ್ ಜಲೀಲನಾಗಿ ಕಾಣಿಸಿಕೊಳ್ಳಲಿದ್ದಾರೆ.

ನಟ ಧನಂಜಯ ಅವರು ಚಿತ್ರದ ಮೊದಲ ದೃಶ್ಯಕ್ಕೆ ಕ್ಲ್ಯಾಪ್ ಮಾಡಿದ್ದಾರೆ. 'ಒಬ್ಬ ಸಾಮಾನ್ಯ ಹುಡುಗನಿಗೆ ಶ್ರೀಮಂತ ಹುಡುಗಿ ಸಿಕ್ಕಿದಾಗ ಏನಾಗುತ್ತದೆ ಎನ್ನುವುದೇ ಚಿತ್ರದ ಕಥಾಹಂದರ. ಮೇ 15ರಂದು ಚಿತ್ರೀಕರಣ ಪ್ರಾರಂಭವಾಗಲಿದೆ' ಎಂದರು ನಿರ್ದೇಶಕ ಗಿರಿಧರ್ ಕುಂಬಾರ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಉತ್ತರ ಪ್ರದೇಶದಲ್ಲಿ ಈಚೆಗೆ ಹತ್ಯೆಯಾದ ಪಾತಕಿ ಅತೀಕ್ ಅಹಮದ್ 2008ರಲ್ಲಿ ಯುಪಿಎ ಸರ್ಕಾರವನ್ನು ರಕ್ಷಿಸಿದ್ದ. ಡಾ.ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು, ಅಮೆರಿಕದ ಜತೆಗೆ ಅಣು ಒಪ್ಪಂದ ಮಾಡಿಕೊಳ್ಳುವ ಸಂಬಂಧ ಭಿನ್ನಾಭಿಪ್ರಾಯದ ಕಾರಣ ಎಡಪಕ್ಷಗಳು ವಾಪಸ್ ಪಡೆದಿದ್ದವು. ಆಗ ಯುಪಿಎ ಸರ್ಕಾರವು ಬಹುಮತ ಸಾಬೀತುಪಡಿಸುವ ಅನಿವಾರ್ಯಕ್ಕೆ ಒಳಗಾಗಿತ್ತು. 2008ರ ಜುಲೈನಲ್ಲಿ ನಡೆದಿದ್ದ ವಿಶ್ವಾಸಮತ ಯಾಚನೆಯಲ್ಲಿ, ಕಾಂಗ್ರೆಸ್ ತನ್ನ ಮಿತ್ರಪಕ್ಷಗಳಿಗೆ ಆಹ್ವಾನ ನೀಡಿತ್ತು. ಸಮಾಜವಾದಿ ಪಕ್ಷವು ಯುಪಿಎ ಪರವಾಗಿ ಮತ ಚಲಾಯಿಸಿತ್ತು. ಆಗ ಸಮಾಜವಾದಿ ಪಕ್ಷದ ಸಂಸದನಾಗಿದ್ದ ಅತೀಕ್ ಯುಪಿಎ ಸರ್ಕಾರದ ಪರವಾಗಿ ಮತ ಚಲಾಯಿಸಿದ್ದ' ಎಂಬ ವಿವರ ಇರುವ ವರದಿಯನ್ನು ಹಲವು ಸುದ್ದಿ ಸಂಸ್ಥೆಗಳು ಪ್ರಸಾರ ಮಾಡಿವೆ. ಆದರೆ, ಇದು ಸುಳ್ಳು ಸುದ್ದಿ.

ಇದು ಸುಳ್ಳು ಮಾಹಿತಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಈ ಸುದ್ದಿಯನ್ನು ಮೊದಲು ಪ್ರಕಟಿಸಿದ್ದು ಪಿಟಿಐ. 'ಅತೀಕ್ ಅಹಮದ್ ಯುಪಿಎ ಪರ ಮತ ಚಲಾಯಿಸಿ ಸರ್ಕಾರವನ್ನು ರಕ್ಷಿಸಿದ್ದ ಎಂದು ರಾಜೇಶ್ ಸಿಂಗ್ ಅವರ ಬಾಹುಬಲೀಸ್ ಆಫ್ ಇಂಡಿಯನ್ ಪಾಲಿಟಿಕ್ಸ್ ಪುಸ್ತಕದಲ್ಲಿ ಹೇಳಿಕೊಂಡಿದ್ದಾರೆ' ಎಂದು ಪಿಟಿಐ ತನ್ನ ವರದಿಯಲ್ಲಿ ವಿವರಿಸಿತ್ತು. ಆದರೆ, ಈ ಪುಸ್ತಕದಲ್ಲಿ ಇರುವ ಮಾಹಿತಿ ತಪ್ಪು. 2008ರ ಜುಲೈನಲ್ಲಿ ಯುಪಿಎ ಸರ್ಕಾರ ಬಹುಮತ ಸಾಬೀತು ಮಾಡಿದ್ದು ನಿಜ. ಆಗ ಸಮಾಜವಾದಿ ಪಕ್ಷದ ಸಂಸದರೂ ಯುಪಿಎ ಪರವಾಗಿ ಮತ ಚಲಾಯಿಸಿದ್ದರು. ಅತೀಕ್ ಅಹಮದ್ ಜೈಲಿನಿಂದಲೇ ಮತ ಚಲಾಯಿಸಿದ್ದ. ಆದರೆ, ಆತ ಯುಪಿಎ ವಿರುದ್ಧವಾಗಿ ಮತ ಚಲಾಯಿಸಿದ್ದ. ಹೀಗಾಗಿ 2008ರಲ್ಲಿ ಆತ ಯುಪಿಎ ಸರ್ಕಾರವನ್ನು ರಕ್ಷಿಸಿದ್ದ ಎಂಬುದು ತಪ್ಪು ಮಾಹಿತಿ' ಎಂದು ದಿ ಲಾಜಿಕಲ್ ಇಂಡಿಯನ್ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ವಿವರಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಶ್ರೇಷ್ಠ ತತ್ವ

ಮಾರ್ಗಣೆಯೆ ಮುಖ್ಯ; ಲಭ್ಯದ ಮಾತದಂತಿರಲಿ |
ಸ್ವರ್ಗವನು ಭುವಿಗಿಳಿಸಬಲ್ಲವನದಾರು ?
ಅರ್ಗಲವ ಮೀರ್ದ ಸರ್ವಾರ್ಥಸಹಭಾಗಿತೆಯೆ |
ಅರ್ಘಾರ್ಹತತ್ತ್ವವೆಲೊ – ಮಂಕುತಿಮ್ಮ || 869 ||

ಪದ-ಅರ್ಥ: ಮಾರ್ಗಣೆ -ಹುಡುಕುವಿಕೆ, ಲಭ್ಯದ = -ಪಡೆಯುವ, ಭುವಿಗಿಳಿಸಬಲ್ಲವನದಾರು = ಭುವಿಗೆ(ಭೂಮಿಗೆ) + ಇಳಿಸಬಲ್ಲವನು + ಅ ದಾರು, ಅರ್ಗಲವ = ತಡೆಯನ್ನು, ಮೀರ್ದ = ಮೀರಿದ, ಅರ್ಘಾರ್ಹತತ್ತವೆಲೊ = ಅರ್ಘಾರ್ಹ (ಶ್ರೇಷ್ಠ ಮತ್ತು ಗೌರವಾರ್ಹವಾದ) + ತತ್ವ + ಎಲೊ.

ವಾಚ್ಯಾರ್ಥ: ಗುರಿ ತಲುಪುವುದಿರಲಿ, ತಲುಪುವೆಡೆಗೆ ಮಾಡುವ ಪ್ರಯತ್ನ, ಹುಡುಕಾಟವೇ ಮುಖ್ಯ. ಸ್ವರ್ಗವನ್ನು ಭೂಮಿಗೆ ತರಬಲ್ಲವನು ಯಾರು? ಆದರೆ ದೊರೆತದ್ದನ್ನು ಎಲ್ಲರ ಹಿತಕ್ಕಾಗುವಂತೆ, ಅಡೆ-ತಡೆಯಿಲ್ಲದೆ ಹಂಚಿಕೊಂಡು ಬಾಳು ಸಾಗಿಸುವುದೇ ಅತ್ಯಂತ ಶ್ರೇಷ್ಠ ಮತ್ತು ಗೌರವಾರ್ಹವಾದದ್ದು.

ವಿವರಣೆ: ನಾನು ಬೆಂಗಳೂರಿನಿಂದ ಮುಂಬೈಗೆ ಕಾರಿನಲ್ಲಿ ಹೊರಟಿದ್ದೇನೆ ಎಂದು ಭಾವಿಸಿ. ದಾರಿಯಲ್ಲಿ ಬರುವ ಮುಖ್ಯ ನಗರಗಳು, ತುಮಕೂರು, ದಾವಣಗೆರೆ, ಹುಬ್ಬಳ್ಳಿ, ಪುಣೆ ಹಾಗೂ ಮುಂಬೈ. ನಾನು ಈ ನಗರಗಳನ್ನು ಒಂದೊಂದಾಗಿ ದಾಟಬೇಕು. ನಾನು ಬೆಂಗಳೂರಿನಿಂದ ಹೊರಟಾಗ ಮುಂಬೈ ಬಗ್ಗೆ ಯೋಚನೆ ಬೇಕಿಲ್ಲ. ಮೊದಲು ತುಮಕೂರು ದಾಟಬೇಕು, ನಂತರ ದಾವಣಗೆರೆ. ಹೀಗೆ ಪ್ರಯಾಣ ಸಾಗಬೇಕು. ನಾನು ನಗರಗಳನ್ನು ಸರಿಯಾಗಿ, ಸರಿಯಾದ ಸಮಯಕ್ಕೆ ದಾಟುತ್ತಿದ್ದರೆ ಮುಂಬೂ ಮುಟ್ಟುವುದು ಖಂಡಿತ. ದಾವಣಗೆರೆಯವರೆಗೂ ಸರಿಯಾಗಿ ಹೋಗಿ, ಮುಂದೆ ಹುಬ್ಬಳ್ಳಿಯನ್ನು ತಲುಪದೇ ಹೋದರೆ ಏನರ್ಥ? ದಾವಣಗೆರೆಯ ವರೆಗೆ ಎಚ್ಚರಿಕೆಯಿಂದ ಕಾರು ಓಡಿಸಿದ್ದೆ ಆದರೆ ಮುಂದೆ ದಾರಿ ತಪ್ಪಿದೆ. ಹಾಗೆ ದಾರಿ ತಪ್ಪಿದರೆ ಮುಂಬೈ ಮುಟ್ಟುವುದು, ಅಂದರೆ ಗುರಿ ಸಾಧಿಸುವುದು, ಅಸಾಧ್ಯ.

ಅದನ್ನು ಈ ಕಗ್ಗ ಹೇಳುತ್ತದೆ. ಗುರಿ ತಲುಪುವ ಮಾತು ಆಮೇಲೆ. ಮೊದಲು ಸರಿಯಾದ ದಾರಿಯಲ್ಲಿ ಹೋಗುವುದೇ ಮುಖ್ಯವಾದದ್ದು. ಯಾಕೆಂದರೆ ದಾರಿ ಸರಿಯಾಗಿದ್ದರೆ ಮಾತ್ರ ಗುರಿ ತಲುಪುವುದು ಸಾಧ್ಯ. ನಮ್ಮೆಲ್ಲರ ಜೀವನದ ಗುರಿಯೆಂದರೆ ಪ್ರಪಂಚದಲ್ಲಿ ಎಲ್ಲರೂ ಸದಾಕಾಲ ಸಂತೋಷವಾಗಿರಬೇಕು. ನಮ್ಮ ಸ್ವರ್ಗದ ಕಲ್ಪನೆಯೂ ಇದೇ ತಾನೇ? ಎಲ್ಲರೂ, ಯಾವ ದುಃಖವಿಲ್ಲದೆ ಸಮಾನಮನಸ್ಕರಾಗಿ ಇರುವುದು. ಅಂಥ ಸ್ವರ್ಗವನ್ನು ಭೂಮಿಗೆ ಇಳಿಸಬಲ್ಲವರು ಯಾರು? ಒಂದು ರೀತಿಯಲ್ಲಿ ನೋಡಿದರೆ, ಸ್ವರ್ಗವನ್ನು ಭೂಮಿಗೆ ತರುವ ಕಾರಣವೇ ಇಲ್ಲ. ಭೂಮಿಯನ್ನೇ ಸ್ವರ್ಗ ಮಾಡಬಹುದು. ಅದಕ್ಕೆ ಮಾಡಬೇಕಾದದ್ದು ಇಷ್ಟೇ. ಯಾವ ಅಡೆತಡೆಗಳೂ ಇಲ್ಲದೆ, ಎಲ್ಲರ ಹಿತಸಾಧನೆಗೆ, ಎಲ್ಲರ ಸಹಭಾಗಿತೆಯನ್ನು ಸಾಧಿಸುವುದು. ಇದನ್ನು ಕಗ್ಗ 'ಅರ್ಘಾರ್ಹ ತತ್ವ' ಎನ್ನುತ್ತದೆ. ಹಾಗೆಂದರೆ ಅದೇ ಅತ್ಯಂತ ಶ್ರೇಷ್ಠವಾದ, ಗೌರವಾರ್ಹವಾದ ತತ್ವ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 25, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಪಂಚಮಿ ಗಂ. 09-41 ನಕ್ಷತ್ರ: ಆರ್ದ್ರಾ ಗಂ. 28-21 ಯೋಗ: ಅತಿಗಂಡ ಗಂ. 07-44, ಕರಣ: ಬಾಲವ ಗಂ. 09-41, ಮೇಷ ಮಾಸದ 11 ನೇ ದಿನ, ಮಳೆನಕ್ಷತ್ರ: ಅಶ್ವಿನಿ 4. ರಾಹುಕಾಲ : ಮಧ್ಯಾಹ್ನ 03-00 – 04-30 ಸೂರ್ಯೋದಯ : 06-16 ಸೂರ್ಯಾಸ್ತ : 06-41 ಮುಸ್ಲಿಂ ದಿನಾಂಕ : 04 ಶವ್ವಾಲ್, ದಿನ ವಿಶೇಷ : ಶ್ರೀ ಶಂಕರಾಚಾರ್ಯ ಜಯಂತಿ, ಶ್ರೀರಾಮಾನುಜಾಚಾರ್ಯ ಜಯಂತಿ
ಅದೃಷ್ಟ ಸಂಖ್ಯೆ : 5, 8

ಮೇಷ: ಹೂವು-ಹಣ್ಣುಗಳ ಮಾರಾಟಗಾರರಿಗೆ ತಾವು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಿನ ಲಾಭವನ್ನು ವ್ಯಾಪಾರದಲ್ಲಿ ಪಡೆದುಕೊಳ್ಳುವುದರಿಂದ ಸಂತೋಷ ಇರುವುದು. ದಾಂಪತ್ಯದಲ್ಲಿ ಹೊಂದಾಣಿಕೆಯಿಂದ ಜೀವನ ಹಸನವಾಗಲಿದೆ.

ವೃಷಭ: ದೈವಬಲದ ಕಾರಣ ಕೈಗೊಂಡ ಕೆಲಸ-ಕಾರ್ಯಗಳಲ್ಲಿ ಜಯ ಅಥವಾ ಹೊಸ ಕಾರ್ಯ ಕೈಗೊಳ್ಳಲು ಧೈರ್ಯ ಉಂಟಾಗಲಿದೆ. ವೃತ್ತಿಗಿಂತ ಪ್ರವೃತ್ತಿಯಲ್ಲಿ ಆಸಕ್ತಿ ಹೆಚ್ಚಲಿದೆ. ಸಂಘ ಸಂಸ್ಥೆಗಳ ಪದಾಧಿಕಾರ ಆಕಸ್ಮಿಕವಾಗಿ ದೊರಕುವುದು.

ಮಿಥುನ: ಕುಟುಂಬ ಸ್ಥಾನದಲ್ಲಿ ಮನಸ್ತಾಪಕ್ಕೆ ಕಾರಣವಾಗದಂತೆ ಎಲ್ಲದರಲ್ಲೂ ಹೆಚ್ಚಿನ ಜಾಗ್ರತೆ ವಹಿಸಿರಿ. ರಿಯಲ್ ಎಸ್ಟೇಟುದಾರರಿಗೆ ವ್ಯವಹಾರಗಳು ವೃದ್ಧಿಗೊಳ್ಳಲಿದೆ. ಸೌಂದರ್ಯವರ್ಧಕಗಳ ಮಾರಾಟಗಾರರಿಗೆ ಲಾಭದ ದಿನ.

ಕರ್ಕಾಟಕ: ನಿರ್ಧರಿಸಿದ ರೀತಿಯಲ್ಲಿ ಜೀವನ ಇಲ್ಲದಿರುವುದು ಖೇದ ವಾಗುತ್ತದೆ. ಲೋಕದಲ್ಲಿ ಸರ್ವೇ ಸಾಮಾನ್ಯವಾಗಿರುವ ಬದುಕಿನ ಪರಿಭಾಷೆಯಂತಲ್ಲದೆ ವಿಭಿನ್ನವಾಗಿ ಬದುಕಿ ತೋರಿಸುತ್ತೇವೆಂಬ ಕಲ್ಪನೆ ಹುಸಿಯಾಗುತ್ತದೆ.

ಸಿಂಹ: ಮನೆಯಲ್ಲಿನ ಯುದ್ಧದ ವಾತಾವರಣವನ್ನು ಮನೆಯ ಯಜಮಾನತಿಯ ಸ್ಥಾನದಲ್ಲಿ ನಿಂತು ತಿಳಿಗೊಳಿಸಬೇಕಾದುದು ಅನಿವಾರ್ಯದ ಕರ್ತವ್ಯವಾಗಿರುತ್ತದೆ. ಸಂದರ್ಭಗಳೊಡನೆ ರಾಜಿಮಾಡಿಕೊಳ್ಳುವುದು ಸರಿ ಎನಿಸಲಿದೆ.

ಕನ್ಯಾ: ಕೋರ್ಟ್ ಕಚೇರಿ ಕೆಲಸಗಳಲ್ಲಿ ಜಯ ಉಂಟಾಗಿ ಸಮಸ್ಯೆಗಳು ಬಗೆಹರಿಯುತ್ತವೆ. ಸ್ವಂತ ಉದ್ಯೋಗ ನಡೆಸುವವರು ಒಳ್ಳೆಯ ಅಭಿವೃದ್ಧಿಯನ್ನು ಎದುರು ನೋಡಬಹುದು. ಮನೆಯಲ್ಲಿ ಮಂಗಳಕಾರ್ಯಗಳು ನೆರವೇರುತ್ತವೆ.

ತುಲಾ: ಸಾಧ್ಯವಾದಷ್ಟು ಶಾಂತಚಿತ್ತದಿಂದ ಕೆಲಸ ಸಾಧಿಸಿ. ಶಿಕ್ಷಣಕ್ಕೆ ಸಂಬಂಧಿಸಿದ ಸರ್ಕಾರಿ ಉನ್ನತ ಅಧಿಕಾರಿಗಳಿಗೆ ವರ್ಗಾವಣೆಯಾಗುವ ಸಾಧ್ಯತೆಗಳಿವೆ. ತಾಯಿಯವರ ಆರೋಗ್ಯ ಸುಧಾರಿಸಿ ನೆಮ್ಮದಿ ಉಂಟಾಗಲಿದೆ.

ವೃಶ್ಚಿಕ: ಪ್ರಾಮಾಣಿಕತೆಗೆ ತಕ್ಕ ಫಲವನ್ನು ಇಂದು ಪಡೆಯುತ್ತೀರಿ. ಹೊಸ ವಾಹನ ಖರೀದಿಗೆ ಯೋಚಿಸಿದವರು ಸ್ವಲ್ಪ ದಿನಗಳ ಮಟ್ಟಿಗೆ ತಟಸ್ಥರಾಗಿರಿ. ಒಂದು ಶಿಶುವಿನ ಜನನ ಕುಟುಂಬದ ಸರ್ವರ ಸಂತೋಷಕ್ಕೆ ಕಾರಣವಾಗುತ್ತದೆ.

ಧನು: ಈ ದಿನ ನಿಮ್ಮನ್ನು ಎದುರು ಹಾಕಿಕೊಳ್ಳುವವರಿಗೆ ತಕ್ಕ ಉತ್ತರವನ್ನು ದೇವರು ನೀಡುತ್ತಾನೆ. ವಿದ್ಯಾಭ್ಯಾಸದಲ್ಲಿನ ಸಾಧನೆಗೆ ಗುರುಗಳ ಕಡೆಯಿಂದ ಪ್ರೋತ್ಸಾಹ ಸಿಗುವುದು. ಪೀಠೋಪಕರಣಗಳ ಖರೀದಿಗೆ ಶುಭ ದಿನ.

ಮಕರ: ದುಡುಕು ನಿರ್ಧಾರಗಳಿಂದ ಕೋರ್ಟ್ ವ್ಯವಹಾರದಲ್ಲಿ ಸೋಲಿನ ಕಹಿಯನ್ನು ಅನುಭವಿಸಬೇಕಾಗುತ್ತದೆ. ಇತರರನ್ನು ಗೌರವಿಸುವುದು ಮತ್ತು ಇತರರ ಮಾತನ್ನು ಪರಾಮರ್ಶಿಸುವುದರ ಜೊತೆಗೆ ಮನ್ನಣೆಯೂ ಇರಲಿ.

ಕುಂಭ: ಭೂಮಿಗೆ ಸಂಬಂಧಿಸಿದ ಸಮಸ್ಯೆಗಳು ನಿವಾರಣೆಗೊಳ್ಳುವ ಹಂತಕ್ಕೆ ಬರಲಿದೆ. ಸೂಕ್ತ ಗೌರವಾದರಗಳು ದೊರೆಯಲಿದೆ. ಹಿಡಿದ ಕೆಲಸಗಳು ಹಂತ ಹಂತವಾಗಿ ಅಥವಾ ಒಂದೊಂದಾಗಿ ಮುಗಿಸುವ ಪ್ರಯತ್ನವಿರಲಿ.

ಮೀನ: ಮಹಾಗಣಪತಿಯ ಆರಾಧನೆಯಿಂದ ಜೀವನದಲ್ಲಿನ ಸಮಸ್ಯೆಗಳು ಮತ್ತು ದುಃಖಗಳೆಲ್ಲಾ ದೂರಾಗುವುವು. ವಾಣಿಜ್ಯ ವ್ಯವಹಾರಗಳು ಲಾಭ ತರಲಿದೆ. ಸಂಜೆಯ ಸುತ್ತಾಟ, ಮಾತುಕತೆ ಮನಸ್ಸಿಗೆ ಹಿತ ತರಲಿದೆ.

ಪದಬಂಧ 5299 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
5.ಈತ ಶೌರ್ಯವುಳ್ಳವನು (4)
6.ಕಳವಳ ಹೀಗೆ ಬಂದಿದೆ (4)
7.ರಾಜಿ ಮಾಡಿಕೊಂಡರೂ ಈತ ಸೋಲಿಸಲ್ಪಟ್ಟವನು (4)
9.ಪೂಜಿಸುವವನು ಇಲ್ಲಿದ್ದಾನೆ (4)
10.ವನದೊಳಗಿರುವ ಉಡುಗೆ ಕಾಣುತ್ತಿದೆಯೇ (3)
11.ಆಜ್ಞೆಮಾಡುವವನು (4)
12.ದೇವಾಲಯದ ಸಭಾಮಂಟಪ (4)
14.ಕಣ್ಣಿನ ಕೊನೆಯ ನೋಟ (4)
16.ಒಪ್ಪವಾಗಿ ರಾಗದೊಡನೆ ಮೂಡಿದ ಪ್ರೀತಿ (4)

ಮೇಲಿಂದ ಕೆಳಕ್ಕೆ
1.ಅಪ್ಪನ ಈ ರೂಪ ಬಲು ವಿರಳ! (4)
2.ಪರಾಕ್ರಮಿ ಹಿಡಿದಿರುವ ಕ್ಷುದ್ರಜಂತು (2)
3.ಹಂತಕನೇರಿದ ಸೋಪಾನ (2)
4.ಬಲುರುಚಿಕಟ್ಟಾದ ಅಡುಗೆ (4)
8.ಅತಿಯಾದ ಬಯಕೆ (3)
9.ಮುಖ ಇಲ್ಲಿದೆ (3)
11.ಅಂಕುಶವಿದ್ದರೂ ಯಾವ ಹತೋಟಿ ಇಲ್ಲದ್ದು (4)
13.ಮರವನ್ನು ಕೊಯ್ಯುವ ಸಾಧನ (4)
15.ತಟಕ್ಕನೆ ಕಾಣಿಸಿದ ಕಳ್ಳ (2)
16.ಮಾವನ ಹೆಂಡತಿ (2)



5298ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗುಡಿಸಲು 3.ಉಪವಾಸ 5.ಪ್ರತಿಷ್ಠೆ 6.ಪರಿತಾಪ 7.ತುಧಾ 8.ನದೀಮುಖಜಭೂಮಿ 11.ಡಿಕ್ಕಿ 12.ಪರದಾಟ 13.ಮಾರುತ 16.ಲವಾಜಮೆ 17.ಭರವಸೆ

ಮೇಲಿಂದ ಕೆಳಕ್ಕೆ:
1.ಗುರಿ 2.ಸವತಿ 4.ಸಮೀಪ 5.ಪ್ರಧಾನ 6.ಪದ್ಮಜ 9.ಮುಕುಟ 10.ಮಿಡಿತ 12.ಪತ್ತಲ 14.ರುಧಿರ 15.ಆಸೆ

ಸುಡೊಕು 5685

	6		8				1	
2							7	
		4	9		2	8		6
3		6				5		9
	7		3	2	4		8	
		1				3		7
4			6		1		9	
	3				5			8
6		8	2				5	4

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5684 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,624
ಇಂದಿನ ಅಂತ್ಯ	17,743
▲	119
ದಿನದ ಕನಿಷ್ಠ	17,754

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈಂಡ್)	₹1665(1665)
ಸೋಯಾ (ರಿಫೈಂಡ್)	₹995(1010)
ಸೂರ್ಯಕಾಂತಿ (ರಿಫೈಂಡ್)	₹1040(1050)
ಪಾಮೋಲಿನ್	₹945(947)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹143.50
ಗುಡ್ ಲಾಟ್	₹132

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ

ಕೆ.ಆರ್‌.ಪೇಟೆ (ಇತರೆ)	₹8250-8250
ತುಮಕೂರು (ಉಂಡೆ)	₹8500-9600

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)	
ದಪ್ಪ	₹1,000-1,600
ಮಧ್ಯಮ	₹800-1,000
ಸಣ್ಣ	₹400-800

ಮುದ್ರೆಮನೆ ಕಾಫಿ

(50 ಕೆಜಿಗೆ)	
ಎಪಿ	₹15,500
ಎಸಿ	₹8120
ಆರ್‌ಪಿ	₹10400
ಆರ್‌ಸಿ	₹5740

ಮುಂಬೈ ಧಾರಣೆ

ಶೇಂಗಾ

24–4-2023

ಜಾವಾ 70/80(ಹೊಸ)	11050-11150
ಜಾವಾ 80/90(ಹೊಸ)	10750-10850
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1675(1675)
ಒಂದು ವಾರದ ಡೆಲಿವರಿ	1670(1670)
ಸೋಯಾ ಕಚ್ಚಾ	895(910)
ಪಾಮ್ ವಾರದ ಡೆಲಿವರಿ	943(945)
ಸೂರ್ಯಕಾಂತಿ ಎಣ್ಣೆ ಕಚ್ಚಾ	920(930)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

59875(59850)

ಬೆಳ್ಳಿ ಕೆ.ಜಿ 74730(74650)

ಆವರಣದಲ್ಲಿ ಶನಿವಾರದ ಧಾರಣೆ

ಸರಕು ಸಾಗಣೆ ಸೂಚ್ಯಂಕ: ಭಾರತಕ್ಕೆ 38ನೆಯ ಸ್ಥಾನ

ನವದೆಹಲಿ (ಪಿಟಿಐ): ವಿಶ್ವ ಬ್ಯಾಂಕ್ ಸಿದ್ಧಪಡಿಸುವ ಸರಕು ಸಾಗಣೆ ಸಾಧನೆ ಸೂಚ್ಯಂಕದಲ್ಲಿ ಭಾರತವು ಆರು ಸ್ಥಾನಗಳಷ್ಟು ಮೇಲೆ ಬಂದಿದೆ. ಈಗ ಭಾರತವು 38ನೆಯ ಸ್ಥಾನದಲ್ಲಿದೆ.

2018ರಲ್ಲಿ ಭಾರತವು ಈ ಸೂಚ್ಯಂಕದಲ್ಲಿ 44ನೆಯ ಸ್ಥಾನದಲ್ಲಿತ್ತು. 2014ರಲ್ಲಿ 54ನೆಯ ಸ್ಥಾನದಲ್ಲಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು 2022ರಲ್ಲಿ ರಾಷ್ಟ್ರೀಯ ಸರಕು ಸಾಗಣೆ ನೀತಿಯನ್ನು ಅನಾವರಣಗೊಳಿಸಿದ್ದಾರೆ.

ಶಂಕರರ ಲೋಕಕಾರುಣ್ಯ

• ಎಸ್. ಸೂರ್ಯಪ್ರಕಾಶ ಪಂಡಿತ್

‘ಮೂರು ಲೋಕಗಳ ಒಡೆತನಕ್ಕಿಂತಲೂ ವಿದ್ಯೆಯೇ ಹೆಚ್ಚಿನದು’ (‘ತ್ರೈಲೋಕ್ಯ ರಾಜ್ಯಾಚ್ಚ ಗುರುತರಾ ವಿದ್ಯೇತಿ’) – ಎಂದು ಘೋಷಿಸಿದವರು, ಶಂಕರಾಚಾರ್ಯರು.

ಇಂದು ನಾವು ಕೂಡ ವಿದ್ಯೆಯ ಸಂಪಾದನೆಗೆ ಹೆಚ್ಚಿನ ಒತ್ತನ್ನೇನೋ ಕೊಡುತ್ತಿದ್ದೇವೆ, ದಿಟ. ಆದರೆ ನಾವು ಈಗ ಯಾವುದನ್ನು ‘ವಿದ್ಯೆ’ ಎಂದು ಪರಿಗಣಿಸುತ್ತಿದ್ದೇವೆ ಎಂಬುದು ವಿಚಾರಾರ್ಹ. ಆಚಾರ್ಯ ಶಂಕರರ ದೃಷ್ಟಿಯಲ್ಲಿ ವಿದ್ಯೆ ಎಂದರೆ ಆತ್ಮಜ್ಞಾನ. ನಮ್ಮತನದ ಅರಿವೇ ಆತ್ಮಜ್ಞಾನ. ಎಲ್ಲ ತಿಳಿವಳಿಕೆಗಳಿಗಿಂತಲೂ ಮಹತ್ತರವಾದದ್ದು ತನ್ನತನದ ಅರಿವು. ಇಂಥ ಅರಿವಿನ ನೆಲೆಯನ್ನೂ ಬೆಲೆಯನ್ನೂ ಲೋಕಕ್ಕೆ ಕಾಣಿಸಿದವರು ಶಂಕರರು.

ಭಾರತೀಯ ಪ್ರಜ್ಞಾಪರಂಪರೆಯಲ್ಲಿ ಶಿಖರಪ್ರಾಯವಾಗಿ ಕಾಣಿಸಿಕೊಂಡವರು ಆಚಾರ್ಯ ಶಂಕರರು. ಭಾರತೀಯ ಚಿಂತನೆಯ ಮೂಲವೆನಿಸಿರುವ ವೇದಗಳ ಸಾರ ಏನು ಎಂಬುದನ್ನು ಅವರು ಪ್ರತಿಪಾದಿಸಿದರು. ವೇದಗಳ ಸಾರ ಉಪನಿಷತ್ತುಗಳು; ಆ ಉಪನಿಷತ್ತುಗಳ ಸಾರ ಆತ್ಮಜ್ಞಾನ; ಆತ್ಮಜ್ಞಾನವೇ ವೇದಾಂತದ ತಿರುಳು ಎಂಬುದನ್ನು ಅವರು ಎತ್ತಿಹಿಡಿದರು.

ಲೋಕದಲ್ಲಿ ವಿದ್ಯೆ ಮತ್ತು ಅವಿದ್ಯೆಗಳ ನಡುವೆ ನಿರಂತರವಾಗಿ ಘರ್ಷಣೆ ನಡೆಯುತ್ತಲೇ ಇರುತ್ತದೆ. ವಿದ್ಯೆಯನ್ನು ನಾವು ಅವಿದ್ಯೆಯನ್ನಾಗಿಯೂ, ಅವಿದ್ಯೆಯನ್ನೇ ವಿದ್ಯೆಯನ್ನಾಗಿಯೂ ಭಾವಿಸಿಕೊಂಡು, ಇಲ್ಲದ ಸಂಕಷ್ಟಗಳ ಸೃಷ್ಟಿಕೊಂಡು ನರಳುತ್ತಿರುತ್ತವೆ. ಇಂಥ ಕಷ್ಟಪರಂಪರೆಗಳಿಂದ ನಮ್ಮನ್ನು ಬಿಡುಗಡೆಗೊಳಿಸಬಲ್ಲದ್ದೇ ದಿಟವಾದ ಜ್ಞಾನ; ವಿದ್ಯೆ. ಈ ಜ್ಞಾನವೇ ಆತ್ಮಜ್ಞಾನ, ಬ್ರಹ್ಮಜ್ಞಾನ ಎಂಬುದು ಆಚಾರ್ಯರ ಕಾಣ್ಕೆಯ ಸಾರ. ಒಮ್ಮೆ ಆತ್ಮಜ್ಞಾನ ಒದಗಿತೆಂದರೆ, ಲೋಕದ ಉಳಿದ ವಿವರಗಳೆಲ್ಲವೂ ಅನರ್ಥಕಾರಿಯೆಂದು ಗೊತ್ತಾಗುತ್ತದೆ. ನಾವು ಯಾವುದನ್ನು ‘ದಿಟ’ ಎಂದು ಭಾವಿಸಿಕೊಂಡಿದ್ದೇವೋ ಅವೆಲ್ಲವೂ ವಾಸ್ತವದಲ್ಲಿ ‘ಸಟೆ’ಯಾದಂಥವು ಎಂಬ ವಿವೇಕ ನಮ್ಮಲ್ಲಿ ಉಂಟಾಗುತ್ತದೆ. ಅನಿತ್ಯವೂ ದುಃಖಕಾರಿಯೂ ಅಶುದ್ಧವೂ ಆದ ಈ ವಿವರಗಳಿಂದ ನಮಗೆ ಬಿಡುಗಡೆ ದೊರೆಯುವುದು ಆತ್ಮಜ್ಞಾನದಿಂದಲೇ ಹೌದು. ಜೊತೆಗೆ ಅದರಿಂದ ನಮಗೆ ನಮ್ಮತನದ ಅರಿವೂ ಒದಗುತ್ತದೆ. ಇದೇ ಆನಂದ ಎನ್ನುತ್ತಾರೆ, ಅವರು.

ಆಚಾರ್ಯರ ಕಾಣ್ಕೆಯನ್ನು ‘ಅದ್ವೈತ’ದರ್ಶನ ಎಂದು ಕರೆಯಲಾಗುತ್ತದೆಯಷ್ಟೆ. ‘ಅ-ದ್ವೈತ’ ಎಂದರೆ ‘ಎರಡು ಇಲ್ಲದ್ದು’ – ‘ಒಂದಾಗಿರುವುದು’ – ಎಂದು ಸರಳವಾಗಿ ಹೇಳಬಹುದು. ಏನಿದರ ಸ್ವಾರಸ್ಯ? ಇದನ್ನು ಹಲವು ನೆಲೆಗಳಲ್ಲಿ ಅರ್ಥೈಸಲಾದೀತು. ಇಡಿಯ ಜಗತ್ತು ಚೈತನ್ಯಸ್ವರೂಪವಾಗಿದೆ. ಈ ವೈಶ್ವಿಕ ಸ್ತರದ ಚೈತನ್ಯವೂ ನಮ್ಮ ವೈಯಕ್ತಿಕ ಸ್ತರದ ಚೈತನ್ಯವೂ ಎರಡಲ್ಲ, ಒಂದೇ. ಇದನ್ನು ಇನ್ನೂ ಸರಳವಾಗಿ ಹೇಳಬಹುದಾದರೆ ‘ಜಗತ್ತು ಬೇರೆ ಅಲ್ಲ, ನಾನು ಬೇರೆ ಅಲ್ಲ’ ಎಂಬ ಅರಿವೇ ಅದ್ವೈತ.

ಜಗತ್ತು ಇಂದು ಎದುರಿಸುತ್ತಿರುವ ಎಲ್ಲ ಸಮಸ್ಯೆಗಳ ಮೂಲ ಎಲ್ಲಿದೆ ಎಂದು ಹುಡುಕಿದರೆ, ಮನುಷ್ಯರ ಭೇದಬುದ್ಧಿಯಲ್ಲಿಯೇ ಇದೆ ಎನ್ನುವುದು ಸ್ಪಷ್ಟವಾಗುತ್ತದೆ. ಜಾತಿ, ಭಾಷೆ, ಲಿಂಗ, ದೇಶ, ಅಧಿಕಾರ, ಅಂತಸ್ತು – ಹೀಗೆ ಹತ್ತುಹಲವು ವಿಧಗಳಲ್ಲಿ ಮನುಷ್ಯ ಮನುಷ್ಯರ ನಡುವೆ ಒಡಕು ಉಂಟಾಗುತ್ತಿರುತ್ತದೆ. ಈ ಒಡಕುತನವೇ ನಮ್ಮಲ್ಲಿ ದ್ವೇಷ, ಅಸೂಯೆ, ಮತ್ಸರದಂಥ ಹತ್ತಾರು ರೀತಿಯ ನೀಚತನಕ್ಕೆ ಕಾರಣವಾಗಿರುತ್ತದೆ. ಮನುಷ್ಯಕುಲವನ್ನು ಇಂಥ ಅಧಃಪತನದಿಂದ ಪಾರುಮಾಡಬಲ್ಲದ್ದು ಆಚಾರ್ಯ ಶಂಕರರ ದರ್ಶನ. ಜಗತ್ತಿನ ಎಲ್ಲರ, ಎಲ್ಲದರ ಮೂಲ ಒಂದೇ ಚೈತನ್ಯ – ಎಂಬ ದಿಟವಾದ ಅರಿವು ನಮ್ಮಲ್ಲಿ ಮೂಡಿದಾಗ ಈ ಭೇದಬುದ್ಧಿ ಇಲ್ಲವಾಗುತ್ತದೆ. (ಈ ಚೈತನ್ಯವನ್ನೇ ಆತ್ಮ, ಬ್ರಹ್ಮ ಎಂದೆಲ್ಲ ಒಕ್ಕಣಿಸಿರುವುದು) ಆಗ ಸಹಜ ‘ಸಮಾನತೆ’ ತಾನೇ ತಾನಾಗಿ ಸಿದ್ಧವಾಗುತ್ತದೆ. ಈ ‘ಸಮಾನತೆ’ಯ ನೆಲೆಯೇ ದಿಟವಾದ ಆನಂದವಲ್ಲವೆ?

ಆಚಾರ್ಯ ಶಂಕರರು ವಿದ್ಯೆ ಎಂದು ಆದರಿಸಿದ್ದು ಒಡಕುಗಳಿಲ್ಲದ ಅಖಂಡವಾದ ಅರಿವನ್ನು. ಅದನ್ನೇ ಅವರು ಮೋಕ್ಷ, ಬ್ರಹ್ಮಜ್ಞಾನ ಎಂದೆಲ್ಲ ಒಕ್ಕಣಿಸಿದ್ದು. ಜಗತ್ತಿಗೆ ಈಗ ಎಂಥ ವಿದ್ಯೆ ಬೇಕು ಎಂಬುದರ ಮನನವನ್ನು ನಾವಿಂದು ಮಾಡಬೇಕಿದೆಯೆನ್ನಿ!



ಇಂದು ಜಯಂತಿ

ಭಕ್ತಿಮಾರ್ಗದ ಯತಿರಾಜ

• ಗಣೇಶ ಭಟ್ಟ ಕೊಪ್ಪಲತೋಟ

ಶ್ರೀರಾಮಾನುಜಾಚಾರ್ಯರು ಭಕ್ತಿಯನ್ನು ಪ್ರಮುಖವಾಗಿ ಸಾರಿದ ಮಹನೀಯರು. ಭಗವಂತನಲ್ಲಿ ಅನನ್ಯವಾದ ಶ್ರದ್ಧೆಯಿಂದ ಸಂಪೂರ್ಣವಾದ ಶರಣಾಗತಿಯನ್ನು ಹೊಂದಿ ಯಾವುದೇ ಕರ್ಮವನ್ನು ಭಗವಂತನ ಸೇವೆ-ಕೈಂಕರ್ಯ ಎಂದು ಭಾವಿಸಿಕೊಂಡು ಮಾಡಬೇಕು ಎಂದು ಅವರು ಹೇಳುತ್ತಾರೆ. ಹೀಗೆ ಆಚರಿಸುವ ಯಾವ ವ್ಯಕ್ತಿಗೇ ಆಗಲಿ ಭಗವಂತನ ಸಾಕ್ಷಾತ್ಕಾರ ಸಾಧ್ಯವಿದೆ ಎಂದು ವಿವರಿಸಿದ ಅವರ ಜೀವನದಲ್ಲಿ ಕೂಡ ಇಂತಹ ಒಂದು ಘಟನೆ ನಡೆದದ್ದನ್ನು ನಾವು ಕೇಳುತ್ತೇವೆ.

ಧನುರ್ದಾಸನೆಂಬ ಒಬ್ಬನು ಹೇಮಾಂಬ ಎಂಬ ಸ್ತ್ರೀಯಲ್ಲಿ ಅನುರಕ್ತನಾಗಿದ್ದ. ಲೌಕಿಕ ಜಗತ್ತಿನಲ್ಲಿ ಆಸಕ್ತರಾದ ಎಲ್ಲರ ಹಾಗೆಯೇ ಅವನಿಗೆ ಕೂಡ ತನ್ನ ಪ್ರಿಯೆಯಾದ ಹೇಮಾಂಬಳ ಸೌಂದರ್ಯವೊಂದೇ ಶ್ರೇಷ್ಠವಾದದ್ದೆಂದು ಭಾವನೆಯಿತ್ತು. ಶ್ರೀ ರಾಮಾನುಜರನ್ನು ಕಂಡಾಗ ಅವರು ‘ಈ ಸೌಂದರ್ಯ ಶಾಶ್ವತವಾದದ್ದಲ್ಲ’ ಎಂದು ಹೇಳಿದರು. ಅವನು ಅವರ ಮಾತಿನಿಂದ ಗೊಂದಲಗೊಂಡು ‘ಇವಳ ಕಣ್ಣುಗಳಿಗಿಂತ ಸುಂದರವಾದ ಕಣ್ಣುಗಳೇ ಇಲ್ಲ; ಸನ್ಯಾಸಿಗಳಾದ ನಿಮಗೆ ಸೌಂದರ್ಯಪ್ರಜ್ಞೆ ಎಲ್ಲಿಯದು?’ ಎಂದೆಲ್ಲ ಹೇಳಿದ. ಆಚಾರ್ಯರು ಅವನನ್ನು ಶ್ರೀರಂಗದ ರಂಗನಾಥಸ್ವಾಮಿಯ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ ದೇವರನ್ನು ತೋರಿಸಿದರು. ಧನುರ್ದಾಸನು ಅವರಲ್ಲಿ ಸಂಪೂರ್ಣವಾದ ನಂಬಿಕೆಯನ್ನು ಇಟ್ಟುಕೊಂಡು ನೋಡಿದ ಕಾರಣ ಶ್ರೀರಂಗನಾಥಸ್ವಾಮಿಯು ಆ ಮೂರ್ತಿಯಲ್ಲಿಯೇ ತನ್ನ ತೇಜೋಮಯವಾದ ಕಣ್ಣುಗಳನ್ನು ತೆರೆದು ಅವರಿಗೆ ದರ್ಶನವನ್ನು ಕೊಟ್ಟನು ಎಂದು ಪ್ರತೀತಿ. ಹೀಗೆ ಆ ಭಗವಂತನ ಕಣ್ಣುಗಳ ಸೌಂದರ್ಯವನ್ನು ನೋಡಿದ ಬಳಿಕ ಧನುರ್ದಾಸ ಶ್ರೀರಾಮಾನುಜರ ಮಹತ್ತ್ವವನ್ನು ಒಪ್ಪಿಕೊಂಡು ಅವರ ಶಿಷ್ಯನಾದ. ಅವನು ಕೆಳಜಾತಿಯವನೆಂದು ಅವನಲ್ಲಿ ಅನಾದರವನ್ನು ತೋರಿಸುತ್ತಿದ್ದ ಆಚಾರ್ಯರ ಶಿಷ್ಯರಿಗೆ ಅವನ ಮೇಲ್ಮೆಯನ್ನು ತೋರಿಸಿ ಭಗವಂತನ ಭಕ್ತರಾದವರಿಗೆ ವಿದ್ಯಾಮದ, ಧನಮದ, ಕುಲಮದ – ಇವುಗಳೆಲ್ಲ ಇರಬಾರದೆಂದು ತಿಳಿಸಿದರಂತೆ.

ಇಂತಹದೇ ಇನ್ನೊಂದು ಬಹುಪ್ರಸಿದ್ಧವಾದ ಪ್ರಸಂಗವನ್ನೂ ಕೇಳುತ್ತೇವೆ. ತಿರುಕ್ಕೊಟ್ಟಿಯೂರ್ ನಂಬಿ ಅಥವಾ ಗೋಷ್ಠೀಪೂರ್ಣರು ಎಂಬುವವರ ಬಳಿ ಆಚಾರ್ಯರು ತಿರುಮಂತ್ರದ ಉಪದೇಶವನ್ನು ಪಡೆಯಲು ಹೋದರು. ಅವರು ಇವರ ತಾಳ್ಮೆಯನ್ನು ಪರೀಕ್ಷಿಸುವುದಕ್ಕೋಸ್ಕರ ಪ್ರತಿ ಬಾರಿಯೂ ‘ಕೆಲವು ದಿನಗಳನ್ನು ಬಿಟ್ಟು ಬಾ’ ಎಂದು ಹೇಳಿ ಕಳುಹಿಸುತ್ತಿದ್ದರಂತೆ. ಹೀಗೆ ಹದಿನೇಳು ಬಾರಿ ಆದ ಮೇಲೆ ಹದಿನೆಂಟನೇ ಸಲ ಅವರ ಬಳಿ ಬಂದಾಗ ದಿವ್ಯವಾದ ತಿರುಮಂತ್ರವನ್ನು ಅರ್ಥಸಹಿತವಾಗಿ ಉಪದೇಶಿಸಿದರಂತೆ.

ಈ ಶರಣಾಗತಿಮಂತ್ರವನ್ನು ತಿಳಿದುಕೊಂಡು ಉಚ್ಚರಿಸಿದರೆ ಸದ್ಗತಿ ದೊರೆಯುತ್ತದೆಯೆಂದೂ, ಅದನ್ನು ಜನಸಾಮಾನ್ಯರಿಗೆ ಉಪದೇಶಿಸದೇ ರಹಸ್ಯವಾಗಿರಿಸಿಕೊಳ್ಳಬೇಕೆಂದೂ, ತನ್ನ ಮಾತನ್ನು ಮೀರಿದರೆ ನರಕಕ್ಕೆ ಹೋಗಬೇಕಾಗುತ್ತದೆಯೆಂದೂ ಎಚ್ಚರಿಸಿದರು. ಶ್ರೀರಾಮಾನುಜಾಚಾರ್ಯರು ಅಂದೇ ದೇವಸ್ಥಾನದ ಗೋಪುರವನ್ನು ಏರಿನಿಂತು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ ಹೇಳಿ ಅರ್ಥಸಹಿತ ಉಪದೇಶಿಸಿದರಂತೆ. ಗೋಷ್ಠೀಪೂರ್ಣರು ಇದನ್ನು ಕೇಳಿ ಸಿಟ್ಟಾದಾಗ ಶ್ರೀರಾಮಾನುಜರು ‘ಇಷ್ಟೊಂದು ಜನರಿಗೆ ಸದ್ಗತಿಯುಂಟಾಗುತ್ತದೆಯೆಂದಾದರೆ ನಾನೊಬ್ಬ ನರಕವನ್ನು ಅನುಭವಿಸಲೂ ಸಿದ್ಧ’ ಎಂದು ಹೇಳಿದರಂತೆ. ಗುರುಗಳು ಅವರ ಹೃದಯ ವೈಶಾಲ್ಯವನ್ನು ಕಂಡು ಬೆರಗಾಗಿ ಮೆಚ್ಚಿಕೊಂಡು ಬಿಗಿದಪ್ಪಿ ಹರಸಿದರಂತೆ.

ಹೀಗೆ ಎಲ್ಲ ಜೀವಿಗಳಲ್ಲಿಯೂ ಸಮಾನತೆಯನ್ನು ಕಂಡು ಎಲ್ಲರ ಸದ್ಗತಿಯನ್ನೂ ಬಯಸಿದ್ದ ಯತಿರಾಜರಾದ ಶ್ರೀರಾಮಾನುಜಾಚಾರ್ಯರದ್ದು ನೂರಿಪ್ಪತ್ತು ವರ್ಷಗಳ ಪೂರ್ಣಾಯುಷ್ಯದ ಜೀವನ. ಹುಟ್ಟಿದ್ದು ತಮಿಳುನಾಡಿನ ಶ್ರೀಪೆರುಂಬುದೂರಿನಲ್ಲಿ. ತಮ್ಮ ಜೀವಿತದಲ್ಲಿ ಶ್ರೀರಂಗ, ಕಾಂಚೀಪುರ ಮೊದಲಾದ ಕ್ಷೇತ್ರಗಳಲ್ಲಿ ಅಲ್ಲದೇ ನಮ್ಮ ಕರ್ಣಾಟಕದ ಹೊಯ್ಸಳ ವಿಷ್ಣುವರ್ಧನನ ಬಳಿಗೂ ಬಂದಿದ್ದರು ಹಾಗೂ ಯದುಗಿರಿ ಎಂದು ಪ್ರಖ್ಯಾತವಾಗಿರುವ ಮೇಲುಕೋಟೆಯ ದೇವಾಲಯವನ್ನು ಸ್ಥಾಪಿಸಿ ಪೂಜಾವಿಧಾನಗಳನ್ನು ನಿಯಮಿಸಿ ದೆಹಲಿಯ ಸುಲ್ತಾನನ ವಶದಿಂದ ಅಲ್ಲಿರುವ ಶೆಲ್ವಪಿಳ್ಳೈ ಎಂಬ ಮೂರ್ತಿಯನ್ನು ತೆಗೆದುಕೊಂಡು ಬಂದು ಉತ್ಸವಮೂರ್ತಿಯಾಗಿ ಪ್ರತಿಷ್ಠಾಪಿಸಿದರೆಂದೂ ತಿಳಿದುಬರುತ್ತದೆ.

ಬ್ರಹ್ಮಸೂತ್ರಗಳಿಗೆ ಪ್ರಸಿದ್ಧವಾದ ಶ್ರೀಭಾಷ್ಯವೇ ಮೊದಲಾಗಿ ಪಾಂಡಿತ್ಯಪೂರ್ಣವಾದ ಅನೇಕ ಗ್ರಂಥಗಳನ್ನು ರಚಿಸಿದ್ದಲ್ಲದೇ ಸಾಮಾನ್ಯಜನರಿಗೂ ಸದ್ಗತಿ ಸುಲಭವಾಗಿ ದೊರೆಯುವ ಭಕ್ತಿ-ಶರಣಾಗತಿಯ ಮಾರ್ಗವನ್ನು ವಿಶೇಷವಾಗಿ ಪ್ರತಿಪಾದಿಸಿ ವಿಶಿಷ್ಟಾದ್ವೈತ ಪರಂಪರೆಯನ್ನು ಪ್ರಚುರಪಡಿಸಿದವರು ಶ್ರೀರಾಮಾನುಜಾಚಾರ್ಯರು.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com

or

Scan QR code to access booking form

19ನೇ ವಾರ್ಷಿಕ ಪುಣ್ಯಸ್ಮರಣೆ



ಕೆ. ಗುರುಮೂರ್ತಿ

03.06.1930-25.04.2004

ನೀವು ನಮ್ಮನ್ನಗಲಿದರೂ ನಿಮ್ಮ ನೆನಪು ನಮ್ಮಲ್ಲಿ ಎಂದೆಂದಿಗೂ ಚಿರಸ್ಥಾಯಿ.

ಸದಾ ನಿಮ್ಮ ಸ್ಮರಣೆಯಲ್ಲಿರುವ ಡಾ. ಜಿ.ವನಜಾಕ್ಷಿ ಮತ್ತು ಕುಟುಂಬ, ಶ್ರೀಮತಿ ಜಿ.ಶೀಲಾ ಮತ್ತು ಕುಟುಂಬ

ಸವಿನೆನಪು

ಲೇ|| ಶ್ರೀ ಟಿ.ಡಿ. ಮಾರಣ್ಣ

1917–1990

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು

ತಾಮ್ರ ಪತ್ರ ಪುರಸ್ಕೃತರು

ಮಾಜಿ Chief Sub Editor ಪ್ರಜಾವಾಣಿ

ಮಾಜಿ ವಿಧಾನಸಭಾ ಸದಸ್ಯರು

ಮಾಜಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಸದಸ್ಯರು

ತಟ್ಟೇಕೆರೆ, ಮಾಗಡಿ ತಾಲ್ಲೂಕು

ಮಗಳು: ಟಿ.ಎಂ. ವಿಜಯಲಕ್ಷ್ಮಿ ರಾಮಚಂದ್ರ

ಮೊಮ್ಮಕ್ಕಳು: ಆರ್. ಸಂಧ್ಯಾ, ಆರ್. ಶೀಲ, ಆರ್. ಸವಿತ, ಆರ್. ಸುನಿತ

ಸುಧಾ, ಮಯೂರ ಓದಿರಿ

ಬಜಾಜ್ ಅಲಯನ್ಸ್, ಐಸಿಐಸಿಐ ಪ್ರುಡೆನ್ಶಿಯಲ್‌ಗೆ ನೋಟಿಸ್?

ನವದೆಹಲಿ (ರಾಯಿಟರ್ಸ್): ಬಜಾಜ್ ಅಲಯನ್ಸ್ ಲೈಫ್ ಇನ್ಶುರೆನ್ಸ್ ಮತ್ತು ಐಸಿಐಸಿಐ ಪ್ರುಡೆನ್ಶಿಯಲ್ ಲೈಫ್ ಇನ್ಶುರೆನ್ಸ್ ಕಂಪನಿಗಳಿಗೆ 2017ರಿಂದ ತೆರಿಗೆ ವಂಚಿಸಿದ ಆರೋಪದ ಅಡಿಯಲ್ಲಿ ನೋಟಿಸ್ ಜಾರಿಯಾಗಿದೆ ಎಂದು ಮೂಲಗಳು ತಿಳಿಸಿವೆ.

ಅಂದಾಜು ₹ 5 ಸಾವಿರ ಕೋಟಿ ಮೌಲ್ಯದ ತೆರಿಗೆ ಪಾವತಿಗೆ ಸಂಬಂಧಿಸಿದಂತೆ 16 ವಿಮಾ ಕಂಪನಿಗಳ ವಿರುದ್ಧ ನಡೆದಿರುವ ತನಿಖೆಯ ಭಾಗವಾಗಿ ಈ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಗೊತ್ತಾಗಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ತನಿಖೆ ಶುರುವಾಗಿದೆ. ಕಾನೂನು ಜಾರಿ ಸಂಸ್ಥೆಗಳು ನಿಗದಿ ಮಾಡಿರುವ ಮಟ್ಟಕ್ಕಿಂತ ಹೆಚ್ಚಿನ ಮಾರಾಟ ಕಮಿಷನ್‌ಅನ್ನು ಕಂಪನಿಗಳು ತಮ್ಮ ಜಾಹೀರಾತು ಮತ್ತು ಮಾರಾಟ ವೆಚ್ಚವೆಂದು ತೋರಿಸಿ, ನಂತರ ತೆರಿಗೆ ವಿನಾಯಿತಿ ಪಡೆಯುವುದಕ್ಕೆ ಸಂಬಂಧಿಸಿದ ತನಿಖೆ ಇದು ಎಂದು ಗೊತ್ತಾಗಿದೆ.

16 ವಿಮಾ ಕಂಪನಿಗಳು ಸರ್ಕಾರಕ್ಕೆ ಒಟ್ಟು ₹ 5 ಸಾವಿರ ಕೋಟಿ ತೆರಿಗೆ ಪಾವತಿ ಮಾಡಬೇಕು ಎಂಬುದು ತೆರಿಗೆ ಇಲಾಖೆಯ ಅಂದಾಜು. ಇತರ ಕೆಲವು ಕಂಪನಿಗಳಿಗೆ ಕೂಡ ನೋಟಿಸ್ ಜಾರಿಗೊಳಿಸುವ ಪ್ರಕ್ರಿಯೆಯು ಸರಕು ಮತ್ತು ಸೇವಾ ತೆರಿಗೆ ಗುಪ್ತದಳದ ಮಹಾನಿರ್ದೇಶನಾಲಯದಲ್ಲಿ ನಡೆದಿದೆ ಎಂದು ಮೂಲಗಳು ಹೇಳಿವೆ.

ಈ ವಿಚಾರವಾಗಿ ಬಜಾಜ್ ಅಲಯನ್ಸ್, ಐಸಿಐಸಿಐ ಪ್ರುಡೆನ್ಶಿಯಲ್ ಮತ್ತು ಕೇಂದ್ರ ಹಣಕಾಸು ಸಚಿವಾಲಯದಿಂದ ಪ್ರತಿಕ್ರಿಯೆ ಸಿಕ್ಕಿಲ್ಲ.

ಕಡಿಮೆ ದರಕ್ಕೆ ರಷ್ಯಾ ತೈಲ ಆಮದು ಪರಿಣಾಮ

ಕಚ್ಚಾ ತೈಲ: 22 ವರ್ಷಗಳ ಕನಿಷ್ಠ ಮಟ್ಟಕ್ಕೆ ಒಪೆಕ್ ಪಾಲು

ನವದೆಹಲಿ (ರಾಯಿಟರ್ಸ್): ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದಲ್ಲಿ ಒಪೆಕ್ ದೇಶಗಳ ಪಾಲು 2022–23ರಲ್ಲಿ 22 ವರ್ಷಗಳ ಕನಿಷ್ಠ ಮಟ್ಟವನ್ನು ತಲುಪಿದೆ. ಭಾರತವು ರಷ್ಯಾದಿಂದ ಕಡಿಮೆ ಬೆಲೆಗೆ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದು ಹೆಚ್ಚಾದ ಪರಿಣಾಮವಾಗಿ, ಒಪೆಕ್ ದೇಶಗಳ ಪಾಲು ಕಡಿಮೆ ಆಗಿದೆ.

ಮಧ್ಯಪ್ರಾಚ್ಯ ಮತ್ತು ಆಫ್ರಿಕಾದ ದೇಶಗಳು ‘ಪೆಟ್ರೋಲಿಯಂ ರಫ್ತು ದೇಶಗಳ ಸಂಘಟನೆ’ಯ (ಒಪೆಕ್) ಪ್ರಮುಖ ಸದಸ್ಯರು. ಒಪೆಕ್ ದೇಶಗಳ ಪಾಲು ಭಾರತದ ಕಚ್ಚಾ ತೈಲ ಮಾರುಕಟ್ಟೆಯಲ್ಲಿ 2021–22ರಲ್ಲಿ ಶೇಕಡ 72ರಷ್ಟು ಇತ್ತು. ಇದು ಮಾರ್ಚ್ 31ಕ್ಕೆ ಕೊನೆಗೊಂಡ 2022–23ನೆಯ ಆರ್ಥಿಕ ವರ್ಷದಲ್ಲಿ ಶೇ 59ಕ್ಕೆ ಇಳಿಕೆಯಾಗಿದೆ.

ಕಳೆದ ವರ್ಷದಲ್ಲಿ ಭಾರತಕ್ಕೆ ಕಚ್ಚಾ ತೈಲ ಪೂರೈಸುವ ದೇಶಗಳ ಸಾಲಿನಲ್ಲಿ ರಷ್ಯಾ ಮೊದಲ ಸ್ಥಾನಕ್ಕೆ ಬಂದಿದೆ. ಇರಾಕ್ ಎರಡನೆಯ ಸ್ಥಾನಕ್ಕೆ ಹಾಗೂ ಸೌದಿ ಅರೇಬಿಯಾ ಮೂರನೆಯ ಸ್ಥಾನಕ್ಕೆ ಇಳಿದಿವೆ.

ಭಾರತವು ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದು ಈ ಹಿಂದೆ ಬಹಳ ಅಪರೂಪವಾಗಿತ್ತು. ಆದರೆ, ರಷ್ಯಾ-ಉಕ್ರೇನ್ ಯುದ್ಧ ಆರಂಭವಾದ ನಂತರದಲ್ಲಿ ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದು ಹೆಚ್ಚಾಗಿದೆ.

ಕಚ್ಚಾ ತೈಲದ ಉತ್ಪಾದನೆಯನ್ನು ಮೇ ತಿಂಗಳಿನಲ್ಲಿ ಕಡಿಮೆ ಮಾಡಲು ಒಪೆಕ್ ಮತ್ತು ಅದರ ಮಿತ್ರರಾಷ್ಟ್ರಗಳು ತೀರ್ಮಾನಿಸಿವೆ. ಮೇ ತಿಂಗಳಲ್ಲಿ ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣ ತಗ್ಗದಿದ್ದರೆ, ಒಪೆಕ್ ಮತ್ತು ಮಿತ್ರರಾಷ್ಟ್ರಗಳ ತೀರ್ಮಾನವು, ಭಾರತದ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ಒಪೆಕ್ ಪಾಲು ಇನ್ನಷ್ಟು ಕಡಿಮೆಯಾಗಲು ಕಾರಣವಾಗಬಹುದು ಎಂದು ಅಂದಾಜಿಸಲಾಗಿದೆ.

ಕೊಬ್ಬರಿ ಖರೀದಿ ಕೇಂದ್ರ ಆರಂಭ

ಪ್ರಜಾವಾಣಿ ವಾರ್ತೆ

ಶ್ರವಣಬೆಳಗೊಳ (ಹಾಸನ): ಚನ್ನರಾಯಪಟ್ಟಣದ ನಾಫೆಡ್ ಕೊಬ್ಬರಿ ಖರೀದಿ ಕೇಂದ್ರದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗೆ ಸ್ಪಂದಿಸಿರುವ ರಾಜ್ಯ ಸಹಕಾರ ಮಾರಾಟ ಮಂಡಳಿಯು ಇದೀಗ ವಿಶೇಷ ಅನುಮತಿ ಪಡೆದು ಶ್ರವಣಬೆಳಗೊಳದಲ್ಲಿ ಖರೀದಿ ಕೇಂದ್ರ ಆರಂಭಿಸಿದೆ. ನುಗ್ಗೇಹಳ್ಳಿಯಲ್ಲಿ ಶೀಘ್ರ ಆರಂಭವಾಗಲಿದೆ.

‘ತಾಲ್ಲೂಕಿನಲ್ಲಿದ್ದ ಏಕೈಕ ಕೊಬ್ಬರಿ ಕೇಂದ್ರದ ಮೇಲೆ ಹೆಚ್ಚಿನ ಒತ್ತಡವಿದ್ದು, ರೈತರಿಗೆ ಬಹಳ ತೊಂದರೆ ಆಗುವುದನ್ನು ತಪ್ಪಿಸಲು ಶ್ರವಣಬೆಳಗೊಳ ಎಪಿಎಂಸಿ ಯಾರ್ಡ್‌ನಲ್ಲಿ ಖರೀದಿ ಕೇಂದ್ರ ಆರಂಭವಾಗಿದೆ. ಪ್ರತಿ ಎಕರೆಗೆ 6 ಕ್ವಿಂಟಲ್‌ನಂತೆ ಗರಿಷ್ಠ 20 ಕ್ವಿಂಟಲ್‌ವರೆಗೂ ಖರೀದಿಸುವ ಅವಕಾಶವಿದೆ. ಬೆಂಬಲ ಬೆಲೆ ಪ್ರತಿ ಕ್ವಿಂಟಲ್‌ಗೆ ₹ 11,750 ನಿಗದಿ ಪಡಿಸಿದೆ. ಕೇಂದ್ರ ಜುಲೈವರೆಗೆ ಕಾರ್ಯ ನಿರ್ವಹಿಸಲಿದೆ’ ಎಂದು ಮಂಡಳಿಯ ನಿರ್ದೇಶಕ ಪುಟ್ಟಸ್ವಾಮಿಗೌಡ ತಿಳಿಸಿದರು.

ಕೇಂದ್ರದಲ್ಲಿ ಹೆಸರು ನೋಂದಾಯಿಸಿರುವ 8 ಸಾವಿರಕ್ಕೂ ಹೆಚ್ಚಿನ ರೈತರಿಗೆ ತೊಂದರೆ ಆಗುತ್ತಿರುವ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಸೋಮವಾರ ವಿಶೇಷ ವರದಿ ಪ್ರಕಟವಾಗಿತ್ತು.

ವರದಿ ಫಲಶ್ರುತಿ

ಶ್ರವಣಬೆಳಗೊಳದ ಎಪಿಎಂಸಿ ಯಾರ್ಡ್‌ನಲ್ಲಿ ಕೊಬ್ಬರಿ ಖರೀದಿ ಕೇಂದ್ರವನ್ನು ಸೋಮವಾರ ರಾಜ್ಯ ಸಹಕಾರ ಮಾರಾಟ ಮಂಡಳದ ನಿರ್ದೇಶಕ ಪುಟ್ಟಸ್ವಾಮಿಗೌಡ ಉದ್ಘಾಟಿಸಿದರು.

ಕಾಂಪ್ಯಾಕ್ಟ್ ಎಸ್‌ಯುವಿ ಫ್ರಾಂಕ್ಸ್ ಬಿಡುಗಡೆ ಮಾಡಿದ ಮಾರುತಿ ಸುಜುಕಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಹೊಸ ಕಾಂಪ್ಯಾಕ್ಟ್ ಎಸ್‌ಯುವಿ ‘ಫ್ರಾಂಕ್ಸ್’ಅನ್ನು ದೇಶದ ಮಾರುಕಟ್ಟೆಗೆ ಸೋಮವಾರ ಬಿಡುಗಡೆ ಮಾಡಿದೆ. ಇದರ ಎಕ್ಸ್ ಷೋರೂಂ ಬೆಲೆಯು ₹ 7.46 ಲಕ್ಷದಿಂದ ₹ 13.13 ಲಕ್ಷದವರೆಗೆ ಇದೆ.

ಈ ಮಾದರಿಯು 1.2 ಲೀಟರ್ ಸಾಮರ್ಥ್ಯದ ಪೆಟ್ರೋಲ್ ಎಂಜಿನ್ ಮತ್ತು 1 ಲೀಟರ್ ಸಾಮರ್ಥ್ಯದ ಟರ್ಬೊ ಬೂಸ್ಟರ್‌ಜೆಟ್ ಎಂಜಿನ್ ಆಯ್ಕೆಗಳಲ್ಲಿ ಲಭ್ಯವಿರಲಿದೆ. ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಈ ಮಾದರಿಯನ್ನು ಈ ವರ್ಷದ ಆರಂಭದಲ್ಲಿ ನಡೆದ ಆಟೊ ಎಕ್ಸ್‌ಪೊದಲ್ಲಿ ಅನಾವರಣ ಮಾಡಿತ್ತು.

ಫ್ರಾಂಕ್ಸ್ ಕಾಂಪ್ಯಾಕ್ಟ್ ಎಸ್‌ಯುವಿಯನ್ನು ಸ್ಪರ್ಧಾತ್ಮಕ ಬೆಲೆಗೆ ಮಾರುಕಟ್ಟೆಗೆ ತರಲಾಗಿದೆ. ಇದು ಎಸ್‌ಯುವಿ ವಿಭಾಗದಲ್ಲಿ ಕಂಪನಿಯ ಅಸ್ತಿತ್ವವನ್ನು ಇನ್ನಷ್ಟು ಬಲಪಡಿಸಲು ನೆರವಾಗಲಿದೆ ಎಂದು ಕಂಪನಿ ಹೇಳಿದೆ. ಈ ಮಾದರಿಯು ಗರಿಷ್ಠ 22.89 ಕಿ.ಮೀ. ಇಂಧನ ದಕ್ಷತೆಯನ್ನು ಹೊಂದಿದೆ.

ಜನವರಿಯಲ್ಲಿ ಗ್ರೇಟರ್ ನೊಯಿಡಾದಲ್ಲಿ ನಡೆದ ಆಟೊ ಎಕ್ಸ್‌ಪೊ ಕಾರ್ಯಕ್ರಮದಲ್ಲಿ ಮಾರುತಿ ಸುಜುಕಿ ಇಂಡಿಯಾ ಕಂಪನಿ ಪ್ರದರ್ಶಿಸಿದ್ದ ‘ಫ್ರಾಂಕ್ಸ್’ ಕಾಂಪ್ಯಾಕ್ಟ್ ಎಸ್‌ಯುವಿ —ಪಿಟಿಐ ಚಿತ್ರ

ಗ್ರಾಹಕರ ಬೇಡಿಕೆಗಳು ಬದಲಾಗುತ್ತಿವೆ. ಅವರ ಬೇಡಿಕೆಗಳಿಗೆ ಸ್ಪಂದಿಸುವ ಆಲೋಚನೆಯೊಂದಿಗೆ ಈ ಮಾದರಿಯನ್ನು ಮಾರುಕಟ್ಟೆಗೆ ತರಲಾಗಿದೆ ಎಂದು ಕಂಪನಿಯ ಮಾರುಕಟ್ಟೆ ಹಾಗೂ ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ. ಈ ಮಾದರಿಯು, ಕಂಪನಿಗೆ ಎಸ್‌ಯುವಿ ವಿಭಾಗದಲ್ಲಿ ನಾಯಕತ್ವದ ಸ್ಥಾನ ಪಡೆಯಲು ನೆರವಾಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಈ ಕಾರನ್ನು ಮಾರುತಿ ಸುಜುಕಿ ಸಬ್‌ಸ್ಕ್ರೈಬ್ ಯೋಜನೆಯ ಮೂಲಕ, ಪ್ರತಿ ತಿಂಗಳಿಗೆ ₹ 17,378 ಪಾವತಿಸಿಯೂ ತಮ್ಮದಾಗಿಸಿಕೊಳ್ಳಬಹುದು.

ಸಾಲಪತ್ರ ಮರುಖರೀದಿಗೆ ‘ಅದಾನಿ’ ಚಾಲನೆ

ನವದೆಹಲಿ (ಪಿಟಿಐ): ಹಿಂಡನ್‌ಬರ್ಗ್ ರಿಸರ್ಚ್‌ನ ವರದಿ ಪ್ರಕಟವಾದ ನಂತರದಲ್ಲಿ ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ (ಎಪಿಎಸ್‌ಇಜೆಡ್) ಕಂಪನಿಯು ಇದೇ ಮೊದಲ ಬಾರಿ ಸಾಲಪತ್ರಗಳ ಮರುಖರೀದಿ ಯೋಜನೆಗೆ ಚಾಲನೆ ನೀಡಿದೆ.

ತನ್ನಲ್ಲಿ ನಗದು ಲಭ್ಯತೆಯು ಅಗತ್ಯ ಪ್ರಮಾಣದಲ್ಲಿ ಇದೆ ಎಂಬುದನ್ನು ತೋರಿಸಲು ಕಂಪನಿಯು ಸಾಲಪತ್ರ ಮರುಖರೀದಿಗೆ ಮುಂದಾಗಿದೆ.

ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯು ಪ್ರಕಟವಾದ ನಂತರದಲ್ಲಿ ಅದಾನಿ ಸಮೂಹದ ಕಂಪನಿಗಳ ಷೇರುಮೌಲ್ಯವು ಕುಸಿದಿತ್ತು. ಹಿಂಡನ್‌ಬರ್ಗ್‌ನ ಎಲ್ಲ ಆರೋಪಗಳನ್ನು ಅದಾನಿ ಸಮೂಹವು ಅಲ್ಲಗಳೆದಿದೆ.

ಏರ್ ಇಂಡಿಯಾ: ಚಾಟ್‌ಜಿಪಿಟಿ ಬಳಕೆ

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯು ತನ್ನ ಡಿಜಿಟಲ್ ವ್ಯವಸ್ಥೆಗಳ ಆಧುನೀಕರಣದ ಭಾಗವಾಗಿ ಚಾಟ್‌ಜಿಪಿಟಿ ಚಾಲಿತ ಚಾಟ್‌ಬಾಟ್ ಬಳಕೆ ಮಾಡುವುದಾಗಿ ಹೇಳಿದೆ.

ತನ್ನ ಡಿಜಿಟಲ್ ವ್ಯವಸ್ಥೆಗಳನ್ನು ಆಧುನಿಕವಾಗಿಸುವ ಪ್ರಯತ್ನಗಳಲ್ಲಿ ಗಣನೀಯ ಪ್ರಗತಿ ಆಗಿದೆ, ಹಲವು ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ ಎಂದು ಏರ್ ಇಂಡಿಯಾ ತಿಳಿಸಿದೆ. ‘ವೆಬ್‌ಸೈಟ್ ಮತ್ತು ಮೊಬೈಲ್ ಆ್ಯಪ್ ಆಧುನೀಕರಣ ಪ್ರಕ್ರಿಯೆ’ಯನ್ನು ಕೂಡ ಕೈಗೆತ್ತಿಕೊಳ್ಳಲಾಗಿದೆ ಎಂದು ಕಂಪನಿ ಹೇಳಿದೆ.

ಸೂಚ್ಯಂಕ ನಿಫ್ಟಿ 119 ಅಂಶ ಏರಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಸೋಮವಾರದ ವಹಿವಾಟಿನಲ್ಲಿ 401 ಅಂಶ ಏರಿಕೆ ಕಂಡು, 60 ಸಾವಿರದ ಗಡಿಯನ್ನು ಮತ್ತೆ ದಾಟಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 119 ಅಂಶ ಏರಿಕೆ ದಾಖಲಿಸಿದೆ.

‘ಷೇರುಪೇಟೆಗಳು ಅಸ್ಥಿರ ವಹಿವಾಟಿಗೆ ಸಾಕ್ಷಿಯಾಗುವುದು ಮುಂದುವರಿಯಲಿದೆ. ಹೀಗಿದ್ದರೂ, ಮುಂದಿನ ದಿನಗಳಲ್ಲಿ ಆಯ್ದ ಕೆಲವು ಷೇರುಗಳ ಖರೀದಿ ಹೆಚ್ಚಿರಬಹುದು’ ಎಂದು ಕೋಟಕ್ ಸೆಕ್ಯುರಿಟೀಸ್‌ನ ಈಕ್ವಿಟಿ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ ಚೌಹಾಣ್ ಹೇಳಿದ್ದಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 0.21ರಷ್ಟು ಕಡಿಮೆ ಆಗಿದ್ದು ಬ್ಯಾರೆಲ್‌ಗೆ 81.49 ಡಾಲರ್‌ಗೆ ತಲುಪಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	27,500-40,000
ಹಳತು	48,000-53,000
ಚನ್ನಗಿರಿ	
ರಾಶಿ	41,829-49,699
ಹೊನ್ನಾಳಿ	
ರಾಶಿ	48,299-48,999
ಕಾರ್ಕಳ	
ಹೊಸತು	30,000-48,000
ಹಳತು	40,000-53,000
ಕುಮಟಾ	
ಚಿಪ್ಪು	28,599-31,999
ಕೋಕ	19,569-30,009
ಫ್ಯಾಕ್ಟರಿ	12,019-20,849
ಹಳೆಚಾಲಿ	36,599-39,459
ಹೊಸಚಾಲಿ	34,889-36,299
ಸಾಗರ	
ಬಿಳಿಗೋಟು	15,211-31,855
ಚಾಲಿ	29,099-37,000
ಕೋಕ	14,699-34,299
ಕೆಂಪುಗೋಟು	26,389-34,699
ರಾಶಿ	31,099-48,199
ಸಿಪ್ಪೆಗೋಟು	4,578-21,589
ಶಿವಮೊಗ್ಗ	
ಬೆಟ್ಟೆ	45,000-52,898
ಗೊರಬಲು	20,000 -34,599
ರಾಶಿ	32,569-48,009
ಸರಕು	58,000-79,900
ಶಿರಸಿ	
ಬೆಟ್ಟೆ	34,689-45,999
ಬಿಳಿಗೋಟು	25,499-33,280
ಚಾಲಿ	34,518-37,399
ಕೆಂಪುಗೋಟು	21,099 -34,699
ರಾಶಿ	43,499-46,899
ಯಲ್ಲಾಪುರ	
ಕೋಕ	18,329-30,899
ಹಳೆಚಾಲಿ	38,610-40,111
ಹೊಸಚಾಲಿ	34,309-37,500
ಕೆಂಪುಗೋಟು	26,899-34,299
ರಾಶಿ	40,650-48,899
ತಟ್ಟಿಬೆಟ್ಟೆ	36,369-46,992
ಬಿಳಿಗೋಟು	24,699-34,930

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General

✓ ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್ ಲೈನ್ ಕಂಪನಿಗಳಿಗೆ SSLC,PUC, ಡಿಗ್ರಿ,ಡಿಪ್ಲೊಮಾದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000/- 65,000/- ವಸತಿಯೂಟದೊಂದಿಗೆ 9036125229

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Wanted

ಮೈಸೂರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಉದ್ಯೋಗಗಳು. PUC ಆಗಿರಬೇಕು. 30 ವರ್ಷ ಮೇಲ್ಪಟ್ಟು, ಆಕರ್ಷಕ ವೇತನ ಹಾಗೂ ಕಮಿಷನ್. Ph: 9632447416/ 6364563490

ತನ್ಮಯಿ ಆಯಿಲ್ ಕಂಪನಿಯಲ್ಲಿ ಯುವಕರು ಯುವತಿಯರು ಹೆಲ್ಪರ್ ಕೆಲಸಕ್ಕಾಗಿ ಬೇಕಾಗಿದ್ದಾರೆ ಆಕರ್ಷಕ ಸಂಬಳ. ಬೆಂಗಳೂರು - 9019626612

ಬೆಂಗಳೂರಿನಲ್ಲಿ ಮನೆ ಕೆಲಸ ಮಾಡುವವರು, ಮಕ್ಕಳನ್ನು ನೋಡಿ ಕೊಳ್ಳುವವರು (ಮಹಿಳೆ) ಬೇಕಾಗಿದ್ದಾರೆ. ಸಂಬಳ :10k ರಿಂದ 15k ಉಚಿತ ಊಟ ವಸತಿ ಸೌಲಭ್ಯವಿದೆ ಸಂಪರ್ಕಿಸಿ: 8296577964

150YEARS OLD biggest industrial / Financial Sector Co. in India Urgently required for therir office in Mysore. Business Managers LifePlanners, Dev. Officers, Retired & Housemakers also apply. SSLC+ 30years above. PH: 6364563490 / 9632447416

ಪ್ರವಾಸ

Travel

03.05.2023 21.05.2023 22.06.2023 ಸಿಂಗಾಪುರ್,ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 16.05.2023 20.06.2023 ನೇಪಾಳ 9 ದಿನಗಳು. 18.05.2023 13.06.2023 ಭೂತಾನ್ 8 ದಿನಗಳು. 29.04.2023 25.05.2023 12.06.2023 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 6 ದಿನಗಳು. 27.04.2023 16.05.2023 06.06.2023 ಶಿಮ್ಲಾ,ಮನಾಲಿ 8 ದಿನಗಳು. ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248 7022547922

''05.07.2023 ರಿಂದ 13ದಿನಗಳು ಅಮರನಾಥ, VAISHNODEVI, ಶ್ರೀನಗರ, ಅಮೃತಸರ, ಸಂಪರ್ಕಿಸಿ: ಶ್ರೀ ಗಂಗಾ ಟೂರಿಸ್ಟ್. ಬೆಂಗಳೂರು. 9480253807/ 8105522123'

★ರಿಯಾಯಿತಿ ದರದಲ್ಲಿ★ ರೈಲು,ವಿಮಾನ, AC ಬಸ್ಸಿನಲ್ಲಿ 5.7.2023, 11.7.2023 11ದಿನಗಳು ಕಾಶಿ,ಗಯ,ಪ್ರಯಾಗ ದೆಹಲಿ,ಆಗ್ರಾ,ಮಥುರ,ಅಯೋಧ್ಯ ರೂ.29500 ಒಬ್ಬರಿಗೆ., ಆರ್.ಗಾಂಧಿ ಟೂರ್ಸ್. 9902433500, 9945445809, 08026760367. www.rgandhitours.com

Pilgrimage Tours

17.05.2023, ಶಿರಡಿ, ಮೂರು ಜ್ಯೋತಿರ್ಲಿಂಗ 12800/-. 22.05.2023, ರೈಲು ವಿಮಾನದಲ್ಲಿ ಕಾಶಿ, ಅಯೋಧ್ಯ, ಪ್ರಯಾಗರಾಜ್ 16500/-, 8.6.2023, ಚಾರಧಾಮ್. 9880079351

ಎಸ್.ಎಸ್.ಬಿ. ಟ್ರಾವೆಲ್ಸ್(ರಿ). 15.5.2023, 11 ದಿನಗಳ ನೇಪಾಳ, ಕಾಶಿ, ಮುಕ್ತಿನಾಥ, ಜನಕಪುರ, ಪೋಕ್ರ, ಕಠ್ಮಂಡು, ಬಾಬಾಬೈದ್ಯನಾಥ ಸಂಪರ್ಕಿಸಿ. 7353333313/ 9535497689

DH ಪ್ರಜಾವಾಣಿ

BOOK YOUR AD FOR SUNDAY & GET 50% OFF* ON WEEKDAYS

For Lineage & Single/ Multi Column Classifieds Display ads

*conditions apply

For more information Contact: 9845114560 : 9731810277 9901641752 : 9886213331 080 - 45557163 / 164

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪೊಲೀಸರ ಮೇಲೆ ಹಲ್ಲೆ: ವೈ.ಎಸ್. ಶರ್ಮಿಳಾ ಬಂಧನ

ಹೈದರಾಬಾದ್: ತಮ್ಮ ನಿವಾಸದ ಹೊರಗೆ ಪೊಲೀಸರ ಜತೆ ವಾಗ್ವಾದ ನಡೆಸಿ, ಹಲ್ಲೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವೈಎಸ್‌ಆರ್ ತೆಲಂಗಾಣ ಪಕ್ಷದ ಅಧ್ಯಕ್ಷೆ ವೈ.ಎಸ್. ಶರ್ಮಿಳಾ ಅವರನ್ನು ಸೋಮವಾರ ಪೊಲೀಸರು ಬಂಧಿಸಿದ್ದಾರೆ.

ಸ್ಥಳೀಯ ನ್ಯಾಯಾಲಯವು ಶರ್ಮಿಳಾ ಅವರನ್ನು ಮೇ 8ರವರೆಗೆ ನ್ಯಾಯಾಂಗ ವಶಕ್ಕೆ ನೀಡಿದೆ. ಏ. 25ರಂದು ಅವರ ಜಾಮೀನು ಅರ್ಜಿ ವಿಚಾರಣೆಗೆ ಬರಲಿದೆ.

'ಕೆಲವು ಟಿ.ವಿ ದೃಶ್ಯಗಳನ್ನು ನೋಡಿದ್ದೇವೆ. ಅನುಮತಿ ಪಡೆಯದೇ ಪ್ರತಿಭಟನೆಯೊಂದರಲ್ಲಿ ಭಾಗವಹಿಸಲು ಶರ್ಮಿಳಾ ತೆರಳುತ್ತಿದ್ದಾಗ ಅವರನ್ನು ಪೊಲೀಸರು ತಡೆಯಲು ಯತ್ನಿಸಿದ್ದಾರೆ. ಆಗ ಅವರ ಮೇಲೆ ಶರ್ಮಿಳಾ ಹಲ್ಲೆ ನಡೆಸುತ್ತಿರುವುದು ಕಂಡುಬಂದಿದೆ ಎಂದು ಪೊಲೀಸ್ ಉಪ ಕಮಿಷನರ್ ಸುದ್ದಿಗಾರರಿಗೆ ತಿಳಿಸಿದ್ದಾರೆ.

'ಶರ್ಮಿಳಾ ಅವರ ನಿವಾಸದಲ್ಲೇ ಅವರನ್ನು ತಡೆಯಲು ಪೊಲೀಸರು ಅಲ್ಲಿಗೆ ತೆರಳಿದರು. ಆಗ ಅವರು ಪೊಲೀಸ್ ಅಧಿಕಾರಿಗಳ ಮೇಲೆ ಹಲ್ಲೆ ಮಾಡಿದ ದೃಶ್ಯಗಳು ದಾಖಲಾಗಿವೆ. ಈ ಸಂಬಂಧ ಸಿಬ್ಬಂದಿಯೊಬ್ಬರು ನೀಡಿರುವ ದೂರನ್ನು ಆಧರಿಸಿ ಶರ್ಮಿಳಾ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸಬ್ ಇನ್‌ಸ್ಪೆಕ್ಟರ್ ಒಬ್ಬರನ್ನು ಥಳಿಸಿರುವ, ಕಾನ್‌ಸ್ಟೆಬಲ್ ಒಬ್ಬರ ಮೇಲೆ ವಾಹನ ಹರಿಸಿ ಅವರ ಕಾಲಿಗೆ ಪೆಟ್ಟು ಮಾಡಿರುವ ಮತ್ತು ಅಧಿಕಾರಿಗಳನ್ನು ನಿಂದಿಸಿರುವ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ. ಶರ್ಮಿಳಾ ಅವರ ತಾಯಿ ವೈ.ಎಸ್. ವಿಜಯಮ್ಮ ಕೂಡ ಮಹಿಳಾ ಕಾನ್‌ಸ್ಟೆಬಲ್‌ಗೆ ಕಪಾಳಕ್ಕೆ ಹೊಡೆದಿರುವುದು ವಿಡಿಯೊದಲ್ಲಿದೆ.

ನಿತೀಶ್ ಕುಮಾರ್, ಮಮತಾ ಪ್ರತಿಪಾದನೆ: ಮೈತ್ರಿಕೂಟದ ಉದ್ದೇಶ ಫಲಿಸಲ್ಲ– ಬಿಜೆಪಿ ವ್ಯಂಗ್ಯ

ಪ್ರತಿಪಕ್ಷಗಳ ಒಗ್ಗೂಡುವಿಕೆ ಅನಿವಾರ್ಯ

ಕೋಲ್ಕತ್ತ (ಪಿಟಿಐ): ಮುಂಬರುವ 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಪ್ರತಿಪಕ್ಷಗಳು ಒಗ್ಗಟ್ಟಾಗಿ ಸೆಣಸಲು ವೇದಿಕೆ ಅಣಿಗೊಳಿಸುತ್ತಿರುವ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೋಮವಾರ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು.

ಈ ವೇಳೆ ಬಿಹಾರದ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಕೂಡ ಇದ್ದರು.

'ಪ್ರತಿಪಕ್ಷಗಳು ಒಟ್ಟಾಗಿ ಚುನಾವಣೆಗೆ ರಾಜಕೀಯ ತಂತ್ರಗಾರಿಕೆ ರೂಪಿಸುವ ಸಂಬಂಧ ಸಕಾರಾತ್ಮಕವಾಗಿ ಚರ್ಚಿಸಲಾಯಿತು. ಈ ಒಗ್ಗಟ್ಟು ಅನಿವಾರ್ಯವೂ ಆಗಿದೆ' ಎಂದು ಚರ್ಚೆ ಬಳಿಕ ನಿತೀಶ್ ಸುದ್ದಿಗಾರರಿಗೆ ತಿಳಿಸಿದರು.

'ದೇಶದ ಅಭಿವೃದ್ಧಿ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಏನನ್ನೂ ಮಾಡುತ್ತಿಲ್ಲ. ಸ್ವಪ್ರಚಾರದಲ್ಲಿಯೇ ಮುಳುಗಿದೆ' ಎಂದು ಟೀಕಿಸಿದರು.

ಇದಕ್ಕೆ ಧ್ವನಿಗೂಡಿಸಿದ ಮಮತಾ, 'ಪ್ರತಿಪಕ್ಷಗಳು ಒಟ್ಟಾಗಿದ್ದೇವೆ ಎಂಬ ಸಂದೇಶ ನೀಡಿದ್ದೇವೆ. ಬಿಜೆಪಿಯನ್ನು ದೇಶದಲ್ಲಿ ಶೂನ್ಯಕ್ಕಿಳಿಸುವುದೇ ಗುರಿ. ಸುಳ್ಳುಗಳು ಮತ್ತು ಮಾಧ್ಯಮಗಳ ಬೆಂಬಲದಿಂದ ಅವರು ದೊಡ್ಡ ನಾಯಕರಾಗಿ ವಿಜೃಂಭಿಸುತ್ತಿದ್ದಾರೆ' ಎಂದು ಟೀಕಿಸಿದರು.

ಕಳೆದ ತಿಂಗಳು ಮಮತಾ ಅವರು, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಮತ್ತು ಒಡಿಶಾ ಮುಖ್ಯಮಂತ್ರಿ ನವೀನ್ ಪಾಟ್ನಾಯಕ್ ಜೊತೆಗೆ ಮಾತುಕತೆ ನಡೆಸಿದ್ದರು. ಈ ತಿಂಗಳ ಆರಂಭದಲ್ಲಿ ನಿತೀಶ್ ಅವರು, ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಚರ್ಚಿಸಿದ್ದರು.

ಬಿಜೆಪಿ ಟೀಕೆ: ಮಮತಾ– ನಿತೀಶ್ ಭೇಟಿಗೆ ಬಿಜೆಪಿ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದು, 'ಇದೊಂದು ವ್ಯರ್ಥ ಕಸರತ್ತು. ಮಹಾಮೈತ್ರಿಕೂಟದ ಉದ್ದೇಶ ಫಲಿಸುವುದಿಲ್ಲ' ಎಂದು ವ್ಯಂಗ್ಯವಾಡಿದೆ.

ರಾಜ್ಯ ಬಿಜೆಪಿ ವಕ್ತಾರ ಸಮಿಕ್ ಭಟ್ಟಾಚಾರ್ಯ, '2014 ಮತ್ತು 2019ರ ಲೋಕಸಭಾ ಚುನಾವಣೆಯಲ್ಲೂ ಪ್ರತಿಪಕ್ಷಗಳು ಇಂಥದ್ದೇ ಪ್ರಯತ್ನ ನಡೆಸಿದ್ದವು. ಆದರೆ, ಅದು ಫಲಪ್ರದವಾಗಲಿಲ್ಲ. ದೇಶದ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿ ಮೇಲೆ ನಂಬಿಕೆ ಇದೆ. ಮೈತ್ರಿಕೂಟದ ಮೇಲೆ ಅವರಿಗೆ ನಂಬಿಕೆ ಇಲ್ಲ' ಎಂದಿದ್ದಾರೆ.

ಬಿಜೆಪಿ ಹೇಳಿಕೆಗೆ ತಿರುಗೇಟು ನೀಡಿರುವ ಟಿಎಂಸಿ, 'ಪ್ರತಿಪಕ್ಷಗಳು ಒಗ್ಗೂಡುತ್ತಿರುವುದು ಬಿಜೆಪಿಯಲ್ಲಿ ನಡುಕ ಹುಟ್ಟಿಸಿದೆ' ಎಂದು ಟೀಕಿಸಿದೆ.

ಪಶ್ಚಿಮ ಬಂಗಾಳಕ್ಕೆ ಸೋಮವಾರ ಆಗಮಿಸಿದ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸ್ವಾಗತಿಸಿದರು. ಬಿಹಾರದ ಉಪ ಮುಖ್ಯಮಂತ್ರಿ ತೇಜಸ್ವಿ ಯಾದವ್ ಜೊತೆಗಿದ್ದರು

'ದೇಶದ ಹಿತವೇ ನನಗೆ ಮುಖ್ಯ'

ಲಖನೌ(ಪಿಟಿಐ): ಮಮತಾ ಬ್ಯಾನರ್ಜಿ ಜೊತೆಗೆ ಮಾತುಕತೆ ನಡೆಸಿದ ಬಳಿಕ ನಿತೀಶ್ ಕುಮಾರ್ ಅವರು ಇಲ್ಲಿ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಬಳಿಕ ಮಾತನಾಡಿದ ನಿತೀಶ್, 'ನಾನು ಮೈತ್ರಿಕೂಟದ ರಚನೆ ಮೂಲಕ ಯಾವುದೇ ಹುದ್ದೆಯ ನಿರೀಕ್ಷೆಯಲ್ಲಿಲ್ಲ. ದೇಶದ ಹಿತಕ್ಕಾಗಿ ಈ ಪ್ರಯತ್ನ ಮಾಡುತ್ತಿದ್ದೇನೆ. ಅದೇ ನನಗೆ ಮುಖ್ಯ' ಎಂದು ಪ್ರತಿಕ್ರಿಯಿಸಿದರು.

ಚರ್ಚೆ ವೇಳೆ ಅಖಿಲೇಶ್ ಯಾದವ್, ಕೇಂದ್ರ ಸರ್ಕಾರದ ಅವೈಜ್ಞಾನಿಕ ನೀತಿಗಳಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದ್ದು ಜನರು ತತ್ತರಿಸಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ ಅವರು, ಕೇಂದ್ರದಲ್ಲಿ ಬಿಜೆಪಿ ಮತ್ತೆ ಅಧಿಕಾರದ ಗದ್ದುಗೆ ಹಿಡಿಯದಂತೆ ತಡೆಯಬೇಕಿದೆ ಎಂದು ಪ್ರತಿಪಾದಿಸಿದರು.

'ಕೈ' ನೇತೃತ್ವಕ್ಕೆ ಮಮತಾ ಅಪಸ್ವರ?

ನವದೆಹಲಿ: ಪ್ರತಿಪಕ್ಷಗಳ ಮುಖಂಡರ ಸಭೆಯನ್ನು ದೆಹಲಿಗೆ ಬದಲು ಪಟ್ನಾದಲ್ಲೇ ಕರೆಯಿರಿ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ನೀಡಿರುವ ಸಲಹೆ ಕಾಂಗ್ರೆಸ್ ಪಕ್ಷಕ್ಕೆ ಆಶಾದಾಯಕ ಬೆಳವಣಿಗೆಯಲ್ಲ. ಪ್ರತಿಪಕ್ಷಗಳ ಮೈತ್ರಿಕೂಟವನ್ನು ಕಾಂಗ್ರೆಸ್ ಮುನ್ನಡೆಸುವುದರ ಪರವಾಗಿ ತೃಣಮೂಲ ಕಾಂಗ್ರೆಸ್ ಇಲ್ಲ ಎಂಬ ಸಂದೇಶ ಈ ಸಲಹೆಯ ಮೂಲಕ ರವಾನೆಯಾಗಿದೆ.

ಪ್ರತಿಪಕ್ಷಗಳನ್ನು ಒಗ್ಗೂಡಿಸುವ ಯತ್ನ ಎನ್ನಲಾಗಿದ್ದ ಕೋಲ್ಕತ್ತ ಸಭೆ ಬಳಿಕ ಮಮತಾ ಬ್ಯಾನರ್ಜಿ, 'ಒಟ್ಟಾಗಿ ಹೋರಾಟ ನಡೆಸಲು ಪ್ರತಿಪಕ್ಷಗಳಿಗೆ ಯಾವುದೇ ಪ್ರತಿಷ್ಠೆ ಇಲ್ಲ. ಮೋದಿ ನೇತೃತ್ವದ ಬಿಜೆಪಿ ಸೋಲಿಸಲು ಎಲ್ಲ ಪಕ್ಷಗಳು ಒಗ್ಗೂಡಿ ಕಾರ್ಯನಿರ್ವಹಿಸಲಿವೆ' ಎಂದು ಹೇಳಿಕೆ ನೀಡಿದ್ದರು.

ಅದೇ ವೇಳೆ ಅವರು 'ಮೈತ್ರಿಯ ಮುಂದಿನ ಹೆಜ್ಜೆಯ ಚರ್ಚೆಗೆ ಪಟ್ನಾದಲ್ಲೇ ಎಲ್ಲ ಪಕ್ಷಗಳ ಸಭೆ ನಡೆಸಬೇಕು' ಎಂದು 'ಮನವಿ'ಯನ್ನು ಮಾಡಿದರು. ಇದಕ್ಕೆ ಅವರು, 'ತುರ್ತುಪರಿಸ್ಥಿತಿ ಜಾರಿ ಹಾಗೂ ಆ ನಂತರ ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪದಚ್ಯುತಿಗೆ ಕಾರಣವಾಗಿದ್ದ ಜೆ.ಪಿ ಆಂದೋಲನವು ಬಿಹಾರದಿಂದಲೇ ಆರಂಭವಾಗಿತ್ತು' ಎಂದು ಕಾರಣವನ್ನು ನೀಡಿದ್ದರು.

'ಮೊದಲು ನಾವು ಒಗ್ಗೂಡಿದ್ದೇವೆ ಎಂಬ ಸಂದೇಶ ರವಾನಿಸಬೇಕಿದೆ. ಇದಕ್ಕೆ ನನ್ನ ಆಕ್ಷೇಪಣೆ ಇಲ್ಲ. ಮಾಧ್ಯಮದ ಬೆಂಬಲ, ಸುಳ್ಳುಗಳಿಂದ ಬಿಜೆಪಿ ಬೆಳೆದಿದೆ. ಅದು 'ಶೂನ್ಯ'ವಾಗಬೇಕು' ಎಂದು ಅವರು ನಿತೀಶ್ ಹಾಗೂ ಬಿಹಾರದ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್ ಅವರಿಗೆ ತಿಳಿಸಿದ್ದರು.

ನಿತೀಶ್ ಮತ್ತು ತೇಜಸ್ವಿ ಯಾದವ್ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಅವರೊಂದಿಗೆ ಸಭೆ ನಡೆಸಿದ್ದ ಎರಡು ವಾರದ ಬಳಿಕ ನಿತೀಶ್ ಮತ್ತು ಮಮತಾ ಅವರ ಸಭೆ ನಡೆದಿದೆ. ವಿರೋಧಪಕ್ಷಗಳ ಮೈತ್ರಿಕೂಟದಲ್ಲಿ ನಿರ್ಣಾಯಕ ಪಾತ್ರ ವಹಿಸಲು ಬಯಸಿರುವ ನಿತೀಶ್ ಅವರು, ಕಾಂಗ್ರೆಸ್ ಬಗ್ಗೆ ಒಲವಿಲ್ಲದ ತೃಣಮೂಲ ಕಾಂಗ್ರೆಸ್‌ನಂತಹ ಪಕ್ಷಗಳ ಬೆಂಬಲ ಗಳಿಸಲೂ ಒತ್ತು ನೀಡುತ್ತಿದ್ದಾರೆ.

ಮಮತಾ ಬ್ಯಾನರ್ಜಿ ಅವರು ಎನ್‌ಸಿಪಿ ನಾಯಕ ಶರದ್ ಪವಾರ್ ಅವರಿಗೂ ಸಂದೇಶ ರವಾನಿಸಿದ್ದಾರೆ ಎನ್ನಲಾಗಿದೆ. ಕಳೆದ ವರ್ಷ ನಡೆದ ರಾಷ್ಟ್ರಪತಿ ಸ್ಥಾನದ ಚುನಾವಣೆ ಬಳಿಕ ಮಮತಾ ಅವರು ಶರದ್ ಪವಾರ್ ಅವರಿಂದಲೂ ಅಂತರ ಕಾಯ್ದುಕೊಳ್ಳುತ್ತಿದ್ದಾರೆ. ಪ್ರತಿಪಕ್ಷಗಳ ಮೈತ್ರಿಯ ನಾಯಕತ್ವ ವಹಿಸುವಂತೆ ಸಲಹೆ ಮಾಡಿದಾಗ ಪವಾರ್ ಹಿಂಜರಿದರು ಎಂಬುದು ಇದಕ್ಕೆ ಕಾರಣ ಎನ್ನಲಾಗಿದೆ.

ಮಾನಹಾನಿ ಪ್ರಕರಣದಲ್ಲಿ ಕೋರ್ಟ್ ರಾಹುಲ್ ಗಾಂಧಿ ಅವರಿಗೆ ಶಿಕ್ಷೆ ವಿಧಿಸಿದಾಗ ತೃಣಮೂಲ ಪಕ್ಷ ಮೌನ ವಹಿಸಿತ್ತು. ಆದರೆ, ಅವರ ಸಂಸತ್ ಸದಸ್ಯತ್ವ ರದ್ದುಗೊಂಡ ಬಳಿಕ ಧೋರಣೆ ಬದಲಿಸಿತ್ತು. ಅದೇ ವೇಳೆ ಎಐಸಿಸಿ ಅಧ್ಯಕ್ಷ ಖರ್ಗೆ ಅವರು ಕರೆದಿದ್ದ ವಿರೋಧಪಕ್ಷಗಳ ಸಭೆ ಮತ್ತು ಪ್ರತಿಭಟನೆಗೆ ಹಿರಿಯರ ಬದಲು, ಕಿರಿಯ ಮುಖಂಡರನ್ನು ಕಳುಹಿಸುವ ಮೂಲಕ ಮಮತಾ ಬ್ಯಾನರ್ಜಿ ಕಾಂಗ್ರೆಸ್‌ಗೆ ತಮ್ಮದೇ ಸಂದೇಶ ರವಾನಿಸಿದ್ದರು.

ಗಡಿ: ಪರಸ್ಪರ ಸ್ವೀಕಾರಾರ್ಹ ನಿರ್ಣಯಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): 'ಪರಸ್ಪರ ಸ್ವೀಕಾರಾರ್ಹವಾದ ನಿರ್ಣಯಗಳನ್ನು ಕೈಗೊಳ್ಳುವ ಮೂಲಕ ಪೂರ್ವ ಲಡಾಖ್‌ನ ಗಡಿ ವಿಚಾರಕ್ಕೆ ಸಂಬಂಧಿಸಿದಂತೆ ಬಾಕಿ ಉಳಿದಿರುವ ಸಮಸ್ಯೆಗಳನ್ನು ಸಾಧ್ಯವಾದಷ್ಟು ಬೇಗ ಪರಿಹರಿಸಿಕೊಳ್ಳಲು ಭಾರತ ಮತ್ತು ಚೀನಾ ನಿರ್ಧರಿಸಿವೆ. ಭಾನುವಾರ ನಡೆದಿದ್ದ ಉಭಯ ದೇಶಗಳ ನಡುವಣ 18ನೇ ಸುತ್ತಿನ ಉನ್ನತ ಮಟ್ಟದ ಮಿಲಿಟರಿ ಮಾತುಕತೆ ವೇಳೆ ಈ ನಿರ್ಣಯಕ್ಕೆ ಪರಸ್ಪರ ಒಪ್ಪಿಗೆ ಸೂಚಿಸಿವೆ' ಎಂದು ವಿದೇಶಾಂಗ ಸಚಿವಾಲಯ ಸೋಮವಾರ ತಿಳಿಸಿದೆ.

'ಪಶ್ಚಿಮ ವಲಯದ (ಪೂರ್ವ ಲಡಾಖ್) ವಾಸ್ತವ ನಿಯಂತ್ರಣ ರೇಖೆಗೆ (ಎಲ್‌ಎಸಿ) ಸಂಬಂಧಿಸಿದ ಬಿಕ್ಕಟ್ಟನ್ನು ಬೇಗ ಪರಿಹರಿಸಿಕೊಳ್ಳಲು ಒತ್ತು ನೀಡುವ ಸಂಬಂಧ ಸಭೆಯಲ್ಲಿ ಚರ್ಚಿಸಲಾಗಿದೆ. ಪರಸ್ಪರ ಸಂಪರ್ಕದಲ್ಲಿರಲು, ಸೇನೆ ಹಾಗೂ ರಾಜತಾಂತ್ರಿಕ ಮಾರ್ಗದ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳುವ ಕುರಿತೂ ಮಾತುಕತೆ ನಡೆದಿದೆ. ದ್ವಿಪಕ್ಷೀಯ ಸಂಬಂಧದಲ್ಲಿ ಪ್ರಗತಿ ಸಾಧಿಸಲು ಇದರಿಂದ ಸಹಕಾರಿಯಾಗಲಿದೆ' ಎಂದು ಸಚಿವಾಲಯದ ಪ್ರಕಟಣೆ ಹೇಳಿದೆ.

'ಪಶ್ಚಿಮ ವಲಯದಲ್ಲಿ ಭದ್ರತೆ ಮತ್ತು ಸ್ಥಿರತೆ ಕಾಪಾಡಿಕೊಳ್ಳಲು ಉಭಯ ಕಡೆಯವರು ಸಮ್ಮತಿ ಸೂಚಿಸಿದ್ದಾರೆ. ಗಡಿ ಬಿಕ್ಕಟ್ಟು ಬಗೆಹರಿಸಿಕೊಳ್ಳುವ ನಿಟ್ಟಿನಲ್ಲಿ ಉಭಯ ದೇಶಗಳ ನಾಯಕರು ಹಾಗೂ ವಿದೇಶಾಂಗ ಸಚಿವರುಗಳು ನೀಡಿದ್ದ ಮಾರ್ಗದರ್ಶನದ ಅನುಸಾರ ಮುಕ್ತ ಹಾಗೂ ಸವಿಸ್ತಾರವಾಗಿ ಮಾತುಕತೆ ನಡೆಸಲಾಗಿದೆ' ಎಂದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಅಮೃತ್‌ಪಾಲ್ ಪರ ಅರ್ಜಿ ವಜಾ

ಚಂಡೀಗಢ(ಪಿಟಿಐ): ಪ್ರತ್ಯೇಕ ಖಾಲಿಸ್ತಾನ ರಾಷ್ಟ್ರ ಪ್ರತಿಪಾದಕ ಮತ್ತು ಸಿಖ್ ಮೂಲಭೂತವಾದಿ ಅಮೃತ್‌ಪಾಲ್ ಸಿಂಗ್ ಅವರನ್ನು ಪೊಲೀಸರು ಅಕ್ರಮ ಬಂಧನದಲ್ಲಿರಿಸಿದ್ದಾರೆಂದು ದೂರಿ ಮಾರ್ಚ್ 19ರಂದು ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಸೋಮವಾರ ವಜಾಗೊಳಿಸಿದೆ.

'ಅಮೃತ್‌ಪಾಲ್ ಅವರನ್ನು ಪಂಜಾಬ್‌ನ ರೋಡೆ ಗ್ರಾಮದಲ್ಲಿ ಬಂಧಿಸಿದ ಮರುದಿನವೇ ಹೇಬಿಯಸ್ ಕಾರ್ಪಸ್ ಅರ್ಜಿ ಇನ್ನು ನಿರರ್ಥಕವೆಂದು ಹೈಕೋರ್ಟ್ ವಜಾಗೊಳಿಸಿದೆ. ಅಮೃತ್‌ಪಾಲ್ ಪರ ಅವರ ವಕೀಲ ಇಮಾನ್ ಸಿಂಗ್ ಖಾರಾ ಈ ಅರ್ಜಿ ಸಲ್ಲಿಸಿದ್ದರು. ಸಿಂಗ್ ಪತ್ನಿ ಕೂಡ ಇದೇ ರೀತಿ ದೂರಿದ್ದರು.

'ಹಿಂದೂಗಳಿಗಾಗಿ ಬಿಜೆಪಿ ಏನನ್ನೂ ಮಾಡಿಲ್ಲ'

ಹರಿದ್ವಾರ (ಪಿಟಿಐ): ಬಿಜೆಪಿಯು ಹಿಂದೂಗಳ ಬೆಂಬಲದಿಂದ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಆದರೆ, ಹಿಂದೂಗಳಿಗಾಗಿ ಆ ಪಕ್ಷ ಏನನ್ನೂ ಮಾಡಲಿಲ್ಲ ಎಂದು ಹೊಸ ರಾಜಕೀಯ ಪಕ್ಷ ಏಕಂ ಸನಾತನ ಭಾರತ್ (ಇಎಸ್‌ಬಿ) ಆರೋಪಿಸಿದೆ.

ಇಲ್ಲಿನ ಜೈರಾಮ್ ಆಶ್ರಮದಲ್ಲಿ ಭಾನುವಾರ ನಡೆದ ಪಕ್ಷದ ಮೊದಲ ಅಧಿವೇಶನದಲ್ಲಿ ಮಾತನಾಡಿದ ಇಎಸ್‌ಬಿ ರಾಷ್ಟ್ರೀಯ ಅಧ್ಯಕ್ಷ ಅಂಕುರ್ ಶರ್ಮಾ ಅವರು ಬಿಜೆಪಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

'ದೇಶದಲ್ಲಿ ಗೋಹತ್ಯೆ ನಿಷೇಧಿಸಲಿಲ್ಲ. ದೇವಸ್ಥಾನಗಳನ್ನು ಸರ್ಕಾರದ ನಿಯಂತ್ರಣದಿಂದ ಮುಕ್ತಗೊಳಿಸಲಿಲ್ಲ. ಅಲ್ಪಸಂಖ್ಯಾತರ ಓಲೈಕೆ ಮುಂದುವರಿಸಿ, ಸಂವಿಧಾನ ಉಲ್ಲಂಘಿಸಲಾಗುತ್ತಿದೆ' ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

'ಯುವಂ 2023' ಸಮಾವೇಶದಲ್ಲಿ ಪ್ರಧಾನಿ ಮೋದಿ ವಿಶ್ವಾಸ

'ಕೇರಳದಲ್ಲೂ ಬಿಜೆಪಿ ನೇತೃತ್ವದ ಸರ್ಕಾರ'

ಕೊಚ್ಚಿ (ಪಿಟಿಐ): ಕೇರಳದ ಆಡಳಿತರೂಢ ಸಿಪಿಎಂ, ಹಾಗೂ ವಿರೋಧಪಕ್ಷ ಕಾಂಗ್ರೆಸ್ ವಿರುದ್ಧ ಸೋಮವಾರ ವಾಗ್ದಾಳಿ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ, ಈ ಪಕ್ಷಗಳ ಸಂಘರ್ಷದಿಂದಾಗಿ ರಾಜ್ಯದ ಅಭಿವೃದ್ಧಿ ಹಿನ್ನಡೆಯಾಗಿದೆ ಎಂದು ಆರೋಪಿಸಿದರು.

ಕ್ರೈಸ್ತ ಸಮುದಾಯದವರೇ ಅಧಿಕ ಸಂಖ್ಯೆಯಲ್ಲಿರುವ ಈಶಾನ್ಯ ರಾಜ್ಯಗಳು ಮತ್ತು ಗೋವಾದ ಜನರು ಬಿಜೆಪಿ ಆಡಳಿತ ಒಪ್ಪಿಕೊಂಡಿರುವಂತೆಯೇ 'ಬರುವ ದಿನಗಳಲ್ಲಿ ರಾಜ್ಯದ ಜನರು ಬಿಜೆಪಿಯನ್ನು ಸ್ವೀಕರಿಸಲಿದ್ದಾರೆ' ಎಂದು ಪ್ರಧಾನಿ ವಿಶ್ವಾಸ ವ್ಯಕ್ತಪಡಿಸಿದರು.

'ಈಶಾನ್ಯ ರಾಜ್ಯಗಳು, ಗೋವಾ ಯಾವುದೇ ಇರಲಿ, ಸರ್ಕಾರವನ್ನು ನಡೆಸುವ ಬಿಜೆಪಿಯ ಶೈಲಿಯನ್ನು ಗಮನಿಸಿದವರು ಪಕ್ಷದ ಆಡಳಿತವನ್ನು ಒಪ್ಪಿಕೊಳ್ಳುತ್ತಾರೆ. ವಿರೋಧ ಪಕ್ಷಗಳ ಸುಳ್ಳುಗಳು ಬಹಿರಂಗವಾದಂತೆ ಬಿಜೆಪಿ ಅಸ್ತಿತ್ವ ವಿಸ್ತಾರಗೊಳ್ಳುತ್ತಿದೆ. ಮೇಘಾಲಯ, ನಾಗಾಲ್ಯಾಂಡ್, ಗೋವಾದಲ್ಲಿ ಆಗಿದ್ದು ಅದೆ. ಕೇರಳದಲ್ಲೂ ಬಿಜೆಪಿ ನೇತೃತ್ವದ ಮೈತ್ರಿಕೂಟ ಸರ್ಕಾರ ರಚಿಸಲಿದೆ' ಎಂದು ಆಶಿಸಿದರು.

ಬಿಜೆಪಿ ಆಯೋಜಿಸಿದ್ದ 'ಯುವಂ 2023' ಸಮಾವೇಶದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ನಡೆದ ಚಿನ್ನ ಕಳ್ಳಸಾಗಣೆ ಪ್ರಕರಣವನ್ನು ಉಲ್ಲೇಖಿಸಿ, 'ಅಧಿಕಾರದಲ್ಲಿರುವವರು ನಮ್ಮ ಭವಿಷ್ಯದ ಜೊತೆ ಆಟವಾಡುತ್ತಿದ್ದಾರೆ ಎಂಬುದು ಯುವಜನರಿಗೆ ಗೊತ್ತಾಗಿದೆ' ಎಂದರು.

ಪ್ರಧಾನಿಗೆ ಅದ್ದೂರಿ ಸ್ವಾಗತ': ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಇಲ್ಲಿಗೆ ಭೇಟಿ ನೀಡಿದಾಗ ಪಕ್ಷದ ಕಾರ್ಯಕರ್ತರು, ಬೆಂಬಲಿಗರು, ನಾಗರಿಕರು ಅದ್ದೂರಿ ಸ್ವಾಗತ ನೀಡಿದರು. ರಸ್ತೆಯ ಇಕ್ಕೆಲಗಳಲ್ಲಿ ನಿಂತು ಪುಷ್ಪವೃಷ್ಟಿ ಮೂಲಕ ಪ್ರಧಾನಿಗೆ ಸ್ವಾಗತ ಕೋರಿದರು.

ಕೇರಳದ ಕೊಚ್ಚಿಗೆ ಸೋಮವಾರ ಭೇಟಿ ನೀಡಿದ್ದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು –ಪಿಟಿಐ ಚಿತ್ರ

ಸುಮಾರು 2 ಕಿ.ಮೀ ದೂರ ರೋಡ್ ಶೋ ನಡೆಯಿತು. ಕೇರಳದ ಸಾಂಪ್ರದಾಯಿಕ ಉಡುಗೆ ಕುರ್ತಾ, ಶಾಲು, ಪಂಚೆಯಲ್ಲಿ ಗಮನಸೆಳೆದ ಪ್ರಧಾನಿ ವಾಹನದಲ್ಲಿ ನಿಂತು ಜನರತ್ತ ಕೈಬೀಸಿದರು.

ರಸ್ತೆಯ ಇಕ್ಕೆಲಗಳ ಜೊತೆಗೇ ಆಸುಪಾಸಿನಲ್ಲಿದ್ದ ಎತ್ತರದ ಕಟ್ಟಡಗಳ ಮೇಲೂ ಜನರು ನಿಂತಿದ್ದರು. ಪ್ರಧಾನಿ ಭೇಟಿ ಹಿನ್ನೆಲೆಯಲ್ಲಿ ಬಿಗಿ ಭದ್ರತೆ ಏರ್ಪಡಿಸಿದ್ದು, ಸುಮಾರು ಒಂದು ಸಾವಿರ ಪೊಲೀಸರನ್ನು ನಿಯೋಜಿಸಲಾಗಿತ್ತು. ಬಿಜೆಪಿ ಕಾರ್ಯಕರ್ತರು ಪಕ್ಷದ ಧ್ವಜ ಹಿಡಿದಿದ್ದು, ಪಕ್ಷದ ಚಿಹ್ನೆಯಿದ್ದ ಟೋಪಿ ಧರಿಸಿದ್ದರು. ಮೋದಿ ಚಿತ್ರವಿದ್ದ ಭಿತ್ತಿಪತ್ರಗಳನ್ನು ಹಿಡಿದಿದ್ದರು.

ಮನ್ ಕಿ ಬಾತ್ ಆಲಿಸಿದ 100 ಕೋಟಿಗೂ ಹೆಚ್ಚು ಜನ

ನವದೆಹಲಿ: 'ಪ್ರಧಾನಿ ನರೇಂದ್ರ ಮೋದಿ ಅವರ ಮನದ ಮಾತು (ಮನ್ ಕಿ ಬಾತ್) ರೇಡಿಯೊ ಕಾರ್ಯಕ್ರಮವನ್ನು 100 ಕೋಟಿಗೂ ಅಧಿಕ ಮಂದಿ ಕನಿಷ್ಠ ಒಮ್ಮೆ ಆಲಿಸಿದ್ದಾರೆ. ತಿಂಗಳಿಗೊಮ್ಮೆ ಪ್ರಸಾರವಾಗುವ ಈ ಕಾರ್ಯಕ್ರಮಕ್ಕೆ 23 ಕೋಟಿ ಮಂದಿ ಕಾಯಂ ಕೇಳುಗರಿದ್ದಾರೆ' ಎಂದು ಸಮೀಕ್ಷೆಯೊಂದು ಸೋಮವಾರ ತಿಳಿಸಿದೆ.

ಮುಂದಿನ ವಾರ ಮನ್ ಕಿ ಬಾತ್ ಕಾರ್ಯಕ್ರಮದ 100ನೇ ಕಂತು ಪ್ರಸಾರವಾಗಲಿದೆ. ಈ ಹಿನ್ನೆಲೆಯಲ್ಲಿ ಐಐಎಂ–ರೋಹ್ಟಕ್ ಸಮೀಕ್ಷೆ ಕೈಗೊಂಡಿತ್ತು.

'ಸುಮಾರು ಶೇ 96ರಷ್ಟು ಮಂದಿಗೆ ಮನ್ ಕಿ ಬಾತ್ ಕಾರ್ಯಕ್ರಮದ ಕುರಿತು ಅರಿವಿದೆ. ಸಮೀಕ್ಷೆಗೆ ಒಳಪಟ್ಟಿದ್ದ 10,003 ಮಂದಿಯ ಪೈಕಿ ಶೇ 73ರಷ್ಟು ಮಂದಿ ಸರ್ಕಾರದ ಕಾರ್ಯವೈಖರಿ ಹಾಗೂ ದೇಶದ ಅಭಿವೃದ್ಧಿ ಕುರಿತು ಆಶಾಭಾವನೆ ವ್ಯಕ್ತಪಡಿಸಿದ್ದಾರೆ. 'ಸಮೀಕ್ಷೆಗೆ ಒಳಪಟ್ಟಿದ್ದವರ ಪೈಕಿ ಶೇ 60ರಷ್ಟು ಮಂದಿ ರಾಷ್ಟ್ರದ ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಳ್ಳುವ ಕುರಿತು ಆಸಕ್ತಿ ತೋರಿದ್ದಾರೆ' ಎಂದೂ ತಿಳಿಸಿದೆ.

'ನ್ಯಾಯಾಧೀಶರು ವಾಹಿನಿಗಳಿಗೆ ಸಂದರ್ಶನ ನೀಡುವುದು ಸಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನ್ಯಾಯಾಧೀಶರು ತಮ್ಮ ಬಳಿ ಬಾಕಿ ಇರುವ ಪ್ರಕರಣಗಳ ಕುರಿತು ಯಾವುದೇ ಸುದ್ದಿ ವಾಹಿನಿಗಳಿಗೆ ಸಂದರ್ಶನ ನೀಡುವುದು ಸಲ್ಲದು' ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿದೆ.

ಶಾಲೆಗಳಲ್ಲಿನ ಉದ್ಯೋಗಕ್ಕೆ ಸಂಬಂಧಿಸಿದ ಹಗರಣವೊಂದರಲ್ಲಿ ತೃಣಮೂಲ ಕಾಂಗ್ರೆಸ್ ನಾಯಕ ಅಭಿಷೇಕ್ ಬ್ಯಾನರ್ಜಿ ಅವರ ವಿರುದ್ಧ ಸುದ್ದಿ ವಾಹಿನಿಯೊಂದಕ್ಕೆ ಸಂದರ್ಶನ ನೀಡಿದ್ದಕ್ಕಾಗಿ ಕಲ್ಕತ್ತಾ ಹೈಕೋರ್ಟ್‌ನ ನ್ಯಾಯಮೂರ್ತಿ ಅಭಿಜಿತ್ ಗಂಗೋಪಾಧ್ಯಾಯ ಅವರನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರನ್ನೊಳಗೊಂಡ ನ್ಯಾಯಪೀಠವು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

ಸಂದರ್ಶನ ನೀಡುವ ಸಂದರ್ಭದಲ್ಲಿ ಬ್ಯಾನರ್ಜಿ ಅವರ ಪ್ರಕರಣವನ್ನು ನ್ಯಾಯಮೂರ್ತಿಗಳು ವಿಚಾರಣೆಗೆ ತೆಗೆದುಕೊಂಡಿದ್ದರು. 'ನ್ಯಾಯಾಧೀಶರು ತಮ್ಮ ಮುಂದೆ ಬಾಕಿ ಇರುವ ಪ್ರಕರಣಗಳ ಕುರಿತು ದೂರದರ್ಶನ ಅಥವಾ ಯಾವುದೇ ವಾಹಿನಿಗಳಿಗೆ ಸಂದರ್ಶನ ನೀಡುವಂತಿಲ್ಲ' ಎಂದು ಪೀಠ ಹೇಳಿದೆ.

ಬ್ಯಾನರ್ಜಿ ಪರ ಅವರ ವಕೀಲರು ಸಲ್ಲಿಸಿದ್ದ ಮನವಿಯನ್ನು ಕೈಗೆತ್ತಿಕೊಂಡ ಪೀಠವು, 'ನ್ಯಾಯಾಧೀಶರು ಹೇಗೆ ಸಂದರ್ಶನ ನೀಡಲು ಸಾಧ್ಯ' ಎಂದೂ ಪ್ರಶ್ನಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕಲ್ಕತ್ತಾ ಹೈಕೋರ್ಟ್‌ನಿಂದ ವರದಿಯನ್ನು ಕೇಳಿರುವ ನ್ಯಾಯಪೀಠವು, ನ್ಯಾಯಾಧೀಶರನ್ನು ಸಂದರ್ಶನ ಮಾಡಲಾಗಿದೆಯೇ ಎಂಬುದನ್ನು ವೈಯಕ್ತಿಕವಾಗಿ ಪರಿಶೀಲಿಸಿ, ಸ್ಪಷ್ಟನೆ ನೀಡಲು ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್‌ಗೆ ನಿರ್ದೇಶನ ನೀಡಿತು. ಈ ಸಂಬಂಧ ಶುಕ್ರವಾರದೊಳಗೆ ಅಫಿಡವಿಟ್ ಸಲ್ಲಿಸಲು ರಿಜಿಸ್ಟ್ರಾರ್ ಜನರಲ್ ಅವರಿಗೆ ಸೂಚಿಸಿದೆ.

ತನಿಖಾ ಸಂಸ್ಥೆಗಳ ಪರ ಹಾಜರಿದ್ದ ಅಡಿಷನ್ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು, 'ಈಗ ನಡೆಯುತ್ತಿರುವ ತನಿಖೆಯನ್ನು ಸ್ಥಗಿತಗೊಳಿಸಲು ಸಂದರ್ಶನವು ಕಾರಣವಾಗಬಹುದು' ಎಂದು ವಾದ ಮಂಡಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, 'ಆಪಾದಿತ ಹಗರಣದಲ್ಲಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯವು ನಡೆಸುತ್ತಿರುವ ತನಿಖೆಗೆ ತನ್ನ ಆದೇಶವು ಅಡ್ಡಿಯಾಗುವುದಿಲ್ಲ' ಎಂದು ಸ್ಪಷ್ಟಪಡಿಸಿತು.

ರಾಹುಲ್ ವಿರುದ್ಧ ವಿಚಾರಣೆಗೆ ತಡೆ

ಪಟ್ನಾ (ಪಿಟಿಐ): 'ಮೋದಿ' ಉಪನಾಮದ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿ ಮಾನನಷ್ಟ ಮೊಕದ್ದಮೆ ಎದುರಿಸುತ್ತಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ಬಿಹಾರದ ಪಟ್ನಾ ನ್ಯಾಯಾಲಯದಲ್ಲಿನ ಪ್ರಕರಣದ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

ನ್ಯಾಯಮೂರ್ತಿ ಸಂದೀಪ್ ಕುಮಾರ್ ಅವರು ಈ ಪ್ರಕರಣದ ವಿಚಾರಣೆಗೆ ತಡೆ ನೀಡಿದ್ದು, 'ಇದೇ ರೀತಿಯ ಪ್ರಕರಣದಲ್ಲಿ ಗುಜರಾತ್ ನ್ಯಾಯಾಲಯವು ಈಗಾಗಲೇ ಶಿಕ್ಷೆ ವಿಧಿಸಿದೆ. ಹೀಗಾಗಿ ರಾಹುಲ್ ಗಾಂಧಿಯವರನ್ನು ಮತ್ತೊಮ್ಮೆ ವಿಚಾರಣೆಗೆ ಒಳಪಡಿಸುವ ಅಗತ್ಯವಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ. 'ಪ್ರಕರಣದ ವಿಚಾರಣೆಗೆ ಮೇ 15ರವರೆಗೆ ಹೈಕೋರ್ಟ್ ತಡೆ ನೀಡಿದೆ. ಈ ಅರ್ಜಿ ಸಂಬಂಧ ನಿಗದಿತ ದಿನಾಂಕದೊಳಗೆ ನ್ಯಾಯಾಲಯಕ್ಕೆ ಪ್ರತಿಕ್ರಿಯೆ ಸಲ್ಲಿಸುತ್ತೇವೆ' ಎಂದು ಅರ್ಜಿದಾರ, ಬಿಜೆಪಿ ನಾಯಕ ಸುಶೀಲ್ ಕುಮಾರ್ ಮೋದಿ ಅವರನ್ನು ಪ್ರತಿನಿಧಿಸುತ್ತಿರುವ ವಕೀಲ ಎಸ್.ಡಿ. ಸಂಜಯ್ ತಿಳಿಸಿದ್ದಾರೆ.

ಬಿಹಾರದ ಪಟ್ನಾ ಕೋರ್ಟ್ ಇದೇ 25ರಂದು ವಿಚಾರಣೆಗೆ ಖುದ್ದು ಹಾಜರಾಗಲು ರಾಹುಲ್ ಅವರಿಗೆ ನೋಟಿಸ್ ನೀಡಿತ್ತು.

2019ರಲ್ಲಿ ಲೋಕಸಭಾ ಚುನಾವಣೆ ವೇಳೆ ಕರ್ನಾಟಕದ ಕೋಲಾರದಲ್ಲಿ ರಾಹುಲ್ ಅವರು 'ಎಲ್ಲ ಕಳ್ಳರ ಉಪನಾಮವೂ ಮೋದಿ ಎಂದು ಏಕಿದೆ' ಎಂದು ಪ್ರಚಾರ ಭಾಷಣದಲ್ಲಿ ಪ್ರಶ್ನಿಸಿದ್ದರು. ಈ ಪ್ರಕರಣದಲ್ಲಿ ಸೂರತ್ ಕೋರ್ಟ್ ರಾಹುಲ್ ಅವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ. ಅವರು ಲೋಕಸಭಾ ಸದಸ್ಯತ್ವದಿಂದಲೂ ಅನರ್ಹರಾಗಿದ್ದಾರೆ.

'ಚೀತಾ ಬೇರೆಡೆ ಸ್ಥಳಾಂತರಿಸಿ'

ಒಂದನೇ ಪುಟದಿಂದ...

ಈ ಸಂರಕ್ಷಿತ ಪ್ರದೇಶದಲ್ಲಿ 80 ಚದರ ಕಿ.ಮೀ.ನಷ್ಟು ಬೇಲಿ ಇರುವ ಪ್ರದೇಶ ಇದೆ. ಇಲ್ಲಿ ಹುಲಿಗಳಿಲ್ಲ. ಈ ಪ್ರದೇಶದಲ್ಲಿ ಚಿರತೆಗಳು, ತೋಳಗಳು ಹಾಗೂ ಕಿರುಬಗಳಿವೆ. ಆದ್ದರಿಂದ ಇದು ಚೀತಾಗಳಿಗೆ ಹೇಳಿಮಾಡಿಸಿದ ಜಾಗವಾಗಿದೆ. ಹೀಗಾಗಿ, ಚೀತಾಗಳನ್ನು ಈ ಪ್ರದೇಶಕ್ಕೆ ಸ್ಥಳಾಂತರಿಸಿ ಎಂದೂ ಕೋರಲಾಗಿದೆ.

ಕೇಂದ್ರ ಸರ್ಕಾರವು ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು. ಮುಕುಂದರಾ ಹಿಲ್ಸ್ ಹುಲಿ ಸಂರಕ್ಷಿತ ಪ್ರದೇಶಕ್ಕೆ ಚೀತಾಗಳನ್ನು ಸ್ಥಳಾಂತರಿಸುವ ಬಗ್ಗೆ ಕೇಂದ್ರದ ಒಪ್ಪಿಗೆ ಬೇಕು. ಈ ವಿಷಯದಲ್ಲಿ ಕೇಂದ್ರ ಸರ್ಕಾರವು ಈ ಕೂಡಲೇ ಮಧ್ಯಪ್ರವೇಶಿಸದಿದ್ದರೆ, ನಿರ್ಧಾರ ಕೈಗೊಳ್ಳದಿದ್ದರೆ, ಚೀತಾ ಯೋಜನೆಯ ಹಿತಾಸಕ್ತಿಗೇ ಇದು ಮಾರಕವಾಗಲಿದೆ ಎಂದು ಅಧಿಕಾರಿ ಹೇಳಿದ್ದಾರೆ.

ಈ ಎಲ್ಲಾ ಬೆಳವಣಿಗೆಗಳು ಮಹತ್ವಾಕಾಂಕ್ಷೆಯ ಯೋಜನೆಯಾದ 'ಪ್ರಾಜೆಕ್ಟ್ ಚೀತಾ'ಗೆ ಎದುರಾದ ಹಿನ್ನಡೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅಳಿವಿನಂಚಿನಲ್ಲಿರುವ ಚೀತಾ ಸಂತತಿಯ ಪುನರುತ್ಥಾನಕ್ಕಾಗಿ 'ಪ್ರಾಜೆಕ್ಟ್ ಚೀತಾ' ಯೋಜನೆಯಡಿ ಸ್ಥಳಾಂತರಿಸಲಾಗಿದ್ದ ಚೀತಾಗಳನ್ನು ಕ್ವಾರಂಟೈನ್‌ನಲ್ಲಿರಿಸಿ ನಂತರ ಅವುಗಳನ್ನು ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಸೇರಿಸಲಾಗಿತ್ತು.

ಇದೇ ಉದ್ಯಾನದಲ್ಲಿ ಕಳೆದ ಮಾ.27ರಂದು 'ಸಶಾ' ಹೆಸರಿನ ಹೆಣ್ಣು ಚೀತಾ ಮೂತ್ರಪಿಂಡ ಸಮಸ್ಯೆಯಿಂದ ಮೃತಪಟ್ಟಿತ್ತು.

ಉದಯ್ ಎಂಬ ಹೆಸರಿನ ಗಂಡು ಚೀತಾ ಭಾನುವಾರ ಮೃತಪಟ್ಟಿತ್ತು. ಇನ್ನೊಂದು ಚೀತಾ ಸಿಯಾಯ, ನಾಲ್ಕು ಮರಿಗಳಿಗೆ ಇತ್ತೀಚೆಗೆ ಜನ್ಮ ನೀಡಿತ್ತು. ಪವನ್ ಎನ್ನುವ ಚೀತಾವು ಹಲವು ಬಾರಿ ಉದ್ಯಾನದಿಂದ ಹೊರಗೆ ಹೋಗಿತ್ತು. ನಂತರ ಅದನ್ನು ರಕ್ಷಿಸಲಾಗಿತ್ತು.

ಹೃದಯ ವೈಫಲ್ಯ, ಉಸಿರಾಟ ಸಮಸ್ಯೆಯಿಂದ ಚೀತಾ ಸಾವು: 'ಉದಯ್' ಹೆಸರಿನ ಆಫ್ರಿಕಾ ಚೀತಾ ಸಾವಿಗೆ ಹೃದಯ ವೈಫಲ್ಯ ಮತ್ತು ಉಸಿರಾಟ ಸಮಸ್ಯೆಯೇ ಪ್ರಮುಖ ಕಾರಣ ಎನ್ನುವುದು ಪ್ರಾಥಮಿಕ ಮೌಲ್ಯಮಾಪನದಿಂದ ಗೊತ್ತಾಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಮರಣೋತ್ತರ ಪರೀಕ್ಷೆಯ ವರದಿ ಇನ್ನಷ್ಟೇ ಬರಬೇಕಿದೆ ಎಂದಿದ್ದಾರೆ.

ಜೆಮಿನಿ ಸರ್ಕಸ್‌ನ ಸಂಸ್ಥಾಪಕ ಜೆಮಿನಿ ಶಂಕರನ್ ನಿಧನ

ಕಣ್ಣೂರು (ಪಿಟಿಐ): ಭಾರತೀಯ ಸರ್ಕಸ್‌ನ ಪ್ರವರ್ತಕ ಹಾಗೂ ಜೆಮಿನಿ ಸರ್ಕಸ್‌ನ ಸಂಸ್ಥಾಪಕ ಜೆಮಿನಿ ಶಂಕರನ್ (99) ಅವರು ಭಾನುವಾರ ರಾತ್ರಿ ನಿಧನ ಹೊಂದಿದ್ದಾರೆ.

ಕೆಲ ದಿನಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಇಲ್ಲಿನ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲೇ ಕೊನೆಯುಸಿರು ಎಳೆದರು. ಅವರಿಗೆ ಇಬ್ಬರು ಪುತ್ರರು ಮತ್ತು ಒಬ್ಬ ಪುತ್ರಿ ಇದ್ದಾರೆ.

ಶಂಕರನ್ ಅವರ ಪಾರ್ಥಿವ ಶರೀರವನ್ನು ಅವರ ನಿವಾಸದಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿದ್ದು, ಮಂಗಳವಾರ ಪಯ್ಯಾಂಬಲಂ ಬೀಚ್‌ನಲ್ಲಿ ಅಂತಿಮ ಸಂಸ್ಕಾರ ನಡೆಯಲಿದೆ.

1924ರಲ್ಲಿ ಜನಿಸಿದ ಶಂಕರನ್ ಅವರು ಪ್ರಸಿದ್ಧ ಸರ್ಕಸ್ ಕಲಾವಿದ ಕೀಲೇರಿ ಕುಂಞಿಕಣ್ಣನ್ ಅವರ ಬಳಿ 3 ವರ್ಷಗಳ ಕಾಲ ತರಬೇತಿ ಪಡೆದಿದ್ದರು. 1951ರಲ್ಲಿ ವಿಜಯಾ ಸರ್ಕಸ್ ಕಂಪನಿಯನ್ನು ಖರೀದಿಸಿದರು.

ಸುಡಾನ್: ಎರಡು ಸೇನಾ ವಿಮಾನಗಳ ಮೂಲಕ 27 ದೇಶಗಳ 388 ಪ್ರಜೆಗಳು ಸುರಕ್ಷಿತ ಸ್ಥಳಕ್ಕೆ

ಭಾರತೀಯ ಪ್ರಜೆಗಳ ಸ್ಥಳಾಂತರ ಮಾಡಿದ ಫ್ರಾನ್ಸ್

ನವದೆಹಲಿ/ಖಾರ್ಟೂಮ್ (ಪಿಟಿಐ/ಎಪಿ/ಎಎಫ್‌ಪಿ): ಸಂಘರ್ಷ ಪೀಡಿತ ಸುಡಾನ್‌ನಿಂದ ಭಾರತೀಯ ಪ್ರಜೆಗಳೂ ಸೇರಿದಂತೆ ಇತರ 27 ದೇಶಗಳ 388 ಪ್ರಜೆಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಿರುವುದಾಗಿ ದೆಹಲಿಯಲ್ಲಿರುವ ಫ್ರಾನ್ಸ್ ರಾಯಭಾರ ಕಚೇರಿ ಸೋಮವಾರ ಹೇಳಿದೆ.

ಎರಡು ಸೇನಾ ವಿಮಾನಗಳ ಮೂಲಕ ಈ ಕಾರ್ಯಾಚರಣೆ ನಡೆದಿದೆ. ಇದರಲ್ಲಿ ಭಾರತೀಯರು ಇದ್ದಾರೆ. ಆದರೆ, ಎಷ್ಟು ಜನ ಇದ್ದಾರೆ ಎಂಬ ಬಗ್ಗೆ ಇನ್ನಷ್ಟೇ ಮಾಹಿತಿ ಬರಬೇಕಿದೆ.

ಸೌದಿ ಅರೇಬಿಯಾ ವಿವಿಧ ದೇಶಗಳ 66 ನಾಗರಿಕರನ್ನು ಸಂಘರ್ಷ ನೆಲದಿಂದ ಭಾನುವಾರ ಸ್ಥಳಾಂತರ ಮಾಡಿದ್ದು, ಇವರಲ್ಲಿ ಮೂವರು ಭಾರತೀಯರು ಇದ್ದರು.

ರಕ್ಷಣೆಗೆ ಪರದಾಟ: ಸುಡಾನ್‌ನಲ್ಲಿ ನಡೆಯುತ್ತಿರುವ ಸೇನೆ ಮತ್ತು ಅರೆಸೇನಾ ಪಡೆಗಳ ನಡುವಣ ಸಂಘರ್ಷದಿಂದಾಗಿ ಅಲ್ಲಿ ಸಿಲುಕಿರುವ ತಮ್ಮ ಪ್ರಜೆಗಳ ರಕ್ಷಣೆಗೆ ವಿವಿಧ ದೇಶಗಳು ಸೋಮವಾರ ಭಾರಿ ಪ್ರಯತ್ನ ನಡೆಸಿದ್ದು ಕಂಡುಬಂತು.

ಅಮೆರಿಕ, ಯುರೋಪ್, ಆಫ್ರಿಕ ಮತ್ತು ಏಷ್ಯಾದ ದೇಶಗಳು ತಮ್ಮ ದೇಶದ ರಾಯಭಾರ ಕಚೇರಿ ಸಿಬ್ಬಂದಿ ಹಾಗೂ ಪ್ರಜೆಗಳ ರಕ್ಷಣೆಗಾಗಿ ವಿಮಾನ, ರಸ್ತೆ ಮಾರ್ಗ ಹಾಗೂ ಸಮುದ್ರ ಮಾರ್ಗದಲ್ಲಿ ತುರ್ತು ಕಾರ್ಯಾಚರಣೆ ಆರಂಭಿಸಿವೆ.

ಐಎನ್‌ಎಸ್ ಸುಮೇಧ ಹಡಗಿನ ಮೂಲಕ ತಾಯ್ನಾಡಿಗೆ ಮರಳಲು ಸುಡಾನ್‌ನ ಬಂದರಿನಲ್ಲಿ ಸಜ್ಜಾಗಿ ನಿಂತಿರುವ ಭಾರತೀಯರು

ಅಮೆರಿಕ ಭಾನುವಾರ ಚಿನೂಕ್ ಹೆಲಿಕಾಪ್ಟರ್ ಮೂಲಕ ರಕ್ಷಣಾ ಕಾರ್ಯಾಚರಣೆ ನಡೆಸಿದರೆ, ಬ್ರಿಟನ್ ಕೂಡ ಅದೇ ಮಾದರಿಯಲ್ಲಿ 1,000 ಸೇನಾ ಸಿಬ್ಬಂದಿಯೊಂದಿಗೆ ರಕ್ಷಣಾ ಕಾರ್ಯಕ್ಕೆ ಧಮುಕಿದೆ. ಫ್ರಾನ್ಸ್, ಜರ್ಮನಿ ಮತ್ತು ಇತರ ದೇಶಗಳ ಜಂಟಿ ಕಾರ್ಯಾಚರಣೆಯಲ್ಲಿ ವಿವಿಧ ದೇಶದ 1,000ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ ಎಂದು ಐರೋಪ್ಯ ಒಕ್ಕೂಟದ ವಿದೇಶಾಂಗ ನೀತಿ ಅಧ್ಯಕ್ಷ ಜೋಸೆಫ್ ಬೊರೆಲ್ ತಿಳಿಸಿದ್ದಾರೆ.

'ಖಾರ್ಟೂಮ್‌ನಲ್ಲಿ ಜೀವನವು ಆತಂಕದಿಂದ ಕೂಡಿದೆ. ನಮ್ಮ ನೆರೆಹೊರೆಯ ಮನೆ ಬಾಗಿಲ ಬಳಿಯೇ ರಾಕೆಟ್ ದಾಳಿ ನಡೆದಿದೆ. ಈಗ ಎಲ್ಲೂ ಸುರಕ್ಷತೆ ಇಲ್ಲವಾಗಿದೆ' ಎಂದು ಅಲ್ಲಿನ ನಿವಾಸಿ ತಗ್ರೀಡ್ ಅಬ್ದಿನ್ ಹೇಳಿದ್ದಾರೆ.

ರಿಷಿ ಸುನಕ್ ಹೇಳಿಕೆ: 'ಸುಡಾನ್‌ನಲ್ಲಿರುವ ಬ್ರಿಟಿಷ್ ಪಾಸ್‌ಪೋರ್ಟ್ ಹೊಂದಿರುವ ಸುಮಾರು 2,000 ಜನರನ್ನು ಸಂಪರ್ಕಿಸಲಾಗಿದೆ. ರಾಯಭಾರ ಕಚೇರಿ ಸಿಬ್ಬಂದಿಗೆ ಬೆದರಿಕೆ ಹಾಗೂ ಹಿಂಸಾಚಾರದ ನಡುವೆಯೂ ರಾಜತಾಂತ್ರಿಕ ಸಿಬ್ಬಂದಿ ಮತ್ತು ಅವರ ಕುಟುಂಬದವರನ್ನು ಸುರಕ್ಷಿತವಾಗಿ ಸ್ಥಳಾಂತರ ಮಾಡಿದ್ದೇವೆ' ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹೇಳಿದ್ದಾರೆ.

ಚೀನಾದ ಸುಮಾರು 1,500 ಪ್ರಜೆಗಳು ಸುಡಾನ್‌ನಲ್ಲಿದ್ದು, ಅವರನ್ನು ವಾಪಸ್ ಕರೆತರುವ ಪ್ರಯತ್ನವನ್ನು ಚೀನಾ ಆರಂಭಿಸಿದೆ. ಈಗಾಗಲೇ ಮೊದಲ ಗುಂಪನ್ನು ಸುರಕ್ಷಿತ ನೆಲೆಗೆ ರವಾನಿಸಿದೆ. ಸುಡಾನ್, ಚೀನಾದ ಅತಿದೊಡ್ಡ ವ್ಯಾಪಾರ ಪಾಲುದಾರನಾಗಿದ್ದು, 130ಕ್ಕೂ ಹೆಚ್ಚು ಕಂಪನಿಗಳು ಇಲ್ಲಿ ಹೂಡಿಕೆ ಮಾಡಿವೆ.

ವಾಪಸಾಗಲು ಹಕ್ಕಿಪಿಕ್ಕಿ ಜನ ಸಿದ್ಧ

ಮೈಸೂರು: ಸುಡಾನ್‌ನಲ್ಲಿ ಸಿಲುಕಿರುವ ಜಿಲ್ಲೆಯ ಹಕ್ಕಿಪಿಕ್ಕಿ ಸಮುದಾಯದವರು ತಾಯ್ನಾಡಿಗೆ ಮರಳುವ ಆಸೆ ಚಿಗುರಿದ್ದು, ಸಿದ್ಧತೆಗಳು ನಡೆದಿವೆ.

'ಸದ್ಯ ನಾವು ಬಾರಡೋ ಎಂಬ ಪ್ರದೇಶದಲ್ಲಿದ್ದೇವೆ. ಇಲ್ಲಿಂದ ಸೌದಿ ಅರೇಬಿಯಾಕ್ಕೆ ಹಡಗಿನ ಮೂಲಕ ಕಳುಹಿಸಲಾಗುವುದು. ಅಲ್ಲಿಂದ ವಿಮಾನದ ಮೂಲಕ ಭಾರತಕ್ಕೆ ತೆರಳಲು ಸಿದ್ದರಾಗಿ ಎಂದು ಇಲ್ಲಿನ ಕಮಾಂಡೋಗಳು ಮಾಹಿತಿ ನೀಡಿದ್ದಾರೆ' ಎಂದು ಸಂತ್ರಸ್ತರೊಂದಿಗೆ ಇರುವ ಡೇವಿಡ್, ಎಚ್.ಡಿ.ಕೋಟೆ ತಾಲ್ಲೂಕಿನ ಟೈಗರ್ ಬ್ಲಾಕ್ ಹಾಡಿಯ ಜನರಿಗೆ ಮಾಹಿತಿ ನೀಡಿದ್ದಾರೆ.

'ಹಲವು ವರ್ಷಗಳಿಂದ ಇಲ್ಲಿ ನೆಲೆಸಿರುವ ಕೇರಳದ ವ್ಯಕ್ತಿಯೊಬ್ಬರು ಸ್ಥಳಾಂತರಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ. ಭಾರತ ಸರ್ಕಾರ ಹಣದ ನೆರವು ನೀಡಿದೆ' ಎಂದೂ ತಿಳಿಸಿದ್ದಾರೆ.

ಘರ್ಷಣೆಯ ಮಧ್ಯೆ ಸಿಲುಕಿದ್ದವರು ಭಾನುವಾರದಿಂದ ಟವರ್ ಸಂಪರ್ಕ ಕಡಿತದಿಂದಾಗಿ ಮೊಬೈಲ್ ಫೋನ್ ಸಂಪರ್ಕಕ್ಕೆ ಸಿಗುತ್ತಿರಲಿಲ್ಲ. ಸೋಮವಾರ ಸಂಜೆ ಗ್ರಾಮದ ಸೌದಿಮೂಲದ ವ್ಯಕ್ತಿಯೊಬ್ಬರ ಮೊಬೈಲ್ ಫೋನ್ ಬಳಸಿ ಡೇವಿಡ್ ಅವರು ಹಾಡಿಯಲ್ಲಿರುವ ತಮ್ಮ ತಂದೆ ಬಾಬು ಅವರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. 'ಪ್ರಜಾವಾಣಿ' ಜತೆ ಮಾತನಾಡಿದ ಹಾಡಿಯ ಮುಖಂಡ ಮೀನ್ ರಾಜ್, 'ಹಾಡಿಯ ಎಲ್ಲರೂ ಒಂದೇ ಹಳ್ಳಿಯಲ್ಲಿದ್ದು, ಅಲ್ಲಿಂದ ನಾಳೆ ಬಸ್ ಮೂಲಕ ತೆರಳಿ ಹಡಗಿನ ಸಹಾಯದಿಂದ ಸೌದಿ ತಲುಪಲಿದ್ದಾರೆ ಎಂದು ಡೇವಿಡ್ ತಿಳಿಸಿದ್ದಾನೆ' ಎಂದರು.

ಈ ಬೆಳವಣಿಗೆಯಿಂದ ಸುಡಾನ್‌ನಲ್ಲಿ ಸಿಲುಕಿದ್ದವರನ್ನು ರಕ್ಷಿಸುವ ಭಾರತದ ಕಾರ್ಯಕ್ಕೆ ಹೊಸ ಹುರುಪು ದೊರೆತಂತಾಗಿದೆ.

- ಇಟಲಿಯ ಸೇನಾ ಕಾರ್ಯಾಚರಣೆಯಲ್ಲಿ ಭಾನುವಾರ 200 ಜನರನ್ನು ರಕ್ಷಿಸಲಾಗಿದೆ. ಇದರಲ್ಲಿ ಬೇರೆ ದೇಶದ ಪ್ರಜೆಗಳೂ ಸೇರಿದ್ದಾರೆ.
- ಫ್ರಾನ್ಸ್ ಸಹಕಾರದೊಂದಿಗೆ ಗ್ರೀಕ್ ನಾಗರಿಕರ ಮೊದಲ ತಂಡ ಬಂದಿದೆ. ಇಟಲಿಯ ಕಾರ್ಯಾಚರಣೆಯಲ್ಲಿ 10 ನಾಗರಿಕರು ಸುರಕ್ಷಿತವಾಗಿ ಬಂದಿದ್ದಾರೆ.
- ಜರ್ಮನಿ ತನ್ನ ಮೂರು ವಿಮಾನಗಳ ಮೂಲಕ 300 ಜನರನ್ನು ಬರ್ಲಿನ್‌ಗೆ ಕರೆ ತಂದಿದೆ.
- ಸೌದಿ ನೌಕಾಪಡೆಯು ರಕ್ಷಿಸಿದ 105 ಲಿಬಿಯಾ ನಾಗರಿಕರನ್ನು ಸೋಮವಾರ ಅವರ ದೇಶಕ್ಕೆ ಕಳುಹಿಸಲಾಗಿದೆ.
- ಸ್ವೀಡನ್ ತನ್ನ ರಾಯಭಾರ ಕಚೇರಿ ಸಿಬ್ಬಂದಿ, ಅವರ ಕುಟುಂಬ ಮತ್ತು ಇತರ ಪ್ರಜೆಗಳನ್ನು ಸ್ಥಳಾಂತರ ಮಾಡಿದೆ

ಸಹ ಪ್ರಯಾಣಿಕರ ಮೇಲೆ ಮೂತ್ರ ವಿಸರ್ಜನೆ: ಬಂಧನ

ನವದೆಹಲಿ (ಪಿಟಿಐ): ಸಹ ಪ್ರಯಾಣಿಕರೊಬ್ಬರ ಮೇಲೆ ಮೂತ್ರ ವಿಸರ್ಜಿಸಿದ ಆರೋಪಕ್ಕೆ ಸಂಬಂಧಿಸಿ ಭಾರತೀಯ ಮೂಲದ ವ್ಯಕ್ತಿಯನ್ನು ಇಲ್ಲಿನ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿದೆ ಎಂದು ಅಧಿಕೃತ ಮೂಲಗಳು ಸೋಮವಾರ ತಿಳಿಸಿವೆ.

ನ್ಯೂಯಾರ್ಕ್‌ನಿಂದ ನವದೆಹಲಿಗೆ ಬರುತ್ತಿದ್ದ ಅಮೆರಿಕ ವಿಮಾನಯಾನ ಸಂಸ್ಥೆಯ ಎಎ 292 ವಿಮಾನದಲ್ಲಿ ಈ ಘಟನೆ ನಡೆದಿದೆ. ವಿಮಾನವು ಭಾನುವಾರ ರಾತ್ರಿ 9 ಗಂಟೆಗೆ ಇಲ್ಲಿನ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ನಂತರ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯು ಆರೋಪಿಯನ್ನು ಬಂಧಿಸಿದೆ. ಆರೋಪಿ ಮೇಲೆ ಎಫ್‌ಐಆರ್ ಕೂಡ ದಾಖಲಾಗಿದೆ.

ಆರೋಪಿಯು ಕುಡಿದ ಅಮಲಿನಲ್ಲಿ ಸಹ ಪ್ರಯಾಣಿಕರ ಜೊತೆ ವಾದಕ್ಕಿಳಿದು ಅವರ ಮೇಲೆ ಮೂತ್ರ ಮಾಡಿದ ಎಂದು ಸಿಬ್ಬಂದಿ ತಿಳಿಸಿದ್ದಾರೆ.

ಸಹಪ್ರಯಾಣಿಕರ ಹೇಳಿಕೆ ದಾಖಲಿಸಿರುವ ಅಮೆರಿಕ ವಿಮಾನಯಾನ ಸಂಸ್ಥೆಯು ಭಾನುವಾರ ನಡೆದಿರುವ ಈ ಘಟನೆ ಬಗ್ಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯಕ್ಕೆ(ಡಿಜಿಸಿಎ) ವರದಿ ನೀಡಿದೆ. ಸಂಸ್ಥೆ ಆಂತರಿಕ ವಿಚಾರಣೆಯನ್ನೂ ನಡೆಸಲಿದೆ ಎಂದು ಡಿಜಿಸಿಎ ಹೇಳಿದೆ.

ಮಹಾರಾಷ್ಟ್ರ: ಸಂಚಲನ ಮೂಡಿಸಿದ ಪವಾರ್ ಹೇಳಿಕೆ

ಮುಂಬೈ (ಪಿಟಿಐ): ಎನ್‌ಸಿಪಿ ವರಿಷ್ಠ ಶರದ್ ಪವಾರ್ ಅವರು ಮಹಾರಾಷ್ಟ್ರದ ವಿರೋಧ ಪಕ್ಷಗಳ ಒಗ್ಗಟ್ಟಿನ ಕುರಿತು ನೀಡಿರುವ ಹೇಳಿಕೆಯು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿದೆ.

ಎನ್‌ಸಿಪಿ, ಕಾಂಗ್ರೆಸ್ ಹಾಗೂ ಶಿವಸೇನಾ (ಉದ್ಧವ್ ಬಾಳಾಸಾಹೇಬ್ ಠಾಕ್ರೆ ಬಣ) 2024ರ ಚುನಾವಣೆಯನ್ನು ಒಟ್ಟಾಗಿ ಎದುರಿಸಲಿವೆಯೇ ಎಂದು ಮಾಧ್ಯಮದವರು ಪವಾರ್ ಅವರಿಗೆ ಭಾನುವಾರ ಕೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಪವಾರ್, 'ಒಟ್ಟಾಗಿ ಕೆಲಸ ಮಾಡಬೇಕೆಂಬ ಇಚ್ಛೆಯೇನೊ ಇದೆ. ಆದರೆ ಬಯಕೆ ಇದ್ದರಷ್ಟೇ ಸಾಕಾಗುವುದಿಲ್ಲ. ಸೀಟು ಹಂಚಿಕೆ ಸೇರಿದಂತೆ ಇನ್ನಿತರ ವಿಚಾರಗಳ ಕುರಿತು ಇನ್ನೂ ಚರ್ಚಿಸಿಲ್ಲ. ಹೀಗಿರುವಾಗ ಈಗಲೇ ಈ ಕುರಿತು ಏನು ಹೇಳಲಿ' ಎಂದಿದ್ದಾರೆ.

ಅಕ್ಷರ್ ಪಟೇಲ್ ಆಲ್‌ರೌಂಡ್ ಆಟ: ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ ನಿರಾಸೆ

ಡೆಲ್ಲಿ ಕ್ಯಾಪಿಟಲ್ಸ್‌ಗೆ ರೋಚಕ ಜಯ

ವಿಕೆಟ್ ಗಳಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಅಕ್ಷರ್ ಪಟೇಲ್ (ಎಡ) ಅವರನ್ನು ಸಹ ಆಟಗಾರರು ಅಭಿನಂದಿಸಿದರು– ಎಎಫ್‌ಪಿ ಚಿತ್ರ

ಹೈದರಾಬಾದ್ (ಪಿಟಿಐ): ಕೊನೆಯ ಹಂತದಲ್ಲಿ ಒತ್ತಡವನ್ನು ಮೀರಿನಿಂತ ಡೆಲ್ಲಿ ಕ್ಯಾಪಿಟಲ್ಸ್ ಬೌಲರ್‌ಗಳು ತಮ್ಮ ತಂಡಕ್ಕೆ ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಎರಡನೇ ಜಯ ತಂದುಕೊಟ್ಟರು.

ರಾಜೀವಗಾಂಧಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಡೆಲ್ಲಿ 7 ರನ್‌ಗಳಿಂದ ಆತಿಥೇಯ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಗೆದ್ದಿತು.

ಟಾಸ್ ಗೆದ್ದ ಡೆಲ್ಲಿ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 144 ರನ್ ಗಳಿಸಿತು. ಹೈದರಾಬಾದ್ ತಂಡವು ನಿಗದಿತ ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 137 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಸಾಧಾರಣ ಗುರಿ ಬೆನ್ನಟ್ಟಿದ ಹೈದರಾಬಾದ್ ಪರ ಹ್ಯಾರಿ ಬ್ರೂಕ್ (7) ಹಾಗೂ ಮಯಂಕ್ ಅಗರವಾಲ್ (49, 39ಎ, 4X7) ಮೊದಲ ವಿಕೆಟ್ ಜೊತೆಯಾಟದಲ್ಲಿ 31 ರನ್ ಸೇರಿಸಿದರು.

ಬ್ರೂಕ್ ಅವರನ್ನು ಬೌಲ್ಡ್ ಮಾಡಿದ ಎನ್ರಿಚ್ ನಾಕಿಯಾ (33ಕ್ಕೆ 2) ಈ ಜೊತೆಯಾಟ ಮುರಿದರು. 12ನೇ ಓವರ್‌ನಲ್ಲಿ ತಂಡದ ಮೊತ್ತ 69 ರನ್‌ಗಳಾಗಿದ್ದಾಗ ಮಯಂಕ್ ಅವರು ಅಕ್ಷರ್ ಪಟೇಲ್ (21ಕ್ಕೆ 2) ಅವರಿಗೆ ವಿಕೆಟ್ ಒಪ್ಪಿಸಿದರು. ರಾಹುಲ್ ತ್ರಿಪಾಠಿ (15) ಅವರಿಗೆ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗಲಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಹೆನ್ರಿಚ್ ಕ್ಲಾಸೆನ್ (31, 19ಎ, 4X3, 6X1) ಹೋರಾಟ ವ್ಯರ್ಥವಾಯಿತು.

ಮುಕೇಶ್ ಕುಮಾರ್ ಮಾಡಿದ ಕೊನೆಯ ಓವರ್‌ನಲ್ಲಿ ಹೈದರಾಬಾದ್ ಜಯಕ್ಕೆ 13 ರನ್ ಬೇಕಿತ್ತು. ವಾಷಿಂಗ್ಟನ್ ಸುಂದರ್ (ಔಟಾಗದೆ 24, 15ಎ) ಹಾಗೂ ಮಾರ್ಕೊ ಜೆನ್ಸನ್ (ಔಟಾಗದೆ 2) ಅವರನ್ನು ನಿಯಂತ್ರಿಸಿದ ಮುಕೇಶ್ ಈ ಓವರ್‌ನಲ್ಲಿ ಕೇವಲ 5 ರನ್ ನೀಡಿದರು.

ಅಕ್ಷರ್ ಪಟೇಲ್ (34) ತಮ್ಮ ತಂಡಕ್ಕೆ ಬ್ಯಾಟಿಂಗ್‌ನಲ್ಲಿಯೂ ಕಾಣಿಕೆ ನೀಡಿದ್ದರು.

ಡೆಲ್ಲಿ ಸಾಧಾರಣ ಮೊತ್ತ: ಹೈದರಾಬಾದ್ ತಂಡದ ಸ್ಪಿನ್ನರ್ ವಾಷಿಂಗ್ಟನ್ ಮತ್ತು ಮಧ್ಯಮವೇಗಿ ಭುವನೇಶ್ವರ್ ಕುಮಾರ್ ಅಮೋಘ ಬೌಲಿಂಗ್ ಮೂಲಕ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಸಾಧಾರಣ ಮೊತ್ತಕ್ಕೆ ನಿಯಂತ್ರಿಸಿದ್ದರು.

ವಾಷಿಂಗ್ಟನ್ ಮೂರು ವಿಕೆಟ್ ಗಳಿಸಿದರು. ಅಲ್ಲದೇ ಡೆಲ್ಲಿ ತಂಡದ ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸುತ್ತಿದ್ದ ಮನೀಷ್ ಪಾಂಡೆ (34; 27ಎ, 4X2) ಅವರು ರನ್‌ಔಟ್ ಆಗಲೂ ವಾಷಿಂಗ್ಟನ್ ಕಾರಣರಾದರು.

ಡೆಲ್ಲಿ ತಂಡಕ್ಕೆ ಮೊದಲ ಓವರ್‌ನಲ್ಲಿಯೇ ಭುವನೇಶ್ವರ್ ಕುಮಾರ್ ಆಘಾತ ನೀಡಿದರು. ಮೂರನೇ ಎಸೆತದಲ್ಲಿ ಫಿಲಿಪ್ ಸಾಲ್ಟ್ ಔಟಾದರು. ಇನ್ನೊಂದು ಕಡೆಯಿದ್ದ ನಾಯಕ ಡೇವಿಡ್ ವಾರ್ನರ್ (21; 20ಎ) ಮತ್ತು ಮಿಚೆಲ್ ಮಾರ್ಷ್ (25; 15ಎ) ಇನಿಂಗ್ಸ್ ಉತ್ತಮಗೊಳಿಸಲು ಪ್ರಯತ್ನಿಸಿದರು. ಐದನೇ ಓವರ್‌ನಲ್ಲಿ ಎಡಗೈ ಮಧ್ಯಮವೇಗಿ ನಟರಾಜನ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಮಾರ್ಷ್ ಬಿದ್ದರು. ಅದರೊಂದಿಗೆ ಜೊತೆಯಾಟ ಮುರಿಯಿತು.

ಬಳಿಕ ವಾರ್ನರ್ ವಿಕೆಟ್ ಗಳಿಸಿದ ವಾಷಿಂಗ್ಟನ್ ಸುಂದರ್ ಮಿಂಚಿದರು. ಸರ್ಫರಾಜ್ ಖಾನ್ ಅವರಿಗೂ ವಾಷಿಂಗ್ಟನ್ ಪೆವಿಲಿಯನ್ ದಾರಿ ತೋರಿದರು. ಈ ಹಂತದಲ್ಲಿ ದಿಟ್ಟ ಹೋರಾಟ ತೋರಿದವರು ಪಾಂಡೆ ಮತ್ತು ಅಕ್ಷರ್ ಪಟೇಲ್. ಪಾಂಡೆ ತಾಳ್ಮೆಯಿಂದ ಆಡಿ ರನ್ ಗಳಿಸಿದರು. ಅಕ್ಷರ್ ಆಟದಲ್ಲಿ ನಾಲ್ಕು ಬೌಂಡರಿಗಳಿದ್ದವು.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 9ಕ್ಕೆ 144 (20 ಓವರ್‌ಗಳಲ್ಲಿ)

ವಾರ್ನರ್ ಸಿ ಹ್ಯಾರಿ ಬಿ ವಾಷಿಂಗ್ಟನ್ 21 (20ಎ, 4X2, 6X1)
ಸಾಲ್ಟ್ ಸಿ ಕ್ಲಾಸನ್ ಬಿ ಭುವನೇಶ್ವರ್ 0 (1ಎ)
ಮಾರ್ಷ್ ಎಲ್‌ಬಿಡಬ್ಲ್ಯು ಬಿ ನಟರಾಜನ್ 25 (15ಎ, 4X5)
ಸರ್ಫರಾಜ್ ಸಿ ಭುವನೇಶ್ವರ್ ಬಿ ವಾಷಿಂಗ್ಟನ್ 10 (9ಎ, 6X1)
ಮನೀಷ್ ರನ್‌ಔಟ್ (ವಾಷಿಂಗ್ಟನ್/ಕ್ಲಾಸನ್) 34 (27ಎ, 4X2)
ಅಮನ್ ಸಿ ಅಭಿಷೇಕ್ ಬಿ ವಾಷಿಂಗ್ಟನ್ 4 (2ಎ, 4X1)
ಅಕ್ಷರ್ ಬಿ ಭುವನೇಶ್ವರ್ 34 (34ಎ, 4X4)
ರಿಪಲ್ ರನ್‌ಔಟ್ (ಕ್ಲಾಸನ್) 5 (6ಎ)
ಎನ್ರಿಚ್ ರನ್‌ಔಟ್ (ಉಮ್ರಾನ್–ಕ್ಲಾಸನ್) 2 (2ಎ)
ಕುಲದೀಪ್ ಔಟಾಗದೆ 4 (3ಎ, 4X1)
ಇಶಾಂತ್ ಔಟಾಗದೆ 1 (1ಎ)
ಇತರೆ: 4 (ಲೆಗ್‌ಬೈ 2, ವೈಡ್ 2)

ವಿಕೆಟ್ ಪತನ: 1–1 (ಫಿಲಿಪ್ ಸಾಲ್ಟ್; 0.3), 2–39 (ಡೇವಿಡ್ ವಾರ್ನರ್; 7.2), 4–58 (ಸರ್ಫರಾಜ್ ಖಾನ್; 7.4), 5–62 (ಅಮನ್ ಹಕೀಂ ಖಾನ್; 7.6), 6–131 (ಅಕ್ಷರ್ ಪಟೇಲ್; 17.5), 7–134 (ಮನೀಷ್ ಪಾಂಡೆ; 18.2), 8–139 (ಎನ್ರಿಚ್ ನಾಕಿಯಾ; 19.2), 9–139 (ರಿಪಲ್ ಪಟೇಲ್; 19.4)

ಬೌಲಿಂಗ್: ಭುವನೇಶ್ವರ್ ಕುಮಾರ್ 4–0–11–2, ಮಾರ್ಕೊ ಜೆನ್ಸನ್ 2–0–27–0, ವಾಷಿಂಗ್ಟನ್ ಸುಂದರ್ 4–0–28–3, ಟಿ. ನಟರಾಜನ್ 3–0–21–1, ಮಯಂಕ್ ಮಾರ್ಕಂಡೆ 4–0–34–0, ಉಮ್ರಾನ್ ಮಲಿಕ್ 2–0–14–0, ಏಡನ್ ಮರ್ಕರಂ 1–0–7–0.

ಸನ್‌ರೈಸರ್ಸ್ ಹೈದರಾಬಾದ್ 6ಕ್ಕೆ 137 (20 ಓವರ್‌ಗಳಲ್ಲಿ)

ಹ್ಯಾರಿ ಬಿ ನಾಕಿಯಾ 7 (14ಎ)
ಮಯಂಕ್ ಸಿ ಅಮನ್ ಬಿ ಅಕ್ಷರ್ 49 (39ಎ, 4X7)
ತ್ರಿಪಾಠಿ ಸಿ ಸಾಲ್ಟ್ ಬಿ ಇಶಾಂತ್ 15 (21ಎ)
ಅಭಿಷೇಕ್ ಸಿ ಮತ್ತು ಬಿ ಕುಲದೀಪ್ 5 (5ಎ)
ಮರ್ಕರಂ ಬಿ ಅಕ್ಷರ್ 3 (5ಎ)
ಕ್ಲಾಸನ್ ಸಿ ಅಮನ್ ಬಿ ನಾಕಿಯಾ 31 (19ಎ, 4X3, 6X1)
ವಾಷಿಂಗ್ಟನ್ ಔಟಾಗದೆ 24 (15ಎ, 4X3)
ಜೆನ್ಸನ್ ಔಟಾಗದೆ 2 (3ಎ)
ಇತರೆ: 1 (ನೋಬಾಲ್ 1)

ವಿಕೆಟ್ ಪತನ: 1-31 (ಹ್ಯಾರಿ ಬ್ರೂಕ್, 5.1), 2-69 (ಮಯಂಕ್ ಅಗರವಾಲ್, 11.3), 3-75 (ರಾಹುಲ್ ತ್ರಿಪಾಠಿ, 12.3), 4-79 (ಅಭಿಷೇಕ್ ಶರ್ಮಾ, 13.3), 5-85 (ಏಡನ್ ಮರ್ಕರಂ, 14.1), 6-126 (ಕ್ಲಾಸನ್, 18.3)

ಬೌಲಿಂಗ್: ಇಶಾಂತ್ ಶರ್ಮಾ 3–0–18–1, ಎನ್ರಿಚ್ ನಾಕಿಯಾ 4–0–33–2, ಮುಕೇಶ್ ಕುಮಾರ್ 3–0–27–0, ಅಕ್ಷರ್ ಪಟೇಲ್ 4–0–21–2, ಕುಲದೀಪ್ ಯಾದವ್ 4–0–22–1, ಮಿಚೆಲ್ ಮಾರ್ಷ್ 2–0–16–0

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 7 ರನ್‌ಗಳ ಜಯ

ಗುಜರಾತ್–ಮುಂಬೈ ಸೆಣಸು

ಅಹಮದಾಬಾದ್ (ಪಿಟಿಐ): ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡವು ಮಂಗಳವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಎದುರು ಆಡಲಿದೆ.

ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ತಂಡವು ಇದುವರೆಗೆ ಆರು ಪಂದ್ಯಗಳನ್ನು ಆಡಿದೆ. ನಾಲ್ಕರಲ್ಲಿ ಜಯಿಸಿ, ಎರಡರಲ್ಲಿ ಸೋತಿದೆ. ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ತಂಡವು ತನ್ನ ಈಚೆಗಿನ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಜಯಿಸಿತ್ತು. ಸಾಧಾರಣ ಗುರಿ ನೀಡಿದ್ದ ಗುಜರಾತ್ ತಂಡವು ಕೆ.ಎಲ್. ರಾಹುಲ್ ಬಳಗವನ್ನು ಮಣಿಸಿತ್ತು.

ಆದರೆ ಮುಂಬೈ ತಂಡವು ಟೂರ್ನಿಯ ಆರಂಭದಲ್ಲಿ ಸತತ ಎರಡು ಪಂದ್ಯಗಳಲ್ಲಿ ಸೋತಿತ್ತು. ನಂತರ ಮೂರು ಪಂದ್ಯಗಳಲ್ಲಿ ಜಯಿಸಿತ್ತು. ಆದರೆ ಆರನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು ಸೋತಿತ್ತು. ಕೊನೆಯ ಹಂತದ ಓವರ್‌ಗಳ ಬೌಲಿಂಗ್‌ನಲ್ಲಿ ದುರ್ಬಲವಾಗಿತ್ತು. ಕೊನೆಯ ಐದು ಓವರ್‌ಗಳಲ್ಲಿಯೇ 96 ರನ್‌ಗಳನ್ನು ಬೌಲರ್‌ಗಳು ಬಿಟ್ಟುಕೊಟ್ಟಿದ್ದರು. ಎಡಗೈ ಮಧ್ಯಮವೇಗಿ ಅರ್ಜುನ್ ತೆಂಡೂಲ್ಕರ್ ಕೂಡ ದುಬಾರಿಯಾಗಿದ್ದರು.

ಗುಜರಾತ್ ತಂಡದ ಆರಂಭಿಕ ಜೋಡಿ ಶುಭಮನ್ ಗಿಲ್ ಹಾಗೂ ವೃದ್ಧಿಮಾನ್ ಸಹಾ ಲಯದಲ್ಲಿದ್ದಾರೆ. ಸಾಯಿ ಕಿಶೋರ್, ಸಾಯಿ ಸುದರ್ಶನ್ ಮತ್ತು ವಿಜಯಶಂಕರ್ ಕೂಡ ಮಧ್ಯಮಕ್ರಮಾಂಕದಲ್ಲಿ ಉತ್ತಮವಾಗಿ ಆಡುತ್ತಿದ್ದಾರೆ. ಅವರು ಮುಂಬೈ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡುವ ನಿರೀಕ್ಷೆ ಇದೆ.

ಗುಜರಾತ್ ತಂಡದ ಅನುಭವಿ ಮೊಹಮ್ಮದ್ ಶಮಿ, ಮೋಹಿತ್ ಶರ್ಮಾ ಹಾಗೂ ಸ್ಪಿನ್ನರ್ ರಶೀದ್ ಖಾನ್ ಅವರು ಪ್ರಭಾವಿಯಾಗಿದ್ದಾರೆ. ಇದರಿಂದಾಗಿ ಮುಂಬೈ ಬ್ಯಾಟರ್‌ಗಳಾದ ರೋಹಿತ್ ಶರ್ಮಾ, ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್ ಮತ್ತು ತಿಲಕ್ ವರ್ಮಾ ಅವರು ತಮ್ಮ ನೈಜ ಆಟಕ್ಕೆ ಮರಳುವುದು ಅನಿವಾರ್ಯ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಚೆನ್ನೈ	7	5	2	0	10	0.662
ರಾಜಸ್ಥಾನ	7	4	3	0	8	0.844
ಲಖನೌ	7	4	3	0	8	0.547
ಗುಜರಾತ್	6	4	2	0	8	0.212
ಬೆಂಗಳೂರು	7	4	3	0	8	-0.008
ಪಂಜಾಬ್	7	4	3	0	8	-0.162
ಮುಂಬೈ	6	3	3	0	6	-0.254
ಕೋಲ್ಕತ್ತ	7	2	5	0	4	-0.186
ಹೈದರಾಬಾದ್	7	2	5	0	4	-0.725
ಡೆಲ್ಲಿ	7	2	5	0	4	-0.961

* ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	405

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಸಿರಾಜ್	ಆರ್‌ಸಿಬಿ	13

ನನ್ನ ಬೀಳ್ಕೊಡಲು ಬಂದಿರಬೇಕು: ಧೋನಿ

ಕೋಲ್ಕತ್ತ (ಪಿಟಿಐ): ಭಾನುವಾರ ರಾತ್ರಿ ಈಡನ್ ಗಾರ್ಡನ್‌ನಲ್ಲಿ ಹಳದಿ ರಂಗು ಹರಡಿತ್ತು. ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿಯ ಅಭಿಮಾನಿಗಳ ದೊಡ್ಡ ಬಳಗ ಸೇರಿತ್ತು.

ಈ ಕುರಿತು ಸಂತಸ ವ್ಯಕ್ತಪಡಿಸಿದ ಧೋನಿ, ‘ಹೆಚ್ಚು ಸಂಖ್ಯೆಯಲ್ಲಿ ಸೇರಿದ ಅಭಿಮಾನಿಗಳಿಗೆ ಧನ್ಯವಾದಗಳು. ಅವರು ನನ್ನನ್ನು ಬೀಳ್ಕೊಡಲು ಪ್ರಯತ್ನಿಸುತ್ತಿದ್ದಾರೆಂದು ಅನಿಸುತ್ತದೆ. ಇವರು ಮುಂದಿನ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ನೇರಳೆ ಪೋಷಾಕು ಧರಿಸಿ ಬರುತ್ತಾರೆ’ ಎಂದರು.

ಈ ಪಂದ್ಯದಲ್ಲಿ ಚೆನ್ನೈ ತಂಡವು ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ 49 ರನ್‌ಗಳ ಅಂತರದಿಂದ ಜಯಿಸಿತ್ತು.

ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ಈಗಾಗಲೇ ನಿವೃತ್ತಿ ಆಗಿರುವ ಧೋನಿ ಆಡುತ್ತಿರುವ ಕೊನೆಯ ಐಪಿಎಲ್ ಟೂರ್ನಿ ಇದು ಎಂದು ಹೇಳಲಾಗುತ್ತಿದೆ.

ದಾಖಲೆಗಳನ್ನೂ ಮೀರಿದ ಶ್ರೇಷ್ಠ ವ್ಯಕ್ತಿತ್ವ

50ನೇ ಜನ್ಮದಿನ: ಸಚಿನ್ ಕುಟುಂಬದ ಗೆಳೆಯ ಕುಟೊ ಮನದಾಳದ ಮಾತು

• ಗಿರೀಶ ದೊಡ್ಡಮನಿ

ಆಸ್ಟ್ರೇಲಿಯಾದ ಕ್ರಿಕೆಟ್ ತಾರೆ ಸ್ಟೀವ್ ವಾ ಮತ್ತು ಸಚಿನ್ ತೆಂಡೂಲ್ಕರ್ ಅವರೊಂದಿಗೆ ಮಾರ್ಕಸ್ ಕುಟೊ ಮಾತುಕತೆ– ಚಿತ್ರ; ಫೇಸ್‌ಬುಕ್ ವಾಲ್‌ನಿಂದ

ಬೆಂಗಳೂರು: ‘ಸಚಿನ್ ತೆಂಡೂಲ್ಕರ್ ಅವರ ದಾಖಲೆಗಳನ್ನು ಮೀರಿ ನಿಲ್ಲುವ ಆಟಗಾರರು ಬರಬಹುದು. ಅವರಿಗಿಂತ ಹೆಚ್ಚು ಹೆಸರು, ಹಣ ಗಳಿಸುವ ಕ್ರಿಕೆಟಿಗರೂ ಭವಿಷ್ಯದಲ್ಲಿ ಬೆಳೆಯಬಹುದು. ಆದರೆ, ಸಚಿನ್ ಮೇರು ವ್ಯಕ್ತಿತ್ವಕ್ಕೆ ಸಾಟಿಯಾಗುವವರು ಮತ್ತೊಬ್ಬರಿಲ್ಲ....’

– ಸೋಮವಾರ 50ನೇ ಜನ್ಮದಿನ ಆಚರಿಸಿಕೊಂಡ ಸಚಿನ್ ಕುಟುಂಬದ ಸ್ನೇಹಿತ ಹಾಗೂ ಬಿಸಿಸಿಐ ಅಂಪೈರ್ ಮಾರ್ಕಸ್ ಕುಟೊ ಅವರ ಮಾತುಗಳಿವು. ಮಾರ್ಕಸ್ ಅವರ ತಮ್ಮ ರಿಕಿ ಕುಟೊ ಅವರು ಸಚಿನ್ ಮತ್ತು ವಿನೋದ್ ಕಾಂಬ್ಳಿಯೊಂದಿಗೆ ಬಾಲ್ಯದಲ್ಲಿ ಕ್ರಿಕೆಟ್ ಆಡಿದವರು. ಮೂವರೂ ರಮಾಕಾಂತ್ ಆಚ್ರೇಕರ್ ಅವರ ಶಿಷ್ಯಂದಿರು. ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ಜೊತೆಗೇ ಅಭ್ಯಾಸ ಮಾಡುತ್ತಿದ್ದರು. ರಿಕಿ ಮೂಲಕ ಸಚಿನ್ ಅವರು ಮಾರ್ಕಸ್ ಮತ್ತು ಕುಟುಂಬದೊಂದಿಗೆ ಒಡನಾಟ ಬೆಳೆಸಿಕೊಂಡರು.

1988ರಲ್ಲಿ ಹ್ಯಾರಿಸ್ ಶೀಲ್ಡ್ ಶಾಲಾ ಕ್ರಿಕೆಟ್ ಟೂರ್ನಿಯಲ್ಲಿ ಶಾರದಾಶ್ರಮ ವಿದ್ಯಾಮಂದಿರ ಶಾಲೆ ತಂಡದಲ್ಲಿದ್ದ ಸಚಿನ್ ಮತ್ತು ವಿನೋದ್ ಕಾಂಬ್ಳಿ 664 ರನ್‌ಗಳ ಜೊತೆಯಾಟವಾಡಿದ್ದರು. ಆ ಸಾಧನೆಯು ವಿಶ್ವದಾಖಲೆಯ ಪುಟ ಸೇರಲು ಮಾರ್ಕಸ್ ಕುಟೊ ಅವರ ಪಾತ್ರವೇ ಮಹತ್ವದ್ದು.

ಆ ಘಟನೆಯ ಬಗ್ಗೆ 62 ವರ್ಷದ ಮಾರ್ಕಸ್ ‘ಪ್ರಜಾವಾಣಿ’ಯೊಂದಿಗೆ ಹಂಚಿಕೊಂಡಿದ್ದಾರೆ.

‘ನಾನು ಆಗ ಕ್ರಿಕೆಟ್ ಕ್ಲಬ್ ಆಫ್ ಇಂಡಿಯಾದಲ್ಲಿ ಕಾರ್ಯನಿರ್ವಹಿಸುತ್ತಿದ್ದೆ. ಆ ಪಂದ್ಯದಲ್ಲಿ ಸಚಿನ್, ವಿನೋದ್ ಇದ್ದ ತಂಡದಲ್ಲಿ ನನ್ನ ಸಹೋದರನೂ ಇದ್ದ. ರಿಕಿಯನ್ನು ನಾನೇ ಮೈದಾನಕ್ಕೆ ಬಿಟ್ಟು ಕಚೇರಿಗೆ ತೆರಳಿದೆ. ಒಂದಷ್ಟು ಹೊತ್ತು ಕೆಲಸ ಮಾಡಿ ಊಟದ ಹೊತ್ತಿಗೆ ಮೈದಾನಕ್ಕೆ ಮರಳಿದೆ. ಅಮೋಲ್ ಮಜುಂದಾರ್ ಪ್ಯಾಡ್ ಕಟ್ಟಿಕೊಂಡು ತಮ್ಮ ಸರದಿಗಾಗಿ ಕಾಯುತ್ತಿದ್ದರು. ಮತ್ತೆ ಕಚೇರಿಗೆ ಮರಳಿದೆ. ಚಹಾ ವಿರಾಮಕ್ಕೆ ಬಂದಾಗಲೂ ಇದೇ ದೃಶ್ಯ ಇತ್ತು. ಸಚಿನ್, ವಿನೋದ್ ಆಡುತ್ತಲೇ ಇದ್ದರು. ಪಂದ್ಯದ ಎರಡನೇ ದಿನವೂ ಅವರ ಆಟ ಮುಂದುವರಿಯಿತು. ನಾನು ಮೈದಾನಕ್ಕೆ ಕಾಲಿಟ್ಟಾಗ ಅಮೋಲ್ ಪ್ಯಾಡ್ ಬಿಚ್ಚಿಟ್ಟು ಅರಾಮಾಗಿ ಕುಳಿತಿದ್ದ. ಸಚಿನ್ ಮತ್ತು ಕಾಂಬ್ಳಿ ತಲಾ ಒಂದು ತ್ರಿಶತಕ ಗಳಿಸಿ ಆಡುತ್ತಿದ್ದರು. ವಿರಾಮದಲ್ಲಿ ಇಬ್ಬರೂ ಸರ್ (ರಮಾಕಾಂತ್) ಜೊತೆ ಮಾತನಾಡಲು ಫೋನ್ ಬೂತ್‌ಗೆ ಓಡಿದರು. ಆದರೆ ಅತ್ತಣಿಂದ ರಮಾಕಾಂತ್ ಸರ್, ಇನ್ನೂ ಬ್ಯಾಟಿಂಗ್ ಮಾಡ್ತಾ ಇದ್ದೀರಾ? ಬುದ್ಧಿ ಇಲ್ವಾ? ಹೋಗಿ ಮೊದ್ಲು ಡಿಕ್ಲೇರ್ ಮಾಡಿ ಎಂದು ಗದರಿದ್ದರು. ಇನ್ನಷ್ಟು ರನ್ ಗಳಿಸುವ ಆಸೆಯಲ್ಲಿದ್ದ ಹುಡುಗರಿಗೆ ನಿರಾಶೆಯಾಗಿತ್ತು. ತಂಡಕ್ಕೆ ಮರಳಿ ಡಿಕ್ಲೇರ್ ಘೋಷಿಸಿದರು’ ಎಂದು ಮಾರ್ಕಸ್ ನೆನಪಿಸಿಕೊಂಡರು.

ಇದರ ನಂತರ ಕುಟೊ ಅವರು ಮೋಹನದಾಸ್, ಆನಂದ್ ಸೇರಿದಂತೆ ಹಲವು ಅಂಕಿ ಸಂಖ್ಯೆ ತಜ್ಞರು, ಕ್ರೀಡಾ ಪತ್ರಕರ್ತರನ್ನು ಸಂಪರ್ಕಿಸಿ ಈ ದಾಖಲೆ ಬಗ್ಗೆ ಮಾಹಿತಿ ಸಂಗ್ರಹಿಸಿದರು. ಕಡೆಗೂ ಇದೊಂದು ದಾಖಲೆ ಎಂದು ಗೊತ್ತಾಯಿತು. ವಿಸ್ಡನ್ ನಿಯತಕಾಲಿಕೆಯಲ್ಲಿ ಸಣ್ಣ ಸುದ್ದಿ ಪ್ರಕಟವಾಯಿತು. ಸ್ಥಳೀಯ ಪತ್ರಿಕೆಳೂ ಬರೆದವು. ಇದರಿಂದ ಸಚಿನ್ ಮತ್ತು ವಿನೋದ್ ಅವರತ್ತ ಜನರ ಗಮನ ಹರಿಯಿತು

‘ಸಚಿನ್ ಓದಿನಲ್ಲಿ ಸಾಧಾರಣವಾಗಿದ್ದರೂ ಶಿಸ್ತು ಇತ್ತು. ಆದರೆ ಛಲ ಎನ್ನುವುದು ರಕ್ತಗತವಾಗಿತ್ತು. ಯಾರಾದರೂ ಚುಡಾಯಿಸಿದರೆ, ಬೆರಳು ತೋರಿಸಿದರೆ ಅವರಿಗೆ ತಕ್ಕ ಉತ್ತರ ಕೊಡದೇ ಬಿಡುತ್ತಿರಲಿಲ್ಲ. ಈ ಗುಣ ಅವರ ವೃತ್ತಿಜೀವನದಲ್ಲಿಯೂ ಮುಂದುವರಿಯಿತು. ತಮ್ಮನ್ನು ಕಿಚಾಯಿಸಿದ ಬೌಲರ್‌ಗಳಿಗೆ ಬ್ಯಾಟಿಂಗ್ ಮೂಲಕ ಉತ್ತರ ಕೊಡುತ್ತಿದ್ದರು’ ಎಂದು ಹೇಳುತ್ತಾರೆ.

‘ಸಚಿನ್ ಪುತ್ರ ಅರ್ಜುನ್ ತಾರಾ ಪುತ್ರನೆಂಬ ಒತ್ತಡವನ್ನು ನಿಭಾಯಿಸುವುದನ್ನು ಕಲಿತಿದ್ದಾರೆ. ಸಮಚಿತ್ತದೊಂದಿಗೆ ಆಡುತ್ತಿದ್ದಾರೆ. ಅಪ್ಪ ದೊಡ್ಡ ತಾರೆಯಾದಾಗ ಮಕ್ಕಳು ಎದುರಿಸುವ ಒತ್ತಡಗಳು ಬೇರೆಯೆ ತೆರನಾಗಿರುತ್ತದೆ. ಅದು ಅಮಿತಾಭ್ ಬಚ್ಚನ್, ಸುನಿಲ್ ಗಾವಸ್ಕರ್ ಅಥವಾ ಸಚಿನ್ ಆಗಿರಬಹುದು. ಸಮಾಜವು ಅವರನ್ನು ನೋಡುವ ದೃಷ್ಟಿಕೋನವೇ ಬೇರೆ. ಈ ಒತ್ತಡದಲ್ಲಿಯೇ ಸಾಧನೆಯನ್ನು ಮಾಡಬೇಕು’ ಎಂದು ಕುಟೊ ವಿಶ್ಲೇಷಿಸುತ್ತಾರೆ.

ಎಸ್‌ಸಿಜಿ ಗೇಟ್‌ಗೆ ಸಚಿನ್, ಲಾರಾ ಹೆಸರು

ಸಿಡ್ನಿ (ರಾಯಿಟರ್ಸ್): ಸಚಿನ್ ತೆಂಡೂಲ್ಕರ್ ಅವರ 50ನೇ ಜನ್ಮದಿನದ ಗೌರವಾರ್ಥವಾಗಿ ಸಿಡ್ನಿ ಕ್ರಿಕೆಟ್ ಮೈದಾನದ (ಎಸ್‌ಸಿಜಿ) ಒಂದು ಗೇಟಿಗೆ ಅವರ ಹೆಸರನ್ನು ಇಡಲಾಗಿದೆ. ಇನ್ನೊಂದು ಗೇಟಿಗೆ ವೆಸ್ಟ್ ಇಂಡೀಸ್ ದಿಗ್ಗಜ ಬ್ರಯಾನ್ ಲಾರಾ ಅವರ ಹೆಸರನ್ನು ಇಡಲಾಗಿದೆ.

ಪ್ರವಾಸಿ ತಂಡದ ಆಟಗಾರರು ಡ್ರೆಸಿಂಗ್ ರೂಮ್‌ನಿಂದ ಈ ಗೇಟ್‌ಗಳ ಮುಖಾಂತರ ಕ್ರೀಡಾಂಗಣಕ್ಕೆ ಇಳಿಯಬಹುದು. ಆತಿಥೇಯ ಆಟಗಾರರು ಡಾನ್ ಬ್ರಾಡ್ಮನ್ ಗೇಟ್‌ನಿಂದ ಮೈದಾನ ಪ್ರವೇಶಿಸಬಹುದು ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ಈ ದಿಗ್ಗಜರಿಬ್ಬರ ಜೊತೆ ಈಗಾಗಲೇ ಬ್ರಾಡ್ಮನ್ ಗೇಟ್, ಆಲನ್ ಡೇವಿಡ್‌ಸನ್ ಮತ್ತು ಆರ್ಥರ್ ಮಾರಿಸ್ ಹೆಸರಿನ ಗೇಟ್‌ಗಳಿವೆ. ಈ ಮೂವರೂ ನ್ಯೂಸೌತ್ ವೇಲ್ಸ್‌ನವರು.

ಸೂಪರ್ ಕಪ್ ಫುಟ್‌ಬಾಲ್ ಫೈನಲ್ ಇಂದು
ಬೆಂಗಳೂರು ಎಫ್‌ಸಿಗೆ ಒಡಿಶಾ ಎದುರಾಳಿ

ಕೊಯಿಕ್ಕೋಡ್ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ ಹಾಗೂ ಒಡಿಶಾ ಫುಟ್‌ಬಾಲ್ ಕ್ಲಬ್ ತಂಡಗಳು ಮಂಗಳವಾರ ನಡೆಯಲಿರುವ ಸೂಪರ್ ಕಪ್ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

2018ರಲ್ಲಿ ಭುವನೇಶ್ವರದಲ್ಲಿ ನಡೆದಿದ್ದ ಫೈನಲ್‌ನಲ್ಲಿ ಬಿಎಫ್‌ಸಿ ಜಯಿಸಿತ್ತು. ಒಡಿಶಾ ತಂಡಕ್ಕೆ ಇದು ಮೊದಲ ಪ್ರಶಸ್ತಿ ಗೆಲ್ಲುವ ಅವಕಾಶವಾಗಿದೆ.

ಈ ಎರಡೂ ತಂಡಗಳು ಇತ್ತೀಚೆಗೆ ಮುಕ್ತಾಯವಾದ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಪ್ಲೇ ಆಫ್‌ಗೆ ಪ್ರವೇಶಿಸಿದ್ದವು. ಅದರಲ್ಲಿ ಒಡಿಶಾ ತಂಡವು ಎಟಿಕೆ ಮೋಹನ್ ಬಾಗನ್ ಎದುರು ಸೋತಿತ್ತು. ಬೆಂಗಳೂರು ತಂಡವು ಫೈನಲ್ ಕೂಡ ಪ್ರವೇಶಿಸಿತ್ತು. ಬೆಂಗಳೂರು ತಂಡವು ಕಳೆದ ಸೆಪ್ಟೆಂಬರ್‌ನಲ್ಲಿ ಡುರಾಂಡ್ ಕಪ್ ಕೂಡ ಜಯಿಸಿತ್ತು. ಆ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಒಡಿಶಾ ತಂಡವನ್ನು ಎದುರಿಸಿತ್ತು.

ಬಿಎಫ್‌ಸಿಯ ಸುರೇಶ್ ವಾಂಗಜಮ್

ಸೂಪರ್ ಕಪ್ ಟೂರ್ನಿಯ ನಾಲ್ಕರ ಘಟ್ಟದಲ್ಲಿ ಬಿಎಫ್‌ಸಿ ತಂಡವು ಜೆಮ್ಶೆಡ್‌ಪುರ ತಂಡದ ಎದುರು ಜಯಿಸಿತು. ಗೋಲ್‌ಕೀಪರ್ ಗುರುಪ್ರೀತ್ ಸಿಂಗ್ ಸಂಧು ಅವರ ಅಮೋಘ ಆಟವು ಜಯದಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ನಾಯಕ ಸುನೀಲ್ ಚೆಟ್ರಿ ಹಾಗೂ ಜಯೇಶ್ ರಾಣೆ ಕೂಡ ಮಿಂಚಿದ್ದರು.

ಬೆಂಗಳೂರು ತಂಡವು ಈ ಫೈನಲ್‌ನಲ್ಲಿ ಗೆದ್ದರೆ ಎಎಫ್‌ಸಿ ಕಪ್ ಗುಂಪು ಹಂತದ ಕ್ಲಬ್ ಪ್ಲೇ ಆಫ್‌ನಲ್ಲಿ ಗೋಕುಲಂ ಕೇರಳದ ವಿರುದ್ಧ ಸೆಣಸಲಿದೆ.

ಒಡಿಶಾ ತಂಡವು ಬಿ ಗುಂಪಿನಿಂದ ಸೆಮಿಫೈನಲ್‌ಗೆ ಅರ್ಹತೆ ಗಳಿಸಿತ್ತು. ನಾರ್ತ್ ಈಸ್ಟ್ ಯುನೈಟೆಡ್ ವಿರುದ್ಧ ಗೆದ್ದು ಫೈನಲ್ ಪ್ರವೇಶಿಸಿದೆ.

ಪಂದ್ಯ ಆರಂಭ: ರಾತ್ರಿ 7 ಗಂಟೆ
ನೇರಪ್ರಸಾರ: ಸ್ಪೋರ್ಟ್ಸ್ ಟೆನ್

ಎಂಎಸ್‌ಆರ್‌ಐಟಿ, ಆರ್‌ವಿಸಿಗೆ ಜಯ

ಬೆಂಗಳೂರು: ಆರ್‌ವಿಸಿಇ ಮತ್ತು ಎಂಎಸ್‌ಆರ್‌ಐಟಿ ತಂಡಗಳು, ರಾಮಯ್ಯ ಐಟಿ ವಜ್ರಮಹೋತ್ಸವ ಅಂಗವಾಗಿ ನಡೆಯುತ್ತಿರುವ ಅಂತರ ಎಂಜಿನಿಯರಿಂಗ್ ಕಾಲೇಜು ಕ್ರಿಕೆಟ್ ಟೂರ್ನಿಯ ಪಂದ್ಯಗಳಲ್ಲಿ ಸೋಮವಾರ ಸುಲಭ ಜಯ ದಾಖಲಿಸಿದವು.

ಸ್ಕೋರುಗಳು: ಆರ್‌ವಿಸಿಇ: 28 ಓವರುಗಳಲ್ಲಿ 8 ವಿಕೆಟ್‌ಗೆ 175 (ಆದರ್ಶ್ ರಂಗಪ್ಪ 43, ನೀರಜ್ ಆರ್. 35; ಗಗನ್ 30ಕ್ಕೆ3); ಬಿಎಂಎಸ್‌ಸಿಇ: 28 ಓವರುಗಳಲ್ಲಿ 9 ವಿಕೆಟ್‌ಗೆ 130 (ತೇಜಸ್ ಜೆ. 35; ಅಭಿರಾಮ್ ವಿ. 26ಕ್ಕೆ4). ಆರ್‌ವಿಸಿಇಗೆ 45 ರನ್ ಜಯ. **ಎಂಎಸ್‌ಆರ್‌ಐಟಿ:** 28 ಓವರುಗಳಲ್ಲಿ 7 ವಿಕೆಟ್‌ಗೆ 217 (ಅಕ್ಷಣ್ ರಾವ್ 40, ನಿತೇಶ್ 37; ಇಶ್ಫಾಖ್ 49ಕ್ಕೆ3); ಜಿಐಟಿ: 24 ಓವರುಗಳಲ್ಲಿ 103 (ಕಾರ್ತಿಕ್ 29). ಎಂಎಸ್‌ಆರ್‌ಐಟಿಗೆ 114 ರನ್ ಜಯ.

ಕ್ರಿಕೆಟ್: ದೊಡ್ಡ ಮೊತ್ತದತ್ತ ಐರ್ಲೆಂಡ್

ಗಾಲೆ, ಶ್ರೀಲಂಕಾ (ಎಎಫ್‌ಪಿ): ಆ್ಯಂಡಿ ಬಲ್ಬಿರ್ನಿ (95, 14 ಬೌಂ.) ಅವರ ಜೀವನ ಶ್ರೇಷ್ಠ ಬ್ಯಾಟಿಂಗ್ ನೆರವಿನಿಂದ ಐರ್ಲೆಂಡ್ ತಂಡ, ಶ್ರೀಲಂಕಾ ವಿರುದ್ಧ ಸೋಮವಾರ ಆರಂಭವಾದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ದಿನದಾಟದ ಅಂತ್ಯಕ್ಕೆ 4 ವಿಕೆಟ್‌ಗೆ 319 ರನ್‌ಗಳ ಗಳಿಸಿ ಸುಸ್ಥಿತಿಯಲ್ಲಿದೆ.

ದಿನದಾಟದ ಅಂತ್ಯಕ್ಕೆ ಲೋರ್ಕನ್ ಟಕ್ಕರ್ 78 ರನ್ ಗಳಿಸಿ ಅಜೇಯರಾಗಿ ಉಳಿದಿದ್ದಾರೆ, ಅವರೊಡನೆ ಕರ್ಟಿಸ್ ಕ್ಯಾಂಫರ್ 27 ರನ್‌ಗಳೊಡನೆ ಎರಡನೇ ದಿನದಾಟ ಮುಂದುವರಿಸಲಿದ್ದಾರೆ.

ಬಲ್ಬಿರ್ನಿ ಮತ್ತು ಪಾಲ್ ಸ್ಟರ್ಲಿಂಗ್ ಮೂರನೇ ವಿಕೆಟ್ ಜೊತೆಯಾಟದಲ್ಲಿ 115 ರನ್ ಸೇರಿಸಿದರು. ಇದು ಐರ್ಲೆಂಡ್‌ನ ಅಲ್ಪಾವಧಿಯ ಟೆಸ್ಟ್ ಇತಿಹಾಸದಲ್ಲಿ ಅತಿದೊಡ್ಡ ಜೊತೆಯಾಟವೆನಿಸಿತು. ಕಾಲಿನಲ್ಲಿ ಗುಳ್ಳೆಗಳೆದ್ದ ಕಾರಣ ಸ್ಟರ್ಲಿಂಗ್ 74 (ಆರು ಬೌಂ., 3ಸಿ.) ರನ್ ಗಳಿಸಿದ್ದಾಗ ‘ರಿಟೈರ್ಡ್ ಹರ್ಟ್’ ಆದರು.

ಟೈಗರ್ ಕಪ್ ಕ್ರಿಕೆಟ್: ಸಂಜಿತ್ ಭರ್ಜರಿ ಶತಕ

ಬೆಂಗಳೂರು: ಸಂಜಿತ್ ಸತೀಶ್ (139, 71ಎ) ಅವರ ಅಮೋಘ ಶತಕದ ಬಲದಿಂದ ಮಾಗಡಿ ಕ್ರಿಕೆಟ್ ಅಕಾಡೆಮಿ ತಂಡವು ಟೈಗರ್ ಕಪ್ 12 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಜಯ ಗಳಿಸಿತು.

ಗ್ಲೋಬಲ್ ತಾಂತ್ರಿಕ ಅಕಾಡೆಮಿ ಮೈದಾನದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಮಾಗಡಿ 67 ರನ್‌ಗಳಿಂದ ಸಿಕ್ಸ್ ಕ್ರಿಕೆಟ್ ಅಕಾಡೆಮಿ ವಿರುದ್ಧ ಗೆದ್ದಿತು.

ಮೊದಲು ಬ್ಯಾಟ್ ಮಾಡಿದ ಮಾಗಡಿ 30 ಓವರ್‌ಗಳಲ್ಲಿ 3 ವಿಕೆಟ್‌ಗೆ 274 ರನ್ ಗಳಿಸಿತು. ಸಿಕ್ಸ್ ಅಕಾಡೆಮಿ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ 207 ರನ್ ಮಾತ್ರ ಗಳಿಸಿತು. ಇನ್ನೊಂದು ಪಂದ್ಯದಲ್ಲಿ ಬೆಳಗಾವಿಯ ಯೂನಿಯನ್ ಜಿಮ್‌ಖಾನಾ 66 ರನ್ನಿಂದ ಪ್ಯಾಂಥರ್ಸ್ ಅಕಾಡೆಮಿ ಎದುರು ಗೆದ್ದಿತು.

ನವದೆಹಲಿಯಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಫಾಸ್ಟ್ 5 ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದುಕೊಂಡ ಕರ್ನಾಟಕ ತಂಡ: ಎಡದಿಂದ (ನಿಂತವರು)– ವಿಶ್ರುತ್, ಅಭಿನಾಯಕ, ಅಶ್ವತ್ ನಾಯಕ, ಸುಧಾಕರ್ ಗೌಡ, ವರುಣ್, ನಂದ ಜಿ, ಹರ್ಷವರ್ಧನ್ ಜಿ., ಅಹಮದ್ ಅಲಿ. (ಕುಳಿತವರು) ಧನುಷ್, ವಿನೋದ್ ಕುಮಾರ್ (ಕೋಚ್), ರೋಹಿತ್ ಪಿ.ಡಿ. (ಮ್ಯಾನೇಜರ್), ಗಿರೀಶ್ ಸಿ. (ಎಎನ್‌ಬಿಎಕೆ ಪ್ರಧಾನ ಕಾರ್ಯದರ್ಶಿ), ನಿರ್ಮಲಾ (ಮ್ಯಾನೇಜರ್) ಮತ್ತು ಪ್ರಜ್ವಲ್

ಚೆಸ್ ಸುದ್ದಿಗಳು

ವಿಶ್ವ ಚೆಸ್: ಮತ್ತೊಂದು ಡ್ರಾ

ಅಸ್ತಾನ, ಕಜಕಸ್ತಾನ: ಕಪ್ಪು ಕಾಯಿಗಳಲ್ಲಿ ಆಡಿದ ಚೀನಾದ ಡಿಂಗ್ ಲಿರೆನ್, ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ 11ನೇ ಪಂದ್ಯವನ್ನು ಸೋಮವಾರ ಇಯಾನ್ ನಿಪೊಮ್‌ನಿಷಿ ವಿರುದ್ಧ ‘ಡ್ರಾ’ ಮಾಡಿಕೊಂಡರು.

‘ರಯ್ ಲೋಪೆಜ್’ ಓಪನಿಂಗ್ ಕಂಡ ಮತ್ತು ‘ರೂಕ್ ಎಂಡಿಂಗ್’ ಆದ ಆಟದಲ್ಲಿ ನಡೆಗಳ ಪುನರಾವರ್ತನೆ ಪರಿಣಾಮ ಪಂದ್ಯ ‘ಡ್ರಾ’ ಆಯಿತು. 11ನೇ ಆಟ 39 ನಡೆಗಳನ್ನು ಕಂಡಿತು. ಈ ಪಂದ್ಯದ ನಂತರ ನಿಪೊಮ್‌ನಿಷಿ 6–5 ರಲ್ಲಿ ಒಂದು ಪಾಯಿಂಟ್ ಮುನ್ನಡೆ ಉಳಿಸಿಕೊಂಡಿದ್ದಾರೆ. ಮಂಗಳವಾರ ವಿಶ್ರಾಂತಿ ದಿನವಾಗಿದೆ.

ಕಳೆದ ಕೆಲವು ಪಂದ್ಯಗಳಲ್ಲಿ ಪಾಯಿಂಟ್ ಹಂಚಿಕೊಳ್ಳುವುದಕ್ಕೆ ಆದ್ಯತೆ ನೀಡುತ್ತಿರುವ ಮೂಲಕ ಗ್ರ್ಯಾಂಡ್‌ಮಾಸ್ಟರ್ ನಿಪೊಮ್ ಮುನ್ನಡೆ ಉಳಿಸಿಕೊಳ್ಳುವತ್ತ ಗಮನಹರಿಸಿದಂತೆ ಕಾಣುತ್ತಿದೆ. ಮೂರು ಪಂದ್ಯಗಳು ಉಳಿದಿದ್ದು ಎರಡರಲ್ಲಿ ಬಿಳಿ ಕಾಯಿಗಳಲ್ಲಿ ಆಡುವ ಪ್ರಯೋಜನ ಗ್ರ್ಯಾಂಡ್‌ಮಾಸ್ಟರ್ ಲಿರೆನ್‌ಗೆ ಇದೆ.

ಬಾಲಕಿಶನ್‌ಗೆ ಪ್ರಶಸ್ತಿ

ಕುಂದಾಪುರ: ಅಮೋಘ ಪ್ರದರ್ಶನ ನೀಡಿದ ಮೈಸೂರಿನ ಎ.ಬಾಲಕಿಶನ್, ಕರ್ನಾಟಕ ರಾಜ್ಯ ಅಮೆಚೂರ್ ಫಿಡೆ ರೇಟೆಡ್ (2,000ಕ್ಕಿಂತ ಕಡಿಮೆ ರೇಟಿಂಗ್ ಇರುವವರ) ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. 1915 ರೇಟಿಂಗ್ ಪಡೆದಿದ್ದ ಅವರು 9 ಸುತ್ತುಗಳಿಂದ ಸಂಭವನೀಯ 9 ಅಂಕ ಗಳಿಸಿ ಪ್ರಾಬಲ್ಯ ಮೆರೆದರು.

ಸಹನಾ ಅಕ್ವೆಟಿಕ್ ಮತ್ತು ಸ್ಪೋರ್ಟ್ಸ್ ಕ್ಲಬ್, ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಸಹಯೋಗದಲ್ಲಿ ತಾಲ್ಲೂಕಿನ ಕೋಟೇಶ್ವರದಲ್ಲಿ ನಡೆಸಿದ ಈ ಮೂರು ದಿನಗಳ ಟೂರ್ನಿ ಭಾನುವಾರ ಮುಕ್ತಾಯಗೊಂಡಿತು. ಮೈಸೂರಿನ ಎಂ.ಪಿ.ಅಜಿತ್ (ರೇಟಿಂಗ್ 1640) ಅವರು 7.5 ಪಾಯಿಂಟ್ಸ್ ಗಳಿಸಿ ಎರಡನೇ ಮತ್ತು ಬೆಂಗಳೂರಿನ ತೇಜಸ್ (1359) 7 ಪಾಯಿಂಟ್ಸ್ ಗಳಿಸಿ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

29ರಿಂದ ರ‍್ಯಾಪಿಡ್ ಚೆಸ್

ಬೆಂಗಳೂರು: ಕರ್ನಾಟಕ ರಾಜ್ಯ ರ‍್ಯಾಪಿಡ್ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್ ಇದೇ 29 ಮತ್ತು 30ರಂದು ಅನಂತಪುರ ರಸ್ತೆಯ ನಾಗಾರ್ಜುನ ಡಿಗ್ರಿ ಕಾಲೇಜಿನಲ್ಲಿ ನಡೆಯಲಿದೆ. ಟೂರ್ನಿಯು ₹2,00,000 ನಗದು ಬಹುಮಾನ ಹೊಂದಿದೆ. ಹೆಸರು ನೋಂದಾಯಿಸಲು ಕೊನೆಯ ದಿನ ಏಪ್ರಿಲ್ 27. ವಿವರಗಳು ಮತ್ತು ನೋಂದಣಿಗೆ ಸುಧೀರ್ (9964599007) ಅಥವಾ ಅನಿಲ್ (7899246146) ಸಂಪರ್ಕಿಸಬಹುದು

12ರಿಂದ ಟೂರ್ನಿ

ಬೆಂಗಳೂರು: ಕರ್ನಾಟಕ ರಾಜ್ಯ 9 ವರ್ಷದೊಳಗಿನವರ ಮುಕ್ತ ಮತ್ತು ಬಾಲಕಿಯರ ಚೆಸ್ ಚಾಂಪಿಯನ್‌ಷಿಪ್ ಮೇ 12ರಿಂದ ನಡೆಯಲಿದೆ.

ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯ (ಕೆಎಸ್‌ಸಿಎ) ಪರವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಸಂಸ್ಥೆಯು ಟೂರ್ನಿಯನ್ನು ಆಯೋಜಿಸಲಿದೆ. ಒಟ್ಟಯ ಬಹುಮಾನ ಮೊತ್ತ ₹ 50,000 ಇದ್ದು, ₹ 750 ನೋಂದಣಿ ಶುಲ್ಕ ಇದೆ. ಹೆಚ್ಚಿನ ಮಾಹಿತಿಗಾಗಿ ಟೂರ್ನಿಯ ಸಂಘಟನಾ ಕಾರ್ಯದರ್ಶಿ ಚಿದಾನಂದ (ಮೊಬೈಲ್ ಸಂಖ್ಯೆ 9663405589) ಅಥವಾ ಕೆಎಸ್‌ಸಿಎ ಕಾರ್ಯದರ್ಶಿ ಅರವಿಂದ ಶಾಸ್ತ್ರಿ (9611832665) ಅವರನ್ನು ಸಂಪರ್ಕಿಸಬಹುದು

ಕುಸ್ತಿಪಟುಗಳ ಬೆದರಿಕೆ: ಮೇ 7ರ ಡಬ್ಲ್ಯುಎಫ್‌ಐ ಚುನಾವಣೆಗೆ ಕ್ರೀಡಾ ಸಚಿವಾಲಯದಿಂದ ತಡೆ

ಎಫ್‌ಐಆರ್ ದಾಖಲಿಸದಿದ್ದರೆ ‘ಸುಪ್ರೀಂ’ ಮೊರೆ

ನವದೆಹಲಿ (ಪಿಟಿಐ): ಲೈಂಗಿಕ ದೌರ್ಜನ್ಯ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ದೇಶದ ಪ್ರಮುಖ ಕುಸ್ತಿಪಟುಗಳ ಪ್ರತಿಭಟನೆ ಮುಂದುವರಿದಿದೆ.

ಬ್ರಿಜ್‌ಭೂಷಣ್ ವಿರುದ್ಧ ಎಫ್‌ಐಆರ್ ದಾಖಲಿಸದಿದ್ದರೆ ಸುಪ್ರೀಂ ಕೋರ್ಟ್ ಮೊರೆ ಹೋಗುವುದಾಗಿ ಪ್ರತಿಭಟನನಿರತರು ಸೊಮವಾರ ಬೆದರಿಕೆ ಹಾಕಿದ್ದಾರೆ. ಅಲ್ಲದೇ ತಮ್ಮ ಪ್ರತಿಭಟನೆ ಬೆಂಬಲಿಸಲು ‘ಖಾಪ್ಸ್’ ‘ಪಂಚಾಯತ್ಸ್’ ಮತ್ತಿತರ ಹಲವು ಸಂಘಟನೆಗಳಿಗೆ ಮನವಿ ಮಾಡಿಕೊಂಡಿದ್ದಾರೆ.

ಈ ನಡುವೆ ಕೇಂದ್ರ ಕ್ರೀಡಾ ಸಚಿವಾಲಯವು ಮೇ 7ರಂದು ನಡೆಯಬೇಕಿದ್ದ ಡಬ್ಲ್ಯುಎಫ್‌ಐ ಚುನಾವಣೆಯನ್ನು ತಡೆಹಿಡಿದಿದೆ. ಅಲ್ಲದೇ ಫೆಡರೇಷನ್‌ನ ದೈನಂದಿನ ವ್ಯವಹಾರಗಳನ್ನು ನೋಡಿಕೊಳ್ಳಲು ಹಂಗಾಮಿ ಸಮಿತಿ ರಚಿಸುವಂತೆ ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ) ಸೂಚಿಸಿದೆ. ಈ ಸಮಿತಿಯು ರಚನೆಯಾದ 45 ದಿನಗಳ ಒಳಗೆ ಫೆಡರೇಷನ್‌ಗೆ ಚುನಾವಣೆ ನಡೆಸಿ ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಿದೆ.

ನವದೆಹಲಿಯ ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ವಿನೇಶಾ ಫೋಗಟ್, ಬಜರಂಗ್ ಪೂನಿಯಾ ಮತ್ತು ಸಾಕ್ಷಿ ಮಲಿಕ್– ಪಿಟಿಐ ಚಿತ್ರ

ಈ ಕುರಿತು ಪ್ರತಿಕ್ರಿಯಿಸಿರುವ ಪ್ರತಿಭಟನನಿರತ ಕುಸ್ತಿಪಟುಗಳು ‘ಚುನಾವಣೆಯಿಂದ ನಮಗೇನೂ ಆಗಬೇಕಿಲ್ಲ. ಮಹಿಳಾ ಅಥ್ಲೀಟ್‌ಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಬ್ರಿಜ್‌ಭೂಷಣ್ ವಿರುದ್ಧ ತನಿಖೆಗೆ ನಮ್ಮ ಒತ್ತಾಯ ಮುಂದುವರಿಯಲಿದೆ’ ಎಂದಿದ್ದಾರೆ.

‘ಈ ಮೊದಲು (ಮೂರು ತಿಂಗಳ ಹಿಂದೆ) ನಡೆಸಿದ್ದ ಪ್ರತಿಭಟನೆಯನ್ನು ನಿಲ್ಲಿಸಿ ನಾವು ತಪ್ಪು ಮಾಡಿದೆವು. ಆಗ ಕೆಲವರು ನಮ್ಮ ದಿಕ್ಕುತಪ್ಪಿಸಿದರು. ಈಗ ನಾವು ಯಾರ ಮಾತೂ ಕೇಳಲು ತಯಾರಿಲ್ಲ’ ಎಂದು ಕುಸ್ತಿಪಟು ವಿನೇಶಾ ಫೋಗಟ್ ಹೇಳಿದ್ದಾರೆ.

ಈ ವರ್ಷದ ಜನವರಿಯಲ್ಲಿ ಪ್ರತಿಭಟನೆ ನಡೆದಾಗ, ಮಾಜಿ ಕುಸ್ತಿಪಟು, ಬಿಜೆಪಿಯೊಂದಿಗೆ ಗುರುತಿಸಿಕೊಂಡಿರುವ ಬಬಿತಾ ಫೋಗಟ್ ಅವರು ಸರ್ಕಾರ ಮತ್ತು ಕುಸ್ತಿಪಟುಗಳ ಮಧ್ಯೆ ಸಂಧಾನಕಾರರಾಗಿ ಕಾರ್ಯನಿರ್ವಹಿಸಿದ್ದರು. ಆದರೆ ಆರೋಪಗಳ ಕುರಿತ ತನಿಖೆಗಾಗಿ ಸರ್ಕಾರ ನೇಮಿಸಿರುವ ಮೇಲುಸ್ತುವಾರಿ ಸಮಿತಿಯಲ್ಲಿ ಬಬಿತಾ ಕೂಡ ಇರುವುದು ಪ್ರತಿಭಟನನಿರತರಿಗೆ ಅಸಮಾಧಾನ ಮೂಡಿಸಿದೆ.

‘ಆಕೆ (ಬಬಿತಾ) ಈಗ ಕುಸ್ತಿ ಕ್ರೀಡೆಗಿಂತ ರಾಜಕೀಯವನ್ನೇ ಹೆಚ್ಚು ಇಷ್ಟಪಡುತ್ತಿರಬಹುದು’ ಎಂದು ತಮ್ಮ ಸಹೋದರ ಸಂಬಂಧಿಯನ್ನು ವಿನೇಶಾ ಟೀಕಿಸಿದ್ದಾರೆ.

ಸಂತ್ರಸ್ತ ಮಹಿಳೆಯರ ಹೆಸರು ಬಹಿರಂಗಪಡಿಸುವಿರಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ವಿನೇಶಾ ‘ಮೇಲುಸ್ತುವಾರಿ ಸಮಿತಿ ನಮ್ಮೊಡನೆ ಮೊದಲಿನಿಂದ ಪಕ್ಷಪಾತಿಯಾಗಿ ನಡೆದುಕೊಂಡಿದೆ. ಸುಪ್ರೀಂ ಕೋರ್ಟ್‌ಗೆ ಮಾತ್ರ ಸಂತ್ರಸ್ತರು ಯಾರೆಂದು ಗೊತ್ತಾಗಲಿದೆ’ ಎಂದು ವಿನೇಶಾ ಹೇಳಿದ್ದಾರೆ.

ಇದು ಎರಡು ರಾಜ್ಯಗಳ (ಹರಿಯಾಣ ಮತ್ತು ಉತ್ತರ ಪ್ರದೇಶ) ನಡುವಣ ಕದನವೇ ಎಂಬ ಪ್ರಶ್ನೆಗೆ ಉತ್ತರಿಸಿರುವ ಕುಸ್ತಿಪಟು ಬಜರಂಗ್ ಪೂನಿಯಾ ‘ ನಾವು ದೇಶಕ್ಕಾಗಿ ಪದಕ ಗೆದ್ದಾಗ ಭಾರತದ ಅಥ್ಲೀಟ್‌ಗಳು ಎಂದು ಗುರುತಿಸಲಾಗುತ್ತದೆ. ಆದರೆ ನ್ಯಾಯಕ್ಕಾಗಿ ಹೋರಾಟಕ್ಕಿಳಿದಾಗ ‘ಉತ್ತರ ಪ್ರದೇಶ ವರ್ಸಸ್ ಹರಿಯಾಣ’ ಎಂಬ ಹಣೆಪಟ್ಟಿ ಅಂಟಿಸಲಾಗುತ್ತದೆ. ಬ್ರಿಜ್‌ಭೂಷಣ್ ಅವರ ಬಳಿ ಹಣಬಲ ಮತ್ತು ತೋಳ್ಬಲ ಇದೆ. ನಮ್ಮಲ್ಲಿರುವುದು ಸತ್ಯ ಮಾತ್ರ‘ ಎಂದಿದ್ದಾರೆ.

ದೇಶದ ಬಹಳಷ್ಟು ಕುಸ್ತಿಪಟುಗಳು ಹರಿಯಾಣದವರಾದರೆ ಬ್ರಿಜ್‌ಭೂಷಣ್ ಉತ್ತರ ಪ್ರದೇಶದವರು.

ಗುರುವಾರ ಐಒಎ ಸಭೆ: ಡಬ್ಲ್ಯುಎಫ್‌ಐ ವಿವಾದ ಬಗೆಹರಿಸಲು ಗುರುವಾರ ತನ್ನ ಕಾರ್ಯಕಾರಿ ಸಮಿತಿ ಸಭೆ ಸೇರಲಿದೆ ಎಂದು ಐಒಎ ತಿಳಿಸಿದೆ.